ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

107 ಪದಕಗಳ ಸಂಭ್ರಮ

ಏಷ್ಯನ್ ಕ್ರೀಡಾಕೂಟದ ಇತಿಹಾಸದಲ್ಲಿ ಭಾರತವು ಇದೇ ಮೊದಲ ಬಾರಿಗೆ ನೂರು ಪದಕಗಳ ಗಡಿಯನ್ನು ದಾಟಿ ಮುನ್ನುಗ್ಗಿತು. ಚೀನಾದ ಹಾಂಗ್‌ಝೌನಲ್ಲಿ ನಡೆಯುತ್ತಿರುವ 19ನೇ ಏಷ್ಯನ್ ಕ್ರೀಡಾಕೂಟದಲ್ಲಿ ಶನಿವಾರದ ಅಂತ್ಯಕ್ಕೆ ಭಾರತವು 107 ಪದಕಗಳನ್ನು ಗೆದ್ದಿತು. ಇಸ್ ಬಾರ್ ಸೌ ಪಾರ್ (ಈ ಸಲ ನೂರರ ಆಚೆ..) ಎಂಬ ಘೋಷವಾಕ್ಯದೊಂದಿಗೆ ಚೀನಾಕ್ಕೆ ತೆರಳಿದ್ದ ತಂಡವು ಗುರಿ ಈಡೇರಿಸಿದೆ. ನಾಲ್ಕು ವರ್ಷಗಳ ಹಿಂದೆ ಜಕಾರ್ತದಲ್ಲಿ ಜಯಿಸಿದ್ದ 70 ಪದಕಗಳೇ ಇದುವರೆಗಿನ ಶ್ರೇಷ್ಠ ಸಾಧನೆಯಾಗಿತ್ತು. ಕೂಟದ 14ನೇ ದಿನದಂದು ಭಾರತದ ಕ್ರೀಡಾಪಟುಗಳು ಒಟ್ಟು ಆರು ಚಿನ್ನ, ನಾಲ್ಕು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳನ್ನು ಜಯಿಸಿದರು.

ಪದಕ ಸಾಧನೆ 28 ಚಿನ್ನ | 38 ಬೆಳ್ಳಿ | 41 ಕಂಚು | 107 ಒಟ್ಟು | ಸ್ಥಾನ 4

• **ಕಬಡ್ಡಿ:** ಮಹಿಳೆಯರ ತಂಡ; ಫೈನಲ್‌ನಲ್ಲಿ ಚೀನಾ ತೈಪೆ ವಿರುದ್ಧ ಗೆಲುವು

• **ಆರ್ಚರಿ:** ಜ್ಯೋತಿ ಸುರೇಖಾ ವೆನ್ನಂ (ವೈಯಕ್ತಿಕ ಕಾಂಪೌಂಡ್– ಮಹಿಳೆಯರು)

• **ಆರ್ಚರಿ:** ಓಜಸ್ ದೇವತಾಳೆ (ವೈಯಕ್ತಿಕ ಕಾಂಪೌಂಡ್– ಪುರುಷರು)



• **ಬ್ಯಾಡ್ಮಿಂಟನ್ ಡಬಲ್ಸ್:** ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ

• **ಕ್ರಿಕೆಟ್:** ಋತುರಾಜ್ ಗಾಯಕವಾಡ (ಪುರುಷರ ತಂಡದ ನಾಯಕ)

• **ಕಬಡ್ಡಿ: ಪುರುಷರ ತಂಡ:** ಫೈನಲ್‌ನಲ್ಲಿ ಇರಾನ್ ಎದುರು ಜಯ

ಒಂದು ಸ್ಥಾನ ಗೆದ್ದಿದ್ದ ಜೆಡಿಎಸ್ ಜತೆ ಸಖ್ಯ ಏಕೆ: ಸಂಸದ ಸದಾನಂದ ಗೌಡ ಪ್ರಶ್ನೆ

‘ಶೇ 75ರಷ್ಟು ಮಂದಿಗೆ ಮೈತ್ರಿ ಇಷ್ಟವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿ ವರಿಷ್ಠರು ಪಕ್ಷದ ರಾಜ್ಯ ನಾಯಕರು ಮತ್ತು ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಜೆಡಿಎಸ್ ಜತೆ ಮೈತ್ರಿ ಮಾಡಿಕೊಂಡಿದ್ದಾರೆ. ಬಿಜೆಪಿಯ ಶೇಕಡ 75ರಷ್ಟು ಮಂದಿಗೆ ಈ ಮೈತ್ರಿ ಇಷ್ಟವಿಲ್ಲ’ ಎಂದು ಸಂಸದ ಡಿ.ವಿ. ಸದಾನಂದ ಗೌಡ ಹೇಳಿದರು.

ಜೆಡಿಎಸ್ ಪಕ್ಷವು ಎನ್‌ಡಿಎ ಮೈತ್ರಿಕೂಟ ಸೇರಿದ ಬಳಿಕ ಬಿಜೆಪಿಯ ಹಲವರು ಅಸಮಾಧಾನ ಹೊರಹಾಕಿದ್ದಾರೆ. ಶಾಸಕ ಎಸ್.ಟಿ. ಸೋಮಶೇಖರ್ ಮೈತ್ರಿಯನ್ನು ವಿರೋಧಿಸಿದ್ದಾರೆ. ಅವರ ಮಾತಿಗೆ ಸದಾನಂದ ಗೌಡ ಕೂಡ ದನಿಗೂಡಿಸಿದ್ದಾರೆ.

‘ಪ್ರಜಾವಾಣಿ’ ಜತೆ ಶನಿವಾರ ಮಾತನಾಡಿದ ಅವರು, ‘ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿಯನ್ನಾಗಿ ಮಾಡಲು ಎನ್‌ಡಿಎ ಮೈತ್ರಿಕೂಟವನ್ನು ಬಲಪಡಿಸಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ರಾಜ್ಯದ ನಾಯಕರ ಜತೆ ಚರ್ಚೆಯನ್ನೇ ನಡೆಸದೆ ಏಕಪಕ್ಷೀಯವಾಗಿ ಮೈತ್ರಿ ಮಾಡಿಕೊಂಡರೆ ಯಾವ ರೀತಿಯ ಅನುಕೂಲ ಆಗಲು ಸಾಧ್ಯ’ ಎಂದು ಪ್ರಶ್ನಿಸಿದರು.

‘ವಿಧಾನಸಭಾ ಚುನಾವಣೆಯಲ್ಲಿ ನಾವು ಸೋತು ಸುಣ್ಣವಾಗಿದ್ದೇವೆ. ಚುನಾವಣೆ ಮುಗಿದು ನಾಲ್ಕು ತಿಂಗಳು ಕಳೆದರೂ ಪರಿಸ್ಥಿತಿ ಬದಲಾಗಿಲ್ಲ. ಹಳೆ ಮೈಸೂರು ಭಾಗದಲ್ಲಿ ಬಿಜೆಪಿ ಪ್ರಬಲವಾಗಿ ಬೆಳೆಯುತ್ತಿತ್ತು. ಈಗ ಜೆಡಿಎಸ್ ಜತೆ ಮೈತ್ರಿಯಿಂದಾಗಿ ನಮ್ಮ ಪಕ್ಷದ ಮುಖಂಡರು, ಕಾರ್ಯಕರ್ತರು ಎರಡನೇ ದರ್ಜೆ ನಾಗರಿಕರಂತೆ ಆಗುತ್ತಾರೆ. ಪಕ್ಷದಲ್ಲಿ ಒಕ್ಕಲಿಗ ನಾಯಕರ ಮಾತುಗಳಿಗೆ ಬೆಲೆಯೇ ಇಲ್ಲದ ಸ್ಥಿತಿ ನಿರ್ಮಾಣ ಆಗಲಿದೆ’ ಎಂದರು.

ಕಾರ್ಯಶೈಲಿ ಬದಲಾಗಬೇಕು: ‘ನಾಲ್ಕು ತಿಂಗಳು ಕಳೆದರೂ ವಿರೋಧ ಪಕ್ಷದ ನಾಯಕನ ಆಯ್ಕೆಯಾಗಿಲ್ಲ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ಸಂಪೂರ್ಣವಾಗಿ ನಿಷ್ಕ್ರಿಯರಾಗಿದ್ದಾರೆ. ಕಳೆದ ಚುನಾವಣೆಯಲ್ಲಿ ಜನರು ತಿರಸ್ಕರಿಸಿದ್ದ ಕಾರ್ಯಸೂಚಿಯನ್ನೇ ನಮ್ಮ ಪಕ್ಷ ಮುಂದುವರಿಸುತ್ತಿದೆ. ಮೊದಲು ನಮ್ಮ ನಾಯಕತ್ವವನ್ನು ಗುರುತಿಸಬೇಕು’ ಎಂದು ತಿಳಿಸಿದರು.

‘ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ರಾಜ್ಯದಲ್ಲಿ 25 ಸ್ಥಾನಗಳಿಸಿತ್ತು. ಆಗ ಒಂದು ಸ್ಥಾನ ಪಡೆದಿದ್ದ ಜೆಡಿಎಸ್ ಜತೆಗಿನ ಮೈತ್ರಿಯೇ ಬಿಜೆಪಿ ದುರ್ಬಲವಾಗಿದೆ ಎನ್ನುವುದನ್ನು ಸೂಚಿಸುವಂತೆ ಮಾಡಿದೆ’ ಎಂದರು.

‘ನನಗೆ ಯಾವ ಭಯವೂ ಇಲ್ಲ’: ‘ಪಕ್ಷ ನನಗೆ ಎಲ್ಲವನ್ನೂ ನೀಡಿದೆ. ಅತ್ಯಂತ ಬಲಿಷ್ಠವಾಗಿದ್ದ ಪಕ್ಷಕ್ಕೆ ಈ ಸ್ಥಿತಿ ಬಂದಿರುವುದರ ಬಗ್ಗೆ ನೋವಿದೆ. ಅದನ್ನು ಸರಿಪಡಿಸಬೇಕು ಎಂಬುದಷ್ಟೇ ನನ್ನ ಆಗ್ರಹ. ನಾನು ಇನ್ನು ಚುನಾವಣೆಗೆ ಸ್ಪರ್ಧಿಸುವುದಿಲ್ಲ. ವಾಸ್ತವಿಕ ವಿಚಾರಗಳನ್ನು ಮಾತನಾಡಲು ನನಗೆ ಯಾವ ಭಯವೂ ಇಲ್ಲ’ ಎಂದು ಹೇಳಿದರು.

ಮನಸಿನ ಮಾತು ಡೈಮಂಡ್ ಜೊತೆ ಹೇಳಿ

*Conditions apply

ನಿಮ್ಮ ಹಳೆಯ ವಜ್ರಾಭರಣಗಳನ್ನು ವಿನಿಮಯ ಮಾಡಿ, ಹೊಸ ಚಿನ್ನ ಅಥವಾ ವಜ್ರದ ಆಭರಣಗಳನ್ನು ಖರೀದಿಸಿ ಹಾಗೂ 100% ವಿನಿಮಯ ಮೌಲ್ಯವನ್ನು ಪಡೆಯಿರಿ.

ಮುಂಗಡವಾಗಿ **10%** ಪಾವತಿಸಿರಿ

ಚಿನ್ನದ ದರದಲ್ಲಾಗುವ ಏರಿಳಿತದಿಂದ ಸಂರಕ್ಷಿಸಲ್ಪಡಿ

ಚಿನ್ನದ ಬೆಲೆಗಳು ಕುಸಿಯುತ್ತಿರುವಾಗ ಮಲಬಾರ್ ಗೋಲ್ಡ್ & ಡೈಮಂಡ್ಸ್ ವಿವಾಹ ಖರೀದಿ ಯೋಜನೆಯೊಂದಿಗೆ ಚಿನ್ನವನ್ನು ಬುಕ್ ಮಾಡಲು ಇದು ಸೂಕ್ತ ಸಮಯ. ಚಿನ್ನದ ಬೆಲೆ ಏರಿಕೆಯಿಂದ ರಕ್ಷಿಸಿಕೊಳ್ಳಲು ಮುಂಗಡವಾಗಿ 10% ರಿಂದ ಪಾವತಿಸುವ ಮೂಲಕ ಆಭರಣಗಳನ್ನು ಕಾಯ್ದಿರಿಸಿ. ಚಾಲ್ತಿಯಲ್ಲಿರುವ ಬೆಲೆ ಅಥವಾ ಕಾಯ್ದಿರಿಸಿದ ಬೆಲೆ ಇದರಲ್ಲಿ ಕಡಿಮೆ ಇರುವ ಬೆಲೆಯಲ್ಲಿ ಆಭರಣಗಳನ್ನು ಖರೀದಿಸಿ.

ಬೆಂಗಳೂರು: ಎಂ.ಜಿ ರೋಡ್ । ಡಿಕೆನ್‌ಸನ್ ರಸ್ತೆ । ಜಯನಗರ । ರಾಜಾಜಿನಗರ । ಕೋರಮಂಗಲ । ಫಿನಿಕ್ಸ್ ಮಾರ್ಕೆಟ್‌ಸಿಟಿ । ಮಾರತ್ತಹಳ್ಳಿ । ಬನ್ನೇರುಘಟ್ಟ ರಸ್ತೆ । ಕಮ್ಮನಹಳ್ಳಿ । ಮಲ್ಲೇಶ್ವರಂ ಹೆಚ್‌ಎಸ್‌ಆರ್ ಲೇಔಟ್ । ಬನಶಂಕರಿ । ಯಲಹಂಕ । ಫೋರಮ್ ಮಾಲ್, ಪ್ರೆಸ್ಟೀಜ್ ಫಾಲ್ಕನ್ ಸಿಟಿ । ಆರ್‌ಆರ್ ನಗರ । ಮೈಸೂರು । ಮಂಡ್ಯ । ಹಾಸನ । ಚಿಕ್ಕಮಗಳೂರು । ಮಂಗಳೂರು ಉಡುಪಿ । ಬೆಳಗಾವಿ । ಹುಬ್ಬಳ್ಳಿ । ಧಾರವಾಡ । ವಿಜಯಪುರ । ಕಲಬುರಗಿ । ಬೀದರ್ । ಬಳ್ಳಾರಿ । ದಾವಣಗೆರೆ । ಶಿವಮೊಗ್ಗ । ತುಮಕೂರು । ರಾಯಚೂರು

Call: 1800 572 0916 | BUY ONLINE AT: malabargoldanddiamonds.com
OVER 330 STORES ACROSS 11 COUNTRIES

ಬಿಟ್ ಕಾಯಿನ್: ನಾಲ್ವರು ಅಧಿಕಾರಿಗಳ ಮೇಲೆ ಸಾಕ್ಷ್ಯ ನಾಶಪಡಿಸಿದ ಆರೋಪ

ಇನ್‌ಸ್ಪೆಕ್ಟರ್‌ಗಳ ಮನೆಯಲ್ಲಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್ ಕಾಯಿನ್ ಅಕ್ರಮ ಪ್ರಕರಣದ ತನಿಖೆ ಚುರುಕುಗೊಳಿಸಿರುವ ವಿಶೇಷ ತನಿಖಾ ತಂಡದ (ಎಸ್ಐಟಿ) ಅಧಿಕಾರಿಗಳು, ಸಿಸಿಬಿಯ ನಾಲ್ವರು ಇನ್‌ಸ್ಪೆಕ್ಟರ್‌ಗಳು ಹಾಗೂ ಇಬ್ಬರು ಸೈಬರ್ ತಜ್ಞರ ಮನೆ–ಕಚೇರಿಗಳ ಮೇಲೆ ಶನಿವಾರ ದಾಳಿ ಮಾಡಿ ಶೋಧ ನಡೆಸಿದರು.

ಪ್ರಮುಖ ಆರೋಪಿಯಾಗಿರುವ ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ವಿರುದ್ಧ ಕೆಂಪೇಗೌಡ ನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ನಡೆಸಿದ್ದ ಅಂದಿನ ಸಿಸಿಬಿ ಪೊಲೀಸರು ಹಾಗೂ ಇತರರು, ಸಾಕ್ಷ್ಯ ನಾಶಪಡಿಸಿದ ಆರೋಪ ಹೊತ್ತಿದ್ದಾರೆ. ಇದನ್ನು ಪತ್ತೆ ಮಾಡಿದ್ದ ಎಸ್ಐಟಿ ಅಧಿಕಾರಿಗಳು, ಸಿಸಿಬಿ ಪೊಲೀಸರು ಹಾಗೂ ಇತರರ ವಿರುದ್ಧ ಕಾಟನ್‌ಪೇಟೆ ಠಾಣೆಯಲ್ಲಿ ಆಗಸ್ಟ್ 9ರಂದು ಎಫ್ಐಆರ್ ದಾಖಲಿಸಿದ್ದರು.

ಆರೋಪಿತ ಪೊಲೀಸರು ಹಾಗೂ ಇತರರನ್ನು ಎಸ್ಐಟಿ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿ ತನಿಖೆ ಮುಂದುವರಿಸಿದ್ದಾರೆ. ಇದರ ಭಾಗವಾಗಿ, ನ್ಯಾಯಾಲಯದ ಅನುಮತಿ ಪಡೆದು ಪೊಲೀಸ್ ಅಧಿಕಾರಿಗಳು ಹಾಗೂ ಸೈಬರ್ ತಜ್ಞರಿಬ್ಬರ ಮನೆ– ಕಚೇರಿಗಳಲ್ಲಿ ಶೋಧ ನಡೆಸಿದರು.

‘ಸಿಸಿಬಿಯಲ್ಲಿ ಕೆಲಸ ಮಾಡಿದ್ದ ಇನ್‌ಸ್ಪೆಕ್ಟರ್‌ಗಳಾದ ಶ್ರೀಧರ್ ಪೂಜಾರ (ಹಾಲಿ ಡಿವೈಎಸ್‌ಪಿ), ಎಂ. ಪ್ರಶಾಂತ್ ಬಾಬು (ಹಾಲಿ ಇನ್‌ಸ್ಪೆಕ್ಟರ್, ಸಿಸಿಬಿ ತಾಂತ್ರಿಕ ಘಟಕ), ಲಕ್ಷ್ಮಿಕಾಂತಯ್ಯ ಹಾಗೂ ಚಂದ್ರಧರ್ (ಇತ್ತೀಚೆಗೆ ಹೊರ ಜಿಲ್ಲೆಗಳಿಗೆ ವರ್ಗಾವಣೆಯಾದವರು) ಮನೆಗಳಲ್ಲಿ ಶೋಧ ನಡೆಸಲಾಗಿದೆ. ಸಿಸಿಬಿ ಪೊಲೀಸರ ತನಿಖೆಗೆ ತಾಂತ್ರಿಕ ನೆರವು ನೀಡಿದ್ದ ಸೈಬರ್ ತಜ್ಞರಾದ ಸಂತೋಷ್ ಹಾಗೂ ಗಗನ್ ಮನೆ–ಕಚೇರಿಯಲ್ಲೂ ಶೋಧಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ಬೆಂಗಳೂರಿನ 9 ಸ್ಥಳಗಳಲ್ಲಿ ಶನಿವಾರ ಬೆಳಿಗ್ಗೆಯಿಂದ ಸಂಜೆಯವರೆಗೆ ಶೋಧ ನಡೆಯಿತು. ಆರೋಪಿತರಿಗೆ ಸಂಬಂಧಪಟ್ಟಿರುವ ಹಲವು ಉಪಕರಣ ಹಾಗೂ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಮೂಲಗಳು ಹೇಳಿವೆ.

‘ರಜೆ ಪಡೆದಿರುವ ಪೊಲೀಸ್ ಅಧಿಕಾರಿಗಳು’

‘ಬೆಂಗಳೂರಿನ ಸಿಸಿಬಿ ತಾಂತ್ರಿಕ ಘಟಕದಲ್ಲಿ (ಆಡುಗೋಡಿ) ಇನ್‌ಸ್ಪೆಕ್ಟರ್ ಆಗಿರುವ ಎಂ. ಪ್ರಶಾಂತ್ ಬಾಬು, ಕೆಂಪೇಗೌಡ ನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ನಡೆಸಿದ್ದರು. ಆರೋಪಿಗಳಿಂದ ಜಪ್ತಿ ಮಾಡಲಾಗಿದ್ದ ಸಾಕ್ಷ್ಯಗಳನ್ನು ನಾಶಪಡಿಸಿದ್ದ ಆರೋಪ ಇವರ ಮೇಲಿದೆ. ಪ್ರಕರಣ ದಾಖಲಾದ ಬೆನ್ನಲ್ಲೇ ಪ್ರಶಾಂತ್ ಬಾಬು 20 ದಿನಗಳ ಹಿಂದೆಯೇ ಕರ್ತವ್ಯಕ್ಕೆ ರಜೆ ಹಾಕಿ ಹೋಗಿದ್ದಾರೆ’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ಪ್ರಕರಣದ ತನಿಖೆ ನಡೆಸಿದ್ದ ಅಂದಿನ ಮತ್ತೊಬ್ಬ ಇನ್‌ಸ್ಪೆಕ್ಟರ್ ಶ್ರೀಧರ್ ಪೂಜಾರ ಅವರಿಗೆ ಕೆಲ ತಿಂಗಳ ಹಿಂದೆಯಷ್ಟೇ ಡಿವೈಎಸ್‌ಪಿ ಆಗಿ ಬಡ್ತಿ ಸಿಕ್ಕಿದೆ. ಇದಾದ ನಂತರ ಸಿಐಡಿಗೆ ವರ್ಗಾವಣೆ ಆಗಿತ್ತು. ಶ್ರೀಧರ್ ಇದುವರೆಗೂ ಕರ್ತವ್ಯಕ್ಕೆ ಹಾಜರಾಗಿಲ್ಲ. ಲಕ್ಷ್ಮಿಕಾಂತಯ್ಯ ಹಾಗೂ ಚಂದ್ರಧರ್, ವರ್ಗಾವಣೆಯಾಗಿದ್ದರಿಂದ ಹೊರ ಜಿಲ್ಲೆಗಳ ಠಾಣೆಗಳಲ್ಲಿ ಅಧಿಕಾರ ವಹಿಸಿಕೊಂಡಿದ್ದಾರೆ’ ಎಂದು ಮೂಲಗಳು ಹೇಳಿವೆ.

ಜಪ್ತಿಯಾದ ವಸ್ತುಗಳು

- 4 ಲ್ಯಾಪ್‌ಟಾಪ್
- 8 ಮೊಬೈಲ್
- 2 ಎನ್ಎಎಸ್ (ನೆಟ್‌ವರ್ಕ್ ಅಟ್ಯಾಚ್ಡ್ ಸ್ಟೋರೇಜ್ ಡಿವೈಎಸ್) ಉಪಕರಣ
- 10 ಹಾರ್ಡ್ ಡಿಸ್ಕ್
- 5 ಪೆನ್‌ಡ್ರೈವ್
- 1 ಮೆಮೊರಿ ಕಾರ್ಡ್

ಇ–ಪ್ರೊಕ್ಯೂರ್‌ಮೆಂಟ್ ಹ್ಯಾಕ್: ಮತ್ತಿಬ್ಬರು ಸೆರೆ

ರಾಜ್ಯ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಜಾಲತಾಣವನ್ನು ಹ್ಯಾಕ್ ಮಾಡಿ ಸುಮಾರು ₹11.5 ಕೋಟಿ ದೋಚಿದ್ದ ಪ್ರಕರಣದಲ್ಲಿ ಮತ್ತಿಬ್ಬರು ಆರೋಪಿಗಳನ್ನು ಎಸ್ಐಟಿ ಅಧಿಕಾರಿಗಳು ಬಂಧಿಸಿದ್ದಾರೆ.

‘ಮಹಾರಾಷ್ಟ್ರದ ನಿತಿನ್ ಮೆಶ್ರಾಮ್ ಹಾಗೂ ದರ್ಶಿತ್ ಪಟೇಲ್ ಬಂಧಿತರು. ಇವರಿಬ್ಬರು ಹಣ ಅಕ್ರಮ ವರ್ಗಾವಣೆ ದಂಧೆ ನಡೆಸುತ್ತಿದ್ದರು. ಶ್ರೀಕೃಷ್ಣ ಜೊತೆ ಒಡನಾಟ ಹೊಂದಿದ್ದ ಇವರಿಬ್ಬರು, ಆತನ ಸೂಚನೆಯಂತೆ ಕೆಲಸ ಮಾಡುತ್ತಿದ್ದರು. ಇವರನ್ನು ಕಸ್ಟಡಿಗೆ ಪಡೆದು ಹೆಚ್ಚಿನ ವಿಚಾರಣೆ ನಡೆಸಬೇಕಿದೆ’ ಎಂದು ಮೂಲಗಳು ತಿಳಿಸಿವೆ.

‘ಹ್ಯಾಕರ್ ಶ್ರೀಕಿ ಗಳಿಸಿದ್ದ ಬಿಟ್ ಕಾಯಿನ್ ಬಗ್ಗೆ ಸಿಸಿಬಿ ಪೊಲೀಸರಿಗೆ ಹೆಚ್ಚು ಮಾಹಿತಿ ಇರಲಿಲ್ಲ. ಸೈಬರ್ ತಜ್ಞರಾದ ಸಂತೋಷ್ ಹಾಗೂ ಗಗನ್, ಬಿಟ್ ಕಾಯಿನ್ ಬಗ್ಗೆ ಮಾಹಿತಿ ನೀಡಿದ್ದರೆಂಬುದು ತನಿಖೆಯಿಂದ ಗೊತ್ತಾಗಿದೆ.’

‘ಶ್ರೀಕಿ ಕಡೆಯಿಂದ ಅಕ್ರಮವಾಗಿ ಬಿಟ್ ಕಾಯಿನ್ ವರ್ಗಾವಣೆ ಮಾಡಿಸಿಕೊಳ್ಳಲಾಗಿದೆ. ಈ ಬಗ್ಗೆ ಸುಳಿವು ಸಿಗಬಾರದೆಂದು, ಸಾಕ್ಷ್ಯ ನಾಶ ಮಾಡಿರುವ ಮಾಹಿತಿ ಇದೆ’ ಎಂದು ಹೇಳಿವೆ.

ಸಚಿವ ನಾಗೇಂದ್ರ ವಿರುದ್ಧ ಜಾಮೀನುರಹಿತ ಬಂಧನಾಜ್ಞೆ

ಬೆಂಗಳೂರು: ಚೆಕ್ ಬೌನ್ಸ್ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಕ್ರೀಡಾ ಸಚಿವ ಬಿ. ನಾಗೇಂದ್ರ ಅವರಿಗೆ ಜಾಮೀನು ರಹಿತ ಬಂಧನದ ವಾರಂಟ್ ಜಾರಿಗೊಳಿಸಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ವಿಎಸ್‌ಎಲ್ ಸ್ಟೀಲ್ಸ್ ಕಂಪನಿ ಮ್ಯಾನೇಜರ್ ರಾಘವೇಂದ್ರ ಘೋಡ್ಕೆ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಜೆ. ಪ್ರೀತ್ ಶನಿವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದ್ದಾರೆ.

ಈ ಮೊದಲು ಮೂರು ಬಾರಿ ಸಮನ್ಸ್ ಜಾರಿಗೊಳಿಸಿದ್ದರೂ ಕೋರ್ಟ್‌ಗೆ ಗೈರಾದ ಕಾರಣ ಆರೋಪಿ ನಾಗೇಂದ್ರ ಅವರನ್ನು ಬಂಧಿಸಿ ಕೋರ್ಟ್‌ಗೆ ಹಾಜರುಪಡಿಸಲು ಆದೇಶಿಸಲಾಗಿದೆ.

ವಿಚಾರಣೆಯನ್ನು ಅ. 31ಕ್ಕೆ ಮುಂದೂಡಲಾಗಿದೆ. ಈ ಪ್ರಕರಣದಲ್ಲಿ ನಾಗೇಂದ್ರ ಮೂರನೇ ಆರೋಪಿಯಾಗಿದ್ದಾರೆ.

ಪ್ರಾಧ್ಯಾಪಕರಿಂದ ಕಾರು ಅಪಘಾತ: ಉಪನ್ಯಾಸಕಿ–ವಿದ್ಯಾರ್ಥಿಗಳಿಗೆ ಗಾಯ

ಬೆಂಗಳೂರು: ನಗರದ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರಾಧ್ಯಾಪಕರೊಬ್ಬರ ಕಾರು ಅಪಘಾತವಾಗಿದ್ದು, ಇಬ್ಬರು ವಿದ್ಯಾರ್ಥಿಗಳು ಹಾಗೂ ಶಿಕ್ಷಕಿ ತೀವ್ರ ಗಾಯಗೊಂಡಿದ್ದಾರೆ.

‘ಪ್ರಾಧ್ಯಾಪಕ ನಾಗರಾಜ್ ಅವರು ತಮ್ಮ ಕಾರನ್ನು ಅತೀ ವೇಗವಾಗಿ ನಿರ್ಲಕ್ಷ್ಯದಿಂದ ಚಲಾಯಿಸಿದ್ದರು. ನಿಯಂತ್ರಣ ತಪ್ಪಿದ್ದ ಕಾರು, ನಡೆದುಕೊಂಡು ಹೊರಟಿದ್ದ ಬಿ.ಕಾಂ ವಿದ್ಯಾರ್ಥಿಗಳಾದ ಅಶ್ವಿನಿ, ನಂದುಪ್ರಿಯಾ ಹಾಗೂ ಸಂಗೀತ ವಿಷಯದ ಶಿಕ್ಷಕಿ ಜ್ಯೋತಿ ಅವರಿಗೆ ಗುದ್ದಿತ್ತು. ನಂತರ, ಮತ್ತೊಂದು ಕಾರಿಗೆ ಗುದ್ದಿ ಮರಕ್ಕೆ ಡಿಕ್ಕಿ ಹೊಡೆದು ನಿಂತುಕೊಂಡಿತ್ತು’ ಎಂದು ಹೈಗ್ರೌಂಡ್ಸ್ ಸಂಚಾರ ಠಾಣೆ ಪೊಲೀಸರು ಹೇಳಿದರು.

‘ಶನಿವಾರ ಬೆಳಿಗ್ಗೆ 9.35ರ ಸುಮಾರಿಗೆ ಅಪಘಾತ ಸಂಭವಿಸಿದೆ. ಗಾಯಗೊಂಡಿದ್ದ ವಿದ್ಯಾರ್ಥಿಗಳು ಹಾಗೂ ಶಿಕ್ಷಕಿಯನ್ನು ಸೇಂಟ್ ಮಾರ್ಥಾಸ್ ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದರು.

‘ಗಂಗಾವತಿಯ ಅಶ್ವಿನಿ, ಆರ್‌.ಟಿ. ನಗರದ ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿ ಉಳಿದುಕೊಂಡಿದ್ದರು. ಇವರ ಸ್ಥಿತಿ ಚಿಂತಾಜನಕವಾಗಿದೆ. ನಾಗರಾಜ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದರು.

₹2300 ಕೋಟಿ ಬಾಕಿ ನೀಡಲು ಒಪ್ಪಿಗೆ

ಪ್ರಜಾವಾಣಿ ವಾರ್ತೆ



ಕೃಷ್ಣಬೈರೇಗೌಡ

ನವದೆಹಲಿ: ಕೇಂದ್ರ ಸರ್ಕಾರವು ವರ್ಷದಿಂದ ಬಾಕಿ ಇರಿಸಿಕೊಂಡಿರುವ ₹ 2,300 ಕೋಟಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪರಿಹಾರವನ್ನು ಪಾವತಿಸುವಂತೆ ಜಿಎಸ್‌ಟಿ ಮಂಡಳಿ ಸಭೆಯಲ್ಲೇ ಕರ್ನಾಟಕ ಶನಿವಾರ ಆಗ್ರಹಿಸಿದ್ದು, ಬಾಕಿ ಬಿಡುಗಡೆಗೆ ಕೇಂದ್ರ ಸರ್ಕಾರ ಒಪ್ಪಿದೆ.

ಮಂಡಳಿಯಲ್ಲಿ ರಾಜ್ಯದ ಪ್ರತಿನಿಧಿಯಾಗಿರುವ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದರು.

‘2022ರ ಏಪ್ರಿಲ್, ಮೇ ಹಾಗೂ ಜೂನ್ ತಿಂಗಳ ಜಿಎಸ್‌ಟಿ ಪರಿಹಾರದಲ್ಲಿ ₹2,300 ಕೋಟಿಯಷ್ಟು ಬಾಕಿ ಉಳಿದಿದೆ. ಮಹಾಲೇಖಪಾಲರಿಂದ (ಸಿಎಜಿ) ಲೆಕ್ಕಪರಿಶೋಧನೆಯೂ ಪೂರ್ಣಗೊಂಡಿದೆ. ಕರ್ನಾಟಕಕ್ಕೆ ಜಿಎಸ್‌ಟಿ ಪರಿಹಾರ ಬಾಕಿ ಉಳಿದಿರುವುದನ್ನು ಸಿಎಜಿ ವರದಿಯಲ್ಲೂ ದೃಢಪಡಿಸಲಾಗಿದೆ. ಆ ಬಳಿಕವೂ ಬಾಕಿ ಪಾವತಿಗೆ ಕ್ರಮ ಕೈಗೊಂಡಿಲ್ಲ. ಈ ಸಂಬಂಧ ಆಗಸ್ಟ್‌ನಲ್ಲೇ ವರದಿ ಸಲ್ಲಿಕೆಯಾಗಿದೆ. ಬಾಕಿ ಹಣ ಕೂಡಲೇ ಬಿಡುಗಡೆ ಮಾಡಬೇಕು’ ಎಂದು ಒತ್ತಾಯಿಸಿದರು.

‘ಜಿಎಸ್‌ಟಿ ಪರಿಹಾರದ ಬಾಕಿ ಮೊತ್ತವನ್ನು ಶೀಘ್ರ ಪಾವತಿಸುವಂತೆ ಮಂಡಳಿಯ ಸಭೆಯಲ್ಲೇ ಒತ್ತಾಯಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದರು. ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈ ಕುರಿತು ಅಧಿಕಾರಿಗಳಿಗೆ ಸೂಚಿಸಿದರು. ಒಂದು ವಾರದೊಳಗೆ ಈ ಹಣ ಬಿಡುಗಡೆಯಾಗುವ ನಿರೀಕ್ಷೆ ಇದೆ’ ಅವರು ಎಂದು ‘ಪ್ರಜಾವಾಣಿ’ಗೆ ತಿಳಿಸಿದರು.

ಪ್ಯಾಕ್ ಆದ ಸಿರಿಧಾನ್ಯ ಹಿಟ್ಟು ಇನ್ನು ಜಿಎಸ್‌ಟಿ ವ್ಯಾಪ್ತಿಗೆ

ನವದೆಹಲಿ (ಪಿಟಿಐ): ಕಾಕಂಬಿ ಮೇಲಿನ ತೆರಿಗೆ ಪ್ರಮಾಣ ತಗ್ಗಿಸುವುದು, ಪ್ಯಾಕ್ ಮಾಡಿದ ಸಿರಿಧಾನ್ಯಗಳ ಹಿಟ್ಟನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವುದು ಸೇರಿ ಹಲವು ನಿರ್ಧಾರಗಳನ್ನು ಸರಕು ಮತ್ತು ಸೇವಾ ತೆರಿಗೆ ಮಂಡಳಿಯು ಶನಿವಾರ ತೆಗೆದುಕೊಂಡಿದೆ.

ಕಾಕಂಬಿ ಮೇಲಿನ ತೆರಿಗೆ ಕಡಿಮೆ ಮಾಡುವುದರಿಂದ ಕಾರ್ಖಾನೆಗಳ ನಗದು ಲಭ್ಯತೆ ಹೆಚ್ಚಾಗಲಿದ್ದು, ಕಬ್ಬು ಬೆಳೆಗಾರರಿಗೆ ಬಾಕಿ ಮೊತ್ತ ತ್ವರಿತವಾಗಿ ಪಾವತಿಸಲು ನೆರವಾಗಲಿದೆ. ಮೇವು ತಯಾರಿಕಾ ವೆಚ್ಚವೂ ಕಡಿಮೆ ಆಗಲಿದೆ ಎಂದು ತಿಳಿಸಿದೆ.

ಶೇ 70ರಷ್ಟು ಸಿರಿಧಾನ್ಯವನ್ನು ಒಳಗೊಂಡಿರುವ ಹಿಟ್ಟಿಗೆ ಜಿಎಸ್‌ಟಿ

- ಪ್ಯಾಕ್ ಮತ್ತು ಲೇಬಲ್ ಮಾಡಿದ್ದರೆ– 5 %
- ಪ್ಯಾಕ್ ಮತ್ತು ಲೇಬಲ್ ಇಲ್ಲದೇ ಇದ್ದರೆ –0 %
- ಕಾಕಂಬಿ ಮೇಲಿನ ಜಿಎಸ್‌ಟಿ ಶೇ 28ರಿಂದ ಶೇ 5ಕ್ಕೆ ಇಳಿಕೆ
- ಜನ ಬಳಕೆಯ ಮದ್ಯ ತಯಾರಿಸಲು ಬಳಸುವ ಎಕ್ಸ್ಟ್ರಾ ನ್ಯೂಟ್ರಲ್ ಆಲ್ಕೋಹಾಲ್ (ಇಎನ್‌ಎ) ಜಿಎಸ್‌ಟಿ ವ್ಯಾಪ್ತಿಯಿಂದ ಹೊರಕ್ಕೆ. ಕೈಗಾರಿಕೆಗಳಲ್ಲಿ ಬಳಸುವ ಇಎನ್‌ಎಗೆ ಶೇ 18ರಷ್ಟು ಜಿಎಸ್‌ಟಿ ಇರಲಿದೆ.

ಆಧಾರ್ ಕಾರ್ಡ್ ಇಲ್ಲದೆ ನೆಗಳೂರು ಗ್ರಾಮಸ್ಥರ ಪರದಾಟ

ಅಳಿಸಿದ ಅಂಗೈಗೆರೆ: ಸೌಲಭ್ಯಗಳಿಗೆ ಬರೆ!

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ‘ಹೊಲ–ಗದ್ದೆಗಳಲ್ಲಿ ಕೂಲಿ ಮಾಡಿ ಬದುಕು ಸಾಗಿಸುವ ನಮ್ಮ ಅಂಗೈಗಳು ಬಿರುಕು ಬಿಟ್ಟಿವೆ, ಚರ್ಮ ಸುಲಿದಿದೆ. ಹೆಬ್ಬೆಟ್ಟು ಒತ್ತಿದರೆ ‘ಬಯೋಮೆಟ್ರಿಕ್’ ತೆಗೆದುಕೊಳ್ಳಲ್ಲ. ಅದಕ್ಕೆ ಏಳೆಂಟು ವರ್ಷಗಳಿಂದ ಆಧಾರ್ ಕಾರ್ಡ್ ಸಿಗದೆ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿದ್ದೇವೆ’.

ಇದು ಹಾವೇರಿ ತಾಲ್ಲೂಕಿನ ನೆಗಳೂರು ಗ್ರಾಮಸ್ಥರು ನೋವಿನ ಮಾತು. ಈ ಗ್ರಾಮದ ಪರಿಶಿಷ್ಟ ಜಾತಿ ಮತ್ತು ಪಂಗಡದ 40ಕ್ಕೂ ಹೆಚ್ಚು ಮಂದಿ ಆಧಾರ್ ಕಾರ್ಡ್ ನೋಂದಣಿಗಾಗಿ ನೆಗಳೂರು ಗ್ರಾಮದಿಂದ ತಾಲ್ಲೂಕು ಕೇಂದ್ರದಲ್ಲಿರುವ ಸೇವಾ ಕೇಂದ್ರಗಳವರೆಗೆ ಮತ್ತು ಜಿಲ್ಲಾ ಕೇಂದ್ರದಿಂದ ಬೆಂಗಳೂರಿನ ಖನಿಜ ಭವನದವರೆಗೆ ಎಲ್ಲ ಕಚೇರಿಗಳಿಗೂ ಅಲೆದಾಡಿದ್ದಾರೆ. ಆದರೆ, ಕಿಂಚಿತ್ತೂ ಪ್ರಯೋಜನವಾಗಿಲ್ಲ.

‘ಐದಾರು ಬಾರಿ ಆಧಾರ್ ಕಾರ್ಡ್‌ಗಾಗಿ ನೋಂದಣಿ ಮಾಡಿಸಿದ್ದೇನೆ. 10 ರಿಂದ 15 ದಿನಗಳ ನಂತರ ಸೇವಾ ಕೇಂದ್ರಕ್ಕೆ ಹೋಗಿ ವಿಚಾರಿಸಿದರೆ, ಬಯೋಮೆಟ್ರಿಕ್ ಸಮಸ್ಯೆಯಿಂದ ನಿಮ್ಮ ಅರ್ಜಿ ತಿರಸ್ಕೃತಗೊಂಡಿದೆ ಎನ್ನುತ್ತಾರೆ. ಆಧಾರ್ ಕಾರ್ಡ್ ಇಲ್ಲದೆ ಕೃಷಿ ಉಪಕರಣಗಳಿಗೆ ಸಹಾಯಧನ ಸಿಗುತ್ತಿಲ್ಲ, ಗಂಗಾ ಕಲ್ಯಾಣ ಯೋಜನೆಯ ಸೌಲಭ್ಯ ದೊರಕಿಲ್ಲ. ಬ್ಯಾಂಕುಗಳಲ್ಲಿ ಸಾಲ ಕೊಡುತ್ತಿಲ್ಲ’ ಎಂದು ನೆಗಳೂರಿನ ಫಕ್ಕೀರಪ್ಪ ಶಿಡ್ಲಣ್ಣನವರ ಸಮಸ್ಯೆ ತೋಡಿಕೊಂಡರು.

ರೇಷನ್ ಸಿಗುತ್ತಿಲ್ಲ: ‘ಆಧಾರ್ ಕಾರ್ಡ್ ಇರದ ಕಾರಣ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಸಿಗುತ್ತಿಲ್ಲ. ಅಂಗಡಿಗಳಲ್ಲಿ ಅಕ್ಕಿ ಕೊಂಡು ತಿನ್ನುವ ಪರಿಸ್ಥಿತಿ ಎದುರಾಗಿದೆ. ಗೃಹಲಕ್ಷ್ಮಿ, ಗೃಹಜ್ಯೋತಿ, ಕಿಸಾನ್ ಸಮ್ಮಾನ್ ಎಲ್ಲ ಸೌಲಭ್ಯಗಳಿಂದ ವಂಚಿತರಾಗಿದ್ದೇವೆ. ‘ಆಧಾರ್’ ಇಲ್ಲದೆ ಬದುಕಿಗೆ ಆಧಾರವೇ ಇಲ್ಲದಂತಾಗಿದೆ’ ಎಂದು ದುರ್ಗಪ್ಪ ಗುಡ್ಡಜ್ಜನವರ, ಮರಿಯವ್ವ ಉಡಚಮ್ಮನವರ ಅಳಲು ತೋಡಿಕೊಂಡರು.

ಗೋಳು ಕೇಳುವವರಿಲ್ಲ: ‘ಪಿಯು ಓದುತ್ತಿರುವ ನನ್ನ ತಮ್ಮ ನಾಗರಾಜ ತಿಮ್ಮಣ್ಣನವರ ಅವರ ಆಧಾರ್ ಅಪ್‌ಡೇಟ್ ಮಾಡಿಸಲು ಬಯೋಮೆಟ್ರಿಕ್ ಹೊಂದಾಣಿಕೆ ಆಗುತ್ತಿಲ್ಲ . ಗುತ್ತಲ, ಹಾವೇರಿ, ಧಾರವಾಡದ ಸೇವಾ ಕೇಂದ್ರಗಳಿಗೆ ಓಡಾಡಿ, ಬೆಂಗಳೂರಿನ ಖನಿಜ ಭವನದಲ್ಲಿರುವ ಆಧಾರ್ ಕಚೇರಿಗೂ ಹೋಗಿ ಬಂದೆ. ಅರ್ಜಿ ಸಲ್ಲಿಸಿ, ಅಲ್ಲಿನ ಸೂಚನೆಯಂತೆ ಮೂರು ತಿಂಗಳು ಬಳಿಕ ಹೋದರೂ ಪರಿಸ್ಥಿತಿ ಬದಲಾಗಿರಲ್ಲ. ಸ್ಕಾಲರ್‌ಶಿಪ್, ಬಸ್‌ಪಾಸ್, ಹಾಸ್ಟೆಲ್ ಸೌಲಭ್ಯಗಳಿಂದ ನನ್ನ ತಮ್ಮ ವಂಚಿತನಾಗಿದ್ದಾನೆ. ನಮ್ಮ ಗೋಳು ಕೇಳುವವರಿಲ್ಲ’ ಎಂದು ನೇತ್ರಾ ತಿಮ್ಮಣ್ಣನವರ ದೂರಿದರು.

‘ಆಧಾರ್ ಕೇಂದ್ರದಲ್ಲಿ ಐದಕ್ಕಿಂತ ಹೆಚ್ಚು ಬಾರಿ ನೋಂದಾಯಿಸಿ, ತಿರಸ್ಕೃತಗೊಂಡಿದ್ದರೆ ಬೆಂಗಳೂರಿನ ಖನಿಜ ಭವನದಲ್ಲಿನ ಆಧಾರ್ ಕಚೇರಿಗೆ ಹೋಗಿ ಅರ್ಜಿ ರದ್ದುಪಡಿಸಬೇಕು. ‘ನಿರಾಪೇಕ್ಷಣಾ ಪ್ರಮಾಣಪತ್ರ’ ತರಬೇಕು. ನಂತರ ಗ್ರಾಮಕ್ಕೆ ಸಮೀಪದ ಸೇವಾ ಕೇಂದ್ರಗಳಲ್ಲಿ ದಾಖಲೆಗಳನ್ನು ಸಲ್ಲಿಸಿ, ಆ ಮೂಲಕ ಆಧಾರ್ ಕಾರ್ಡ್ ಪಡೆಯಬಹುದು’ ಎಂದು ಆಧಾರ್ ಕೇಂದ್ರದ ಸಿಬ್ಬಂದಿ ಹೇಳುತ್ತಾರೆ.

ಅಂಗೈ ಗೆರೆಗಳು ಅಸ್ಪಷ್ಟವಾಗಿರುವ ಕಾರಣ ಆಧಾರ್ ಕಾರ್ಡ್ ಮಾಡಿಸಲು ಸಾಧ್ಯವಾಗದೆ ಪರದಾಡುತ್ತಿರುವ ಹಾವೇರಿ ತಾಲ್ಲೂಕಿನ ನೆಗಳೂರು ಗ್ರಾಮಸ್ಥರು
– ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ

ಬೆಂಗಳೂರಿನ ಖನಿಜ ಭವನಕ್ಕೆ ನೆಗಳೂರಿನ 15 ಗ್ರಾಮಸ್ಥರನ್ನು ಕರೆದೊಯ್ದಿದ್ದೆ. ದೂರು ಸ್ವೀಕರಿಸಿದರೆ ಹೊರತು ಪರಿಹಾರ ಕಲ್ಪಿಸಲಿಲ್ಲ.
ತಿರಕಪ್ಪ ತಿಮ್ಮಣ್ಣನವರ, ನೆಗಳೂರು ಗ್ರಾಮದ ಮುಖಂಡ

ಅಂಗೈ ಗೆರೆಗಳ ಸಮಸ್ಯೆ ಇರುವವರು ಕಣ್ಣಿನ ಸ್ಕ್ಯಾನ್ ಮೂಲಕ ಆಧಾರ್‌ಗೆ ನೋಂದಾಯಿಸಬಹುದು. ಈ ಸಮಸ್ಯೆ ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದು
ರಘುನಂದನ ಮೂರ್ತಿ, ಜಿಲ್ಲಾಧಿಕಾರಿ, ಹಾವೇರಿ

ಬಯೋಮೆಟ್ರಿಕ್ ಕೊಡಲು ಬೆರಳುಗಳೇ ಇಲ್ಲ!

‘ನನ್ನ ಬಳಿ ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ಇವೆ. ಆದರೆ, ನ್ಯಾಯಬೆಲೆ ಅಂಗಡಿಯಲ್ಲಿ ಬಯೋಮೆಟ್ರಿಕ್ ಕೊಡಲು ಬೆರಳುಗಳೇ ಇಲ್ಲ. ಹೌದು, ಕುಷ್ಠರೋಗದಿಂದ ಕೈಗಳ 8 ಬೆರಳುಗಳನ್ನು ಕಳೆದುಕೊಂಡಿದ್ದೇನೆ. ಹೀಗಾಗಿ ಏಳೆಂಟು ವರ್ಷಗಳಿಂದ ರೇಷನ್ ಸಿಕ್ಕಿಲ್ಲ’ ಎಂದು ಹಾವೇರಿ ತಾಲ್ಲೂಕಿನ ನೆಗಳೂರಿನ ಮರಿಯಪ್ಪ ನಾಗಣ್ಣನವರ ಕಣ್ಣೀರು ಹಾಕಿದರು.

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
150 ವರ್ಷ ಬಾಳಿಕೆ ಬರುವಂತಹ ಹೊಸ ಸಂಸತ್ ಭವನದಲ್ಲಿ ಏನೇನೆಲ್ಲ ಇವೆ?



2,643 ಎಕರೆ ವಾಪಸ್: ಅರ್ಸೆಲರ್ ಮಿತ್ತಲ್ 5
ಕಡ್ಡಾಯ ಗ್ರಾಮೀಣ ಸೇವೆ: ಕಾಯ್ದೆಗೆ ತಿದ್ದುಪಡಿ? 6

ಬೆಂಗಳೂರಿನ ಅತ್ತಿಬೆಲೆಯಲ್ಲಿ ಐದು ತಾಸು ಹೊತ್ತಿ ಉರಿದ ದಾಸ್ತಾನು ಮಳಿಗೆ

ಪಟಾಕಿ ದುರಂತ: 13 ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್ ತಾಲ್ಲೂಕಿನ ಗಡಿಭಾಗದ ಅತ್ತಿಬೆಲೆಯ ಪಟಾಕಿ ಮಳಿಗೆ ಶನಿವಾರ ಹೊತ್ತಿ ಉರಿಯಿತು

ಆನೇಕಲ್ (ಬೆಂಗಳೂರು): ರಾಜಧಾನಿ ಬೆಂಗಳೂರಿನ ಹೊರವಲಯದ ಅತ್ತಿಬೆಲೆಯಲ್ಲಿ ಪಟಾಕಿ ಗೋದಾಮು ಒಂದರಲ್ಲಿ ಶನಿವಾರ ಸಂಭವಿಸಿದ ಬೆಂಕಿ ದುರಂತದಲ್ಲಿ 13 ಕೆಲಸಗಾರರು ಸುಟ್ಟು ಕರಕಲಾಗಿದ್ದಾರೆ. ಗೋದಾಮಿನ ಅವಶೇಷಗಳ ಅಡಿ ಇನ್ನೂ ಹಲವು ಕೆಲಸಗಾರರು ಸಿಲುಕಿರುವ ಶಂಕೆ ಇದ್ದು, ಸಾವಿನ ಸಂಖ್ಯೆ ಇನ್ನೂ ಹೆಚ್ಚಬಹುದು ಎನ್ನಲಾಗಿದೆ.

ಗೋದಾಮಿನ ಮಾಲೀಕ ಸೇರಿದಂತೆ ಗಾಯಗೊಂಡಿರುವ ಐವರನ್ನು ಸಮೀಪದ ಆಸ್ಪತ್ರೆಗೆ ಸೇರಿಸಲಾಗಿದೆ. ಗಾಯಾಳುಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ತಮಿಳುನಾಡಿನ ಶಿವಕಾಶಿಯಿಂದ ಬಂದ ಲಾರಿಯಿಂದ ಮಧ್ಯಾಹ್ನ 3.30ರ ವೇಳೆಗೆ ಪಟಾಕಿಗಳನ್ನು ಗೋದಾಮಿನಲ್ಲಿ ದಾಸ್ತಾನು ಮಾಡುತ್ತಿದ್ದಾಗ ಏಕಾಏಕಿ ಬೆಂಕಿ ಹೊತ್ತಿಕೊಂಡಿತು. ತಕ್ಷಣ ಎಲ್ಲ ದಿಕ್ಕುಗಳಲ್ಲೂ ಪಟಾಕಿಗಳು ಸಿಡಿಯಲು ಆರಂಭಿಸಿದ ಕಾರಣ ಬೆಂಕಿ ನಂದಿಸಲು ಸಾಧ್ಯವಾಗಲಿಲ್ಲ.

ಸತತ ಐದಾರು ತಾಸು ಗೋದಾಮು ಮತ್ತು ವಾಹನಗಳು ಹೊತ್ತಿ ಉರಿದವು. ಬೆಂಕಿಯ ಕೆನ್ನಾಲಿಗೆ ಮತ್ತು ದಟ್ಟವಾದ ಹೊಗೆ ಎಲ್ಲೆಡೆ ಆವರಿಸಿತು.

ಬೆಂಕಿಗೆ ನಿಖರ ಕಾರಣ ತಿಳಿದು ಬಂದಿಲ್ಲ. ₹4 ಕೋಟಿಯಿಂದ ₹5 ಕೋಟಿ ರೂಪಾಯಿ ಮೌಲ್ಯದ ಪಟಾಕಿ ಭಸ್ಮವಾಗಿವೆ. ಲಾರಿ, ಸರಕು ಸಾಗಣೆ ವಾಹನ, ನಾಲ್ಕು ದ್ವಿಚಕ್ರ ವಾಹನಗಳು ಸುಟ್ಟು ಕರಕಲಾಗಿವೆ.

> **ದುರಂತಕ್ಕೆ ನಿಖರ ಕಾರಣ ತಿಳಿದು ಬಂದಿಲ್ಲ. ವಿಧಿ ವಿಜ್ಞಾನ ತಂಡದವರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ವರದಿಯ ನಂತರ ಖಚಿತ ಮಾಹಿತಿ ತಿಳಿಯಲಿದೆ. ಗೋದಾಮಿನ ಪರವಾನಗಿ ಮತ್ತು ನಿಬಂಧನೆಗಳ ಬಗ್ಗೆ ಪರಿಶೀಲಿಸಲಾಗುತ್ತಿದೆ**
> **ಮಲ್ಲಿಕಾರ್ಜುನ ಬಾಲದಂಡಿ,** ಎಸ್‌.ಪಿ., ಬೆಂಗಳೂರು ಗ್ರಾಮಾಂತರ

ಅತ್ತಿಬೆಲೆಯ ರಾಷ್ಟ್ರೀಯ ಹೆದ್ದಾರಿ ಸಮೀಪದ ನವೀನ್ ಎಂಬವರಿಗೆ ಸೇರಿದ ಗೋದಾಮಿನಲ್ಲಿ ಪಟಾಕಿ ದಾಸ್ತಾನು ಮಾಡಲಾಗುತ್ತಿತ್ತು. ಘಟನೆ ನಡೆದಾಗ ಗೋದಾಮಿನಲ್ಲಿ 20 ಕಾರ್ಮಿಕರು ಕೆಲಸ ಮಾಡುತ್ತಿದ್ದರು ಎನ್ನಲಾಗಿದೆ. ಕೆಲವರು ಹಿಂಬಾಗಿಲಿನಿಂದ ಹೊರಗೆ ಓಡಿ ಬಂದು ಪ್ರಾಣ ಉಳಿಸಿಕೊಂಡಿದ್ದಾರೆ.

ರಾತ್ರಿ 8 ಗಂಟೆವರೆಗೂ ಅಗ್ನಿಶಾಮಕ ದಳದ ಐದಾರು ವಾಹನ ಮತ್ತು ಹಲವು ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯಾಚರಣೆಯಲ್ಲಿ ತೊಡಗಿದ್ದರು. ರಾತ್ರಿ 8.30ರ ಹೊತ್ತಿಗೆ ಬೆಂಕಿ ನಿಯಂತ್ರಣಕ್ಕೆ ಬಂದಿದೆ.

ಬೆಂಕಿ ನಂದಿಸಿದ ಬಳಿಕ ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ 13 ಶವಗಳನ್ನು ಹೊರ ತೆಗೆದಿದ್ದಾರೆ. ದೇಹಗಳು ಗುರುತಿಸಲಾಗದಷ್ಟು ಕರಕಲಾಗಿವೆ. ಮೃತರಲ್ಲಿ ತಮಿಳುನಾಡು ಮತ್ತು ಕರ್ನಾಟಕದ ಕೆಲಸಗಾರರು ಸೇರಿದ್ದಾರೆ. ಯಾರ ಗುರುತು ಪತ್ತೆ ಮಾಡಲೂ ಸಾಧ್ಯವಾಗಿಲ್ಲ. ವಿಧಿ ವಿಜ್ಞಾನ ತಂಡ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದೆ. ಸಾವಿನ ಸಂಖ್ಯೆ ಇನ್ನೂ ಹೆಚ್ಚಾಗುವ ಅಪಾಯ ಇದೆ ಎಂದು ಪೊಲೀಸರು ಹೇಳಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಸ್‌.ಪಿ. ಮಲ್ಲಿಕಾರ್ಜುನ ಬಾಲದಂಡಿ, ಡಿವೈಎಸ್‌ಪಿ ಮೋಹನ್ ಕುಮಾರ್, ಐದಕ್ಕೂ ಹೆಚ್ಚು ಸರ್ಕಲ್ ಇನ್‌ಸ್ಪೆಕ್ಟರ್‌ಗಳು ಸ್ಥಳದಲ್ಲಿ ಬೀಡು ಬಿಟ್ಟಿದ್ದಾರೆ.

₹5 ಲಕ್ಷ ಪರಿಹಾರ

ಆನೇಕಲ್: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶನಿವಾರ ರಾತ್ರಿ ಅತ್ತಿಬೆಲೆ ಪಟಾಕಿ ದುರಂತ ಸ್ಥಳಕ್ಕೆ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದರು.

ದುರಂತದಲ್ಲಿ ಮೃತಪಟ್ಟ ಕಾರ್ಮಿಕರ ಕುಟುಂಬಗಳಿಗೆ ಸರ್ಕಾರದಿಂದ ತಲಾ ₹5 ಲಕ್ಷ ಪರಿಹಾರ ನೀಡಲಾಗುವುದು ಎಂದು ಅವರು ಪ್ರಕಟಿಸಿದರು.

ದುರಂತ ನಡೆದ ಸ್ಥಳದಿಂದಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ ಅವರು ಘಟನೆ ಬಗ್ಗೆ ಮಾಹಿತಿ ನೀಡಿದರು.

ಇನ್ನಷ್ಟು ಸುದ್ದಿಗಳು 6

ಬೀಡಿ ಕಟ್ಟುವವರು ಅತಂತ್ರ • ಪುನರ್ವಸತಿ ನಿರೀಕ್ಷೆಯಲ್ಲಿ ಹಿರಿಯ ಜೀವಗಳು

‘ಬೀಡಿ’ಯಿಂದ ಕಮರಿದ ಕನಸು

• ಸಂಧ್ಯಾ ಹೆಗಡೆ

408	1,99,802	31,458
ರಾಜ್ಯದ ನೋಂದಾಯಿತ ಬೀಡಿ ಸಂಸ್ಥೆಗಳು	ಮಹಿಳಾ ಕಾರ್ಮಿಕರು	ಪುರುಷ ಕಾರ್ಮಿಕರು

(ಆಧಾರ: ಕಾರ್ಮಿಕ ಇಲಾಖೆ)

ಒಳನೋಟ

ಮಂಗಳೂರು: ‘ಇದ್ದ ಒಬ್ಬ ಮಗ ಬೇಡದ ಚಟಕ್ಕೆ ಸಿಕ್ಕಿಕೊಂಡು ಕೆಲಸ ಮಾಡ್ತಿಲ್ಲ. ಗಂಡನನ್ನು ಕಳೆದುಕೊಂಡ ಮೇಲೆ ಬೀಡಿಯೇ ಬದುಕಿನ ಸಂಗಾತಿ. ಮನೆಯಿಂದ ಹೊರ ಹೋಗಿ ದುಡಿಯುವಷ್ಟು ಮೈಯಲ್ಲಿ ಕಸುವಿಲ್ಲ. ಹೊಟ್ಟೆಪಾಡಿಗೆ ಏನಾದರೂ ಮಾಡಬೇಕಲ್ಲ’ ಎನ್ನುತ್ತ ಜಾರುವ ಕಣ್ಣೀರನ್ನು ಸೆರಗಿನಲ್ಲಿ ಒತ್ತಿದರು ಇಳಿ ವಯಸ್ಸಿನ ಸುನಂದಮ್ಮ.

‘ಗಂಡ ಕಾಯಿಲೆಗೆ ತುತ್ತಾಗಿ ಎಂಟು ತಿಂಗಳು ಹಾಸಿಗೆ ಹಿಡಿದಾಗ ಕೈತುಂಬ ಸಾಲ ಮಾಡಿಕೊಂಡೆ. ಗಂಡನನ್ನು ಉಳಿಸಿಕೊಳ್ಳಲಾಗಲಿಲ್ಲ. ಆಪತ್ತಿನ ಕಾಲಕ್ಕೆ ಸಾಲದ ಭಾರ ಕಳಚಿಕೊಳ್ಳಲು ನೆರವಾದದ್ದು ಬೀಡಿ. ಬೀಡಿ ಕಟ್ಟಿ ಮಕ್ಕಳನ್ನು ಬೆಳೆಸಿದೆ. ಮಗ ಈಗ ಅಷ್ಟಿಷ್ಟು ದುಡಿದು ತರುತ್ತಾನೆ. ಮಗನ ಆದಾಯ, ನನಗೆ ಬೀಡಿಯಿಂದ ಬರುವ ಕಾಸು ಸೇರಿದರೂ ಕುಟುಂಬ ನಿರ್ವಹಣೆ ಕಷ್ಟ. ಇಪ್ಪತ್ತು ವರ್ಷಗಳ ಹಿಂದೆ ಹೇಗೆ ಇದನ್ನೆಲ್ಲ ನಿಭಾಯಿಸಿದೆ ಎಂದು ಯೋಚಿಸಿದರೆ ಅಚ್ಚರಿಯಾಗುತ್ತದೆ’ ಎಂದರು ಮಂಗಳೂರು ಮುಳಿಹಿತ್ಲಿನ ಜೆಸಿಂತಾ.

ಇದು ಸುನಂದಮ್ಮ ಮತ್ತು ಜೆಸಿಂತಾ ಇಬ್ಬರ ಕಥೆಯಲ್ಲ, ಕಡಲ ನಾಡಿನ ಬೀಡಿ ಕಟ್ಟುವ ಸಹಸ್ರಾರು ಮಹಿಳೆಯರ ಒಡಲ ಬೇಗುದಿ. ಬೀಡಿಯಿಂದ ಸಿಗುವ ಬಿಡಿಗಾಸು ಜೀವನ ನಿರ್ವಹಣೆಗೆ ಸಾಲುತ್ತಿಲ್ಲ, ಪರ್ಯಾಯ ಕೆಲಸಕ್ಕೆ ಹೊರಳಲು ಮೈ–ಕೈಯಲ್ಲಿ ತ್ರಾಣವಿಲ್ಲ.

ಹುಬ್ಬಳ್ಳಿಯಲ್ಲೂ ಬೀಡಿ ಕಟ್ಟುವ ಕೆಲ ಕುಟುಂಬಗಳಿವೆ. ಬೀಡಿ ಉದ್ಯಮವನ್ನೇ ಆಶ್ರಯಿಸಿರುವ ಅವರ ಅನುಭವವೂ ಇದಕ್ಕಿಂತ ಭಿನ್ನವಾಗಿಲ್ಲ. ಬೀಡಿ ಕಟ್ಟುವವರು ರಾಜ್ಯದ ದಕ್ಷಿಣ ಕನ್ನಡ, ಉಡುಪಿ, ಧಾರವಾಡ, ಬೆಳಗಾವಿ, ದಾವಣಗೆರೆ, ತುಮಕೂರು, ಮೈಸೂರು ಜಿಲ್ಲೆಗಳಲ್ಲಿ ಅಧಿಕ ಸಂಖ್ಯೆಯಲ್ಲಿದ್ದರೆ, ಉಳಿದ ಜಿಲ್ಲೆಗಳಲ್ಲಿ ಚದುರಿದಂತೆ ಇದ್ದಾರೆ. ಇವರಲ್ಲಿ ಶೇ 95ರಷ್ಟು ಮಹಿಳೆಯರು. ಅವರಲ್ಲೂ ಏಕಾಂಗಿಯಾಗಿ ಜೀವನ ನಡೆಸುವ ಹಿರಿಯ ಜೀವಗಳು ನಿಸ್ತೇಜ ಕಂಗಳಲ್ಲಿ ನಾಳೆಯ ನಿರೀಕ್ಷೆಯೊಂದಿಗೆ ಬೀಡಿ ಕಟ್ಟುತ್ತಾರೆ. ಯಾಕೆಂದರೆ ಬೀಡಿ ಅವರಿಗೆ ನಿತ್ಯದ ತುತ್ತಿನ ಭದ್ರ ಭರವಸೆ.

7ನೇ ಪುಟ ನೋಡಿ



ಇಸ್ರೇಲ್ – ಪ್ಯಾಲೆಸ್ಟೀನ್ ಸಂಘರ್ಷ: 398 ಸಾವು

ಜೆರುಸಲೇಂ (ಎಪಿ, ರಾಯಿಟರ್ಸ್): ಇಸ್ರೇಲ್ ಹಾಗೂ ಪ್ಯಾಲೆಸ್ಟೀನ್ ನಡುವಿನ ಸಂಘರ್ಷ ಯುದ್ಧದ ಸ್ವರೂಪವನ್ನು ಪಡೆದಿದ್ದು, ಎರಡೂ ಕಡೆಗಳಿಂದ ನಡೆದ ದಾಳಿ, ಪ್ರತಿದಾಳಿಯಲ್ಲಿ 398 ಜನ ಸಾವನ್ನಪ್ಪಿದ್ದಾರೆ.

ಪ್ಯಾಲೆಸ್ಟೀನ್‌ನ ಹಮಾಸ್ ಬಂಡುಕೋರರು ಶನಿವಾರ ನಸುಕಿನಲ್ಲಿ ಗಾಜಾ ಪಟ್ಟಿಯಿಂದ ಇಸ್ರೇಲ್ ಮೇಲೆ ನಡೆಸಿದ ದಿಢೀರ್ ರಾಕೆಟ್ ದಾಳಿಗೆ ಕನಿಷ್ಠ 200 ಮಂದಿ ಸಾವಿಗೀಡಾದರೆ, ಇಸ್ರೇಲ್ ನಡೆಸಿದ ಪ್ರತಿ ದಾಳಿಯಲ್ಲಿ ಗಾಜಾ ಪಟ್ಟಿಯಲ್ಲಿನ ಕನಿಷ್ಠ 198 ಜನರ ಹತ್ಯೆಯಾಗಿದೆ. ಎರಡೂ ಕಡೆಗಳಲ್ಲಿ ಸಾವಿರಾರು ಮಂದಿ ಗಾಯಗೊಂಡಿದ್ದಾರೆ.

ಇಸ್ರೇಲ್‌ನ ಕೆಲವು ಸೈನಿಕರು ಮತ್ತು ನಾಗರಿಕರನ್ನು ಹಮಾಸ್ ಬಂಡುಕೋರರು ಗಾಜಾದಲ್ಲಿ ಒತ್ತೆಯಾಳುಗಳಾಗಿ ಇರಿಸಿಕೊಂಡಿದ್ದಾರೆ. ಇಸ್ರೇಲ್‌ನಲ್ಲಿ ಶನಿವಾರ ಯೆಹೂದಿಗಳ ‘ಯಾಮ್ ಕಿಪ್ಪುರ್’ ಹಬ್ಬಕ್ಕೆ ರಜೆ ಇತ್ತು. ಈ ಸಂದರ್ಭದಲ್ಲೇ ಭೂ, ಜಲ ಮತ್ತು ವಾಯು ಮಾರ್ಗದ ಮೂಲಕ ಬಂಡುಕೋರರು ದಾಳಿ ಎಸಗಿದ್ದಾರೆ. ದೇಶದ ದಕ್ಷಿಣ ಭಾಗದ ಮೂಲಕ ಒಳ ನುಸುಳಿದ್ದಾರೆ. ಅನೇಕ ಸೈನಿಕರು ಮತ್ತು ಜನರನ್ನು ವಶಕ್ಕೆ ಪಡೆದು ಗಾಜಾ ಪಟ್ಟಿಯತ್ತ ಕರೆದೊಯ್ದಿದ್ದಾರೆ.

‘ಪ್ಯಾಲೆಸ್ಟೀನಿಯನ್ನರನ್ನು ಜೈಲಿನಿಂದ ಬಿಡುಗಡೆ ಮಾಡುವಂತೆ ಇಸ್ರೇಲ್ ಅನ್ನು ಒತ್ತಾಯಿಸಲು ಇಸ್ರೇಲ್‌ನ ಹಿರಿಯ ಅಧಿಕಾರಿಗಳು ಸೇರಿ ಅನೇಕರನ್ನು ಒತ್ತೆಯಾಳುಗಳಾಗಿ ಇರಿಸಿಕೊಂಡಿದ್ದೇವೆ’ ಎಂದು ಹಮಾಸ್‌ನ ಉಪ ಮುಖ್ಯಸ್ಥ ಸಲೇಹ್ ಅಲ್ ಅರೌರಿ ‘ಅಲ್ ಜಝೀರಾ’ ಸುದ್ದಿ ವಾಹಿನಿಗೆ ತಿಳಿಸಿದ್ದಾರೆ.

‘ದೇಶವು ಯುದ್ಧ ಎದುರಿಸುತ್ತಿದೆ’ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಘೋಷಿಸಿದ್ದು, ವೈರಿಗಳು ಭಾರಿ ಬೆಲೆ ತೆರಬೇಕಾಗುತ್ತದೆ ಎಂದು ಗುಡುಗಿದ್ದಾರೆ.

ಇಸ್ರೇಲ್‌ನತ್ತ 5000 ರಾಕೆಟ್‌ಗಳನ್ನು ಉಡಾಯಿಸಲಾಗಿದೆ ಎಂದು ಗಾಜಾ ಪಟ್ಟಿ ಮೇಲೆ ನಿಯಂತ್ರಣ ಹೊಂದಿರುವ ಇಸ್ಲಾಮಿಕ್ ಗುಂಪು ಹಮಾಸ್ ಹೇಳಿಕೊಂಡಿದೆ. ದಾಳಿಯನ್ನು ‘ಆಪರೇಷನ್ ಅಲ್ – ಅಕ್ಸಾ ಫ್ಲಡ್’ ಎಂದು ಕರೆದಿದೆ.

ಇನ್ನಷ್ಟು ಸುದ್ದಿಗಳು 4

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬರಸ್ಥಿತಿ: ಕಣ್ಣಾರೆ ಕಂಡ ತಂಡ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ/ ಧಾರವಾಡ/ ಚಿತ್ರದುರ್ಗ: ಬರ ಪರಿಸ್ಥಿತಿಯ ಅಧ್ಯಯನಕ್ಕಾಗಿ ರಾಜ್ಯಕ್ಕೆ ಭೇಟಿ ನೀಡಿರುವ ಕೇಂದ್ರದ ತಂಡಗಳು ಶನಿವಾರ ಬಾಗಲಕೋಟೆ, ಧಾರವಾಡ, ಚಿತ್ರದುರ್ಗ, ದಾವಣಗೆರೆ, ವಿಜಯನಗರ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಿತು. ವಿವಿಧ ಜಮೀನುಗಳಿಗೆ ಭೇಟಿ ನೀಡಿದ್ದ ಅಧಿಕಾರಿಗಳು ರೈತರು, ಅಧಿಕಾರಿಗಳ ಜೊತೆಗೆ ಚರ್ಚಿಸಿ ವಸ್ತುಸ್ಥಿತಿಯ ಮಾಹಿತಿ ಪಡೆದರು.

ಬಾಗಲಕೋಟೆ ಜಿಲ್ಲೆಗೆ ಭೇಟಿ ನೀಡಿದ್ದ ಕೇಂದ್ರ ಕೃಷಿ, ರೈತ ಕಲ್ಯಾಣ ಸಚಿವಾಲಯದ ಜಂಟಿ ಕಾರ್ಯದರ್ಶಿ ಅಜಿತ್ ಕುಮಾರ ಸಾಹು ನೇತೃತ್ವದ ತಂಡವು ವಿವಿಧ ಗ್ರಾಮಗಳ ಜಮೀನುಗಳಿಗೆ ಭೇಟಿ ನೀಡಿದ್ದು ಒಣಗಿದ್ದ ಬೆಳೆ ವೀಕ್ಷಿಸಿ, ರೈತರ ಅಹವಾಲು ಆಲಿಸಿತು.

ಮಳೆಯ ಕೊರತೆ, ಬೆಳೆ ನಷ್ಟ ಹಾಗೂ ಕೃಷಿಗೆ ಮಾಡಿರುವ ಸಾಲ ಸೇರಿದಂತೆ ವಿವಿಧ ಸಮಸ್ಯೆಗಳನ್ನು ರೈತರು ಈ ಸಂದರ್ಭದಲ್ಲಿ ತಂಡದ ಸದಸ್ಯರ ಗಮನಕ್ಕೆ ತಂದರು. ಆಯಾ ಜಿಲ್ಲೆಗಳ ಅಧಿಕಾರಿಗಳು ಹಾಜರಿದ್ದು ವಸ್ತುಸ್ಥಿತಿಯನ್ನು ವಿವರ ಒದಗಿಸಿದರು.

ಕೇಂದ್ರ ಬರ ಅಧ್ಯಯನ ತಂಡದ ನೇತೃತ್ವ ವಹಿಸಿದ್ದ ಜಲಶಕ್ತಿ ಆಯೋಗದ ನಿರ್ದೇಶಕ ವಿ.ಅಶೋಕ್ ಕುಮಾರ್ ನೇತೃತ್ವದ ತಂಡವು ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯಲ್ಲಿ ಪ್ರವಾಸ ಮಾಡಿ ಪರಿಸ್ಥಿತಿಯನ್ನು ಅವಲೋಕಿಸಿತು.

ಈ ಜಿಲ್ಲೆಗಳಲ್ಲಿ ಮೆಕ್ಕೆಜೋಳ, ರಾಗಿ, ಶೇಂಗಾ, ತೊಗರಿ ಬೆಳೆಯು ನಷ್ಟವಾಗಿರುವುದನ್ನು ಗಮನಿಸಿತು. ಈ ಸಂದರ್ಭದಲ್ಲಿ ಮಾತನಾಡಿದ ಕೇಂದ್ರ ತಂಡದ ನೇತೃತ್ವ ವಹಿಸಿದ್ದ ಅಶೋಕ್ ಕುಮಾರ್ ಅವರು, ‘ಬರ ಪರಿಸ್ಥಿತಿಯ ಮನವರಿಕೆ ಆಗಿದೆ. ಬೆಳೆ ನಷ್ಟ, ಸರ್ಕಾರದ ಬೇಡಿಕೆ ಒಳಗೊಂಡ ವರದಿಯನ್ನು ಕೇಂದ್ರಕ್ಕೆ ಸಲ್ಲಿಸಲಾಗುವುದು’ ಎಂದು ತಿಳಿಸಿದರು.

ಇನ್ನೊಂದು ಸುದ್ದಿ 5

ಯುವ ಅನ್ವೇಷಕರ ಬುದ್ಧಿಶಕ್ತಿ ಮೂಲಕ ಬ್ರಹ್ಮಾಂಡದ ಅದ್ಭುತಗಳನ್ನು ಹೊರತೆಗೆಯುವುದು!

ಚಂದ್ರಯಾನ–3 ಮತ್ತು ಆದಿತ್ಯ–ಎಲ್ 1 ಸನ್ ಮಿಷನ್ ನೊಂದಿಗೆ ಭಾರತದ ಗಮನಾರ್ಹ ಯಶಸ್ಸು ಯುವ ನಾವೀನ್ಯಕಾರರ ಹೃದಯದಲ್ಲಿ ಭರವಸೆಯನ್ನು ಹುಟ್ಟುಹಾಕಿದೆ

ಪ್ಲೇಟೋ ಹೇಳಿದ್ದಾರೆ: ಖಗೋಳಶಾಸ್ತ್ರವು ನಮ್ಮ ಆತ್ಮವನ್ನು ಮೇಲಕ್ಕೆ ನೋಡುವಂತೆ ಒತ್ತಾಯಿಸುತ್ತದೆ ಮತ್ತು ನಮ್ಮನ್ನು ಈ ಪ್ರಪಂಚದಿಂದ ಮತ್ತೊಂದು ಜಗತ್ತಿಗೆ ಕರೆದೊಯ್ಯುತ್ತದೆ. ಚಂದ್ರಯಾನ –3 ಕಂಡ ಯಶಸ್ಸು ಮತ್ತು ಭಾರತದ ಇತ್ತೀಚಿನ ಆದಿತ್ಯ –ಎಲ್ 1 ಸನ್ ಮಿಷನ್ ಉಡಾವಣೆಯು ರಾಷ್ಟ್ರದ ಯುವಕರಲ್ಲಿ ವಿಜ್ಞಾನ, ಖಗೋಳಶಾಸ್ತ್ರ ಮತ್ತು ನಾವೀನ್ಯತೆಯ ಬಗ್ಗೆ ಉತ್ಸಾಹವನ್ನು ಹುಟ್ಟುಹಾಕಿದೆ. ಭಾರತದ ಪ್ರಮುಖ K12 ಶಾಲಾ ಸರಪಳಿಯಾದ ಆರ್ಕಿಡ್ಸ್ ದಿ ಇಂಟರ್ನ್ಯಾಷನಲ್ ಸ್ಕೂಲ್‌ನ **ಖಗೋಳಶಾಸ್ತ್ರ ಅಕಾಡೆಮಿಯ ಉಪಾಧ್ಯಕ್ಷ ಅಜಿತ್ ಸಿಂಗ್**, ಇವರು ಖಗೋಳಶಾಸ್ತ್ರದ ಬಗ್ಗೆ ಆಳವಾಗಿ ಅಧ್ಯಯನ ನಡೆಸುತ್ತಿದ್ದು , ಪಠ್ಯಕ್ರಮದಲ್ಲಿ ಖಗೋಳಶಾಸ್ತ್ರದ ಪ್ರಾಮುಖ್ಯತೆ ಮತ್ತು ಅದು ನಮ್ಮ ಯುವ ಕನಸುಗಾರರ ಕಲ್ಪನೆಯನ್ನು ಹೇಗೆ ಉತ್ತೇಜಿಸುತ್ತದೆ ಎಂಬುದರ ಕುರಿತು ಒಳನೋಟಗಳನ್ನು ಹಂಚಿಕೊಂಡಿದ್ದಾರೆ.

“ಈ ಸಂಭಾಷಣೆಯಲ್ಲಿ, ಬ್ರಹ್ಮಾಂಡದ ಅದ್ಭುತಗಳನ್ನು ಅಧ್ಯಯನ ಮಾಡುವುದು ವಿದ್ಯಾರ್ಥಿಗಳ ಶೈಕ್ಷಣಿಕ ಅನುಭವಗಳನ್ನು ಹೇಗೆ ಹೆಚ್ಚಿಸುತ್ತದೆ ಮತ್ತು ಭವಿಷ್ಯದ ಪೀಳಿಗೆಯ ವಿಜ್ಞಾನಿಗಳು, ಎಂಜಿನಿಯರ್ ಗಳು ಮತ್ತು ಅನ್ವೇಷಕರನ್ನು ಬ್ರಹ್ಮಾಂಡಕ್ಕೆ ನಂಬಲಾಗದ ಸಾಹಸಕ್ಕಾಗಿ ಹೇಗೆ ಪ್ರೇರೇಪಿಸುತ್ತದೆ ಎಂಬುದನ್ನು ಕಂಡುಕೊಳ್ಳಿ.”

ಪ್ರ. ಮಕ್ಕಳಿಗೆ ಖಗೋಳಶಾಸ್ತ್ರವನ್ನು ಕಲಿಸುವ ಪ್ರಾಮುಖ್ಯತೆ ಏನು, ಮತ್ತು ಅದನ್ನು ಪಠ್ಯಕ್ರಮದಲ್ಲಿ ಸೇರಿಸುವ ಉದ್ದೇಶವೇನು?

ಉ : ಖಗೋಳಶಾಸ್ತ್ರವನ್ನು ಕಲಿಸುವುದು ಅತ್ಯಗತ್ಯ ಏಕೆಂದರೆ ಇದು ವೈಜ್ಞಾನಿಕ ಸಾಕ್ಷರತೆ, ವಿಮರ್ಶಾತ್ಮಕ ಚಿಂತನೆ ಮತ್ತು ನಮ್ಮ ಬ್ರಹ್ಮಾಂಡದ ಬಗ್ಗೆ ಮೆಚ್ಚುಗೆಯನ್ನು ಉತ್ತೇಜಿಸುತ್ತದೆ. ಇದು ಸಮಸ್ಯೆಯನ್ನು ಪರಿಹರಿಸುವ ಕೌಶಲ್ಯಗಳನ್ನು ಮತ್ತಷ್ಟು ಹೆಚ್ಚಿಸುತ್ತದೆ ಮತ್ತು ವಿಶ್ಲೇಷಣಾತ್ಮಕ ಚಿಂತನೆಯನ್ನು ಬೆಳೆಸುತ್ತದೆ, ಭವಿಷ್ಯದ ಸವಾಲುಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸುತ್ತದೆ. ಇದರ ಮುಖ್ಯ ಗುರಿ ಎಂದರೆ ವೈಜ್ಞಾನಿಕ ತತ್ವಗಳು ಮತ್ತು ವಿದ್ಯಮಾನಗಳ ಬಗ್ಗೆ ಅವರ ತಿಳುವಳಿಕೆಯನ್ನು ನಿರ್ಮಿಸುವುದು, ಖಖಇಒ ಶಿಕ್ಷಣ ಮತ್ತು ಸಂಭಾವ್ಯ ವೃತ್ತಿಜೀವನಕ್ಕೆ ಬಲವಾದ ಅಡಿಪಾಯವನ್ನು ಒದಗಿಸುವುದೇ ಆಗಿದೆ. ಖಗೋಳಶಾಸ್ತ್ರವು ಅವರಿಗೆ ಜೀವನವನ್ನು ನೋಡುವ ಸಂಪೂರ್ಣ ಹೊಸ ಮಾರ್ಗವನ್ನು ನೀಡುತ್ತದೆ ಮತ್ತು ಬ್ರಹ್ಮಾಂಡದಂತಹ ದೊಡ್ಡ ಚಿತ್ರದಲ್ಲಿ ನಾವು ಎಲ್ಲಿ ಹೊಂದಿಕೊಂಡಿದ್ದೇವೆ ಎನ್ನುವುದನ್ನು ತೋರಿಸುತ್ತದೆ.

ಪ್ರ. ಖಗೋಳಶಾಸ್ತ್ರವು ವಿದ್ಯಾರ್ಥಿಗಳಿಗೆ ಯಾವ ರೀತಿಯಲ್ಲಿ ಆಳವಾದ ಮತ್ತು ಸಮಗ್ರ ಕಲಿಕೆಯ ಅನುಭವವನ್ನು ಒದಗಿಸುತ್ತದೆ?

ಉ: ಖಗೋಳಶಾಸ್ತ್ರವು ವಿದ್ಯಾರ್ಥಿಗಳ ಆಶ್ಚರ್ಯ ಮತ್ತು ಕುತೂಹಲದ ಪ್ರಜ್ಞೆಯನ್ನು ಪ್ರಚೋದಿಸುತ್ತದೆ, ಆಕಾಶದ ವಿದ್ಯಮಾನಗಳನ್ನು ಅನ್ವೇಷಿಸಲು, ಭೌತಶಾಸ್ತ್ರವನ್ನು ಅರ್ಥಮಾಡಿಕೊಳ್ಳಲು ಮತ್ತು ಬ್ರಹ್ಮಾಂಡದ ಭವ್ಯತೆಯನ್ನು ನೋಡಿ ಆಶ್ಚರ್ಯಚಕಿತರಾಗಲು ಅವರನ್ನು ಪ್ರೋತ್ಸಾಹಿಸುತ್ತದೆ. ಪ್ರತಿಯೊಂದು ಆವಿಷ್ಕಾರವು ಬಾಹ್ಯಾಕಾಶದ ವಿಶಾಲತೆಯನ್ನು ಮತ್ತು ಅದರಲ್ಲಿರುವ ಎಲ್ಲವನ್ನೂ ಅರ್ಥಮಾಡಿಕೊಳ್ಳಲು ಅವರನ್ನು ಇನ್ನೂ ಹತ್ತಿರಕ್ಕೆ ತರುತ್ತದೆ. ಪಠ್ಯಕ್ರಮವು ಕೇವಲ ನಕ್ಷತ್ರಗಳು ಮತ್ತು ಗ್ರಹಗಳಿಗೆ ಸೀಮಿತವಾಗಿರುವುದಿಲ್ಲ – ಇದು ಮಕ್ಕಳಿಗೆ ನಿಜವಾದ ವಿಜ್ಞಾನಿಗಳಂತೆ ಯೋಚಿಸುವ ಎಲ್ಲಾ ರೀತಿಯ ವಿಶೇಷ ಮಾಹಿತಿಗಳಲ್ಲಿ ನೀಡುತ್ತದೆ. ಇದು ಬ್ರಹ್ಮಾಂಡವನ್ನು ಅನ್ವೇಷಿಸಲು ಮತ್ತು ಕೈಗಾರಿಕಾ ಸಂಶೋಧನೆ, ಶಿಕ್ಷಣ ಮತ್ತು ಸಾರ್ವಜನಿಕ ಮಾಹಿತಿಯಂತಹ ಕ್ಷೇತ್ರಗಳಲ್ಲಿ ವೃತ್ತಿಜೀವನವನ್ನು ಮುಂದುವರಿಸಲು ವಿದ್ಯಾರ್ಥಿಗಳನ್ನು ಪ್ರೇರೇಪಿಸುತ್ತದೆ.

ಪ್ರ. ಆರ್ಕಿಡ್ಸ್ ತನ್ನ ವಿದ್ಯಾರ್ಥಿಗಳಲ್ಲಿ ಖಗೋಳಶಾಸ್ತ್ರ ಶಿಕ್ಷಣ ಮತ್ತು ಅವರ ತೊಡಗಿಸಿಕೊಳ್ಳುವಿಕೆಯನ್ನು ಹೇಗೆ ಉತ್ತೇಜಿಸುತ್ತದೆ?

ಉ : ಆರ್ಕಿಡ್ಸ್ ನಲ್ಲಿ ಖಗೋಳಶಾಸ್ತ್ರವು ನಂಬಲಾಗದ ಅನುಭವವನ್ನು ನೀಡುತ್ತದೆ, ವಿದ್ಯಾರ್ಥಿಗಳನ್ನು ಬೇರೆ ಜಗತ್ತಿಗೆ ಸಾಗಿಸುತ್ತದೆ. ಕ್ರಿಯಾತ್ಮಕ ಕಲಿಕೆಯ ವಾತಾವರಣಕ್ಕಾಗಿ ಶಿಕ್ಷಣ ತಜ್ಞರು ಹ್ಯಾಂಡ್–ಆನ್ ಚಟುವಟಿಕೆಗಳು, ಸ್ಟಾರ್ ಗೇಜಿಂಗ್, ಸಿಮ್ಯುಲೇಶನ್ ಗಳು ಮತ್ತು ಮಲ್ಟಿಮೀಡಿಯಾ ಸಾಧನಗಳನ್ನು ಬಳಸುತ್ತಾರೆ. ಇದು ಯುವ ಮನಸ್ಸುಗಳನ್ನು ವೈಜ್ಞಾನಿಕ ಆವಿಷ್ಕಾರದ ಕಡೆಗೆ ಒಡ್ಡುತ್ತದೆ ಮತ್ತು ಕುತೂಹಲವನ್ನು ಕೆರಳಿಸುತ್ತದೆ. ಇಲ್ಲಿ ವಿಷಯಗಳನ್ನು ಇನ್ನಷ್ಟು ಮುಂದಕ್ಕೆ ಕೊಂಡೊಯ್ಯುವ 'ಆಸ್ಟ್ರೋವರ್ಸ್' ಕ್ಲಬ್ ಇದೆ. ವಿದ್ಯಾರ್ಥಿಗಳು ವಾಸ್ತವವಾಗಿ

ದೂರದರ್ಶಕಗಳನ್ನು ಬಳಸುತ್ತಾರೆ, ನಿಜವಾದ ವಿಜ್ಞಾನ ಯೋಜನೆಗಳನ್ನು ಮಾಡುತ್ತಾರೆ ಮತ್ತು ಮೋಜಿನ ಚರ್ಚೆಗಳು ಮತ್ತು ಆಟಗಳನ್ನು ನಡೆಸುವ ಮೂಲಕ ಸ್ಪರ್ಧೆಗಳಿಗೆ ಸಿದ್ಧರಾಗುತ್ತಾರೆ. ಮತ್ತು ಅಷ್ಟೇ ಅಲ್ಲ – ಅವರು ಕಲಿಕೆಯನ್ನು ಹೆಚ್ಚಿಸಲು ಪ್ರವಾಸಗಳು, ಮಾದರಿಗಳು, ಬಾಹ್ಯಾಕಾಶ ಶಿಬಿರಗಳು ಮತ್ತು ಆನ್ಲೈನ್ ಸಂಪನ್ಮೂಲಗಳೊಂದಿಗೆ ಕಲಿಕೆಯನ್ನು ಆಟದಂತೆ ಮಾಡುತ್ತಾರೆ.

ಪ್ರ. ಆರ್ಕಿಡ್ಸ್ ನಲ್ಲಿ ಖಗೋಳಶಾಸ್ತ್ರವನ್ನು ಅಧ್ಯಯನ ಮಾಡುವುದು ಮಹಾಕಾವ್ಯದ ಕಾಸ್ಮಿಕ್ ಸಾಹಸದಂತೆ ಭಾಸವಾಗುವಂತೆ ಮಾಡುವುದು ಯಾವುದು?

ಉ : ಆಳವಾದ ಮತ್ತು ಆಕರ್ಷಕ ಕಲಿಕೆಯ ಅನುಭವಗಳಿಂದಾಗಿ ಆರ್ಕಿಡ್ಸ್ ನಲ್ಲಿ ಖಗೋಳಶಾಸ್ತ್ರವನ್ನು ಅಧ್ಯಯನ ಮಾಡುವುದು ಒಂದು ರೋಮಾಂಚನಕಾರಿ ಕಾಸ್ಮಿಕ್ ಸಾಹಸವಾಗಿದೆ. ಶಾಲೆಯ ತಾರಾಲಯವು ನೋಡಲು ಬೆರಗುಗೊಳಿಸುವ ಆಕಾಶ ಚಲನೆಗಳನ್ನು ಪ್ರದರ್ಶಿಸುವುದರ ಮೂಲಕ ವಿದ್ಯಾರ್ಥಿಗಳನ್ನು ಬೇರೆ ಜಗತ್ತಿಗೆ ಸಾಗಿಸುತ್ತದೆ. ಪ್ರಯೋಗಗಳು ಮತ್ತು ಸಂವಾದಾತ್ಮಕ ಮಾದರಿಗಳೊಂದಿಗೆ ತರಗತಿಯ ಪ್ರದರ್ಶನಗಳು ತಿಳುವಳಿಕೆ ಮತ್ತು ಸಕ್ರಿಯ ಭಾಗವಹಿಸುವಿಕೆಯನ್ನು ಹೆಚ್ಚಿಸುತ್ತವೆ. ಅಲ್ಲದೇ ಅವರು ಕಾಸ್ಮಿಕ್ ಸಂಪತ್ತನ್ನು ಸಂಗ್ರಹಿಸುವ ಮತ್ತು ಚಟುವಟಿಕೆಗಳನ್ನು ಮಾಡುವಂತಹ ಆಸ್ಟ್ರೋವರ್ಸ್ ಕಾರ್ಡ್ ಗಳು ಮತ್ತು ಕಿಟ್ ಗಳನ್ನೂ ಹೊಂದಿದ್ದಾರೆ. ಚಂದ್ರಯಾನ ಮೂನ್ ಮಿಷನ್ ಯಶಸ್ಸಿನ ನಂತರ ಕಾಸ್ಮಿಕ್ ಸಾಹಸಗಳ ಬಗ್ಗೆ ಮಾತನಾಡುತ್ತಾ, ಭಾರತದ ಇತ್ತೀಚಿನ ಆದಿತ್ಯ–ಎಲ್ 1 ಸನ್ ಮಿಷನ್ ನಮ್ಮದೇ ಸ್ವಂತ ನಕ್ಷತ್ರವಾದ ಸೂರ್ಯನ ರಹಸ್ಯಗಳನ್ನು ಅನ್ವೇಷಿಸಲು ಸಜ್ಜಾಗಿದೆ ಮತ್ತು ಇದೊಂದು ಶೈಕ್ಷಣಿಕ ಮೈಲಿಗಲ್ಲು ಎಂಬ ಭರವಸೆಯನ್ನು ನೀಡುತ್ತದೆ. ಇದು ನಿಸ್ಸಂದೇಹವಾಗಿ ನಮ್ಮ ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡುತ್ತದೆ, ಬ್ರಹ್ಮಾಂಡದ ಅದ್ಭುತಗಳು ಕೇವಲ ನಮ್ಮ ಸ್ವಂತ ಗ್ರಹಕ್ಕೆ ಮಾತ್ರವಲ್ಲ ಅದಕ್ಕೂ ಮೀರಿ ವಿಸ್ತರಿಸಿವೆ ಎನ್ನುವುದನ್ನು ಅವರಿಗೆ ನೆನಪಿಸುತ್ತದೆ. ಒಟ್ಟಾರೆಯಾಗಿ, ಆರ್ಕಿಡ್ಸ್ ನಲ್ಲಿ ಖಗೋಳಶಾಸ್ತ್ರವನ್ನು ಅಧ್ಯಯನ ಮಾಡುವುದು ಮಕ್ಕಳು ಎಂದಿಗೂ ಮರೆಯಲಾಗದ ಕುತೂಹಲ, ವಿಸ್ಮಯ ಮತ್ತು ಸಾಹಸದ ಸಂಪೂರ್ಣ ಹೊಸ

Advertorial

ಸತ್ಯಮೇವ ಜಯತೆ
ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ
ಭಾರತ ಸರ್ಕಾರ

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ
ಘೋಷಣೆ
ಸನ್ 2023-24ನೇ ಸಾಲಿನ ಎಸ್‌ಸಿ ಮತ್ತು ಇತರೆ ವಿದ್ಯಾರ್ಥಿಗಳಿಗೆ ಪೂರ್ವ-ಮೆಟ್ರಿಕ್ ಸ್ಕಾಲರ್‌ಶಿಪ್ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಇತರೆ ಸೌಲಭ್ಯವಂಚಿತ ಗುಂಪಿಗೆ ಸೇರಿದ ವಿದ್ಯಾರ್ಥಿಗಳ ಶಾಲಾ ಶಿಕ್ಷಣಕ್ಕಾಗಿ
26 ಲಕ್ಷ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್‌ಗಳು

ಅರ್ಹತೆ	ಸ್ವರೂಪ	ಹಕ್ಕು
ಅಂಶ–1 • ವಿದ್ಯಾರ್ಥಿಯು ಎಸ್‌ಸಿ ವರ್ಗಕ್ಕೆ ಸೇರಿರಬೇಕು. • ಪಾಲಕರ/ ಪೋಷಕರ ವಾರ್ಷಿಕ ಆದಾಯ ರೂ. 2.50 ಲಕ್ಷ ಮೀರಕೂಡದು.	• 9ನೇ ಮತ್ತು 10ನೇ ತರಗತಿಯಲ್ಲಿ ಅಂಗೀಕೃತ ಶಾಲೆಗಳಲ್ಲಿ ಓದುತ್ತಿರಬೇಕು. • ರಾಜ್ಯ ಸರ್ಕಾರ/ ಕೇಂದ್ರಾಡಳಿತ ಪ್ರದೇಶಗಳಿಂದ ಅರ್ಜಿಗಳ ಸ್ವೀಕಾರ ಮತ್ತು ಪರಿಶೀಲನೆ. • ಕಡುಬಡವ ಕುಟುಂಬಗಳು ಒಳಗೊಳ್ಳುತ್ತವೆ.	• ವಾರ್ಷಿಕ ರೂ. 3500 ರಿಂದ ರೂ. 7000 ವರೆಗಿನ ಅಕಾಡೆಮಿಕ್ ಭತ್ಯೆ. • ದಿವ್ಯಾಂಗ (ವಿಶೇಷಚೇತನ) ವಿದ್ಯಾರ್ಥಿಗಳಿಗೆ 10% ಹೆಚ್ಚುವರಿ ಭತ್ಯೆ.
ಅಂಶ–2 • ಪಾಲಕರು/ ಪೋಷಕರು ಶುಚಿಗೊಳಿಸುವಿಕೆ ಮತ್ತು ಆರೋಗ್ಯದ ಅಪಾಯಗಳಿಗೆ ಗುರಿಯಾಗುವ ಉದ್ಯೋಗಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ. • ಯಾವುದೇ ಆದಾಯದ ಮಿತಿ ಮಾನದಂಡಗಳಿಲ್ಲ.	• 1 ರಿಂದ 10ನೇ ತರಗತಿಯಲ್ಲಿ ಅಂಗೀಕೃತ ಶಾಲೆಗಳಲ್ಲಿ ಓದುತ್ತಿರಬೇಕು. • ರಾಜ್ಯ ಸರ್ಕಾರ/ ಕೇಂದ್ರಾಡಳಿತ ಪ್ರದೇಶಗಳಿಂದ ಅರ್ಜಿಗಳ ಸ್ವೀಕಾರ ಮತ್ತು ಪರಿಶೀಲನೆ. • ಕಡುಬಡವ ಕುಟುಂಬಗಳು ಒಳಗೊಳ್ಳುತ್ತವೆ.	• ವಾರ್ಷಿಕ ರೂ. 3500 ರಿಂದ ರೂ. 8000 ವರೆಗಿನ ಅಕಾಡೆಮಿಕ್ ಭತ್ಯೆ. • ದಿವ್ಯಾಂಗ (ವಿಶೇಷಚೇತನ) ವಿದ್ಯಾರ್ಥಿಗಳಿಗೆ 10% ಹೆಚ್ಚುವರಿ ಭತ್ಯೆ.

- ವಿದ್ಯಾರ್ಥಿಗಳು ತಮಗೆ ಸಂಬಂಧಿತ ರಾಜ್ಯದ ಸ್ಕಾಲರ್‌ಶಿಪ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸುವುದು.
- ವಿದ್ಯಾರ್ಥಿಗಳು ಕಡ್ಡಾಯವಾಗಿ ಒಂದು ಅಧಿಕೃತ ಮೊಬೈಲ್ ಸಂಖ್ಯೆ, ಆಧಾರ್ ಸಂಖ್ಯೆ (ಯುಐಡಿ), ಆಧಾರ್ ಸೀಡೆಡ್ ಬ್ಯಾಂಕ್ ಖಾತೆ, ಆದಾಯ ಪ್ರಮಾಣಪತ್ರ ಹಾಗೂ ಜಾತಿ ಪ್ರಮಾಣಪತ್ರ ಹೊಂದಿರತಕ್ಕದ್ದು.

- ಯೋಜನೆಯ ಮಾರ್ಗಸೂಚಿಗಳು ಮತ್ತು ಅರ್ಹತಾ ಮಾನದಂಡ ವಿವರಗಳು http://socialjustice.gov.in/schemes/23 ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ

cbc 38101/11/0034/2324

ಖಾಸಗಿ ಆಸ್ಪತ್ರೆ, ಪ್ರಯೋಗಾಲಯಗಳಿಂದ ಹೆಚ್ಚುವರಿ ಹಣ ವಸೂಲಿ

ಡೆಂಗಿ: ರಕ್ತಪರೀಕ್ಷೆಗೆ ಅಧಿಕ ಶುಲ್ಕ

• ವರುಣ ಹೆಗಡೆ

ಬೆಂಗಳೂರು: ನಗರದಲ್ಲಿ ಡೆಂಗಿ ಪ್ರಕರಣಗಳು ಒಂದೇ ಸಮನೆ ಏರುತ್ತಿರುವ ಕಾರಣ ರಕ್ತ ಪರೀಕ್ಷೆಗೆ ಒಳಗಾಗುವವರ ಸಂಖ್ಯೆ ಹೆಚ್ಚಳವಾಗಿದೆ. ಇದರಿಂದಾಗಿ ಖಾಸಗಿ ಆಸ್ಪತ್ರೆ ಹಾಗೂ ಪ್ರಯೋಗಾಲಯಗಳು ಡೆಂಗಿ ಪತ್ತೆಗೆ ನಡೆಸಲಾಗುವ ಪರೀಕ್ಷೆಗೆ ₹ 2 ಸಾವಿರದವರೆಗೂ ಹಣ ವಸೂಲಿ ಮಾಡುತ್ತಿವೆ.

ಡೆಂಗಿ ಪತ್ತೆಗೆ ಸಂಬಂಧಿಸಿದಂತೆ ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 19 ಸಾವಿರಕ್ಕೂ ಅಧಿಕ ಮಂದಿಗೆ ರಕ್ತ ಪರೀಕ್ಷೆ ನಡೆಸಲಾಗಿದೆ. ಬಿಸಿಲು–ಮಳೆ ಹಾಗೂ ಹವಾಮಾನ ಬದಲಾವಣೆಯಿಂದಾಗಿ ಡೆಂಗಿ ಪ್ರಕರಣ ಈ ವರ್ಷ ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗಿವೆ. ಮೊದಲ ಆರು ತಿಂಗಳು ನಗರದಲ್ಲಿ ಡೆಂಗಿ ಪ್ರಕರಣಗಳು ನಿಯಂತ್ರಣದಲ್ಲಿತ್ತು. ಬಳಿಕ ಪ್ರಕರಣಗಳು ದಿಢೀರ್ ಹೆಚ್ಚಳವಾಗಿವೆ. ನಾಲ್ಕೂ ವರ್ಷಗಳಲ್ಲಿಯೇ ಅಧಿಕ ಪ್ರಕರಣ ವರದಿಯಾಗಿದೆ.

2019ರಲ್ಲಿ ನಗರದಲ್ಲಿ 10 ಸಾವಿರಕ್ಕೂ ಅಧಿಕ ಡೆಂಗಿ ಪ್ರಕರಣಗಳು ವರದಿಯಾಗಿದ್ದವು. ರಾಜ್ಯದ ವಿವಿಧೆಡೆ ಸಹ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ಪತ್ತೆಯಾಗಿದ್ದವು. ಪ್ರಯೋಗಾಲಯ ಹಾಗೂ ಖಾಸಗಿ ಆಸ್ಪತ್ರೆಗಳು ಅಧಿಕ ಶುಲ್ಕ ವಸೂಲಿ ಮಾಡುತ್ತಿರುವ ಬಗ್ಗೆ ದೂರುಗಳು ಬಂದಿದ್ದರಿಂದ ಆರೋಗ್ಯ ಇಲಾಖೆಯು ಡೆಂಗಿ ಪರೀಕ್ಷೆಗೆ ₹ 250 ನಿಗದಿಪಡಿಸಿ, ಆದೇಶ ಹೊರಡಿಸಿತ್ತು. ಹೆಚ್ಚು ಶುಲ್ಕ ಪಡೆದರೆ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆಯಡಿ (ಕೆಪಿಎಂಇ) ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಲಾಗಿತ್ತು. ಆದರೆ, ನಗರದ ಬಹುತೇಕ ಖಾಸಗಿ ಆಸ್ಪತ್ರೆ ಹಾಗೂ ಪ್ರಯೋಗಾಲಯಗಳಲ್ಲಿ ಈ ಆದೇಶವನ್ನು ಉಲ್ಲಂಘಿಸಿ, ಹೆಚ್ಚಿನ ಹಣವನ್ನು ಪಡೆಯಲಾಗುತ್ತಿದೆ ಎಂದು ಪರೀಕ್ಷೆಗೆ ಒಳಗಾದವರು ದೂರಿದ್ದಾರೆ.

‘ಪತ್ನಿಗೆ ನಾಲ್ಕು ದಿನಗಳಿಂದ ಜ್ವರ ಇದ್ದಿದ್ದರಿಂದ ಕ್ಲಿನಿಕ್ ಒಂದರಲ್ಲಿ ತಪಾಸಣೆ ಮಾಡಿಸಲಾಯಿತು. ವೈದ್ಯರು ಡೆಂಗಿ ಬಗ್ಗೆ ಶಂಕೆ ವ್ಯಕ್ತಪಡಿಸಿ, ಪರೀಕ್ಷೆಗೆ ಸೂಚಿಸಿದರು. ಪ್ರಯೋಗಾಲಯದಲ್ಲಿ ಈ ಪರೀಕ್ಷೆಗೆ ₹ 1,800 ಪಡೆದರು. ಈ ವರದಿಯಿಂದ ಡೆಂಗಿ ಜ್ವರವಿಲ್ಲ ಎನ್ನುವುದು ಖಚಿತವಾಯಿತು. ವೈದ್ಯರ ಶುಲ್ಕ, ಔಷಧಗಳು ಸೇರಿ ₹ 4 ಸಾವಿರ ಖರ್ಚಾಯಿತು’ ಎಂದು ಎಚ್‌ಎಸ್‌ಆರ್ ಲೇಔಟ್ ನಿವಾಸಿ ಕಿರಣ್ ಕುಮಾರ್ ತಿಳಿಸಿದರು.

ಪರೀಕ್ಷೆ ಹೆಚ್ಚಳ: ಆರೋಗ್ಯ ಇಲಾಖೆ ಮಾಹಿತಿ ಪ್ರಕಾರ ಬಿಬಿಎಂಪಿ ವ್ಯಾಪ್ತಿಯಲ್ಲಿ ಕಳೆದ ಮೂರು ತಿಂಗಳಿಂದ ಪರೀಕ್ಷೆಗೆ ಒಳಪಡುವವರ ಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಗಿದೆ. ಬಿಬಿಎಂಪಿ ಸಹ ಪರೀಕ್ಷೆಗೆ ಆದ್ಯತೆ ನೀಡಿದೆ. ಮೊದಲ ಆರು ತಿಂಗಳು ಸಾವಿರ ಮಂದಿ ಮಾತ್ರ ರಕ್ತ ಪರೀಕ್ಷೆಗೆ ಒಳಗಾಗಿದ್ದರು. ನಂತರದ ಮೂರು ತಿಂಗಳಲ್ಲಿ ಸುಮಾರು 18 ಸಾವಿರ ಪರೀಕ್ಷೆ ಮಾಡಲಾಗಿದೆ.

‘ಜ್ವರದ ಕಾರಣದಿಂದ ಹತ್ತಿರದ ಖಾಸಗಿ ಆಸ್ಪತ್ರೆಗೆ ತೆರಳಿ ಪರೀಕ್ಷೆ ಮಾಡಿಸಿಕೊಂಡಾಗ ಒಟ್ಟು ₹ 2,300 ಶುಲ್ಕ ಪಾವತಿಸುವಂತೆ ಆಸ್ಪತ್ರೆಯವರು ಸೂಚಿಸಿದರು. ಡೆಂಗಿ ಪರೀಕ್ಷೆಯೊಂದಕ್ಕೆ ₹ 950 ನಮೂದಿಸಲಾಗಿತ್ತು. ಈ ಬಗ್ಗೆ ಪ್ರಶ್ನಿಸಿದಾಗ ಬೇರೆಡೆ ಇನ್ನೂ ಜಾಸ್ತಿಯಿದೆ ಎಂದು ಹೇಳಿದರು. ಹೀಗಾಗಿ, ಅಷ್ಟು ಹಣ ಪಾವತಿಸಿದೆ’ ಎಂದು ಬನಶಂಕರಿಯ ನಿವಾಸಿ ಜಿ. ಗೌತಮ್ ತಿಳಿಸಿದರು.

‘ಅಧಿಕ ಹಣ: ಕಾನೂನು ಕ್ರಮ’

‘ಡೆಂಗಿ ಪತ್ತೆಯ ರಕ್ತ ಪರೀಕ್ಷೆಗೆ ನಿಗದಿಪಡಿಸಿದ ಶುಲ್ಕಕ್ಕಿಂತ ಅಧಿಕ ಹಣ ಪಡೆದಿರುವ ಮಾಹಿತಿ ನೀಡಿದರೆ, ಪ್ರಯೋಗಾಲಯದ ಮೇಲೆ ಕಾನೂನು ರೀತಿ ಕ್ರಮಕೈಗೊಳ್ಳಲಾಗುತ್ತದೆ’ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ.ಕೆ.ವಿ. ತ್ರಿಲೋಕ್ ಚಂದ್ರ ತಿಳಿಸಿದರು.

‘ಕಳೆದ ಒಂದು ವಾರದಲ್ಲಿ 300 ಪ್ರಕರಣಗಳು ಪತ್ತೆಯಾಗಿವೆ. ಈ ಹಿಂದೆ ಪ್ರತಿ ವಾರ 500ರಿಂದ 600 ಪ್ರಕರಣಗಳು ಪತ್ತೆಯಾಗುತ್ತಿದ್ದವು. ನಿರಂತರವಾಗಿ ಸುರಿದ ಮಳೆಯಿಂದಾಗಿ ವಾತಾವರಣವು ಈಡಿಸ್ ಜಾತಿಯ ಸೊಳ್ಳೆಗಳ ಉತ್ಪತ್ತಿಗೆ ಪೂರಕವಾಗಿತ್ತು. ಇದರಿಂದಾಗಿ ಈ ವರ್ಷ ದಿಢೀರ್ ಪ್ರಕರಣಗಳು ಹೆಚ್ಚಳವಾದವು. ಅಧಿಕ ಪ್ರಕರಣಗಳು ವರದಿಯಾಗುತ್ತಿದ್ದ ಸ್ಥಳಗಳನ್ನು ಗುರುತಿಸಿ, ಲಾರ್ವಾ ಉತ್ಪತ್ತಿ ತಾಣಗಳ ನಾಶ ಸೇರಿ ವಿವಿಧ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದರಿಂದಾಗಿ ಈ ತಿಂಗಳ ಅಂತ್ಯಕ್ಕೆ ಪೂರ್ಣ ಪ್ರಮಾಣದಲ್ಲಿ ನಿಯಂತ್ರಣಕ್ಕೆ ಬರಲಿದೆ’ ಎಂದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಡೆಂಗಿ ಪ್ರಕರಣ

ವರ್ಷ	ಡೆಂಗಿ ಪ್ರಕರಣ
2019	10,411
2020	2,047
2021	1,570
2022	2,313
2023	5,881

ಡೆಂಗಿ ಪತ್ತೆಗೆ ವರ್ಷವಾರು ರಕ್ತ ಪರೀಕ್ಷೆ

ವರ್ಷ	ಶಂಕಿತರು	ಪರೀಕ್ಷೆ
2021	52,333	5,950
2022	75,035	10,866
2023	24,391	19,328

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲ ಗೌಡ ಹೇಳಿಕೆ

‘ಏಕರೂಪ ನಾಗರಿಕ ಸಂಹಿತೆ ಗಿಮಿಕ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಏಕರೂಪ ನಾಗರಿಕ ಸಂಹಿತೆಯನ್ನು ಜಾರಿ ಮಾಡಲು ಸಾಧ್ಯವಿಲ್ಲ. ಆದರೆ, ಮುಂದಿನ ವರ್ಷದ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಜನರಿಗೆ ಮಕ್ಮಲ್ ಟೋಪಿ ಹಾಕಲು ಯೋಜಿಸಿರುವ ರಾಜಕೀಯ ಗಿಮಿಕ್ ಇದು’ ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲ ಗೌಡ ತಿಳಿಸಿದರು.

ನಗರದಲ್ಲಿ ಶನಿವಾರ ನಡೆದ ಏಕರೂಪ ನಾಗರಿಕ ಸಂಹಿತೆ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ನಾಗರಿಕ ಸಂಹಿತೆ ಜಾರಿ ಮಾಡಲು ಮುಂದಾದರೆ ಜನರು ದಂಗೆ ಏಳುತ್ತಾರೆ. ಬೇರೆ ಬೇರೆ ಧರ್ಮಗಳ ರೀತಿ ರಿವಾಜು ಮಾತ್ರ ಭಿನ್ನವಾಗಿರುವುದಲ್ಲ. ಪ್ರತಿ ಜಾತಿ, ಉಪಜಾತಿಗಳು ತಮ್ಮದೇ ಆದ ಆಚರಣೆಗಳನ್ನು, ಪದ್ಧತಿಗಳನ್ನು ಹೊಂದಿವೆ. ಪ್ರದೇಶಗಳಿಂದ ಪ್ರದೇಶಗಳಿಗೆ ಆಚರಣೆಯಲ್ಲಿ ಭಿನ್ನತೆ ಇದೆ. ಎಲ್ಲರೂ ಏಕರೂಪವಾಗಿ ಇರಲು ಸಾಧ್ಯವಿಲ್ಲ’ ಎಂದು ವಿಶ್ಲೇಷಿಸಿದರು.

‘ಜಾತ್ಯತೀತ ತತ್ವದ ಆಧಾರದಲ್ಲಿ ನಿಂತಿರುವ ಸಂವಿಧಾನವು ಎಲ್ಲರಿಗೂ ಅವರ ನಂಬಿಕೆಗಳನ್ನು ಆಚರಿಸುವ ಹಕ್ಕನ್ನು ನೀಡಿದೆ. ಏಕರೂಪ ಸಂಹಿತೆ ಜಾರಿಗೆ ತರುವುದು ಎಂದರೆ ಈ ಹಕ್ಕನ್ನು ಮೊಟಕುಗೊಳಿಸುವುದು, ಸಮಾನತೆಯ ಹಕ್ಕನ್ನು ಕಿತ್ತುಹಾಕುವುದೇ ಆಗಿದೆ’ ಎಂದರು.



ಫೋರಂ ಫಾರ್ ಡೆಮಾಕ್ರಸಿ ಆ್ಯಂಡ್ ಕಮ್ಯೂನಲ್ ಅಮಿಟಿ ಕರ್ನಾಟಕ (ಎಫ್‌ಡಿಸಿಎ–ಕೆ) ಆಯೋಜಿಸಿದ್ದ ‘ಏಕರೂಪ ನಾಗರಿಕ ಸಂಹಿತೆ’ ಕಾರ್ಯಕ್ರಮದಲ್ಲಿ ಎಫ್‌ಡಿಸಿಎ–ಕೆ ಪ್ರಧಾನ ಕಾರ್ಯದರ್ಶಿ ಎಂ.ಎಫ್‌. ಪಾಶಾ, ಅಂಕಣಕಾರ ಶಿವಸುಂದರ್, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನ ದಾಸ್, ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲ ಗೌಡ, ವಕೀಲ ರವಿವರ್ಮ ಕುಮಾರ್ ಮತ್ತು ಜಮಾತೆ ಇಸ್ಲಾಮಿ ಹಿಂದ್ ರಾಜ್ಯ ಘಟಕದ ಅಧ್ಯಕ್ಷ ಬೆಳಗಾಮಿ ಮೊಹಮ್ಮದ್ ಸಾದ್ ಇದ್ದಾರೆ –ಪ್ರಜಾವಾಣಿ ಚಿತ್ರ

ನಿವೃತ್ತ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನದಾಸ್ ಮಾತನಾಡಿ, ‘ಧರ್ಮ ಧರ್ಮಗಳ ನಡುವೆ ಏಕರೂಪ ಇರಲು ಸಾಧ್ಯವಿಲ್ಲ. ಆಯ ಧರ್ಮಗಳ ಒಳಗೆ ಏಕರೂಪ ಇದೆಯೇ ಎಂಬುದನ್ನು ಮೊದಲು ನೋಡಬೇಕು. ಎಲ್ಲ ಧರ್ಮಗಳು ಸಾವಿರಾರು ವರ್ಷಗಳ ಹಿಂದಿನವು. ಈಗಿನ ಕಾಲಕ್ಕೆ ತಕ್ಕಂತೆ ಉನ್ನತೀಕರಣಗೊಳ್ಳಬೇಕು. ಕೆಲವೊಂದು ಸಂಪ್ರದಾಯಗಳನ್ನು ಬಿಡಬೇಕು. ಕೆಲವನ್ನು ಸರಳಗೊಳಿಸಬೇಕು. ಕೆಲವನ್ನು ಬದಲಾಯಿಸಬೇಕು. ಧರ್ಮಗಳ ಒಳಗೆ ಪ್ರಜಾಪ್ರಭುತ್ವ ಬರಬೇಕು’ ಎಂದು ಸಲಹೆ ನೀಡಿದರು.

ಮಹಿಳೆಯರಿಗೆ ಮದುವೆ, ಆಸ್ತಿ ಹಕ್ಕು, ಉತ್ತರಾಧಿಕಾರಿ, ದತ್ತು ಸ್ವೀಕಾರ ಮುಂತಾದವುಗಳಲ್ಲಿ ಸಮಾನತೆ ಮತ್ತು ಸಮಾನ ಹಕ್ಕು ನೀಡುವ ಹಿಂದೂ ಕೋಡ್ ಬಿಲ್ ಅನ್ನು ಡಾ.ಬಿ.ಆರ್. ಅಂಬೇಡ್ಕರ್ ಮಂಡಿಸಿದ್ದರು. ಆಗ ವಿರೋಧಿಸಿದ ಮನಸ್ಥಿತಿಯವರೇ ಇಂದು ಏಕರೂಪ ನಾಗರಿಕ ಸಂಹಿತೆಯನ್ನು ತರಲು ಪ್ರಯತ್ನಿಸುತ್ತಿದ್ದಾರೆ. ಏಕರೂಪ ನಾಗರಿಕ ಸಂಹಿತೆ ಬರಬೇಕಿದ್ದರೆ ಜಾತಿ ಪದ್ಧತಿ, ಜಾತಿಯೊಳಗಿನ ಮದುವೆ ಪದ್ಧತಿಗಳನ್ನೆಲ್ಲ ನಿಷೇಧಿಸಬೇಕು ಎಂದು ವಕೀಲ ರವಿವರ್ಮ ಕುಮಾರ್ ತಿಳಿಸಿದರು.

ಏಕರೂಪ ನಾಗರಿಕ ಹಕ್ಕು ಜಾರಿಗೆ ತರುವ ಉದ್ದೇಶ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಇಲ್ಲ. ಆದರೆ, ಏಕರೂಪ ನಾಗರಿಕ ಹಕ್ಕು ಜಾರಿ ಮಾಡುವುದಾಗಿ ಹೇಳುತ್ತಾ, ಅದಕ್ಕೆ ಮುಸ್ಲಿಮರು, ಕ್ರಿಶ್ಚಿಯನ್ನರಿಂದ ಪ್ರತಿಕ್ರಿಯೆಯನ್ನು ಪಡೆಯುವ ಕೆಲಸ ಮಾಡುತ್ತಾರೆ. ಆಮೇಲೆ ನೋಡಿ ಅವರು ಹಾಗೆ ಹೇಳಿದರು ಎಂದು ವಿಲನ್‌ಗಳನ್ನಾಗಿ ಬಿಂಬಿಸುವುದು, ಆ ಮೂಲಕ ಹಿಂದೂ ರಾಷ್ಟ್ರ ಕಲ್ಪನೆಗೆ ನೀರೆರೆಯುವುದು ಅವರ ಉದ್ದೇಶ ಎಂದು ಅಂಕಣಕಾರ ಶಿವಸುಂದರ್ ವಿವರಿಸಿದರು.

ಜಮಾತ್ ಇ ಇಸ್ಲಾಮಿ ಹಿಂದ್ ರಾಜ್ಯಾಧ್ಯಕ್ಷ ಬೆಳಗಾಮಿ ಮೊಹಮ್ಮದ್ ಸಾದ್, ಹೋರಾಟಗಾರ್ತಿ ಸಿಂಥಿಯಾ ಸ್ಟೀಫನ್, ಅಕ್ಬೂರ ಆಸ್ಪತ್ರೆಯ ನಿರ್ದೇಶಕ ಡಾ. ಮೊಹಮ್ಮದ್ ತಹಾ ಮತೀನ್, ಫೋರಂ ಫಾರ್ ಡೆಮಾಕ್ರಸಿ ಆ್ಯಂಡ್ ಕಮ್ಯುನಲ್ ಅಮಿಟಿ–ಕರ್ನಾಟಕ (ಎಫ್‌ಡಿಸಿಎ–ಕೆ) ಪ್ರಧಾನ ಕಾರ್ಯದರ್ಶಿ ಎಂ.ಎಫ್. ಪಾಷ ಮಾತನಾಡಿದರು.

ಜಾತಿಗಣತಿ ವರದಿ ನವೆಂಬರ್‌ನಲ್ಲಿ ಸಲ್ಲಿಕೆ ನಿರೀಕ್ಷೆ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಮೈಸೂರು: ‘ಜಾತಿ ಗಣತಿ ಆಯೋಗವು (ಹಿಂದುಳಿದ ವರ್ಗಗಳ ಆಯೋಗ) ಸರ್ಕಾರಕ್ಕೆ ನವೆಂಬರ್‌ನಲ್ಲಿ ವರದಿ ಸಲ್ಲಿಸುವ ನಿರೀಕ್ಷೆ ಇದ್ದು, ಅದನ್ನು ಆಧರಿಸಿ ಮುಂದಿನ ತೀರ್ಮಾನ ಕೈಗೊಳ್ಳುತ್ತೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಇಲ್ಲಿ ಶನಿವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ‘ಹಿಂದೆ ಕಾಂತರಾಜು ಆಯೋಗವು ನೀಡಿದ್ದ ವರದಿಯನ್ನು ಅಂದಿನ ಮುಖ್ಯಮಂತ್ರಿ ಎಚ್‌.ಡಿ. ಕುಮಾರಸ್ವಾಮಿ ಸ್ವೀಕರಿಸಲಿಲ್ಲ. ಈಗ ಆಯೋಗಕ್ಕೆ ಹೊಸ ಅಧ್ಯಕ್ಷರಿದ್ದಾರೆ. ಕಾಂತರಾಜು ಆಯೋಗದಂತೆಯೇ ವರದಿ ಸಲ್ಲಿಸಲು ಹೇಳಿದ್ದೇನೆ’ ಎಂದರು.

ಅಶೋಕ– ಅಂಬೇಡ್ಕರ್ ಧಮ್ಮ ಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುದ್ಧಿಸ್ಟ್ ಫ್ರೆಟರ್ನಿಟಿ ಕೌನ್ಸಿಲ್ ನೇತೃತ್ವದಲ್ಲಿ ನಡೆಯುತ್ತಿರುವ ‘ಅಶೋಕ ಅಂಬೇಡ್ಕರ್ ಧಮ್ಮ ಯಾತ್ರೆ’ ಇದೇ 10ರಂದು ನಗರ ಪ್ರವೇಶಿಸಲಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ‘ಯಾತ್ರೆ 9ಕ್ಕೆ ಕರ್ನಾಟಕ ಕೆಜಿಎಫ್‌ಗೆ ತಲುಪಲಿದೆ. ಇದೇ 10ರಂದು ವಿಧಾನ ಸೌಧ ಮುಂಭಾಗದಲ್ಲಿರುವ ಡಾ.ಬಿ. ಆರ್. ಅಂಬೇಡ್ಕರ್ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದವರೆಗೆ ಮೆರವಣಿಗೆ ನಡೆಯಲಿದೆ. ಸಚಿವರಾದ ಎಚ್‌.ಸಿ. ಮಹದೇವಪ್ಪ, ಪ್ರಿಯಾಂಕ್ ಖರ್ಗೆ ಅವರು ಸಾಮ್ರಾಟ್ ಅಶೋಕನ ವಿಶೇಷ ಪ್ರತಿಮೆ ಅನಾವರಣ ಮಾಡಲಿದ್ದಾರೆ’ ಎಂದು ತಿಳಿಸಿದರು.

‘ಸಚಿವ ಸತೀಶ್ ಜಾರಕಿಹೊಳಿ ಅವರು ‘ಬುದ್ಧ ಆ್ಯಂಡ್ ಹಿಸ್ ಧಮ್ಮ’ ಸಂಪುಟವನ್ನು ಬಿಡುಗಡೆಗೊಳಿಸಲಿದ್ದಾರೆ. ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ, ವೆಂಕಮ್ಮ, ಗೊಲ್ಲಹಳ್ಳಿ ಶಿವಪ್ರಸಾದ್ ಹಾಗೂ ಹನಸೋಗೆ ಸೋಮಶೇಖರ ಅವರಿಗೆ ಧಮ್ಮ ಸನ್ಮಾನ ನಡೆಯಲಿದೆ’ ಎಂದರು.

ಕೇರಳದಲ್ಲಿ ಸೆ.30ರಂದು ಪ್ರಾರಂಭವಾಗಿದ್ದ ಯಾತ್ರೆಯು ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ಮಾರ್ಗವಾಗಿ ಅ. 22ರಂದು ಮಹಾರಾಷ್ಟ್ರದ ನಾಗಪುರಕ್ಕೆ ತಲುಪಲಿದೆ ಎಂದು ತಿಳಿಸಿದರು.

ESTD : 1920
MCBL LTD
103 Year Bank
ದಿ ಮಲ್ಲೇಶ್ವರಂ ಕೋ–ಆಪರೇಟಿವ್ ಬ್ಯಾಂಕ್ ಲಿ.,
#102, 7ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560003 Email: mcb_mall@yahoo.com
103ನೇ ಸರ್ವ ಸದಸ್ಯರ ಮಹಾಸಭೆ ದಿನಾಂಕ: 27-08-2023
ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕಿನ 103ನೇ ಸರ್ವ ಸದಸ್ಯರ ಮಹಾಸಭೆಯು ದಿನಾಂಕ: 27-08-2023ರ ಭಾನುವಾರದಂದು ನಡೆಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷರಾದ **ಶ್ರೀಯುತ ಬಿ. ರಮೇಶ್** ರವರು ವಹಿಸಿದ್ದರು. 2022-23ರ ಅಂತ್ಯಕ್ಕೆ ಬ್ಯಾಂಕಿನ ಒಟ್ಟು ಠೇವಣಿ 734.15 ಕೋಟಿ ರೂ.ಗಳಾಗಿದ್ದು, ಸಾಲ ಮತ್ತು ಮುಂಗಡಗಳು 438.73 ಕೋಟಿ ರೂ.ಗಳಾಗಿರುತ್ತದೆ. ಷೇರು ಬಂಡವಾಳ ರೂ. 17.99 ಕೋಟಿ ಹಾಗೂ ನೆಟ್ ವರ್ತ್ ರೂ. 60.38 ಕೋಟಿ ಹೊಂದಿದ್ದು, ರೂ. 91.81 ಕೋಟಿ ಅಪದ್ಧನ ನಿಧಿ ಮತ್ತು ಇತರ ನಿಧಿಗಳನ್ನು ಹೊಂದಿದೆ. **ಬ್ಯಾಂಕು 18.95 ಕೋಟಿ ರೂಪಾಯಿಗಳ ಒಟ್ಟು ಲಾಭ ಗಳಿಸಿದ್ದು, ಅನುತ್ಪಾದಕ ಆಸ್ತಿಗಾಗಿ ಅವಕಾಶ ಹಾಗು ಆದಾಯ ತೆರಿಗೆಯ ಪಾವತಿಯ ನಂತರ ರೂ. 3.86 ಕೋಟಿಗಳಷ್ಟು ನಿವ್ವಳ ಲಾಭ ಗಳಿಸಿ, ಬ್ಯಾಂಕಿನ ನಿವ್ವಳ ಆಸ್ತಿಯು ಶೇ. 4.55% ಇರುತ್ತದೆ. ಸದಸ್ಯರಿಗೆ ಶೇಕಡಾ 10ರಷ್ಟು ಡಿವಿಡೆಂಡ್ ನೀಡುತ್ತೇವೆಂದು ತಿಳಿಸಲು ಹರ್ಷಿಸುತ್ತೇವೆ.**
ದಿನಾಂಕ: 03-10-2023
ಸ್ಥಳ: ಬೆಂಗಳೂರು
ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ

ಜಯಪ್ರಕಾಶ್ ನಾರಾಯಣ ಪುತ್ಥಳಿ ಮರುಸ್ಥಾಪಿಸಲು ಆಗ್ರಹ

ಬೆಂಗಳೂರು: ‘ಜೆ.ಪಿ. ಪಾರ್ಕ್‌ನಲ್ಲಿದ್ದ ಜಯಪ್ರಕಾಶ್ ನಾರಾಯಣ ಅವರ ಪುತ್ಥಳಿಯನ್ನು ಕೆಲ ಸಂಕುಚಿತ ಮನೋಭಾವದವರು ತೆರವುಗೊಳಿಸಿದ್ದಾರೆ. ಕೂಡಲೇ ಜೆ.ಪಿ ಅವರ ಪುತ್ಥಳಿಯನ್ನು ಮರುಸ್ಥಾಪಿಸಬೇಕು’ ಎಂದು ಜನತಾ ಪಕ್ಷ ಆಗ್ರಹಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ನಾಗೇಶ್ ಎನ್, ‘ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರ ಸರ್ಕಾರದ ಅವಧಿಯಲ್ಲಿ ಜೆ.ಪಿ. ಪಾರ್ಕ್ ಅಭಿವೃದ್ಧಿಪಡಿಸಲಾಗಿತ್ತು. ಆದರೆ, ಜಯಪ್ರಕಾಶ್ ನಾರಾಯಣ ಅವರ ತತ್ವಾದರ್ಶಗಳ ಪರಿಚಯವೇ ಇಲ್ಲದ ಕೆಲ ಜನಪ್ರತಿನಿಧಿಗಳು ಜೆ.ಪಿ ಪುತ್ಥಳಿ ತೆರವುಗೊಳಿಸಿ, ಗೋಪುರ ಗಡಿಯಾರ ಸ್ಥಾಪಿಸಲು ಮುಂದಾಗಿದ್ದಾರೆ’ ಎಂದು ದೂರಿದರು. ‘ಇದೇ 11ರಂದು ಜಯಪ್ರಕಾಶ್ ನಾರಾಯಣ್ ಅವರ 121ನೇ ಜನ್ಮದಿನವಾಗಿದ್ದು, ಅಂದು ಶೇಷಾದ್ರಿಪುರದಲ್ಲಿರುವ ಜನತಾ ಪಕ್ಷದ ಕಚೇರಿಯಿಂದ ಜೆ.ಪಿ. ಪಾರ್ಕ್‌ವರೆಗೂ ಬೈಕ್ ರ್‍ಯಾಲಿ ಮೂಲಕ ತೆರಳಿ ಜೆ.ಪಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಗುವುದು’ ಎಂದು ತಿಳಿಸಿದರು.

ಪಿಡಿಒ, ಎಂಜಿನಿಯರ್ ಲೋಕಾಯುಕ್ತ ಬಲೆಗೆ

ಮುದ್ದೇಬಿಹಾಳ (ವಿಜಯಪುರ ಜಿಲ್ಲೆ): ಪಟ್ಟಣದ ತಾ.ಪಂ ಕಚೇರಿಯಲ್ಲಿ ಶನಿವಾರ ತಂಗಡಗಿ ಗ್ರಾಮ ಪಂಚಾಯಿತಿ ಕಾಂಪೌಂಡ್ ಕಾಮಗಾರಿ ಬಿಲ್ ಬಿಡುಗಡೆಗೆ ₹30 ಸಾವಿರ ಲಂಚ ತೆಗೆದುಕೊಳ್ಳುತ್ತಿದ್ದ ವೇಳೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ, ಪಿಡಿಒ ಹಾಗೂ ತಾಂತ್ರಿಕ ಸಹಾಯಕನನ್ನು ವಶಕ್ಕೆ ಪಡೆದಿದ್ದಾರೆ.

ತಂಗಡಗಿ ಗ್ರಾಮ ಪಂಚಾಯಿತಿ ಪಿಡಿಒ ಬಸವರಾಜ ತಾಳಿಕೋಟಿ ಹಾಗೂ ಉದ್ಯೋಗ ಖಾತ್ರಿ ಯೋಜನೆ ತಾಂತ್ರಿಕ ಸಹಾಯಕ ಪ್ರಸನ್ನಕುಮಾರ ಶೆಟ್ಟರ್ ಲೋಕಾಯುಕ್ತ ಬಲೆಗೆ ಬಿದ್ದವರು.

ಪಿಇಎಸ್ ವಿಶ್ವವಿದ್ಯಾಲಯ ಘಟಿಕೋತ್ಸವ • 3,986 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

‘ದೇಶದ ಅಭ್ಯುದಯಕ್ಕೆ ಆವಿಷ್ಕಾರ ನಡೆಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉದ್ಯೋಗಕ್ಕಾಗಿ ಮಾತ್ರ ಶಿಕ್ಷಣ ಪಡೆಯದೇ ತನ್ನನ್ನು ತಾನು ಸುಧಾರಿಸಿಕೊಳ್ಳುವತ್ತಲೂ ವಿದ್ಯಾರ್ಥಿಗಳು ಹೆಚ್ಚಿನ ಗಮನ ಹರಿಸಬೇಕು’ ಎಂದು ಐಟಿಟಿಐಎಂ ಸಿಸ್ಟಮ್ಸ್‌ನ ಸಿಇಒ ಶ್ರೀನಿ ರಾಜಮ್ ಕರೆ ನೀಡಿದರು.

ನಗರದ ಪಿಇಎಸ್ ವಿಶ್ವವಿದ್ಯಾಲಯದಲ್ಲಿ ನಡೆದ 8ನೇ ಘಟಿಕೋತ್ಸವದಲ್ಲಿ ವಿವಿಧ ಕೋರ್ಸ್‌ನ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ತಪ್ಪುಗಳು ನಡೆದಾಗ ತಿದ್ದಿಕೊಂಡು ಕಲಿಯಬೇಕು. ಆಗ ಯಶಸ್ಸು ಲಭಿಸಲಿದೆ. ಅಲ್ಪಕಾಲದ ಯಶಸ್ಸಿಗಿಂತ ದೀರ್ಘಾವಧಿ ದೃಷ್ಟಿಕೋನ ಬಹಳ ಮುಖ್ಯ’ ಎಂದು ಅವರು ಅಭಿಪ್ರಾಯಪಟ್ಟರು.

‘ಯುವ ಪದವೀಧರರು ತಾಯ್ನಾಡಿಗಾಗಿ ಕೊಡುಗೆ ನೀಡಬೇಕು. ಹೊಸ ಆವಿಷ್ಕಾರಗಳತ್ತ ಗಮನ ಹರಿಸಬೇಕು. ತಮ್ಮ ದೇಶಕ್ಕಾಗಿ ಹೊಸ ಆವಿಷ್ಕಾರ ನಡೆಸಿ’ ಎಂದು ಕರೆ ನೀಡಿದರು.

‘ಮನಸ್ಸು ಮಾಡಿದಲ್ಲಿ ಸಾಮಾನ್ಯ ಉದ್ಯೋಗಿಗಳು ದೊಡ್ಡ ಸಾಧಕರಾಗಿ ಬದಲಾವಣೆಗೊಳ್ಳಲು ಸಾಧ್ಯ. ಆದರೆ, ಪ್ರಯತ್ನದಲ್ಲಿ ನಿರಂತರತೆ ಇರಬೇಕು’ ಎಂದು ಹೇಳಿದರು.

ಪಿಇಎಸ್ ವಿಶ್ವವಿದ್ಯಾಲಯದ ಸಮ ಕುಲಾಧಿಪತಿ ಡಿ.ಜವಾಹರ್ ಅವರು ಉತ್ತೀರ್ಣರಾದ ಪದವೀಧರರಿಗೆ ಪ್ರಮಾಣ ವಚನ ಬೋಧಿಸಿ ಮಾತನಾಡಿ, ‘ವಿದ್ಯಾರ್ಥಿಗಳು ದೊಡ್ಡ ಕನಸು ಕಾಣಬೇಕು ಹಾಗೂ ಕನಸು ನನಸು ಮಾಡಿಕೊಳ್ಳುವತ್ತ ತಮ್ಮ ಗಮನ ಕೇಂದ್ರೀಕರಿಸಬೇಕು’ ಎಂದು ಸಲಹೆ ನೀಡಿದರು.

‘ಪಿಇಎಸ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳು ತಾಂತ್ರಿಕ ಕೋರ್ಸ್‌ಗಳ ಜೊತೆಗೆ ಆಧ್ಯಾತ್ಮಿಕ ಮತ್ತು ಸಾಮಾಜಿಕ ಅಗತ್ಯವನ್ನು ಒಳಗೊಂಡ ಶಿಕ್ಷಣ ಬೋಧಿಸಲಾಗುತ್ತಿದೆ’ ಎಂದು ಹೇಳಿದರು.

‘ಕೆಲಸ ಲಭಿಸಿದ ಮೇಲೆ ವೃತ್ತಿಯ ಮೇಲೆ ಪ್ರೀತಿ ಇರಬೇಕು. ಸಾಮಾಜಿಕ ಜವಾಬ್ದಾರಿಯನ್ನೂ ನಿಭಾಯಿಸಬೇಕು’ ಎಂದು ಸಲಹೆ ನೀಡಿದರು.

ಕುಲಪತಿ ಜೆ.ಸೂರ್ಯಪ್ರಸಾದ್, ಕುಲಸಚಿವ ಕೆ.ಎಸ್. ಶ್ರೀಧರ್ ಇದ್ದರು.

ವಿಶ್ವವಿದ್ಯಾಲಯ ವಿವಿಧ ಎಂಜಿನಿಯರಿಂಗ್ ವಿಭಾಗ, ಮ್ಯಾನೇಜ್‌ಮೆಂಟ್ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. 12 ಡಾಕ್ಟರೇಟ್, 21 ಚಿನ್ನದ ಪದಕ ಸೇರಿದಂತೆ ಒಟ್ಟು 3,986 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳು ಹರ್ಷ ವ್ಯಕ್ತಪಡಿಸಿದರು.

ಮುಖ್ಯಾಂಶಗಳು

- ದೀರ್ಘಾವಧಿ ದೃಷ್ಟಿಕೋನ ಹೊಂದಲು ಸಲಹೆ
- ವಿದ್ಯಾರ್ಥಿಗಳಿಗೆ ಆಧ್ಯಾತ್ಮಿಕ, ಸಾಮಾಜಿಕ ಅಗತ್ಯದ ಶಿಕ್ಷಣ ಬೋಧನೆ
- ಚಿನ್ನದ ಪದಕ ವಿಜೇತ ವಿದ್ಯಾರ್ಥಿಗಳ ಸಂಭ್ರಮ

ನಗರದಲ್ಲಿ ಶನಿವಾರ ಪಿಇಎಸ್ ವಿಶ್ವವಿದ್ಯಾಲಯ ಆಯೋಜಿಸಿದ್ದ 8ನೇ ಘಟಿಕೋತ್ಸವದಲ್ಲಿ ವಿವಿಧ ವಿಭಾಗಗಳಲ್ಲಿ ಮೊದಲ ರ್‍ಯಾಂಕ್ ಮತ್ತು ಚಿನ್ನದ ಪದಕ ಪಡೆದ (ಎಡದಿಂದ) ಸ್ವಾತಿ ಕೆ.ಆರ್. (ಬಿ.ಟೆಕ್ –ಇಸಿಇ), ವೈಷ್ಣವಿ ಎಂ.ಆರ್. (ಬಿ.ಕಾಂ), ನಿರೀಕ್ಷಾ ಎನ್. (ಬಿ.ಕಾಂ), ಗಜಲ್ ಚಾಂದ್ (ಬಿಬಿಎ), ಸಿಂಧು ಪ್ರಿಯ ಸಿ. (ಬಿ–ಫಾರ್ಮ), ಯಶ್ವಿಗಾ ಪಿ. (ಬಿಬಿಎ) ವಿದ್ಯಾರ್ಥಿಗಳು ಪರಸ್ಪರ ಅಭಿನಂದಿಸಿದ ಕ್ಷಣ. – ಪ್ರಜಾವಾಣಿ ಚಿತ್ರ/ ರಂಜು ಪಿ.

ಅಣ್ಣಮ್ಮ ದೇವಿ ಉತ್ಸವ

ಕೆ.ಆರ್.ಮಾರುಕಟ್ಟೆ ಆವರಣದಲ್ಲಿ ‘ಅಣ್ಣಮ್ಮದೇವಿ ಉತ್ಸವದ ವರ್ತಕರ ಸಂಘ’ವು ಶನಿವಾರ 44ನೇ ಅಣ್ಣಮ್ಮದೇವಿ ಉತ್ಸವವನ್ನು ಆಯೋಜಿಸಿತ್ತು

ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ಪ್ರಾಚೀನ ನಾಣ್ಯಗಳ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸುರಾನಾ ಕಾಲೇಜಿನನಲ್ಲಿ ನಾಣ್ಯ ಶಾಸ್ತ್ರಜ್ಞ ಎಚ್.ಕೆ. ರಾಮರಾವ್ ಅವರ ‘ಭಾರತ ದರ್ಶನ’ ಎಂಬ ಪ್ರಾಚೀನ ಪರಂಪರೆ ಮತ್ತು ಐತಿಹಾಸಿಕ ನಾಣ್ಯಗಳ ಪ್ರದರ್ಶನವನ್ನು ಆಯೋಜಿಸಲಾಗಿತ್ತು.

ಸುರಾನಾ ಕಾಲೇಜಿನ ಇತಿಹಾಸ ವಿಭಾಗವು ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಘಧ, ಮೌರ್ಯ, ದೆಹಲಿ ಸುಲ್ತಾನರು, ಮೊಘಲರು ಮತ್ತು ವಿಜಯನಗರ ಸಾಮ್ರಾಜ್ಯ ಆಡಳಿತ ಅವಧಿಯ 1,500ಕ್ಕೂ ಹೆಚ್ಚು ನಾಣ್ಯಗಳನ್ನು ಪ್ರದರ್ಶಿಸಲಾಯಿತು.

ಕರ್ನಾಟಕ ನಾಣ್ಯಶಾಸ್ತ್ರ ಸೊಸೈಟಿಯ ಸದಸ್ಯ ಎಸ್.ಎಸ್. ಅಫ್ಸರ್ ಖಾದ್ರಿ, ‘ಇತಿಹಾಸವನ್ನು ತಿಳಿದುಕೊಳ್ಳಲು ನಾಣ್ಯಗಳು ಪ್ರಮುಖ ಪಾತ್ರವಹಿಸುತ್ತವೆ. ಇಲ್ಲಿ ವ್ಯಾಪಕವಾದ ನಾಣ್ಯಗಳ ಸಂಗ್ರಹವನ್ನು ಪ್ರಸ್ತುತಪಡಿಸಲಾಗಿದೆ. ಇದರಿಂದ, ವಿದ್ಯಾರ್ಥಿಗಳು ಇತಿಹಾಸದ ಬಗ್ಗೆ ಉತ್ತಮ ಮಾಹಿತಿಗಳನ್ನು ಪಡೆದುಕೊಳ್ಳಬೇಕು’ ಎಂದರು.

ನಾಣ್ಯಶಾಸ್ತ್ರಜ್ಞ ಎಚ್. ಕೆ.ರಾಮರಾವ್, ‘ನಾಣ್ಯಗಳು ಕಾಲದ ಸಂಸ್ಕೃತಿ, ಪರಂಪರೆ, ಸಂಪ್ರದಾಯಗಳು ಮತ್ತು ಆರ್ಥಿಕ ಸ್ಥಿತಿಗತಿಗಳ ಮಾಹಿತಿ ನೀಡುತ್ತವೆ’ ಎಂದು ತಿಳಿಸಿದರು.

ಪ್ರಾಚೀನ ನಾಣ್ಯಗಳನ್ನು ವೀಕ್ಷಿಸುತ್ತಿರುವ ವಿದ್ಯಾರ್ಥಿಗಳು

‘ಗರ್ಭಕಂಠ ಕ್ಯಾನ್ಸರ್ ಪತ್ತೆಗೆ ಆದ್ಯತೆ’

ಬೆಂಗಳೂರು: ‘ಮಹಿಳೆಯರಲ್ಲಿ ಗರ್ಭಕಂಠ ಕ್ಯಾನ್ಸರ್ ನಿಯಂತ್ರಣಕ್ಕೆ ತಪಾಸಣೆ, ಲಸಿಕೆ, ಆರಂಭಿಕ ಹಂತದ ಚಿಕಿತ್ಸೆಗೆ ಆದ್ಯತೆ ನೀಡಲಾಗುವುದು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ರಾಷ್ಟ್ರೀಯ ಆರೋಗ್ಯ ಅಭಿಯಾನ ಹಾಗೂ ಫೈಂಡ್ ಸಂಸ್ಥೆ ಜಂಟಿಯಾಗಿ ಗರ್ಭಕಂಠ ಕ್ಯಾನ್ಸರ್ ತಪಾಸಣೆ ಬಗ್ಗೆ ಇಲ್ಲಿ ಹಮ್ಮಿಕೊಂಡ ಸಮಾಲೋಚನೆ ಸಭೆ ಉದ್ಘಾಟಿಸಿ, ಮಾತನಾಡಿದರು.

‘ಗರ್ಭಕಂಠಕ್ಯಾನ್ಸರ್‌ನಿರ್ಮೂಲನೆಗೆ ಮಾರ್ಗಸೂಚಿ ರೂಪಿಸಲಾಗುವುದು. 30 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ತಪಾಸಣೆಗೆ ಅವಕಾಶ ಕಲ್ಪಿಸಲು, 9ರಿಂದ 14 ವರ್ಷದೊಳಗಿನ ಎಲ್ಲಾ ಹೆಣ್ಣು ಮಕ್ಕಳಿಗೆ ಸಾರ್ವತ್ರಿಕ ಲಸಿಕೆ ನೀಡುವ ಚಿಂತನೆ ಇದೆ ಎಂದರು.

ಫೈಂಡ್ ಸಂಸ್ಥೆ ಉಪಾಧ್ಯಕ್ಷ ಸಂಜಯ್ ಸರಿನ್, ‘ಗರ್ಭಕಂಠದ ಕ್ಯಾನ್ಸರ್ ನಿರ್ಮೂಲನೆಗೆ ಸರ್ಕಾರಕ್ಕೆ ಸಹಕಾರ ನೀಡಲಾಗುವುದು’ ಎಂದರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ ವಿ. ಲೋಕೇಶ್ ಇದ್ದರು.

ಮತದಾರರ ನೋಂದಣಿ ಜಾಗೃತಿ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ತಿನ ಬೆಂಗಳೂರು ಪದವೀಧರರ ಕ್ಷೇತ್ರದಲ್ಲಿ ಸ್ಪರ್ಧೆಗೆ ಆಕಾಂಕ್ಷಿಯಾಗಿರುವ ಬಿಜೆಪಿ ಮುಖಂಡ ಎ.ಎಚ್. ಆನಂದ್ ಅವರು ಮತದಾರರ ನೋಂದಣಿ ಕುರಿತು ಹಮ್ಮಿಕೊಂಡಿರುವ ಜಾಗೃತಿ ಅಭಿಯಾನಕ್ಕೆ ಮಾಜಿ ಸಚಿವ ರಾಮಚಂದ್ರಗೌಡ ಅವರು ಶುಕ್ರವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ರಾಮಚಂದ್ರಗೌಡ ಅವರು, ‘ಆನಂದ್ ಅವರು ವಿದ್ಯಾರ್ಥಿ ಜೀವನದ ದಿನಗಳಿಂದಲೂ ಬಿಜೆಪಿಯಲ್ಲಿ ಸಕ್ರಿಯವಾಗಿದ್ದಾರೆ. ಪಕ್ಷದ ಸಂಘಟನೆಗಾಗಿ ದೀರ್ಘ ಕಾಲದಿಂದ ಶ್ರಮಿಸಿದ್ದಾರೆ. ಅವರಿಗೆ ಪಕ್ಷವು ಟಿಕೆಟ್ ನೀಡಿದಲ್ಲಿ ಒಮ್ಮತದಿಂದ ಎಲ್ಲರೂ ಅವರ ಗೆಲುವಿಗಾಗಿ ಕೆಲಸ ಮಾಡಬೇಕು’ ಎಂದು ಸಲಹೆ ಮಾಡಿದರು.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಮಾತನಾಡಿ, ‘ವಿಧಾನ ಪರಿಷತ್ ರಾಜಕೀಯ ನಿರಾಶ್ರಿತರ ತಾಣವಾಗಬಾರದು. ಯುವಕರಿಗೆ ಹೆಚ್ಚಿನ ಅವಕಾಶ ಸಿಗಬೇಕು. ಆನಂದ್ ಅವರಂತಹವರು ಪರಿಷತ್ ಪ್ರವೇಶಿಸಬೇಕು’ ಎಂದು ಹೇಳಿದರು.

ಒಕ್ಕಲಿಗರ ಸಂಘದ ನಿರ್ದೇಶಕ ಡಾ. ಆಂಜನಪ್ಪ, ಲೇಖಕ ತಲಕಾಡು ಚಿಕ್ಕರಂಗೇಗೌಡ, ಬಯಲುಸೀಮೆ ಶಾಶ್ವತ ನೀರಾವರಿ ಹೋರಾಟ ಸಮಿತಿಯ ಅಧ್ಯಕ್ಷ ಆಂಜನೇಯರೆಡ್ಡಿ, ಬಿಜೆಪಿ ಮುಖಂಡರಾದ ಎಸ್. ಪ್ರಕಾಶ್, ಸಚ್ಚಿದಾನಂದಮೂರ್ತಿ, ಎಸ್. ಹರೀಶ್ ಅವರು ಈ ಸಂದರ್ಭದಲ್ಲಿ ಇದ್ದರು.

ಮಾರತ್ ಹಳ್ಳಿ ಜಂಕ್ಷನ್ ಬಳಿಯ ಚಿನ್ನಪ್ಪನಹಳ್ಳಿ ಕ್ರಾಸಿಂಗ್ ಸಮಸ್ಯೆ • ಸುಗಮ ಸಂಚಾರಕ್ಕೆ ಅಡ್ಡಿ

ಲೆವೆಲ್ ಕ್ರಾಸಿಂಗ್: ವಾಹನಗಳ 'ವಾಕಿಂಗ್'

• ಬಾಲಕೃಷ್ಣ ಪಿ.ಎಚ್.

ಚಿನ್ನಪ್ಪನಹಳ್ಳಿ ರೈಲ್ವೆ ಕ್ರಾಸಿಂಗ್ ಬಳಿ ವಾಹನಗಳ ದಟ್ಟಣೆ ಉಂಟಾಗಿರುವುದು (ಎಡಚಿತ್ರ) ಪಣತ್ತೂರಿನ ರೈಲ್ವೆ ಕೆಳಸೇತುವೆ ಮತ್ತು ಕಿರಿದಾದ ರಸ್ತೆಯಿಂದ ಉಂಟಾಗಿರುವ ಸಂಚಾರ ದಟ್ಟಣೆ –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ

ಬೆಂಗಳೂರು: ಹೊರವರ್ತುಲ ರಸ್ತೆಯಲ್ಲಿನ ವಾಹನ ದಟ್ಟಣೆಗೆ ಸುತ್ತಮುತ್ತಲಿರುವ ರೈಲ್ವೆ ಲೆವೆಲ್ ಕ್ರಾಸಿಂಗ್‌ಗಳ ಪಾಲೂ ಇದೆ. ರೈಲು ಸಂಚರಿಸುವ ಸಮಯದಲ್ಲಿ ಗೇಟ್ ಹಾಕುವುದರಿಂದ ಒಳರಸ್ತೆಯಿಂದ ಹೆದ್ದಾರಿವರೆಗೂ ವಾಹನಗಳು ಸಾಲುಗಟ್ಟಿ ನಿಲ್ಲಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಮಾರತ್ ಹಳ್ಳಿ ಜಂಕ್ಷನ್‌ನಿಂದ 150 ಮೀಟರ್ ದೂರದಲ್ಲಿ ಚಿನ್ನಪ್ಪನಹಳ್ಳಿ ಲೆವಲ್ ಕ್ರಾಸಿಂಗ್ ಇದೆ. ಮಾರತ್ ಹಳ್ಳಿಯಿಂದ ವೈಟ್‌ಫೀಲ್ಡ್ ಕಡೆಗೆ ಇದು ಹತ್ತಿರದ ಮಾರ್ಗವಾಗಿರುವುದರಿಂದ ಬಹುತೇಕ ವಾಹನಗಳು ಇಲ್ಲೇ ಸಂಚರಿಸುತ್ತವೆ. ಬೆಳಿಗ್ಗೆ 20 ನಿಮಿಷಕ್ಕೊಂದು ರೈಲು ಸಂಚರಿಸುವುದರಿಂದ ಪ್ರತಿ 20 ನಿಮಿಷಕ್ಕೊಮ್ಮೆ 5–6 ನಿಮಿಷ ರಸ್ತೆ ಸಂಚಾರ ಈ ಭಾಗದಲ್ಲಿ ಬಂದ್ ಆಗುತ್ತದೆ.

ಲೆವೆಲ್ ಕ್ರಾಸಿಂಗ್ ಗೇಟ್‌ನಿಂದ ಮಾರತ್ ಹಳ್ಳಿ– ಬೆಳ್ಳಂದೂರು ಮುಖ್ಯರಸ್ತೆವರೆಗೆ ವಾಹನಗಳ ಸಾಲು ನಿಲ್ಲುತ್ತಿರುವುದರಿಂದ ಮುಖ್ಯರಸ್ತೆಯಲ್ಲಿ ಸಾಗುವ ವಾಹನಗಳ ಸರಾಗ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಲೆವೆಲ್ ಕ್ರಾಸಿಂಗ್‌ನಲ್ಲಿ ಗೇಟ್ ತೆರೆದಾಗ ಸಾಲುಗಟ್ಟಿದ ವಾಹನಗಳು ಮುಂದಕ್ಕೆ ಚಲಿಸುತ್ತವೆಯಾದರೂ ಆ ಕಡೆಯಿಂದ ಮುಖ್ಯರಸ್ತೆಗೆ ಬರುವ ವಾಹನಗಳ ಸಂಖ್ಯೆ ಒಮ್ಮೆಲೇ ಅಧಿಕಗೊಂಡು ಇನ್ನೊಂದು ರೀತಿಯಲ್ಲಿ ಅಡ್ಡಿಯಾಗುತ್ತಿವೆ. ಇಲ್ಲಿ ರೈಲ್ವೆ ಕೆಳಸೇತುವೆ ನಿರ್ಮಿಸಿದರೆ ಸಮಸ್ಯೆ ಪರಿಹಾರವಾಗಲಿದೆ.

ಪಣತ್ತೂರಿನಲ್ಲಿ ವಿಭಿನ್ನ ಸಮಸ್ಯೆ: ಮಾರತ್ ಹಳ್ಳಿ ದಾಟಿ ಕಾಡುಬೀಸನಹಳ್ಳಿ ಸೇತುವೆ ಕಡೆ ಸಾಗಿದರೆ ಅಲ್ಲಿ ರೈಲ್ವೆ ಕೆಳಸೇತುವೆ ಇದೆಯಾದರೂ ಕಿರಿದಾಗಿರುವುದರಿಂದ ವಾಹನದಟ್ಟಣೆ ಉಂಟಾಗುತ್ತಿದೆ.

ಪಣತ್ತೂರು ಕೆಳ ಸೇತುವೆಯಲ್ಲಿ ಒಂದು ವಾಹನ ಮಾತ್ರ ಸಾಗುವಷ್ಟು ಜಾಗ ಇದೆ. ಸೇತುವೆಯ ಎರಡೂ ಕಡೆಗಳಲ್ಲಿ ನಾಲ್ಕು ಭದ್ರತಾ ಸಿಬ್ಬಂದಿ ಮತ್ತು ಪೊಲೀಸರು ನಿಂತುಕೊಂಡು ಸಂಚಾರ ನಿಯಂತ್ರಣ ಮಾಡುತ್ತಾರೆ. ಒಂದು ಕಡೆಯ ವಾಹನಗಳನ್ನು ಒಮ್ಮೆಗೆ ಬಿಡುವ ಹೊತ್ತಿಗೆ ಇನ್ನೊಂದು ಕಡೆ ಸಾಲು ಉಂಟಾಗುತ್ತದೆ. ಇದರಿಂದ ಪಣತ್ತೂರು ಕಡೆಯಿಂದ ಬರುವ ವಾಹನಗಳು ಮುಖ್ಯರಸ್ತೆಗೆ ನುಗ್ಗುವುದರಿಂದ ಸಂಚಾರ ವ್ಯವಸ್ಥೆ ಅಸ್ತವ್ಯಸ್ತವಾಗುತ್ತಿದೆ.

ನಾಲ್ಕು ದಶಕಗಳ ಹಿಂದೆ ಪಣತ್ತೂರು ಎಂಬುದು ಹೊಲಗದ್ದೆಗಳಿದ್ದ ಹಳ್ಳಿಯಾಗಿತ್ತು. ಆಗ ಎತ್ತಿನ ಗಾಡಿಗಳ ಸಂಚಾರಕ್ಕಾಗಿ ರೈಲ್ವೆಯವರು ರೈಲ್ವೆ ಕೆಳಸೇತುವೆ ನಿರ್ಮಿಸಿ ಕೊಟ್ಟಿದ್ದರು. ಬೆಂಗಳೂರು ನಗರ ಒಂದೇ ಸಮನೆ ಬೆಳೆದಿದ್ದರಿಂದ ಪಣತ್ತೂರು ಹಳ್ಳಿ ನೂರಾರು ಬಡಾವಣೆಗಳು, ಸಾವಿರಾರು ಅಪಾರ್ಟ್‌ಮೆಂಟ್‌ಗಳ ನಗರವಾಗಿ ಪರಿವರ್ತನೆಯಾಗಿದೆ. ಅದೇ ವೇಗದಲ್ಲಿ ರಸ್ತೆ ಅಗಲವಾಗದೇ ಇರುವುದು ಮತ್ತು ರೈಲ್ವೆ ಕೆಳಸೇತುವೆ ನಿರ್ಮಾಣಗೊಳ್ಳದಿರುವುದು ಸಮಸ್ಯೆಗೆ ಕಾರಣವಾಗಿದೆ ಎಂದು ಸ್ಥಳೀಯರು ಹೇಳುತ್ತಾರೆ.

ಚಿನ್ನಪ್ಪನಹಳ್ಳಿ, ಪಣತ್ತೂರು ಸಹಿತ ಬೆಂಗಳೂರು ನಗರದಲ್ಲಿರುವ ಎಲ್ಲ ಲೆವಲ್ ಕ್ರಾಸಿಂಗ್ ಸಮಸ್ಯೆಗಳನ್ನು ಸರಿಪಡಿಸಿದರೆ ವಾಹನದಟ್ಟಣೆಯ ಪ್ರಮಾಣ ಕಡಿಮೆಯಾಗಲಿದೆ ಎಂಬ ಅಭಿಪ್ರಾಯವೂ ವ್ಯಕ್ತವಾಯಿತು.

ಸಂಚಾರ ತ್ರಾಸ ಜನರ ಪ್ರಯಾಸ

ಅಂಕಿ-ಅಂಶಗಳು

500ಕ್ಕೂ ಅಧಿಕ
ಹೊರವರ್ತುಲ ರಸ್ತೆಯಲ್ಲಿರುವ (ಒಆರ್‌ಆರ್)ಕಂಪನಿಗಳು

9.50 ಲಕ್ಷ
ಈ ಕಂಪನಿಗಳಲ್ಲಿರುವ ಉದ್ಯೋಗಿಗಳು

4 ಕಿ.ಮೀ
ದಟ್ಟಣೆ ಅವಧಿಯಲ್ಲಿ (ಪೀಕ್ ಅವರ್) ವಾಹನಗಳು ಸಾಲುಗಟ್ಟಿ ನಿಲ್ಲುವ ಸರಾಸರಿ ಉದ್ದ

4.4 ಕಿ.ಮೀ
ದಟ್ಟಣೆ ಸಮಯದಲ್ಲಿ ವಾಹನಗಳು ಪ್ರತಿ ಗಂಟೆಗೆ ಸಾಗುವ ವೇಗ

ಹೊರವರ್ತುಲ ರಸ್ತೆಯಲ್ಲಿ ದಟ್ಟಣೆ ಉಂಟಾಗುವ ಸ್ಥಳಗಳು

- ಎಚ್‌ಎಸ್‌ಆರ್ ಬಿಎಂಟಿಸಿ ಡಿಪೊ ಜಂಕ್ಷನ್
- ಅಗರ 27ನೇ ಮುಖ್ಯ ಜಂಕ್ಷನ್
- ಸನ್‌ಸಿಟಿ ಇಬ್ಬಲೂರು ಜಂಕ್ಷನ್
- ಅಕಮ್ಮೆ ಅಪಾರ್ಟ್‌ಮೆಂಟ್ ಜಂಕ್ಷನ್
- ಸ್ಪ್ರಿಂಗ್‌ಫೀಲ್ಡ್ ಬೆಳ್ಳಂದೂರು ಗೇಟ್ ಜಂಕ್ಷನ್
- ದೊಡ್ಡಕನ್ನಲ್ಲಿ ಜಂಕ್ಷನ್
- ಎಇಟಿ ಜಂಕ್ಷನ್
- ದೇವರಬೀಸನಹಳ್ಳಿ ಅಂಬೇಡ್ಕರ್ ಪ್ರತಿಮೆ ಸರ್ಕಲ್
- ಎಂಬೆಸಿ ಹಿಂಬದಿ ಗೇಟ್ ಜಂಕ್ಷನ್
- ಪಣತ್ತೂರು ಜಂಕ್ಷನ್
- ಪಣತ್ತೂರು ಕೆಳಸೇತುವೆ
- ಕರಿಯಮ್ಮನ ಅಗ್ರಹಾರ ಜಂಕ್ಷನ್
- ಸಕ್ರಾ ಆಸ್ಪತ್ರೆ ರಸ್ತೆ
- ಕಲ್ಯಾಣಿ ಟೆಕ್‌ಪಾರ್ಕ್ ಹಿಂಬದಿ ಜಂಕ್ಷನ್
- ಬೆಳ್ಳಂದೂರು ಕೆರೆ ಜಂಕ್ಷನ್
- ಯಮಲೂರು ಜಂಕ್ಷನ್
- ಕಾಳಮಂದಿರ ಜಂಕ್ಷನ್
- ರೈನ್‌ಬೊ ಆಸ್ಪತ್ರೆ ಜಂಕ್ಷನ್
- ದೊಡ್ಡನೆಕ್ಕುಂದಿ ಯೂಟರ್ನ್ ಜಂಕ್ಷನ್
- ಮಹದೇವಪುರ ಬಸ್ ತಂಗುದಾಣ ಜಂಕ್ಷನ್
- ಕೈಕೊಂಡ್ರಹಳ್ಳಿ ಜಂಕ್ಷನ್
- ಭೋಗನಹಳ್ಳಿ ಜಂಕ್ಷನ್
- ಕ್ರೋಮಾ ಕಾಡುಬೀಸನಹಳ್ಳಿ ಜಂಕ್ಷನ್
- ಹರಳೂರು–ಕೂಡ್ಲು ರಸ್ತೆ ಜಂಕ್ಷನ್
- ಕೆಂಪಾಪುರ ಜಂಕ್ಷನ್ (ಇಜಿಎಲ್ ಹಿಂಬದಿ ಗೇಟ್)
- ಮಾರತ್ ಹಳ್ಳಿ ಪೊಲೀಸ್ ಸ್ಟೇಷನ್
- ಮುನೇನಕೊಳಾಲು ಸರ್ಕಲ್
- ಗೋಶಾಲಾ ಜಂಕ್ಷನ್
- ಎಚ್‌ಎಸ್‌ಆರ್ ಬಿಡಿಎ ಕಾಂಪ್ಲೆಕ್ಸ್ ಜಂಕ್ಷನ್
- ಕಾರ್ಮೆಲರಾಂ ಜಂಕ್ಷನ್
- ಕಾರ್ಮೆಲರಾಂ ರೈಲು ನಿಲ್ದಾಣ ಜಂಕ್ಷನ್
- ಜಕ್ಕಸಂದ್ರ ಜಂಕ್ಷನ್
- ವಿಪ್ರೊ ಜಂಕ್ಷನ್ (ಸರ್ಜಾಪುರ ರಸ್ತೆ)
- ಎಸ್‌ಟಿಪಿ ಬಲಗೆರೆ ಜಂಕ್ಷನ್
- ಜೀವಿಕಾ ಆಸ್ಪತ್ರೆ– ರೈಲ್ವೆ ಬ್ರಿಜ್ ಜಂಕ್ಷನ್
- ಲೋರಿ ಜಂಕ್ಷನ್

ಜನ ಏನಂತಾರೆ...?

ಚಿನ್ನಪ್ಪನಹಳ್ಳಿ ಲೆವೆಲ್ ಕ್ರಾಸಿಂಗ್‌ನಲ್ಲಿ ರೈಲ್ವೆ ಮೇಲ್ಸೇತುವೆ ಮಾಡಲು ಅವಕಾಶ ಇದೆ. ಆದರೆ, ಜನನಾಯಕರು, ಅಧಿಕಾರಿಗಳು ಈ ಬಗ್ಗೆ ಸ್ಪಂದಿಸುತ್ತಿಲ್ಲ. ಮೇಲ್ಸೇತುವೆ ನಿರ್ಮಿಸಿದರೆ 20 ನಿಮಿಷ ಇಲ್ಲವೇ ಅರ್ಧಗಂಟೆಗೊಮ್ಮೆ ವಾಹನ ದಟ್ಟಣೆ ಉಂಟಾಗುವುದನ್ನು ತಪ್ಪಿಸಬಹುದು. ಜೊತೆಗೆ ಗೇಟ್ ಹಾಕಲು ಮತ್ತು ತೆರೆಯಲು 8 ಗಂಟೆಗೆ ಒಬ್ಬರಂತೆ ದಿನಕ್ಕೆ ಮೂರು ಮಂದಿ ರೈಲ್ವೆ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದು ಕೂಡ ತಪ್ಪಲಿದೆ.

ಗುರುರಾಜ್, ಚಿನ್ನಪ್ಪನಹಳ್ಳಿ ನಿವಾಸಿ

ಪಣತ್ತೂರಿನಲ್ಲಿ ರೈಲ್ವೆ ಕೆಳಸೇತುವೆ ನಿರ್ಮಾಣ ಮತ್ತು 20 ಅಡಿ ರಸ್ತೆಯನ್ನು 40 ಅಡಿ ರಸ್ತೆ ಮಾಡಲು ಯೋಜನೆ ರೂಪಿಸಲಾಗಿದೆ. ಒಂದು ಕೆಳಸೇತುವೆ ನಿರ್ಮಾಣಗೊಂಡಿದ್ದು, ಅದಕ್ಕೆ ಸಂಪರ್ಕ ಕಲ್ಪಿಸಲು ನೇರ ರಸ್ತೆ ನಿರ್ಮಿಸಬೇಕಿದೆ. ಇದಕ್ಕಾಗಿ ಕೆಲವು ಮನೆಗಳು ಮತ್ತು ಅಂಗಡಿಗಳನ್ನು ತೆರವುಗೊಳಿಸಬೇಕು. ಅದಕ್ಕೆ ಪರಿಹಾರವೂ ಸಿಗುತ್ತದೆ. ಆದರೆ, ಬಿಜೆಪಿ ಆಡಳಿತ ಇರುವಾಗ ಕಾಂಗ್ರೆಸ್‌ನವರು, ಕಾಂಗ್ರೆಸ್ ಆಡಳಿತಕ್ಕೆ ಬಂದಾಗ ಬಿಜೆಪಿಯವರು ಅಡ್ಡಿಪಡಿಸುತ್ತಿರುವುದರಿಂದ ರಸ್ತೆ ನಿರ್ಮಾಣ ನನೆಗುದಿಗೆ ಬಿದ್ದಿದೆ.

ಗುಣಪತಿ, ಪಣತ್ತೂರು ನಿವಾಸಿ

ಎತ್ತಿನಗಾಡಿಗಾಗಿ ಹಿಂದೆ ಮಾಡಿದ್ದ ಕೆಳಸೇತುವೆಯಲ್ಲಿ ಲಾರಿಗಳು ಹೋಗುವುದಿಲ್ಲ. ಸಣ್ಣ ವಾಹನಗಳಷ್ಟೇ ಸಂಚರಿಸುವಷ್ಟು ಜಾಗ ಇದೆ. ಅದಕ್ಕಾಗಿ ಅಗಲವಾದ ಕೆಳಸೇತುವೆ ಮತ್ತು ರಸ್ತೆ ನಿರ್ಮಿಸಬೇಕು ಎಂದು 20 ವರ್ಷಗಳಿಂದ ಬೇಡಿಕೆ ಇದೆ. ಯೋಜನೆ ಮಂಜೂರಾದರೂ ರಾಜಕೀಯದಿಂದಾಗಿ ಕೆಲಸಗಳು ವೇಗವಾಗಿ ನಡೆಯುತ್ತಿಲ್ಲ.

ಪಿ. ಚಿನ್ನಪ್ಪ, ನಿವೃತ್ತ ಪೊಲೀಸ್, ಪಣತ್ತೂರು

ದಟ್ಟಣೆ: ನಿಮ್ಮ ಸಂಕಷ್ಟ ಹೇಳಿ

ನಗರದ ರಸ್ತೆಗಳಲ್ಲಿನ ಸಂಚಾರ ದಟ್ಟಣೆಗೆ ಸಂಬಂಧಿಸಿದಂತೆ 'ಸಂಚಾರ ತ್ರಾಸ, ಜನರ ಪ್ರಯಾಸ' ಸರಣಿ ವರದಿಯನ್ನು 'ಪ್ರಜಾವಾಣಿ' ಪ್ರಕಟಿಸುತ್ತಿದೆ. ದಟ್ಟಣೆಯಿಂದಾಗಿರುವ ಸಮಸ್ಯೆ, ಪ್ರಯಾಸವನ್ನು 50 ಪದಗಳಲ್ಲಿ ಬರೆದು ಕಳುಹಿಸಿ. ಜೊತೆಗೆ ನಿಮ್ಮ ಭಾವಚಿತ್ರ, ವಿಳಾಸ ಇರಲಿ.

ವಾಟ್ಸ್ಆ್ಯಪ್: **96060 38256**

ಸುದ್ದಿ 2 ನಿಮಿಷ

ಕಾಂಗ್ರೆಸ್‌ಗೆ ಸಿ.ಪಿ. ಯೋಗೇಶ್ವರ್ ಕರೆತರಲು ಯತ್ನ: ಶಾಸಕ ಇಕ್ಬಾಲ್

ರಾಮನಗರ: 'ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಅವರನ್ನು ಸಂಪರ್ಕಿಸಿ ಕಾಂಗ್ರೆಸ್ ಸೇರುವಂತೆ ಆಹ್ವಾನ ನೀಡಲಾಗಿದ್ದು, ಅವರನ್ನು ಕರೆತರುವ ಪ್ರಯತ್ನ ಮಾಡುತ್ತಿದ್ದೇನೆ' ಎಂದು ಶಾಸಕ ಇಕ್ಬಾಲ್ ಹುಸೇನ್ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಿಜೆಪಿಯಲ್ಲಿದ್ದರೆ ಯಾವುದೇ ಪ್ರಯೋಜವಿಲ್ಲ. ಹಾಗಾಗಿ, ಪಕ್ಷಕ್ಕೆ ಮರಳುವಂತೆ ಅವರೊಂದಿಗೆ ಮಾತುಕತೆ ನಡೆಸಿದ್ದೇನೆ. ಸದ್ಯದ ರಾಜಕೀಯ ಬೆಳವಣಿಗೆ ನೋಡಿದರೆ ಯೋಗೇಶ್ವರ್ ಅವರೇ ಕಾಂಗ್ರೆಸ್‌ಗೆ ಬರಬಹುದು' ಎಂದರು.

'136 ಶಾಸಕರ ಬಲದೊಂದಿಗೆ ಅಸ್ತಿತ್ವಕ್ಕೆ ಬಂದಿರುವ ರಾಜ್ಯ ಸರ್ಕಾರವನ್ನು ಯಾರಿಗಾದರೂ ಬೀಳಿಸಲು ಸಾಧ್ಯವೇ? ನಮ್ಮ ಪಕ್ಷದಿಂದ ಯಾರೂ ಬೇರೆ ಕಡೆಗೆ ಹೋಗುವುದಿಲ್ಲ. ಬದಲಿಗೆ ಬಿಜೆಪಿ–ಜೆಡಿಎಸ್‌ನಿಂದಲೇ ನಮ್ಮ ಕಡೆಗೆ ಬರುತ್ತಿದ್ದಾರೆ. ಜಿಲ್ಲೆಯಲ್ಲಿ ಇನ್ನೂ 25 ಮಂದಿ ಬರಲು ಸಿದ್ಧರಾಗಿದ್ದು, ಅದರಲ್ಲಿ 12 ಮಂದಿ ಜೆಡಿಎಸ್‌ನವರಿದ್ದಾರೆ' ಎಂದು ತಿಳಿಸಿದರು.

ಕರ್ನಾಟಕದಲ್ಲಿ ಎಎಂಡಿ ಹೂಡಿಕೆ: ಸಚಿವರ ಮಾತುಕತೆ

ಬೆಂಗಳೂರು: ಅಮೆರಿಕ ಪ್ರವಾಸದಲ್ಲಿರುವ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅಲ್ಲಿನ ಎಎಂಡಿ ನೆಟ್‌ವರ್ಕಿಂಗ್ ಟೆಕ್ನಾಲಜಿ ಅಂಡ್ ಸೊಲ್ಯೂಷನ್ ಗ್ರೂಪ್ ಜತೆ ಶನಿವಾರ ಚರ್ಚೆ ನಡೆಸಿದ್ದಾರೆ.

2001ರಿಂದಲೂ ಭಾರತದ ಸೆಮಿ ಕಂಡಕ್ಟರ್ ವಲಯದಲ್ಲಿ ಕಂಪನಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು, ದೆಹಲಿಯಲ್ಲಿ ಕಚೇರಿ ಹೊಂದಿದೆ. ಕರ್ನಾಟಕದಲ್ಲಿ ಹೂಡಿಕೆ ಮಾಡಿದರೆ ರಾಜ್ಯದಲ್ಲೂ ಸೆಮಿ ಕಂಡಕ್ಟರ್ ವಲಯದ ಬೆಳವಣಿಗೆ ಸಹಕಾರಿಯಾಗಲಿದೆ. ಸಾಕಷ್ಟು ಉದ್ಯೋಗವೂ ಸೃಷ್ಟಿಯಾಗಲಿದೆ ಎಂದು ಸಚಿವ ಪಾಟೀಲ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೌಶಲಾಭಿವೃದ್ಧಿ, ಉತ್ಕೃಷ್ಟತಾ ಕೇಂದ್ರ ಮತ್ತು ನವೋದ್ಯಮ ಕಾರ್ಯ, ಪರಿಸರ ಸುಧಾರಣೆ ಕುರಿತು ಜಾಗತಿಕ ಮಟ್ಟದಲ್ಲಿ ಕಂಪನಿ ಕೆಲಸ ಮಾಡುತ್ತಿದೆ. ಕಂಪ್ಯೂಟರ್ ಪ್ರೊಸೆಸರ್ಸ್ ಮತ್ತು ಗ್ರಾಫಿಕ್ ತಂತ್ರಜ್ಞಾನ, ಫ್ಲ್ಯಾಶ್ ಮೆಮೊರೀಸ್, ಗ್ರಾಫಿಕ್ಸ್ ಪ್ರೊಸೆಸರ್, ಮದರ್‌ಬೋರ್ಡ್ ಚಿಪ್‌ಸೆಟ್ ತಯಾರಿಕೆಯಲ್ಲೂ ಹೆಸರಾಗಿದೆ. ಅಂತಹ ಕಂಪನಿ ಜತೆ ಸಹಭಾಗಿತ್ವ ಹೊಂದುವುದು ರಾಜ್ಯದ ಕನಸು ಎಂದಿದ್ದಾರೆ.

ಮುಂಬರುವ ದಿನಗಳಲ್ಲಿ ಕಂಪನಿ ಡೇಟಾ ಸೆಂಟರ್, ಕಂಪ್ಯೂಟಿಂಗ್ ಮತ್ತು ಗೇಮಿಂಗ್ ಮಾರುಕಟ್ಟೆಗಳಲ್ಲಿ ತನ್ನ ಛಾಪು ಮೂಡಿಸಲು ತೀರ್ಮಾನಿಸಿದೆ. ಸದ್ಯಕ್ಕೆ ಅದು ಕೃತಕ ಬುದ್ಧಿಮತ್ತೆ ಆಧಾರಿತ ಚಿಪ್ ತಯಾರಿಸುವ ಯೋಜನೆಯಲ್ಲಿ ತೊಡಗಿಸಿಕೊಂಡಿದೆ ಎಂದು ಮಾಹಿತಿ ನೀಡಿದ್ದಾರೆ.

ಕಂಪನಿಯ ಹಿರಿಯ ಉಪಾಧ್ಯಕ್ಷ ಜಯ್ ಹಿರೇಮಠ, ಸಹ ಸಂಸ್ಥಾಪಕ ಸೋನಿ ಜಿಯಾಂದಾನಿ, ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಐಟಿ-ಬಿಟಿ ಇಲಾಖೆ ಕಾರ್ಯದರ್ಶಿ ಏಕ್‌ರೂಪ್ ಕೌರ್, ಆಯುಕ್ತೆ ಗುಂಜನ್ ಕೃಷ್ಣ ಇದ್ದರು.

ಕೀಟನಾಶಕ ತಗುಲಿ 4 ರೈತರು ಅಸ್ವಸ್ಥ

ಪ್ರಜಾವಾಣಿ ವಾರ್ತೆ

ವಾಡಿ (ಕಲಬುರಗಿ ಜಿಲ್ಲೆ): ತರಕಸ್ಪೇಟ್ ಗ್ರಾಮದಲ್ಲಿ ಹತ್ತಿ ಬೆಳೆಗೆ ಕೀಟನಾಶಕ ಸಿಂಪಡಿಸುವ ವೇಳೆ ಅಸ್ವಸ್ಥಗೊಂಡು 5 ದಿನದ ನಂತರ ಪ್ರಾಣ ತೆತ್ತ ಘಟನೆ ಮಾಸುವ ಮುನ್ನವೇ ಹಲಕರ್ಟಿ ಗ್ರಾಮದಲ್ಲಿ ಒಂದೇ ಕುಟುಂಬದ ನಾಲ್ವರ ಮೈಗೆ ಕೀಟನಾಶಕ ತಗುಲಿದ ಕಾರಣ ತೀವ್ರ ಅಸ್ವಸ್ಥರಾಗಿದ್ದು, ಅವರನ್ನು ಶನಿವಾರ ಕಲಬುರಗಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಹಲಕರ್ಟಿ ಗ್ರಾ.ಪಂ. ವ್ಯಾಪ್ತಿಯ ಆರ್.ಬಿ. ನಗರ ತಾಂಡಾದ ಸುನೀಲ ಜಾಧವ (34), ಅನಿಲ ಜಾಧವ (22), ಕುಮಾರ ಪಾಪಣ್ಣ (30) ಹಾಗೂ ಖೇಮು ರಾಠೋಡ (32) ಎಂಬ ರೈತರು ತೀವ್ರ ಅಸ್ವಸ್ಥಗೊಂಡಿದ್ದಾರೆ.

ನಾಲ್ಕು ಜನ ರೈತರು ಒಟ್ಟಾಗಿ ಹತ್ತಿ ಬೆಳೆಗೆ ತಗುಲಿದ ರೋಗ ನಿಯಂತ್ರಣಕ್ಕೆ ಗುರುವಾರ ಬೆಳಿಗ್ಗೆ ಮೋನೋಕ್ರೋಟ್ ಪಾಸ್ ಹಾಗೂ ಲಾನ್ಸರ್ ಗೋಲ್ಡ್ ಎಂಬ ಹೆಸರಿನ ಕೀಟನಾಶಕ ತೆಗೆದುಕೊಂಡು ಬೆಳೆಗೆ ಸಿಂಪಡಿಸಿ ನಂತರ ಮನೆಗೆ ಮರಳಿದ್ದಾರೆ. ಸಂಜೆ ಸಣ್ಣದಾಗಿ ಅಡ್ಡಪರಿಣಾಮಗಳು ಕಾಣಿಸಿಕೊಂಡಿವೆ. ತಲೆಸುತ್ತು, ವಾಂತಿಭೇದಿ ಕಾಣಿಸಿಕೊಂಡಿದೆ. ಸ್ಥಳೀಯ ಆಸ್ಪತ್ರೆಗೆ ತೋರಿಸಿ ಮರುದಿನ ಕಲಬುರಗಿಗೆ ಹೋಗುವ ಯೋಚನೆ ಮಾಡಿದ್ದರು. ಶುಕ್ರವಾರ ಬೆಳಿಗ್ಗೆ ಆರೋಗ್ಯದಲ್ಲಿ ವ್ಯತ್ಯಯ ಕಂಡು ಬಂದು ರೋಗಗಳು ಉಲ್ಬಣಗೊಂಡಾಗ ಕಲಬುರಗಿ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಆದರೆ, ಆರೋಗ್ಯದಲ್ಲಿ ತೀವ್ರ ಏರುಪೇರು ಉಂಟಾಗುತ್ತಿದ್ದು ಕುಟುಂಬಸ್ಥರ ಆತಂಕಕ್ಕೆ ಕಾರಣವಾಗಿದೆ.

ಅತ್ತಿಬೆಲೆ ಪುರಸಭಾ ಕಾರ್ಯಾಲಯ

ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562107

ದೂ.ಸಂ: 080–27821501 Email: itstaff_ulb_attibele@yahoo.com Website: www.attibeletown.mrc.gov.in

ಸಂಖ್ಯೆ: ಅಪುಸ/ಅಶ/ಪ.ಅ/ಟೆಂಡರ್/ಸಿಆರ್/22/2023–24 ದಿನಾಂಕ: 07.10.2023

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ)

ಅತ್ತಿಬೆಲೆ ಪುರಸಭೆಗೆ 2021–22 ಮತ್ತು 2022–23 ನೇ ಸಾಲಿನ 15 ನೇ ಹಣಕಾಸು, 2021–22 ನೇ ಸಾಲಿನ ಸ್ವಚ್ಛ ಭಾರತ್ ಮಿಷನ್ ಮತ್ತು ಪುರಸಭಾ ನಿಧಿಯಡಿಯಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ಈ ಕೆಳಕಂಡಂತೆ ವಾಹನಗಳು/ಯಂತ್ರೋಪಕರಣಗಳ ಮತ್ತು ಮಾನವ ಸಂಪನ್ಮೂಲ ಸರಬರಾಜು ಮಾಡಲು ಅರ್ಹ ಏಜೆನ್ಸಿದಾರರು/ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದ್ದು, ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಕೆ.ಪಿ.ಪಿ.ಪಿ. ಪೋರ್ಟಲ್ http://kppp.karnataka.gov.in ಮುಖಾಂತರ ಈ ಕೆಳಗಡೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಯ ವೆಬ್‌ಸೈಟ್ www.attibeletown.mrc.gov.in ಹಾಗೂ ಕಚೇರಿಯ ಸಮಯದಲ್ಲಿ ಆರೋಗ್ಯ ಶಾಖೆಯ ಪರಿಸರ ಅಭಿಯಂತರರಿಂದ ಪಡೆದುಕೊಳ್ಳಬಹುದು. ಟೆಂಡರ್ ಡಾಕ್ಯೂಮೆಂಟ್ ಮತ್ತು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನಿಗದಿಪಡಿಸಿರುವ ಮಾನದಂಡಗಳ ಆಧಾರದ ಮೇಲೆ ಟೆಂಡರ್‌ಗಳ ಮೌಲ್ಯಮಾಪನ ಮಾಡಲಾಗುವುದು ಮತ್ತು ಯಶಸ್ವಿ ಬಿಡ್ಡುದಾರರನ್ನು ಆಯ್ಕೆ ಮಾಡಲಾಗುವುದು.

ಟೆಂಡರ್ಸ್ ಸಲ್ಲಿಸಲು ಕೊನೆಯ ದಿನಾಂಕ: 18.10.2023 ಅಪರಾಹ್ನ 05:30 ಗಂಟೆಗೆ

ಕ್ರ. ಸಂ.	ವಿವರ	ಟೆಂಡರ್‌ಗಿಟ್ಟ್ ಮೊತ್ತ	ಇಂಡೆಂಟ್ ಸಂಖ್ಯೆ	ಇ.ಎಂ.ಡಿ. ಮೊತ್ತ
1	2021–22 ನೇ ಸಾಲಿನ 15 ನೇ ಹಣಕಾಸು ಯೋಜನೆಯಡಿಯಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ಮನೆ–ಮನೆಗಳಿಗೆ 8487.00 ಸಂಖ್ಯೆಯ ಹಸಿರು ಮತ್ತು 8487.00 ಸಂಖ್ಯೆಯ ನೀಲಿ ಬಣ್ಣದ ಕಸದ ಬುಟ್ಟಿಗಳನ್ನು ಖರೀದಿಸುವ ಬಗ್ಗೆ.	ರೂ. 26,64,918.00	DMA/2023-24/ IND0006/CALL-3	ರೂ. 53,298.00
2	2021–22 ನೇ ಸಾಲಿನ 15 ನೇ ಹಣಕಾಸು ಯೋಜನೆಯಡಿಯಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ 01 ಸಂಖ್ಯೆಯ ಡಿಸಿಲ್ಟಿಂಗ್ ಯಂತ್ರವನ್ನು ಖರೀದಿಸುವ ಬಗ್ಗೆ.	ರೂ. 14,00,000.00	DMA/2023-24/ IND0007/CALL-3	ರೂ. 35,000.00
3	2022–23 ನೇ ಸಾಲಿನ 15 ನೇ ಹಣಕಾಸು ಯೋಜನೆ ಯಡಿಯಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ 01 ಸಂಖ್ಯೆ ಟ್ರಾಕ್ಟರ್‌ನ್ನು ಖರೀದಿಸುವ ಬಗ್ಗೆ	ರೂ. 10,06,000.00	DMA/2023-24/ IND0009/CALL-3	ರೂ. 25,150.00
4	2021–22 ನೇ ಸಾಲಿನ ಸ್ವಚ್ಛ ಭಾರತ್ ಮಿಷನ್ ಅನುದಾನದಡಿ ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ Front and back hoe loader ಖರೀದಿಸುವ ಬಗ್ಗೆ	ರೂ. 35,10,000.00	DMA/2023-24/ IND0011/CALL-3	ರೂ. 70,200.00
5	ಅತ್ತಿಬೆಲೆ ಪುರಸಭೆ ವ್ಯಾಪ್ತಿಯ ಸ್ವಚ್ಛತೆ ಹಾಗೂ ಘನತ್ಯಾಜ್ಯ ವಿಲೇವಾರಿಗಾಗಿ ಅವಶ್ಯಕತೆ ಇರುವ ವಾಹನ ಚಾಲಕರು, ಚಾಲಕರು ಕಂ ಆಪರೇಟರ್ಸ್, ಹೆಲ್ಪರ್ಸ್, ಲೋಡರ್ಸ್ ಮತ್ತು ಮೇಲ್ವಿಚಾರಕರನ್ನು ಒದಗಿಸುವ ಬಗ್ಗೆ	ರೂ. 69,07,020.48	DMA/2023-24/ SE0032	ರೂ. 1,38,140.00

ಸಹಿ/–
ಮುಖ್ಯಾಧಿಕಾರಿ, ಪುರಸಭೆ, ಅತ್ತಿಬೆಲೆ

DIPR/CP/1611/GREENFMC/2023-24

ದಟ್ಟಣೆ: 100 ದಿನದಲ್ಲಿ ಪರಿಹಾರ ಮಾರ್ಗಸೂಚಿ

ಹೊರವರ್ತುಲ ರಸ್ತೆ ಕಂಪನಿಗಳ ಸಂಘದ ಸದಸ್ಯರ ಸಭೆಯಲ್ಲಿ ಡಿ.ಕೆ. ಶಿವಕುಮಾರ್ ಭರವಸೆ

ಪ್ರಜಾವಾಣಿ ವಾರ್ತೆ

ವಾರದಲ್ಲಿ ಮೂರು ದಿನ ಹೆಚ್ಚು ಸಂಚಾರ ದಟ್ಟಣೆಯಾಗುತ್ತಿದೆ, ಸುಧಾರಿಸಲು ಮೆಟ್ರೊ ಇನ್ನಿತರ ಸಾರಿಗೆ ವ್ಯವಸ್ಥೆಗಳ ಸಂಪರ್ಕಕೊಂಡಿ ಯೋಜನೆ ಅಗತ್ಯವಿದೆ

ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ಬೆಂಗಳೂರು: ಹೊರವರ್ತುಲ ರಸ್ತೆಗಳಲ್ಲಿ ವಾಹನ ದಟ್ಟಣೆಯನ್ನು ಕಡಿಮೆ ಮಾಡಲು 100 ದಿನಗಳಲ್ಲಿ ಪರಿಹಾರ ಮಾರ್ಗಸೂಚಿ ರಚಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಹೊರ ವರ್ತುಲ ರಸ್ತೆಯ ಸಂಚಾರ ದಟ್ಟಣೆ ನಿವಾರಣೆಗೆ ಹೊರವರ್ತುಲ ರಸ್ತೆ ಕಂಪನಿಗಳ ಸಂಘದ (ಒಆರ್‌ಆರ್‌ಸಿಎ) ಸದಸ್ಯರೊಂದಿಗೆ ಕಾಡುಬೀಸನಹಳ್ಳಿಯಲ್ಲಿ ಶನಿವಾರ ನಡೆದ ಸಂವಾದ ಸಭೆಯಲ್ಲಿ ಅವರು ಮಾತನಾಡಿದರು.

ಹೆಚ್ಚು ಸಂಚಾರ ದಟ್ಟಣೆ ಉಂಟಾಗುವ ಸ್ಥಳಗಳನ್ನು ಈಗಾಗಲೇ ಗುರುತಿಸಲಾಗಿದೆ. ಸಂಚಾರಕ್ಕೆ ಇರುವ ಸಮಸ್ಯೆಗಳನ್ನು ಮೊದಲು ನಿವಾರಿಸಲಾಗುವುದು. ರಸ್ತೆ ಗುಂಡಿ ಸಮಸ್ಯೆ ಸರಿಪಡಿಸಲಾಗುವುದು. ಸಂಚಾರ ದಟ್ಟಣೆಗೆ ಕಾರಣವಾಗಿರುವ ಅನಧಿಕೃತ ಅಂಗಡಿಗಳನ್ನು ಗುರುತಿಸಿ ಮೂರು ತಿಂಗಳಲ್ಲಿ ತೆರವುಗೊಳಿಸಲಾಗುವುದು ಎಂದು ತಿಳಿಸಿದರು.

ಬೆಂಗಳೂರಿನ ಐದನೇ ಒಂದು ಭಾಗದಷ್ಟು ಆದಾಯ ಹೊರ ವರ್ತುಲ ರಸ್ತೆಯ ಉದ್ದಿಮೆಗಳಿಂದಲೇ ಬರುತ್ತಿದೆ. ಈ ಕಂಪನಿಗಳ ನೌಕರರರಿಗೆ, ಆ ಭಾಗದ ನಿವಾಸಿಗಳಿಗೆ ತೊಂದರೆ ಉಂಟಾಗದಂತೆ ಸಮಸ್ಯೆ ನಿವಾರಿಸಲಾಗುವುದು. ಜನರ ಸಮಯವನ್ನು ರಸ್ತೆಗಳಲ್ಲಿ ವ್ಯರ್ಥವಾಗಲು ಬಿಡುವುದಿಲ್ಲ ಎಂದು ಹೇಳಿದರು.

ಫ್ಲೈಓವರ್ ಪರಿಹಾರವಲ್ಲ: ವಾಹನ ದಟ್ಟಣೆ ಪರಿಹರಿಸಲು ಫ್ಲೈಓವರ್‌ಗಳನ್ನು ನಿರ್ಮಿಸಬೇಕು ಎಂದು ನಗರ ಪೊಲೀಸ್ ಆಯುಕ್ತ ಬಿ. ದಯಾನಂದ ನೀಡಿದ ಸಲಹೆಗೆ ಪ್ರತಿಕ್ರಿಯಿಸಿದ ಉಪಮುಖ್ಯಮಂತ್ರಿ, 'ಫ್ಲೈಓವರ್‌ಗಳನ್ನು ನಿರ್ಮಿಸುವುದು ಪರಿಹಾರವಲ್ಲ. ಉತ್ತಮ ನಿರ್ವಹಣೆ ಅಗತ್ಯ. ಭಾರಿ ವಾಹನಗಳು ಹಗಲಿನಲ್ಲಿ ಹೊರವರ್ತುಲ ರಸ್ತೆಗಳಿಗೆ ಬಾರದಂತೆ ನೋಡಿಕೊಳ್ಳಬೇಕು. ರಸ್ತೆಯಲ್ಲಿ ಪಾರ್ಕಿಂಗ್ ಮಾಡಲು ಬಿಡಬಾರದು. ದಟ್ಟಣೆಯನ್ನು ಅಧ್ಯಯನ ಮಾಡಬೇಕು' ಎಂದು ಸಲಹೆ ನೀಡಿದರು.

45 ಮೀಟರ್ ರಸ್ತೆ: ಮಹದೇವಪುರ ವಲಯ ಹೊರ ವರ್ತುಲ ರಸ್ತೆಯಿಂದ ಹೊಸ ಪಿ.ಆರ್.ಆರ್ ರಸ್ತೆಗೆ ಸಂಪರ್ಕ ಕಲ್ಪಿಸಲು 5.6 ಕಿ.ಮೀ ಉದ್ದದ 45 ಮೀಟರ್ ಅಗಲದ ರಸ್ತೆಯನ್ನು ನಿರ್ಮಾಣ ಮಾಡಲಾಗುತ್ತಿದೆ. ಅದರಲ್ಲಿ 4 ಕಿ.ಮೀ ರಸ್ತೆ ಕಾಮಗಾರಿ ಪೂರ್ಣಗೊಂಡಿದೆ. ಉಳಿದಿರುವ 1.6 ಕಿ.ಮೀ.ಯಲ್ಲಿ ರೈಲ್ವೆ ಮೇಲ್ಸೇತುವೆ ಕಾಮಗಾರಿ ನಡೆಯಬೇಕು. ಅರಣ್ಯ ಇಲಾಖೆಯಿಂದ ಜಾಗ ಪಡೆಯಬೇಕು. ಎಲ್ಲ ಪ್ರಕ್ರಿಯೆ ಶೀಘ್ರ ಮುಗಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಡಿ.ಕೆ. ಶಿವಕುಮಾರ್ ಮಾಹಿತಿ ನೀಡಿದರು.

ಬೆಂಗಳೂರಿನ ಸಾಮರ್ಥ್ಯಕ್ಕೆ ಅನುಗುಣವಾಗಿ ತೆರಿಗೆ ಹಣ ಸಂಗ್ರಹವಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜನರು ಹಾಗೂ ಉದ್ದಿಮೆಗಳು ಆಸ್ತಿಗೆ ಅನುಗುಣವಾಗಿ ತೆರಿಗೆ ಪಾವತಿಸಬೇಕು. ಬೆಂಗಳೂರಿನ ಐಟಿ ಕಂಪನಿಗಳು, ಇತರೇ ಉದ್ದಿಮೆಗಳ ಮಾಲೀಕರು ಸಿಎಸ್‌ಆರ್ ಹಣವನ್ನು ಗ್ರಾಮೀಣ ಭಾಗದ ಶಿಕ್ಷಣಕ್ಕೆ ಖರ್ಚು ಮಾಡಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ಬಂದ ಒತ್ತಾಯಗಳು

- ಹೊರವರ್ತುಲ ರಸ್ತೆಯಲ್ಲಿ ಭಾರಿ ವಾಹನಗಳನ್ನು ಬೆಳಿಗ್ಗೆ 7ರಿಂದ ರಾತ್ರಿ 10ವರೆಗೆ ನಿರ್ಬಂಧಿಸಬೇಕು.
- ವರ್ತೂರು, ಪಣತ್ತೂರು ಸುತ್ತಮುತ್ತಲ ಪ್ರದೇಶಗಳ ನಿವಾಸಿಗಳಿಗೆ ಮೂಲಸೌಕರ್ಯ ಒದಗಿಸಲು ಕಾರ್ಯಪಡೆ ರಚಿಸಬೇಕು.
- ಮೆಟ್ರೊ ಜಾಲವನ್ನು ಶೀಘ್ರ ಕಲ್ಪಿಸಬೇಕು. ಮೆಟ್ರೊ ಫೀಡರ್ ಸೇವೆ ಒದಗಿಸಬೇಕು.
- ರಸ್ತೆಗಳಲ್ಲಿ ಅಕ್ರಮ ಪಾರ್ಕಿಂಗ್ ನಿಷೇಧಿಸಬೇಕು. ಸೇವಾ ರಸ್ತೆಗಳ ಒತ್ತುವರಿ ತೆರವು ಮಾಡಬೇಕು.
- ನವೆಂಬರ್ ಒಳಗೆ ರಸ್ತೆ ಗುಂಡಿಗಳನ್ನು ಮುಚ್ಚಬೇಕು.

ಟಿಪಿಎಂಎಲ್‌ಗೆ 'ಚಿನ್ನ'ದ ಗರಿ

ಕ್ವಾಲಿಟಿ ಸರ್ಕಲ್ ಫೋರಂ ಆಫ್ ಇಂಡಿಯಾ ಇಲ್ಲಿನ ದಯಾನಂದ್ ಸಾಗರ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ 'ಟಿಕ್ಯೂಎಂ–ಇಂಡಿಯಾ' ಶೃಂಗಸಭೆಯಲ್ಲಿ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ತಂಡ ಚಿನ್ನ ಗೆದ್ದಿದೆ. (ಎಡದಿಂದ) ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಪ್ರೊಡಕ್ಷನ್ ವಿಭಾಗದ ಹಿರಿಯ ವ್ಯವಸ್ಥಾಪಕ ಕೆ.ಸುರೇಶಕುಮಾರ್, ಸಹಾಯಕ ಪ್ರಧಾನ ವ್ಯವಸ್ಥಾಪಕ ಲೋಕನಾಥ್, ದಯಾನಂದ್ ಸಾಗರ್ ಕಾಲೇಜಿನ ಪ್ರಾಂಶುಪಾಲ ಪ್ರಕಾಶ್ ಹಾಗೂ ನಿರ್ವಹಣಾ ವ್ಯವಸ್ಥಾಪಕ ಲೋಹಿತ್ ಕೊರವಾರ್ ಇದ್ದಾರೆ.

3,259 ಜನರು ಮುಂದಿನ ಹಂತಕ್ಕೆ ಆಯ್ಕೆ

ಆಳ್ವಾಸ್: 1,871 ಮಂದಿಗೆ ಉದ್ಯೋಗ

ಪ್ರಜಾವಾಣಿ ವಾರ್ತೆ

ದಕ್ಷಿಣ ಕನ್ನಡ ಜಿಲ್ಲೆ ಮೂಡುಬಿದಿರೆಯ ಆಳ್ವಾಸ್ ಕಾಲೇಜಿನಲ್ಲಿ ನಡೆದ ಎರಡನೇ ದಿನದ ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದ ಉದ್ಯೋಗಾಕಾಂಕ್ಷಿಗಳು

ಮಂಗಳೂರು: 'ಆಳ್ವಾಸ್ ಪ್ರಗತಿ' ಎರಡು ದಿನಗಳ ಉದ್ಯೋಗ ಮೇಳವು ಶನಿವಾರ ಮುಕ್ತಾಯಗೊಂಡಿದ್ದು, 1,871 ಉದ್ಯೋಗಾಕಾಂಕ್ಷಿಗಳು ತಕ್ಷಣವೇ ನೇಮಕಗೊಂಡರೆ, 3,259 ಅಭ್ಯರ್ಥಿಗಳು ಮುಂದಿನ ಹಂತಕ್ಕೆ ಆಯ್ಕೆಯಾದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು ಮೂಡುಬಿದಿರೆಯ 'ವಿದ್ಯಾಗಿರಿ'ಯಲ್ಲಿ ಆಯೋಜಿಸಿದ್ದ 13ನೇ ವರ್ಷದ ಉದ್ಯೋಗ ಮೇಳದ ಎರಡನೇ ದಿನ 2,284 ಉದ್ಯೋಗಾಕಾಂಕ್ಷಿಗಳು ಭಾಗವಹಿಸಿದ್ದರು. ಎರಡು ದಿನಗಳಲ್ಲಿ ಒಟ್ಟು 10,252 ಅಭ್ಯರ್ಥಿಗಳು ಪಾಲ್ಗೊಂಡಿದ್ದರು. 198 ಕಂಪನಿಗಳು ಭಾಗವಹಿಸಿದ್ದವು.

ಅಮೆರಿಕ ಮೂಲದ ಫ್ಯಾಕ್ಟ್‌ಸೆಟ್ ಸಿಸ್ಟಮ್ಸ್ ಇಂಡಿಯಾ ಕಂಪನಿಯು ವಾರ್ಷಿಕ ವೇತನ ₹7.1 ಲಕ್ಷಕ್ಕೆ ಒಬ್ಬರನ್ನು ಹಾಗೂ ವಾರ್ಷಿಕ ₹3.4 ಲಕ್ಷ ವೇತನಕ್ಕೆ 20 ಅಭ್ಯರ್ಥಿಗಳನ್ನು ಸಂಶೋಧನಾ ವಿಶ್ಲೇಷಕರ ಹುದ್ದೆಗೆ ಆಯ್ಕೆ ಮಾಡಿದೆ.

'ಫ್ಯಾಕ್ಟ್‌ಸೆಟ್ ಇಂಡಿಯಾ ಕಂಪನಿಗೆ ಆಯ್ಕೆಯಾಗಿದ್ದು ಬಹಳ ಖುಷಿಯಾಗಿದೆ. 'ಆಳ್ವಾಸ್ ಪ್ರಗತಿ' ಶಿಸ್ತುಬದ್ಧವಾಗಿದ್ದು, ವ್ಯವಸ್ಥಿತವಾಗಿ ಆಯೋಜಿಸಿದ್ದರು. ಕಲರ್ ಕೋಡಿಂಗ್ ವ್ಯವಸ್ಥೆ, ಸ್ವಯಂಸೇವಕರ ಸಹಕಾರ ಖುಷಿ ನೀಡಿದೆ' ಎಂದು ಸಿದ್ಧಕಟ್ಟೆಯ ಗೌರವ್ ಡಿಕೋಸ್ಟಾ ಪ್ರತಿಕ್ರಿಯಿಸಿದರು.

'ಆಳ್ವಾಸ್ ಕಾಲೇಜಿನಲ್ಲಿ ಗುಣಮಟ್ಟದ ಶಿಕ್ಷಣ ನೀಡಿ, ಕಾರ್ಪೊರೇಟ್ ವ್ಯವಸ್ಥೆಗೆ ಸಿದ್ಧಗೊಳಿಸುತ್ತಾರೆ. ಕಾಲೇಜಿನಲ್ಲಿ ನೀಡಿದ ತರಬೇತಿಯು ನನಗೆ ಕಂಪನಿಯ ಸಂದರ್ಶನ ಎದುರಿಸಲು ಸಹಕಾರಿಯಾಯಿತು. ಉದ್ಯೋಗ ಮೇಳದಲ್ಲಿ ದೊಡ್ಡ ಕಂಪನಿಗಳು ಬಂದಿದ್ದರಿಂದ ಆಯ್ಕೆಗೆ ಅವಕಾಶ ಇತ್ತು. ಇವಿಕ್ಸೆಲ್ ಕಂಪನಿಗೆ ಆಯ್ಕೆಯಾಗಿದ್ದೇನೆ' ಎಂದು ಎಂಬಿಎ ವಿದ್ಯಾರ್ಥಿನಿ ಅಶ್ವಿನಿ ಪ್ರತಿಕ್ರಿಯಿಸಿದರು.

2024ರ ಮಾರ್ಚ್ ಅಂತ್ಯಕ್ಕೆ ವರದಿ • ಮೊಬೈಲ್ ಆ್ಯಪ್‌ನಲ್ಲಿ ಪ್ರಭೇದ ಸಹಿತ ಮಾಹಿತಿ ದಾಖಲು

ಮರಗಣತಿಗೆ ಮುಂದಾದ ಬಿಬಿಎಂಪಿ

• ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿರುವ ಮರಗಳ ಗಣತಿ ನಡೆಸಲು ಬಿಬಿಎಂಪಿ ಕೊನೆಗೂ ನಿರ್ಧರಿಸಿದ್ದು, 2024ರ ಮಾರ್ಚ್ ಅಂತ್ಯಕ್ಕೆ ಗಣತಿ ಮುಗಿಸಲು ಯೋಜಿಸಿದೆ. ಮರ-ಗಿಡಗಳ ಚಿತ್ರ, ಪ್ರಭೇದ ಸಹಿತ ಸಮಗ್ರ ಮಾಹಿತಿ ಆ್ಯಪ್‌ನಲ್ಲಿ ದಾಖಲಾಗಲಿದೆ.

ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (ಕೆಎಸ್‌ಆರ್‌ಎಸ್‌ಎಸಿ) ಸಿದ್ಧಪಡಿಸಿರುವ ಮೊಬೈಲ್ ಆ್ಯಪ್‌ನಲ್ಲಿ ಮರಗಣತಿ ಕಾರ್ಯ ನಡೆಯಲಿದೆ. ಮರಗಳ ಗಣತಿ ಹಾಗೂ ಮಾಹಿತಿ ಸಂಗ್ರಹಕ್ಕೆ ಬಿಬಿಎಂಪಿ ಅರಣ್ಯ ವಿಭಾಗದಿಂದ ಅ.7ರಂದು ಟೆಂಡರ್ ಆಹ್ವಾನಿಸಲಾಗಿದೆ. ಎಂಟು ವಲಯಗಳಿಗೆ ಪ್ರತ್ಯೇಕ ಟೆಂಡರ್ ಕರೆಯಲಾಗಿದ್ದು, ಅ.25ಕ್ಕೆ ಟೆಂಡರ್ ಅಂತಿಮಗೊಳಿಸಲಾಗುತ್ತದೆ. ನಂತರದ ಪ್ರಕ್ರಿಯೆಗಳು ಮುಗಿದ ಮೇಲೆ, 2024ರ ಮಾರ್ಚ್ 31ರ ಅಂತ್ಯಕ್ಕೆ ಮರಗಣತಿ ಕಾರ್ಯ ಮುಗಿಸುವ ಯೋಜನೆ ಹೊಂದಲಾಗಿದೆ.

‘ಬೆಂಗಳೂರಿನಲ್ಲಿರುವ ಮರಗಳ ಗಣತಿ ಮಾಡಿ, ಅದನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು. ಮೂರು ತಿಂಗಳಲ್ಲಿ ಗಣತಿ ಪ್ರಕ್ರಿಯೆ ಆರಂಭಿಸಬೇಕು’ ಎಂದು ಹೈಕೋರ್ಟ್ 2019ರಲ್ಲಿ ಬಿಬಿಎಂಪಿಗೆ ಸೂಚಿಸಿತ್ತು. ನಾಲ್ಕು ವರ್ಷವಾದ ಮೇಲೆ ಬಿಬಿಎಂಪಿ ಮರಗಣತಿಗೆ ಮುಂದಾಗಿದೆ.

ಬಿಬಿಎಂಪಿ ಪ್ರಾಯೋಗಿಕವಾಗಿ ನಡೆಸಿದ ಗಣತಿ ಆರು ಸಂಪುಟದಲ್ಲಿದ್ದು, 46,593 ಮರಗಳ ಮಾಹಿತಿಯನ್ನು ಮಾತ್ರ ಬಿಬಿಎಂಪಿ ಸದ್ಯಕ್ಕೆ ಹೊಂದಿದೆ.

‘ಮರಗಳ ಸಂರಕ್ಷಣೆ ಕಾಯಿದೆ ಪ್ರಕಾರ, ಗಣತಿ ನಡೆಯಲೇಬೇಕು. ಹೈಕೋರ್ಟ್ 2019ರಲ್ಲಿ ಆದೇಶ ನೀಡಿದ್ದರೂ ಮರಗಣತಿ ಆರಂಭವಾಗಿಲ್ಲ. ಬಿಬಿಎಂಪಿ ಅಧಿಕಾರಿಗಳು ಏನೇನೋ ಕಾರಣಗಳನ್ನು ಹೇಳುತ್ತಿದ್ದರು’ ಎಂದು ಬೆಂಗಳೂರು ಎನ್ವಿರಾನ್‌ಮೆಂಟ್ ಟ್ರಸ್ಟ್‌ನ ದತ್ತಾತ್ರೇಯ ಟಿ.ದೇವರೆ ತಿಳಿಸಿದರು.

‘ಮರಗಳ ಗಣತಿಯನ್ನು ಆದ್ಯತೆ ಮೇರೆಗೆ ಕೈಗೊಳ್ಳಲಾಗುತ್ತಿದೆ. ಈ ಸಂಖ್ಯೆ ನಮಗೆ ದೊರೆತ ಮೇಲೆ ಮುಂದಿನ ಯೋಜನೆಗಳಿಗೆ ನೆರವಾಗುತ್ತದೆ. ಪ್ರತಿಯೊಂದು ಮರದ ಮಾಹಿತಿಯನ್ನು ವೆಬ್‌ಸೈಟ್‌ನಲ್ಲೂ ಪ್ರಕಟಿಸುತ್ತೇವೆ. ಯಾವ ಯೋಜನೆಗಳಿಗೆ ಎಲ್ಲಿ ಎಷ್ಟು ಮರಗಳನ್ನು ಕಡಿಯಲಾಗುತ್ತದೆ ಎಂಬ ಮಾಹಿತಿ ಲಭ್ಯವಾಗುತ್ತದೆ. ಜೊತೆಗೆ, ಹೊಸದಾಗಿ ಸಸಿ ನೆಡುತ್ತಿರುವ ವಿವರವನ್ನೂ ಪ್ರಕಟಿಸಲಾಗುತ್ತದೆ’ ಎಂದು ಬಿಬಿಎಂಪಿ ಅರಣ್ಯ ವಿಭಾಗದ ಡಿಸಿಎಫ್ ಸ್ವಾಮಿ ಹೇಳಿದರು.

‘ಪ್ರತಿ ಮನೆಗೆ 2 ಮರ’

‘ನಗರದಲ್ಲಿರುವ ಪ್ರತಿ ಮನೆಗೆ ಎರಡು ಮರಗಳಿರಬೇಕು ಎಂಬ ನಿಯಮವನ್ನು ಜಾರಿಗೊಳಿಸಿ, ಎಲ್ಲರಿಗೂ ಸಸಿ ನೆಟ್ಟು, ಬೆಳೆಸಲು ಪ್ರೋತ್ಸಾಹಿಸಲಾಗುವುದು’ ಎಂದು ಬಿಬಿಎಂಪಿಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಸ್ವಾಮಿ ತಿಳಿಸಿದರು.

ಕರ್ನಾಟಕ ಮರಗಳ ಸಂರಕ್ಷಣೆ ಕಾಯ್ದೆಯ ನಿಯಮಗಳ ಪ್ರಕಾರ, ನಗರ ಪ್ರದೇಶಗಳಲ್ಲಿ 222 ಚದರ ಮೀಟರ್ (2,389 ಚದರಡಿ) ಮನೆ-ಕಟ್ಟಡಗಳ ನಿವೇಶನಗಳಲ್ಲಿ ಎರಡು ಮರಗಳಿರಬೇಕು. 892 ಚದರ ಮೀಟರ್ (9,600 ಚದರಡಿ) ಒಳಗಿನ ಕಟ್ಟಡ-ನಿವೇಶನಗಳಲ್ಲಿ ಮೂರು, ನಂತರ ವಿಸ್ತೀರ್ಣದಲ್ಲಿ ನಾಲ್ಕು ಮರಗಳಿರಬೇಕು. ಕೈಗಾರಿಕೆ ಹಾಗೂ ಸಂಸ್ಥೆಗಳ ಆವರಣದಲ್ಲಿ ಪ್ರತಿ ಹೆಕ್ಟೇರ್‌ಗೆ 25 ಮರಗಳಿರಬೇಕು. ಈ ನಿಯಮವನ್ನು ಅನುಷ್ಠಾನಗೊಳಿಸಲು ನಿರ್ಧರಿಸಲಾಗಿದೆ ಎಂದರು.

ಸಮುದಾಯ ವಸತಿ ಪ್ರದೇಶದಲ್ಲಿ (ಗೇಟೆಡ್ ಕಮ್ಯುನಿಟಿ) ಪ್ರತಿ ಮನೆಗೆ ಎರಡು ಸಸಿ-ಮರಗಳನ್ನು ಕಡ್ಡಾಯ ಮಾಡಲಾಗುತ್ತದೆ. ನಂತರ ನಗರದ ಎಲ್ಲೆಡೆ ಜಾರಿಗೆ ತರಲಾಗುತ್ತದೆ. ನಗರದಲ್ಲಿ ಹಸಿರು ಹೊದಿಕೆ ಪ್ರಮಾಣ ಹೆಚ್ಚಿಸಲು ಎಲ್ಲ ರೀತಿಯ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಮಾಹಿತಿ ನೀಡಿದರು.

‘ನಗರದಲ್ಲಿ 1.30 ಕೋಟಿ ಜನಸಂಖ್ಯೆಯ ಬೆಂಗಳೂರಿನಲ್ಲಿ ಏಳು ಜನರಿಗೆ ಒಂದು ಮರವಿದೆ. ಚಂಡೀಗಢ ಮತ್ತು ಗಾಂಧಿನಗರಗಳಲ್ಲಿ ಪ್ರತಿ ವ್ಯಕ್ತಿಗೆ ನಾಲ್ಕು ಗಿಡಗಳಿವೆ, ನಾಸಿಕ್‌ನಲ್ಲಿ ಪ್ರತಿಯೊಬ್ಬರಿಗೆ ಎರಡು ಮರಗಳಿವೆ’ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊ. ಟಿ.ವಿ. ರಾಮಚಂದ್ರ ಹೇಳಿದರು.

ಬಾರ್‌ಕೋಡ್ ಫಲಕ

ಮರಗಣತಿಯ ತಂಡದಲ್ಲಿ ಸಸ್ಯಶಾಸ್ತ್ರಜ್ಞರು ಇರಲಿದ್ದಾರೆ. 5.5 ಸೆಂ.ಮೀ ಸುತ್ತಳತೆ ಅಥವಾ 1 ಮೀಟರ್ ಎತ್ತರವಿರುವ ಎಲ್ಲ ಮರ-ಗಿಡಗಳ ಗಣತಿ, ಪ್ರಭೇದ ಸೇರಿದಂತೆ ಹಲವು ಮಾಹಿತಿ ಸಂಗ್ರಹ ನಡೆಯಲಿದೆ. ಗಣತಿ ಸಂದರ್ಭದಲ್ಲೇ ಪ್ರತಿ ಮರದ ಮೇಲೆ ಸಂಖ್ಯೆ ನಮೂದಿಸಲಾಗುತ್ತದೆ. ಇದೆಲ್ಲ ವರದಿ ತಯಾರಾದ ಮೇಲೆ, ಮರದ ಚಿತ್ರ, ಅದರ ಸಂಖ್ಯೆ ಜತೆಗೆ ಅದರ ವಯಸ್ಸು, ಪ್ರಭೇದದ ಮಾಹಿತಿಯನ್ನು ಬಾರ್‌ಕೋಡ್ ಮೂಲಕ ಪಡೆದುಕೊಳ್ಳಬಹುದು. ರಸ್ತೆಯ ಒಂದು ಬದಿ ನಿಂತರೆ ಕಾಣುವ ಮರಗಳಿಗೆ ಸಂಬಂಧಿಸಿದ ಬಾರ್‌ಕೋಡ್ ಫಲಕವನ್ನು ಹಾಕಲಾಗುತ್ತದೆ. ಈ ಮೂಲಕ ಸಾರ್ವಜನಿಕರಿಗೆ ತಮ್ಮ ಪ್ರದೇಶದಲ್ಲಿರುವ ಮರಗಳ ಸಂಪೂರ್ಣ ಮಾಹಿತಿ ಲಭ್ಯವಾಗಲಿದೆ.

ಬಿಜೆಪಿ ವಿರುದ್ಧ ಸ್ವಾತಂತ್ರ್ಯ ಉದ್ಯಾನದಲ್ಲಿ ಕಾಂಗ್ರೆಸ್ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ರಾಮಲಿಂಗಾರೆಡ್ಡಿ,ಸಲೀಂ ಅಹ್ಮದ್, ವಿಧಾನ ಪರಿಷತ್ ಸದಸ್ಯ ನಾಗರಾಜ ಯಾದವ್, ಮಾಜಿ ಸಚಿವ ಎಚ್.ಎಂ. ರೇವಣ್ಣ ಇದ್ದರು

ರಾಹುಲ್ ವಿರುದ್ಧ ಪೋಸ್ಟರ್ ಕಾಂಗ್ರೆಸ್‌ನಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ರಾವಣನಿಗೆ ಹೋಲಿಸಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟರ್ ಬಿಡುಗಡೆ ಮಾಡಿರುವ ಬಿಜೆಪಿ ನಡೆಯನ್ನು ಖಂಡಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಕಾಂಗ್ರೆಸ್ ವತಿಯಿಂದ ಶನಿವಾರ ಪ್ರತಿಭಟನೆ ನಡೆಯಿತು.

ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆಗಿರುವ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, ‘ಬಿಜೆಪಿಯವರು ಹತಾಶರಾಗಿದ್ದಾರೆ. ಅವರದ್ದು ವಾಟ್ಸ್ ಆ್ಯಪ್ ವಿಶ್ವವಿದ್ಯಾಲಯ. ಅದರ ಕೇಂದ್ರ ಕಚೇರಿ ನಾಗಪುರದಲ್ಲಿದೆ. ಅದಕ್ಕೆ ಕುಲಪತಿ ಯಾರು ಎನ್ನುವುದು ಗೊತ್ತಿಲ್ಲ. ಅಪಪ್ರಚಾರ ಮಾಡುವುದೇ ಅದರ ಕೆಲಸ’ ಎಂದು ಟೀಕಿಸಿದರು.

‘ರಾಹುಲ್ ಗಾಂಧಿ ನಾಯಕತ್ವದ ಭಯ’

ಬೆಂಗಳೂರು: ‘ರಾಹುಲ್ ಗಾಂಧಿಯವರ ಜನಪ್ರಿಯತೆ ಮತ್ತು ನಾಯಕತ್ವಕ್ಕೆ ಹೆದರಿ ಅವರನ್ನು ರಾವಣನಂತೆ ಬಿಜೆಪಿಯವರು ಬಿಂಬಿಸಿದ್ದಾರೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಭಾರತ್ ಜೋಡೊ ಯಾತ್ರೆ ನಂತರ ‘ಇಂಡಿಯಾ’ ಮೈತ್ರಿ ಕೂಟ ರಚನೆಯಾಯಿತು. ಮೈತ್ರಿ ಮತ್ತು ರಾಹುಲ್ ಬಗ್ಗೆ ಬಿಜೆಪಿ ಭಯಭೀತವಾಗಿದೆ ಎಂಬುದಕ್ಕೆ ಈ ಪೋಸ್ಟರ್ ಸಾಕ್ಷಿ’ ಎಂದರು.

ಶಾಸಕ ಬಸವರಾಜ ಬೊಮ್ಮಾಯಿ ಅವರು ಜೆಸಿಬಿ ಪವರ್ ಪ್ರೊಡಕ್ಟ್ಸ್‌ನ ಜೆಸಿಬಿ ಡಿಸೇಲ್ ಜನರೇಟರ್ ಅನ್ನು ಶನಿವಾರ ಅನಾವರಣಗೊಳಿಸಿದರು. ಜೆಸಿಬಿ ಪವರ್ ಪ್ರೊಡಕ್ಟ್ಸ್‌ನ ಮುಖ್ಯಸ್ಥ ಅತುಲ್ ಕಠಾರಿಯಾ, ಮ್ಯಾಗ್ನಾಟೆಕ್ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭರತ್ ಬೊಮ್ಮಾಯಿ ಇದ್ದರು.

ಕಸ್ಟಮ್ಸ್ ಅಧಿಕಾರಿಗೆ ಜೈಲು

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಆದಾಯ ಮೀರಿದ ಆಸ್ತಿ ಗಳಿಕೆ ಪ್ರಕರಣದಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಸೂಪರಿಂಟೆಂಡೆಂಟ್ ಆಗಿದ್ದ ಮೊಹಮ್ಮದ್ ಶಫಿವುಲ್ಲಾ ಅವರಿಗೆ ಸಿಬಿಐ ನ್ಯಾಯಾಲಯ ನಾಲ್ಕು ವರ್ಷ ಜೈಲು ಶಿಕ್ಷೆ ಹಾಗೂ ₹2 ಲಕ್ಷ ದಂಡ ವಿಧಿಸಿದೆ.

2018ರಲ್ಲಿ ವಿಮಾನ ನಿಲ್ದಾಣದ ಕಸ್ಟಮ್ಸ್ ವಿಭಾಗದಲ್ಲಿ ಸೂಪರಿಂಟೆಂಡೆಂಟ್ ಆಗಿದ್ದ ಶಫಿವುಲ್ಲಾ ವಿರುದ್ಧ ಸಿಬಿಐ ಅಧಿಕಾರಿಗಳು ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿ ದಾಖಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಸಿಬಿಐ ನ್ಯಾಯಾಲಯದ ನ್ಯಾಯಮೂರ್ತಿ ಎಚ್.ಎ. ಮೋಹನ್ ಅವರು ಶಫಿವುಲ್ಲಾ ಅವರನ್ನು ದೋಷಿ ಎಂದು ಶುಕ್ರವಾರ ಘೋಷಿಸಿದರು. ಶಫಿವುಲ್ಲಾ ಅವರ ಪತ್ನಿ ಅಸ್ರಾ ಶಾಫಿ ಅವರನ್ನು ದೋಷಮುಕ್ತಗೊಳಿಸಿದೆ. 2018ರ ಮಾರ್ಚ್ 1ರಂದು ಮೊಹಮ್ಮದ್ ಶಫಿವುಲ್ಲಾ ಅವರ ಮನೆಯಲ್ಲಿ ಶೋಧ ನಡೆಸಿದ್ದರು. ಮಹತ್ವದ ದಾಖಲೆ, ಆಸ್ತಿ ಪತ್ರಮ ಚಿನ್ನಾಭರಣಗಳನ್ನು ಜಪ್ತಿ ಮಾಡಿ, ಪ್ರಕರಣ ದಾಖಲಿಸಿದ್ದರು.

ಶಪಿವುಲ್ಲಾ ಆದಾಯಕ್ಕಿಂತ ಶೇ 15.26 ರಷ್ಟು ಹೆಚ್ಚಿನ ಆಸ್ತಿ ಹೊಂದಿದ್ದಾರೆ ಎಂದು ಉಲ್ಲೇಖಿಸಲಾಗಿತ್ತು. ನಂತರ ಅವರನ್ನು ಮಂಗಳೂರು ಕಸ್ಟಮ್ಸ್‌ಗೆ ವರ್ಗಾವಣೆ ಮಾಡಲಾಗಿತ್ತು.

ಮದುವೆಯಾಗುವಂತೆ ನಿರಂತರ ಪೀಡನೆ

ಯುವತಿಯರಿಂದ ಕಿರುಕುಳ ಆರೋಪ: ಉದ್ಯೋಗಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಮೂರ್ತಿ ನಗರ ಠಾಣೆ ವ್ಯಾಪ್ತಿಯಲ್ಲಿ ಸಂತೋಷ್ (28) ಎಂಬುವರು ಆತ್ಮಹತ್ಯೆ ಮಾಡಿಕೊಂಡಿದ್ದು, ಪ್ರಚೋದನೆ ಆರೋಪದಡಿ ಇಬ್ಬರು ಯುವತಿಯರ ವಿರುದ್ಧ ಪ್ರಕರಣ ದಾಖಲಾಗಿದೆ.

‘ಸ್ಥಳೀಯ ನಿವಾಸಿ ಸಂತೋಷ್, ಕಂಪನಿಯೊಂದರ ಉದ್ಯೋಗಿ. ಅ. 3ರಂದು ಆತ್ಮಹತ್ಯೆಗೆ ಯತ್ನಿಸಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಯಲ್ಲಿಯೇ ಅವರು ಮೃತಪಟ್ಟಿದ್ದಾರೆ. ಪೋಷಕರು ನೀಡಿರುವ ಹೇಳಿಕೆ ಆಧರಿಸಿ ಆತ್ಮಹತ್ಯೆಗೆ ಪ್ರಚೋದನೆ ಆರೋಪದಡಿ ಯುವತಿಯರಿಬ್ಬರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸಂತೋಷ್ ಅವರು ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ಯುವತಿಯೊಬ್ಬರನ್ನು ಪ್ರೀತಿಸುತ್ತಿದ್ದರೆಂದು ಗೊತ್ತಾಗಿದೆ. ಕೆಲ ತಿಂಗಳ ಹಿಂದೆಯಷ್ಟೇ ಇಬ್ಬರ ನಡುವೆ ಜಗಳವಾಗಿ, ಬೇರೆ ಬೇರೆ ಆಗಿದ್ದರು. ನಂತರ, ಸಂತೋಷ್ ಅದೇ ಕಂಪನಿಯ ಮತ್ತೊಂದು ಯುವತಿ ಜೊತೆ ಸ್ನೇಹ ಬೆಳೆಸಿದ್ದರು. ಅವರ ಜೊತೆ ಸುತ್ತಾಡುತ್ತಿದ್ದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಮೊದಲ ಸ್ನೇಹಿತೆ, ಕಚೇರಿಯಲ್ಲೇ ಸಂತೋಷ್ ಕಪಾಳಕ್ಕೆ ಹೊಡೆದು ಅವಮಾನ ಮಾಡಿದ್ದರೆಂದು ಗೊತ್ತಾಗಿದೆ.’

‘ಯುವತಿ, ಪದೇ ಪದೇ ಕರೆ ಮಾಡಿ ಕಿರುಕುಳ ನೀಡುತ್ತಿದ್ದರು. ತನ್ನನ್ನೇ ಮದುವೆಯಾಗುವಂತೆ ಪೀಡಿಸುತ್ತಿದ್ದರು. ಎರಡನೇ ಯುವತಿ ಸಹ ತನ್ನನ್ನೇ ಮದುವೆಯಾಗಬೇಕೆಂದು ಪಟ್ಟು ಹಿಡಿದಿದ್ದರು. ಇದರಿಂದ ನೊಂದು ಸಂತೋಷ್ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಸಂಬಂಧಿಕರು ಹೇಳುತ್ತಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಖಾಸಗಿ ವಿಡಿಯೊ ಬ್ಲ್ಯಾಕ್‌ಮೇಲ್: ಪತಿಯ ವಿರುದ್ಧ ಪತ್ನಿ ದೂರು

ಬೆಂಗಳೂರು: ‘ನನ್ನ ಖಾಸಗಿ ವಿಡಿಯೊ ಚಿತ್ರೀಕರಿಸಿಟ್ಟುಕೊಂಡಿರುವ ಪತಿ, ₹ 10 ಲಕ್ಷ ಕೊಡುವಂತೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ’ ಎಂದು ಆರೋಪಿಸಿ 28 ವರ್ಷದ ಮಹಿಳೆಯೊಬ್ಬರು ಬಸವನಗುಡಿ ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ದೂರಿನ ಅನ್ವಯ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ತನಿಖೆ ಮುಂದುವರಿಸಿದ್ದಾರೆ.

‘ಕಂಪನಿ ಮಾಲೀಕನೆಂದು ಸುಳ್ಳು ಹೇಳಿದ್ದ ಪತಿ, 2022ರಲ್ಲಿ ನನ್ನನ್ನು ಮದುವೆಯಾಗಿದ್ದಾರೆ. ಮದುವೆ ನಂತರ, ಹಲವೆಡೆ ಸುತ್ತಾಡಿದ್ದೆವು. ಇದೇ ಸಂದರ್ಭದಲ್ಲಿ ನನ್ನ ಖಾಸಗಿ ವಿಡಿಯೊಗಳನ್ನು ಚಿತ್ರೀಕರಿಸಿಟ್ಟುಕೊಂಡಿದ್ದರು’ ಎಂದು ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ.

‘ಮದುವೆ ಬಳಿಕ ಪತಿ, ಕೆಲಸಕ್ಕೆ ಹೋಗುತ್ತಿಲ್ಲ. ನನ್ನ ಸಂಬಳ ತಮಗೆ ನೀಡಬೇಕೆಂದು ಒತ್ತಾಯಿಸುತ್ತಿದ್ದಾರೆ. ₹ 10 ಲಕ್ಷ ತಂದುಕೊಡದಿದ್ದರೆ, ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುವುದಾಗಿ ಬೆದರಿಸುತ್ತಿದ್ದಾರೆ. ಕಿರುಕುಳ ಪ್ರಶ್ನಿಸಿದರೆ ಹಲ್ಲೆ ಮಾಡುತ್ತಿದ್ದಾರೆ’ ಎಂದು ಉಲ್ಲೇಖಿಸಿದ್ದಾರೆ.

ಪ್ರಜ್ಞೆ ತಪ್ಪಿಸಿ ಆಭರಣ ಕಳವು: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನರ ಜೊತೆ ಆತ್ಮೀಯವಾಗಿ ಮಾತನಾಡಿ ಪ್ರಜ್ಞೆ ತಪ್ಪಿಸಿ ಚಿನ್ನಾಭರಣ ಕದ್ದೊಯ್ಯುತ್ತಿದ್ದ ಮಹಿಳೆ ಸೇರಿ ಇಬ್ಬರು ಆರೋಪಿಗಳನ್ನು ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಠಾಣೆ ವ್ಯಾಪ್ತಿಯಲ್ಲಿ ಸೆ. 22ರಂದು ಕಳ್ಳತನ ನಡೆದಿತ್ತು. ರಾಜಾಜಿನಗರದ ನಿವಾಸಿ ಕಾರ್ತಿಕ್ ಹಾಗೂ ಈತನ ಪರಿಚಯಸ್ಥ ಮಹಿಳೆಯನ್ನು ಬಂಧಿಸಲಾಗಿದೆ. ಇಬ್ಬರಿಂದಲೂ ₹ 6.5 ಲಕ್ಷ ಮೌಲ್ಯದ 115 ಗ್ರಾಂ ತೂಕದ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ ಕಾರ್ತಿಕ್, ಅಪರಾಧ ಹಿನ್ನೆಲೆಯುಳ್ಳವ. ವೃದ್ಧರನ್ನು ಗುರುತಿಸಿ ಕಳ್ಳತನ ಮಾಡುತ್ತಿದ್ದ. ಕದ್ದ ಚಿನ್ನಾಭರಣವನ್ನು ಮಹಿಳೆಯೇ ಮಾರಾಟ ಮಾಡುತ್ತಿದ್ದರು. ಇದಕ್ಕಾಗಿ ಕಮಿಷನ್ ಪಡೆದುಕೊಳ್ಳುತ್ತಿದ್ದರು’ ಎಂದು ತಿಳಿಸಿವೆ.

ನಿದ್ರೆ ಮಾತ್ರೆ ಬೆರೆಸಿದ್ದ: ‘ಸ್ಥಳೀಯ ನಿವಾಸಿಯಾದ ದೂರುದಾರ, ಕಾಂಡಿಮೆಂಟ್ಸ್ ಮಳಿಗೆ ಇಟ್ಟುಕೊಂಡಿದ್ದಾರೆ. ಅವರನ್ನು ಪರಿಚಯ ಮಾಡಿಕೊಂಡಿದ್ದ ಕಾರ್ತಿಕ್, ಆತ್ಮಿಯವಾಗಿ ಮಾತನಾಡಲಾರಂಭಿಸಿದ್ದ. ಪದೇ ಪದೇ ಮಳಿಗೆಗೆ ಬಂದು ಹೋಗುತ್ತಿದ್ದ. ಸೆ. 22ರಂದು ಮಳಿಗೆಗೆ ಬಂದಿದ್ದ ಈತ, ಟೀ ಕುಡಿಯೋಣವೆಂದು ದೂರುದಾರರನ್ನು ಸಮೀಪದ ಸ್ಥಳಕ್ಕೆ ಕರೆದೊಯ್ದಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಎರಡು ಟೀ ತಂದಿದ್ದ ಆರೋಪಿ, ಒಂದರಲ್ಲಿ ನಿದ್ರೆ ಮಾತ್ರೆ ಬೆರೆಸಿದ್ದ. ಅದೇ ಟೀಯನ್ನು ದೂರುದಾರರಿಗೆ ಕುಡಿಸಿದ್ದ. ಕೆಲ ನಿಮಿಷಗಳ ನಂತರ ದೂರುದಾರ, ಪ್ರಜ್ಞೆ ತಪ್ಪಿದ್ದರು. ಅವರ ಬಳಿಯ ಚಿನ್ನಾಭರಣ ಬಿಚ್ಚಿಕೊಂಡು ಆರೋಪಿ ಪರಾರಿಯಾಗಿದ್ದ’ ಎಂದು ತಿಳಿಸಿವೆ.

ಮಲ್ಲೇಶ್ವರ ಪೊಲೀಸರು ಜಪ್ತಿ ಮಾಡಿರುವ ಆಭರಣ

ಮೂರು ಕಡೆ ಕೃತ್ಯ

‘ಆರೋಪಿ ಕಾರ್ತಿಕ್ ನಗರದ 3 ಕಡೆ ಕೃತ್ಯ ಎಸಗಿರುವುದು ಗೊತ್ತಾಗಿದೆ. ಒಂದು ಪ್ರಕರಣದಲ್ಲಿ ಈತ ಜೈಲಿಗೂ ಹೋಗಿ ಜಾಮೀನು ಮೇಲೆ ಹೊರಬಂದಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ರಜೆಗಾಗಿ ಲಂಚ: 10 ಮಂದಿ ಅಮಾನತು

ಬೆಂಗಳೂರು: ಬಿಎಂಟಿಸಿ ಚಾಲನಾ ಸಿಬ್ಬಂದಿಯಿಂದ ಲಂಚ ಪಡೆದ ಆರೋಪದ ಮೇಲೆ ಬಿಎಂಟಿಸಿ ಬನಶಂಕರಿ ಘಟಕದ (20ನೇ ಘಟಕ) 10 ಮಂದಿಯನ್ನು ಅಮಾನತು ಮಾಡಲಾಗಿದೆ.

ರಜೆಗಾಗಿ ಲಂಚ ಪಡೆದ ವಿಡಿಯೊ ಹರಿದಾಡಿದ್ದ ಹಿನ್ನೆಲೆಯಲ್ಲಿ ಬಿಎಂಟಿಸಿ ಭದ್ರತಾ ಹಾಗೂ ಜಾಗೃತಾಧಿಕಾರಿಗಳು ತನಿಖೆ ನಡೆಸಿ ವರದಿ ನೀಡಿದ್ದರು.

ಈ ವರದಿಯ ಆಧಾರದಲ್ಲಿ ಕಿರಿಯ ಸಹಾಯಕರಾದ ಪವನ್ ಕುಮಾರ್ ಎಂ, ಮಹೇಶ್ ವಿ, ಮದನ್ ಕುಮಾರ್, ಅರುಣ್ ಕುಮಾರ್, ವೀರೇಶ್, ರಾಕೇಶ್, ಸಹಾಯಕ ಉಗ್ರಾಣ ಪಾಲಕ ರಘುವರನ್, ಸಹಾಯಕ ಲೆಕ್ಕಿಗ ಸತೀಶ್ ಪತ್ತಾರ್, 33ನೇ ಘಟಕದ ಕೆಎಸ್‌ಟಿ ಕಾನ್‌ಸ್ಟೆಬಲ್ ಆರ್.ಡಿ. ಸಂತೋಷ್ ಕುಮಾರ್, ಪಿ. ಮಂಜುನಾಥ್ ಅವರನ್ನು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸತ್ಯವತಿ ಜಿ ಅವರು ಅಮಾನತು ಮಾಡಿದ್ದಾರೆ.

ಚಾಲನಾ ಸಿಬ್ಬಂದಿಯಿಂದ ಮಹೇಶ್ ಎಂ. ಲಂಚ ಪಡೆಯುತ್ತಿದ್ದ ವಿಡಿಯೊ ಹರಿದಾಡಿತ್ತು. ತನಿಖೆ ನಡೆಸಿದಾಗ ಪವನ್ ಕುಮಾರ್ ಎಂ, ಮಹೇಶ್ ಎಂ ಅವರು ಬಿಟ್‌ಕಾಯಿನ್‌ನಲ್ಲಿ ಆನ್‌ಲೈನ್ ಇನ್ವೆಸ್ಟ್‌ಮೆಂಟ್ ವಾಟ್ಸ್‌ಆ್ಯಪ್ ಗ್ರೂಪ್ ಅಡ್ಮಿನ್‌ಗಳಾಗಿ ಇತರರನ್ನೂ ಈ ದಂಧೆಯಲ್ಲಿ ತೊಡಗಿಸಲು ಪ್ರಚೋದಿಸಿರುವುದು ಪತ್ತೆಯಾಗಿತ್ತು. ಆರೋಪಿಗಳು ವಿವಿಧ ಬ್ಯಾಂಕ್ ಖಾತೆಗಳಿಗೆ ₹ 4.47 ಲಕ್ಷ ಜಮಾ ಮಾಡಿರುವುದು ಕೂಡ ಪತ್ತೆಯಾಗಿತ್ತು ಎಂದು ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ.

ನಗರದಲ್ಲಿ ಇಂದು

‘ಅಂತರರಾಷ್ಟ್ರೀಯ ಮಹಿಳಾ ಸಾಧಕಿಯರು ಹಾಗೂ ಯುವ ಸಾಧಕಿಯರ’ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ರಾಮಲಿಂಗಾರೆಡ್ಡಿ, ರಿಜ್ವಾನ್ ಅರ್ಷದ್, ಎ.ಎಸ್. ಪೊನ್ನಣ್ಣ, ರಾಜೇಂದ್ರ ಕುಮಾರ ಕಟಾರಿಯಾ, ಅಶ್ವಿನಿ ಪುನೀತ್‌ರಾಜ್‌ಕುಮಾರ್, ಮೋಹನ್ ರಾಜ್ ಕೆ.ಪಿ., ಶಾಮಲಾ ಇಕ್ಬಾಲ್, ಆಯೋಜನೆ: ಕಬ್ಬನ್ ಪಾರ್ಕ್ ನಡಿಗೆದಾರರ ಸಂಘ, ಕಬ್ಬನ್ ಪಾರ್ಕ್ ನಡಿಗೆದಾರರ ಫೋರಂ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 9ರಿಂದ

ಎಸ್. ಗಂಗಾಧರಯ್ಯ ಅವರ ‘ಎರೆನೆತ್ತಿ’ ಪುಸ್ತಕ ಬಿಡುಗಡೆ: ಅಗ್ರಹಾರ ಕೃಷ್ಣಮೂರ್ತಿ, ಪುಸ್ತಕದ ಕುರಿತು: ಸುಭಾಷ್ ರಾಜಮಾನೆ, ಅನುಪಮ ಪ್ರಸಾದ್, ಆಯೋಜನೆ: ಅಮೂಲ್ಯ ಪುಸ್ತಕ, ಸ್ಥಳ: ಡಾ. ಎಂ. ಚಿದಾನಂದಮೂರ್ತಿ ಸಭಾಂಗಣ, ಪಾಲಿಕೆ ಸೌಧ, ವಿಜಯನಗರ, ಬೆಳಿಗ್ಗೆ 10

ಉಚಿತ ಆರೋಗ್ಯ ಶಿಬಿರ: ಆಯೋಜನೆ: ವೈಟ್ ಸ್ಪಾರ್ಕ್ಸ್, ಅಖಿಲ ಕರ್ನಾಟಕ ವೈದ್ಯಕೀಯ ಹಾಗೂ ದಂತ ವಿದ್ಯಾರ್ಥಿಗಳ ವೇದಿಕೆ, ಸ್ಥಳ: 9ನೇ ಅಡ್ಡರಸ್ತೆ, ಆರೋಗ್ಯ ಕೇಂದ್ರ, ಕರುಮಾರಿಯಮ್ಮ ದೇವಸ್ಥಾನದ ಪಕ್ಕ, ಮರಿಯಪ್ಪನ ಪಾಳ್ಯ, ಬೆಳಿಗ್ಗೆ 10

ರಮೇಶ್ ಅರವಿಂದ್

‘ಸಾವಣ್ಣ ಅಕ್ಷರ ಆರಾಧನೆ’ ಪುಸ್ತಕ ಬಿಡುಗಡೆ: ರಮೇಶ್ ಅರವಿಂದ್, ಗಿರೀಶ್ ರಾವ್ ಹತ್ವಾರ್, ಲೇಖಕರು: ಗಂಗಾವತಿ ಪ್ರಾಣೇಶ್, ವಿರೂಪಾಕ್ಷಪ್ಪ ದೇವರಮನೆ, ರಂಗಸ್ವಾಮಿ ಮೂಕನಹಳ್ಳಿ, ಶ್ವೇತಾ ಬಿ.ಸಿ., ಶರಣು ಹುಲ್ಲೂರು, ವಸಂತ್ ಗಿಳಿಯಾರ್, ಜಗದೀಶ ಶರ್ಮಾ ಸಂಪ, ಆಯೋಜನೆ: ಸಾವಣ್ಣ, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10

ಅಖಿಲ ಭಾರತೀಯ ಗ್ರಾಹಕ ಪಂಚಾಯತ್– ಕರ್ನಾಟಕ ಪ್ರಾಂತ್ಯದ ಸುವರ್ಣ ಮಹೋತ್ಸವ: ಉದ್ಘಾಟನೆ: ಆರ್. ದೇವದಾಸ್, ಅತಿಥಿ: ಉದಯ್ ಹೊಳ್ಳ, ಅಧ್ಯಕ್ಷತೆ: ಸಿ. ಸೋಮಶೇಖರ್, ಸ್ಥಳ: ಕೇಶವ ಶಿಲ್ಪ, ರಾಷ್ಟ್ರೋತ್ಥಾನ ಪರಿಷತ್ತು, ಬೆಳಿಗ್ಗೆ 10

ಹಳ್ಳಿಕಾರ ಸಮುದಾಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಣಾ ಸಮಾರಂಭ: ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅತಿಥಿಗಳು: ರಾಮಲಿಂಗಾರೆಡ್ಡಿ, ಜಮೀರ್ ಅಹಮ್ಮದ್ ಖಾನ್, ಎಚ್.ಎಂ. ರೇವಣ್ಣ, ಎಂ. ಕೃಷ್ಣಪ್ಪ, ಎಸ್.ಟಿ. ಸೋಮಶೇಖರ್, ಪ್ರಿಯಾಕೃಷ್ಣ, ಅಧ್ಯಕ್ಷತೆ: ಕೆ.ಎಂ. ನಾಗರಾಜ್, ಆಯೋಜನೆ: ಆರ್. ಎಂ.ಆರ್. ಹಳ್ಳಿಕಾರ ಫೌಂಡೇಷನ್ ಟ್ರಸ್ಟ್, ಸ್ಥಳ: ಪೂರ್ಣಿಮಾ ಕನ್ವೆನ್ಷನ್ ಸೆಂಟರ್, ಜಯನಗರ, ಬೆಳಿಗ್ಗೆ 10.30

‘ವಿಶ್ವಚೇತನ ಪ್ರಶಸ್ತಿ’ ಪ್ರದಾನ: ಗೊ.ರು. ಚನ್ನಬಸಪ್ಪ, ಪ್ರಶಸ್ತಿ ಪುರಸ್ಕೃತರು: ಜಯರಾಮ್ ರಾಯಪುರ, ಶರಣಪ್ಪ ಎಸ್.ಡಿ., ಆಯೋಜನೆ: ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30



ಚಂದ್ರಶೇಖರ ಕಂಬಾರ

‘ನರಹಳ್ಳಿ ಪ್ರಶಸ್ತಿ, ನರಹಳ್ಳಿ ದಶಮಾನೋತ್ಸವ ಪುರಸ್ಕಾರ’ ಪ್ರದಾನ: ಚಂದ್ರಶೇಖರ ಕಂಬಾರ, ಪ್ರಶಸ್ತಿ ಪುರಸ್ಕೃತರು: ರಘುನಾಥ್ ಚ.ಹ., ಗಿರೀಶರಾವ್ ಹತ್ವಾರ್, ಅಧ್ಯಕ್ಷತೆ: ಎಚ್.ಎಸ್. ವೆಂಕಟೇಶಮೂರ್ತಿ, ಉಪಸ್ಥಿತಿ: ಸಿ.ಕೆ. ರಾಮೇಗೌಡ, ಆಯೋಜನೆ: ಡಾ. ನರಹಳ್ಳಿ ಪ್ರತಿಷ್ಠಾನ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30

ತಿಂಗಳ ಕವಿಗೋಷ್ಠಿ, ಗೀತಗಾಯನ, ಪ್ರಶಸ್ತಿ ಪ್ರದಾನ: ವಿ.ಟಿ. ರಾಮಕೃಷ್ಣಯ್ಯ, ಉದ್ಘಾಟನೆ: ವಿ. ರೇಣುಕಾಪ್ರಸನ್ನ, ಅಧ್ಯಕ್ಷತೆ: ಬಿ. ಶೃಂಗೇಶ್ವರ್, ಅತಿಥಿಗಳು: ವಿ. ಮಲ್ಲಿಕಾರ್ಜುನಯ್ಯ, ಕುವರ ಯಲ್ಲಪ್ಪ, ಪ್ರಶಸ್ತಿ ಪುರಸ್ಕೃತರು: ಪರಿಮಳ ಡಿ. ಎಲ್., ಅನ್ನಪೂರ್ಣ ರಾನಡೆ, ಜಿ. ಶರತ್ಚಂದ್ರ ರಾನಡೆ, ಹನುಮಂತಯ್ಯ ಎಚ್. ಆರ್., ವೈರಮುಡಿ, ಬಿ.ಎನ್. ಶಿವರಾಮ್, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

‘ಶೃಂಗೇರಿಯಲ್ಲಿ ದಸರಾ ಆಚರಣೆ– ವಿಜಯನಗರದೊಂದಿಗಿನ ಸಂಬಂಧ’, ‘ದೇವಾಲಯ ವಾಸ್ತುಶಿಲ್ಪಕ್ಕೊಂದು ಮುನ್ನುಡಿ’ ಕುರಿತು ಉಪನ್ಯಾಸ: ಲ.ನಾ. ಸ್ವಾಮಿ, ಎಂ.ಎನ್. ಪ್ರಭಾಕರ್, ಅಧ್ಯಕ್ಷತೆ: ಜಿ.ಬಿ. ಹರೀಶ, ಆಯೋಜನೆ: ದಿ ಮಿಥಿಕ್ ಸೊಸೈಟಿ, ಸ್ಥಳ: ಶತಮಾನೋತ್ಸವ ಸಭಾಂಗಣ, ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಕನ್ನಡ ಗೀತಗಾಯನ ತರಬೇತಿ ಶಿಬಿರದ ಸಮಾರೋಪ, ಸಮೂಹ ಗಾಯನ: ಉಪಸ್ಥಿತಿ: ಬಂಡ್ಲಹಳ್ಳಿ ವಿಜಯಕುಮಾರ್, ಗಾಯನ: ಪ್ರಭಾ ಇನಾಂದಾರ್, ನಿರಂಜನ್ ಹಿರೇಮಠ್, ಅಪರ್ಣ ಪ್ರಸನ್ನ, ಚೇತನ್ ರಾಮ್, ರಕ್ಷಿತಾ ಮೇಘನಾ, ವರ್ಣಶ್ರೀ ವಿ. ಮೂರೂರು, ಆಯೋಜನೆ: ರಂಗ ಸಂಸ್ಥಾನ, ಸ್ಥಳ: ಹೊಂಬೇಗೌಡ ಪದವಿಪೂರ್ವ ಕಾಲೇಜು, ಗಾಯಿತ್ರಿನಗರ, ಬೆಳಿಗ್ಗೆ 11

‘ಕೆ. ರಾಜೇಶ್ವರಿ ದೊಡ್ಡರಂಗೇಗೌಡ ಸ್ಮಾಕರ ದತ್ತಿ’ ಕಾರ್ಯಕ್ರಮ: ಕೆ. ರಾಜೇಶ್ವರಿ ಗೌಡ ಅವರ ‘ನಿರ್ಣಯ’ ಪುಸ್ತಕ ಬಿಡುಗಡೆ: ಕೆ.ಆರ್. ಸಂಧ್ಯಾರೆಡ್ಡಿ, ‘ಕೆ. ರಾಜೇಶ್ವರಿ ಗೌಡ ಅವರ ಕಥಾಸಾಹಿತ್ಯದ ಒಳನೋಟ’: ಲಕ್ಷ್ಮಣ ಕೊಡಸೆ, ಉಪಸ್ಥಿತಿ: ದೊಡ್ಡರಂಗೇಗೌಡ, ಅಧ್ಯಕ್ಷತೆ: ಎಚ್. ಎಸ್. ಎಂ. ಪ್ರಕಾಶ್, ಆಯೋಜನೆ ಮತ್ತು ಸ್ಥಳ: ಬಿ.ಎಂ. ಶ್ರೀ ಪ್ರತಿಷ್ಠಾನದ ಸಭಾಂಗಣ, ಎನ್.ಆರ್. ಕಾಲೊನಿ, ಬೆಳಿಗ್ಗೆ 11

ಶಿವರುದ್ರ ಸ್ವಾಮೀಜಿ

‘ಪೈಗಂಬರ್ ಅವರ ಶಾಂತಿ ಮತ್ತು ಸೌಹಾರ್ದ ಸಂದೇಶ’ ಕುರಿತು ಉಪನ್ಯಾಸ: ಸಾನ್ನಿಧ್ಯ: ಮೌಲಾನ ಮಕ್ಸೂದ್ ಇಮ್ರಾನ್, ಶಿವರುದ್ರ ಸ್ವಾಮೀಜಿ, ಉಪನ್ಯಾಸ: ತುಮಕೂರು ಚಂದ್ರಕಾಂತ್, ಅತಿಥಿಗಳು: ನಸೀರ್ ಅಹ್ಮದ್, ಮುನಿರತ್ನ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಸೈಯದ್ ಅಶ್ರಫ್, ಅನ್ವರ್ ಬಾಷಾ, ಹನುಮಂತರಾಯಪ್ಪ, ಆಯೋಜನೆ ಮತ್ತು ಸ್ಥಳ: ಮಸ್ಜೀದ್–ಎ–ತಾಹ ಆಡಳಿತ ಮಂಡಳಿ, ಮತ್ತಿಕೆರೆ, ಬೆಳಿಗ್ಗೆ 11.30

ಎಂ.ಎನ್. ಜಯಕುಮಾರ್ ಅವರ ‘ಎನ್‌ಕೌಂಟರ್ಸ್ ಇನ್ ದಿ ವೈಲ್ಡ್ 2.0’ ಛಾಯಾಚಿತ್ರಗಳ ಪ್ರದರ್ಶನದ ಸಮಾರೋಪ: ಅತಿಥಿಗಳು: ಚಂದ್ರಶೇಖರ ಗೌಡ ಸಿ. ಪಾಟೀಲ್, ಪ್ರಮೋದ್ ಬಿ., ವಿದ್ಯಾ ಭಾರತಿ ಬಿ.ಪಿ., ಫೈಜೋರ್ ರೆಹಮಾನ್, ಎಚ್.ಆರ್. ಚಿದಾನಂದ್, ವಿದ್ಯಾ, ರಂಜಿತಾ ಬಿ.ಕೆ., ಗುರಣ್ಣ ಎಚ್. ಮದಗಿ, ಸ್ಥಳ: ಕರ್ನಾಟಕ ಚಿತ್ರ ಕಲಾ ಪರಿಷತ್ತು, ಕುಮಾರ್ ಕೃಪಾ ರಸ್ತೆ, ಬೆಳಿಗ್ಗೆ 11.45

‘ಮೈರಾವಣ ಕಾಳಗ– ಕನಕಾಂಗಿ ಕಲ್ಯಾಣ’ ಪೌರಾಣಿಕ ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಕರುಣಾಕರ ಶೆಟ್ಟಿಗಾರ ಕಾಶಿಪಟ್ಣ, ಅಮೃತಾ ಅಡಿಗ ಪಾಣಾಜೆ, ಆಕಾಶ್ ಕಾಶಿ, ಆಯೋಜನೆ: ಬಿ.ಇ.ಎಲ್ ದಕ್ಷಿಣ ಕನ್ನಡಿಗರ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಮಧ್ಯಾಹ್ನ 2

ರಾಜ್ಯಮಟ್ಟದ ವಿಪ್ರ ವ್ಯಾಪಾರ ಮತ್ತು ವಾಣಿಜ್ಯೋದ್ಯಮಿಗಳ ಸಮಾವೇಶ: ಉದ್ಘಾಟನೆ: ಮೇಧಿನಿ ಉದಯ್ ಗರುಡಾಚಾರ್, ದಿನೇಶ್ ಗುಂಡೂರಾವ್, ಅಶೋಕ್ ಹಾರನಹಳ್ಳಿ, ಸಿ.ಕೆ. ರಾಮಮೂರ್ತಿ, ಚೇತನ ರಾಮ್, ಉಪಸ್ಥಿತಿ: ಪಿ.ಸಿ. ರಾವ್, ರೂಪಾ ಶಾಸ್ತ್ರಿ, ಆಯೋಜನೆ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಸ್ಥಳ: ಸರ್ ಎಂ. ವಿ. ಸಭಾಂಗಣ, ಎಫ್‌ಕೆಸಿಸಿಐ, ಮೈಸೂರು ಬ್ಯಾಂಕ್ ವೃತ್ತ, ಮಧ್ಯಾಹ್ನ 2.30

‘ಪಂಡಿತ್ ಶೇಷಾದ್ರಿ ಗವಾಯಿ ಸಂಗೀತೋತ್ಸವ’: ಸಾನ್ನಿಧ್ಯ: ಗುರುಸಿದ್ಧರಾಜಯೋಗೀಂದ್ರ ಸ್ವಾಮೀಜಿ, ಉದ್ಘಾಟನೆ: ಉಮಾಮಹೇಶ್ವರ್ ಗುರೂಜಿ, ಪ್ರಶಸ್ತಿ ಪ್ರದಾನ: ಎಸ್. ಮುನಿರಾಜು, ಅಧ್ಯಕ್ಷತೆ: ಸತೀಶ್ ಹಂಪಿಹೊಳಿ, ಪ್ರಶಸ್ತಿ ಪುರಸ್ಕೃತರು: ಡಿ. ಕುಮಾರದಾಸ್, ಆಯೋಜನೆ: ಗುರುಕುಮಾರ ಪಂಚಾಕ್ಷರೇಶ್ವರ ಸಂಗೀತ ಕಲಾ ವೇದಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 3.30

ಸನ್ಮಾನ ಕಾರ್ಯಕ್ರಮ: ಅತಿಥಿ: ಎಸ್. ವಿದ್ಯಾಶಂಕರ್, ಅಧ್ಯಕ್ಷತೆ: ಎನ್.ಆರ್. ಪಂಡಿತ ಆರಾಧ್ಯ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಕಾಲೇಜು, ಶೇಷಾದ್ರಿಪುರ, ಸಂಜೆ 4.30

ಸಂಗೀತ ಕಾರ್ಯಕ್ರಮ: ಗಾಯನ: ಉಮಾಕುಮಾರ್, ಶುಭಮಂಗಳ ರಘುರಾಂ, ಮೃದಂಗ, ತಬಲ: ಅಶ್ವತ್ಥನಾರಾಯಣ್, ಕೊಳಲು: ರಾಕೇಶ್ ದತ್, ಆಯೋಜನೆ: ತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಸಂಜೆ 5

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ‘ಅಂಧಮಕ್ಕಳಿಂದ’, ಆಯೋಜನೆ: ಬಿ.ಟಿ.ಎಂ. ಕಲ್ಚರಲ್ ಅಕಾಡೆಮಿ, ಸ್ಥಳ: ರಮಣ ಮಹರ್ಷಿ ಅಕಾಡೆಮಿ ಫಾರ್ ಬ್ಲೈಂಡ್, ಜೆ.ಪಿ. ನಗರ, ಸಂಜೆ 6

ಸಂಗೀತ ಸಂಜೆ: ಗಾಯನ: ಚೈತ್ರಾ ಎಚ್.ಜಿ., ತಬಲಾ: ಎಚ್.ಎಸ್. ಗೋಪಿನಾಥ್, ಹಾರ್ಮೋನಿಯಂ: ಉಮಾಕಾಂತ್ ಪುರಾಣಿಕ್, ಆಯೋಜನೆ: ಕಲಾಪ್ರೇಮಿ ಫೌಂಡೇಷನ್, ಸ್ಥಳ: ಸೇವಾ ಸದನ ಸಭಾಂಗಣ, ಮಲ್ಲೇಶ್ವರ, ಸಂಜೆ 6.45

ಬಾನ್ಸುರಿ ಸ್ವರ ಸಂಧ್ಯಾ ಇಂದು

ಬೆಂಗಳೂರು: ಕ್ಯಾನ್ಸರ್ ರೋಗಿಗಳ ಮಕ್ಕಳ ಶಿಕ್ಷಣಕ್ಕಾಗಿ ನೆರವು ನೀಡಲೆಂದು ಲಕ್ಷ್ಮೀಶ ಫೌಂಡೇಷನ್ ನಿಂದ ‘ಬಾನ್ಸುರಿ ಸ್ವರ ಸಂಧ್ಯಾ’ ಸಂಗೀತ ಕಾರ್ಯಕ್ರಮವನ್ನು ಗಾಯನ ಸಮಾಜದಲ್ಲಿ ಭಾನುವಾರ ಸಂಜೆ 4ಕ್ಕೆ ಹಮ್ಮಿಕೊಳ್ಳಲಾಗಿದೆ. ಕೊಳಲು ವಾದಕ ಪ್ರವೀಣ್ ಗೋಡ್ಖಿಂಡಿ, ಕೃಷ್ಣ ಫ್ಯೂಷನ್ ತಂಡವು ಸಂಗೀತ ಪ್ರಸ್ತುತ ಪಡಿಸಲಿದೆ. ನ್ಯಾ. ಎನ್. ಸಂತೋಷ್ ಹೆಗ್ಡೆ, ಡಾ. ಸುನಂದಾ ಆರ್. ಕುಲಕರ್ಣಿ, ಪತ್ರಕರ್ತ ಮುಂಜಾನೆ ಸತ್ಯ, ಸಿಹಿಕಹಿ ಚಂದ್ರು ಭಾಗವಹಿಸಲಿದ್ದಾರೆ.

PUBLIC NOTICE

Our client intends to purchase all that FAR Credit of built up area in the form of Transferable Development Right (**"TDR"**) issued by the Bruhat Bengaluru Mahanagara Palike and revalidated by the Bangalore Development Authority under Development Right Certificate bearing No. 002127 in Ledger/Folio No. 66 measuring 5312.56 square metres at Zone C, Ring III (**"DRC"**) from its present owner, Mr.Harshad J. Parikh, son of Jasvantlal C. Parikh (Partner of Enterprise Infrastructures), having office address at No.31, Kempapura, Hebbal, Bangalore - 560024.

Any person or persons asserting any right, title, interest or claim by way of inheritance, share, sale, mortgage, transfer, lease, tenancy, lien, charge, trust, maintenance, easement, gift, devise, bequest, exchange, pre-emption, possession or encumbrance or otherwise in the Schedule Property or any part thereof or having any kind of claims thereon or having any kind of claim against the documents of title or objecting to such sale by the Owner in favour of our clients, should write to the undersigned within **seven days** from the date of issuance of this notice with all documentary proof on which they are basing and asserting their rights with regard to the Schedule Property or any part thereof, after which period our client shall proceed on the basis that there are no claims of whatsoever nature with regard to the Schedule Property.

SCHEDULE

All that FAR Credit of builtup area in the form of TDR measuring 5312.56 square metres issued by the Bruhat Bengaluru Mahanagara Palike and revalidated by the Bangalore Development Authority under DRC bearing No. 002127 in Ledger/Folio No. 66 issued in lieu of 3541.71 square metres, being the area relinquished to the BBMP from and out of the land bearing Survey No. 19, situated at Kyalasanahalli village, Krishnaraja puram Hobli, Bangalore East Taluk.

R. SUNITHA, Advocate
INDUSLAW
#101, 1st Floor, Embassy Classic, #11, Vittal Mallya Road, Bangalore-560001.
Phone: 080-40726600.

On the Occasion of Dasara Presenting
New Crafts ಸಿಲ್ಕ್ ಇಂಡಿಯಾ
Silk India®
2023
Exhibition & Sale
An opulent show of Ethnic & Traditional Silk, Cotton Handloom Products made by master 100 Weavers from all over India
Silk Saree | Suits | Dress Material | Stoles | Dupattas | Kurtas
Kurties | Pure & Probable Silk | Tussar Silk | Shanthipur Silk
SINDOOR CONVENTION CENTER
15th Cross, Sarakki, 1st Phase, J.P. Nagar Ring Road, Bengaluru
From : 06th to 15th Oct. 2023
Full A/c
Products on Display - Orissa : Sambhalpuri Ikkat Silk Saree, Bihar : Oragnic Tassar Silk Sarees, Suit & Stoles, Assam : Muga & Eri Silk Sarees, Karnataka : Creap Silk, Georgette Silk, Arini Silk & Printed Sarees, Tamilnadu : Kanjeevaram Silk Sarees & Designer Fancy Sarees, Andra Pradesh : Dharmavara, Uppada, Gadwal, Mangalagiri & Pochampalli Sarees, Uttar Pradesh : Mulbari Silk, Jamdani, Jamawar Silk Sarees & Chiffon Silk, Maharashtra : Designer Dress materials, Chhatisgarh : Exclusive Raw Silk Sarees, Kosa Silk, Tassar Suit & Duppatta, Madhya Pradesh : Maheswari, Chanderi Silk Sarees & Suit, West Bengal : Baluchari, Dhaka Masli, Gicha Sarees, Boutique Sarees, Kantha Sarees, Zordoshi, Jammu & Kashmir : Chinon Silk, Tady Silk Printed Sarees, Pashmina Shawls & Suit, Rajasthan : Kota Silk, Hand Block Print Dress & Sarees, Punjab : Fulkari Dress and many more...
8 Days Only
Don't miss it

Time : 10.30 am - 8.30 pm Call: 08850902824 Entry & Parking Free
All Credit & Debit Cards Accepted

ಗಾಜಾ ಪಟ್ಟಿಯ ಖಾನ್ ಯೂನಿಸ್ ನಗರದ ಬಳಿ ಇಸ್ರೇಲ್‌ನ ಟ್ಯಾಂಕರ್‌ಅನ್ನು ಶನಿವಾರ ಧ್ವಂಸಗೊಳಿಸಿ ಪ್ಯಾಲೆಸ್ಟೀನಿಯನ್ನರು ಸಂಭ್ರಮಿಸಿದರು (1) ಹಮಾಸ್ ಬಂಡುಕೋರರು ಇಸ್ರೇಲ್‌ನ ಆಶ್ಕೆಲಾನ್ ನಗರದ ಮೇಲೆ ರಾಕೆಟ್ ದಾಳಿ ನಡೆಸಿದ ಕಾರಣ ಹೊತ್ತಿ ಉರಿದ ಕಾರುಗಳು (2) ರಾಕೆಟ್ ದಾಳಿಗೆ ಒಳಗಾದ ಆಸ್ಕೆಲಾನ್ ನಗರದ ಸ್ಥಳವೊಂದರಿಂದ ಮಹಿಳೆ ಮತ್ತು ಮಗುವನ್ನು ಪೊಲೀಸರು ರಕ್ಷಿಸಿದರು –ಎಎಫ್‌ಪಿ/ಎಪಿ/ ಪಿಟಿಐ ಚಿತ್ರಗಳು

ಯೆಹೂದಿಗಳ 'ಯಾಮ್ ಕಿಪ್ಪುರ್' ಹಬ್ಬದಂದೇ ಭೀಕರ ದಾಳಿ • ಭಯಭೀತರಾಗಿ ಬಂಕರ್‌ಗಳಲ್ಲಿ ಅವಿತು ಕುಳಿತ ನಿವಾಸಿಗಳು

ಪ್ಯಾರಾಗ್ಲೈಡರ್‌ನಲ್ಲಿ ನುಗ್ಗಿದ ಬಂಡುಕೋರರು

ಜೆರುಸಲೇಂ (ಎಎಫ್‌ಪಿ): ಉಕ್ರೇನ್ – ರಷ್ಯಾ ಯುದ್ಧ ಆರಂಭಗೊಂಡು ಒಂದೂವರೆ ವರ್ಷವಾದರೂ ನಿಲ್ಲುವ ಸೂಚನೆ ಕಂಡಿಲ್ಲ. ಆಗಲೇ ಪ್ಯಾಲೆಸ್ಟೀನ್ ಬಂಡುಕೋರರ ಗುಂಪು ಹಮಾಸ್, ಶನಿವಾರ ಇಸ್ರೇಲ್ ಮೇಲೆ ದೊಡ್ಡ ಪ್ರಮಾಣದಲ್ಲಿ ದಾಳಿ ನಡೆಸುವ ಮೂಲಕ ಮತ್ತೊಂದು ಯುದ್ಧದ ಭೀತಿಗೆ ಕಾರಣವಾಗಿದೆ.

ಇಸ್ರೇಲ್ ಪಡೆಗಳು ಮತ್ತು ಪಾಲೆಸ್ಟೀನಿಯನ್ನರ ನಡುವೆ ವೆಸ್ಟ್ ಬ್ಯಾಂಕ್, ಗಾಜಾ ಬಳಿ ಕೆಲವು ಪ್ರದೇಶಗಳಲ್ಲಿ ಮತ್ತು ಜೆರುಸಲೇಂನ ವಿವಾದಿತ ಪವಿತ್ರ ಸ್ಥಳದಲ್ಲಿ ತಿಂಗಳುಗಳಿಂದ ಸಂಘರ್ಷ ನಡೆಯುತ್ತಲೇ ಇತ್ತು. ಈಗ ಅದು ಉಲ್ಬಣಗೊಂಡಿದೆ.

ಯೆಹೂದಿಗಳ 'ಯಾಮ್ ಕಿಪ್ಪುರ್' ಹಬ್ಬದ ದಿನವಾದ ಅ. 7ರಂದು 50 ವರ್ಷಗಳ ಹಿಂದೆಯೂ ಇದೇ ರೀತಿ ದಾಳಿ ನಡೆದಿತ್ತು.

'ಶತ್ರುಗಳನ್ನು ಹಿಮ್ಮೆಟ್ಟಿಸುತ್ತೇವೆ. ಅವರು ಹಿಂದೆಂದೂ ಕಂಡರಿಯದ ಪರಿಣಾಮ ಎದುರಿಸಬೇಕಾಗುತ್ತದೆ' ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ರಾಷ್ಟ್ರವನ್ನು ಉದ್ದೇಶಿಸಿ ಟೆಲಿವಿಷನ್ ಮೂಲಕ ಮಾಡಿದ ಭಾಷಣದಲ್ಲಿ ವಿವರಿಸಿದ್ದಾರೆ.

'ಇಸ್ರೇಲ್ ಪ್ರಜೆಗಳು ಇಸ್ರೇಲ್ ರಕ್ಷಣಾ ಪಡೆ (ಐಡಿಎಫ್) ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು' ಎಂದೂ ಹೇಳಿದ್ದಾರೆ. ಹಮಾಸ್ ಬಂಡುಕೋರರು ವಾಹನಗಳು, ದೋಣಿಗಳು ಮತ್ತು ಪ್ಯಾರಾಗ್ಲೈಡರ್ಸ್‌ಗಳನ್ನು ಬಳಸಿ ಗಾಜಾ ಬಳಿಯ ಭದ್ರತೆಯನ್ನು ಭೇದಿಸಿದ್ದಾರೆ. ಬಳಿಕ ಸಮೀಪದ ಇಸ್ರೇಲ್ ಪಟ್ಟಣಗಳಲ್ಲಿ ದಾಳಿ ಮಾಡಿದ್ದಾರೆ. ಗುಂಡಿನ ದಾಳಿಗೆ ಹೆದರಿ ನಿವಾಸಿಗಳು ಬಂಕರ್‌ಗಳಲ್ಲಿ ಅವಿತಿದ್ದಾರೆ. ದಾರಿಯುದ್ಧಕ್ಕೂ ಮೃತದೇಹಗಳು ಬಿದ್ದಿವೆ.

'ನೆರವು ನೀಡಿ, ದಯವಿಟ್ಟು, ಎಂದು 2 ವರ್ಷದ ಮಗುವನ್ನು ಎತ್ತುಕೊಂಡಿದ್ದ ಮಹಿಳೆಯೊಬ್ಬರು ಮನೆಯ ಹೊರಗಿದ್ದ ಬಂಡುಕೋರರಿಗೇ ಮನವಿ ಮಾಡಿದರು' ಎಂದು ಇಸ್ರೇಲ್ ಮಾಧ್ಯಮ ವರದಿ ಮಾಡಿದೆ.

ಗಾಜಾ ಪಟ್ಟಿ ಬಳಿಯ ಹಲವು ಸ್ಥಳಗಳಲ್ಲಿ ಸೇನಾಪಡೆಯು ಬಂಡುಕೋರರ ವಿರುದ್ಧ ಹೋರಾಡುತ್ತಿದ್ದು ಕಾರ್ಯಾಚರಣೆಗೆ 'ಸೋರ್ಡ್ ಆಫ್ ಐರನ್' ಎಂದು ಹೆಸರಿಸಿದೆ ಎಂದು ಇಸ್ರೇಲ್ ಅಧಿಕಾರಿ ಹೇಳಿದ್ದಾರೆ.

ವಿಡಿಯೊ ಬಿಡುಗಡೆ: ಹಮಾಸ್ ಬಂಡುಕೋರರು ವಿಡಿಯೊ ಬಿಡುಗಡೆ ಮಾಡಿದ್ದು, ಅದರಲ್ಲಿ ಮೂವರು ವ್ಯಕ್ತಿಗಳನ್ನು ಬಂಡುಕೋರರು ಹಿಡಿದುಕೊಂಡಿರುವ ದೃಶ್ಯವಿದೆ. 'ವೈರಿಗಳ ಸೈನಿಕರು' ಎಂಬ ಅಡಿಬರಹವೂ ಇದೆ.

ಕನಿಷ್ಠ ಏಳು ಕಡೆ ಬಂಡುಕೋರರು ನುಸುಳಿದ್ದು ಅವರೊಂದಿಗೆ ಸೇನಾಪಡೆ ಘರ್ಷಣೆಗಿಳಿದಿದೆ ಎಂದು ರಕ್ಷಣಾ ಪಡೆ ವಕ್ತಾರ ಡೇನಿಯಲ್ ಹಗರಿ ಹೇಳಿದ್ದಾರೆ.

'ಅಲ್ ಅಕ್ಸಾ ಮಸೀದಿ ವಿರುದ್ಧ ಆಕ್ರಮಣ ಮುಂದುವರಿಸದಂತೆ ವೈರಿಗಳಿಗೆ ಎಚ್ಚರಿಸಿದ್ದೆವು. ಇಸ್ರೇಲ್ ವಿರುದ್ಧ ಹಮಾಸ್ ಬಂಡುಕೋರರು ಕೈಗೊಂಡ ಮರು ಕಾರ್ಯಾಚರಣೆಯ ಮೊದಲ ಹಂತ ಮಾತ್ರ ಇದು' ಎಂದು ಹಮಾಸ್ ಮಿಲಿಟರಿ ಘಟಕದ ಮುಖ್ಯಸ್ಥ ಮೊಹಮ್ಮದ್ ದೈಫ್ ಹೇಳಿದ್ದಾನೆ.

ಗಾಜಾ ಪಟ್ಟಿ ಬಳಿಯ ನಗರಗಳ ನಿವಾಸಿಗಳು ಮನೆಯಿಂದ ಹೊರಬರಬಾರದು, ಇತರ ಜನರು ಬಾಂಬ್ ಶೆಲ್ಟರ್‌ಗಳ ಬಳಿಯೇ ಉಳಿದುಕೊಳ್ಳಬೇಕು ಎಂದು ಇಸ್ರೇಲ್ ಸೇನಾಪಡೆ ಸೂಚನೆ ನೀಡಿದೆ.



ಗಾಜಾ ಪಟ್ಟಿಯಲ್ಲಿ ಇಸ್ರೇಲ್ ನಡೆಸಿದ ವಾಯುದಾಳಿಯಿಂದಾಗಿ ಬಹು ಅಂತಸ್ತಿನ ಕಟ್ಟಡದಲ್ಲಿ ಬೆಂಕಿ ಹೊತ್ತಿಕೊಂಡಿತ್ತು –ಎಎಫ್‌ಪಿ ಚಿತ್ರ

ಜಾಗರೂಕರಾಗಿರಲು ಭಾರತೀಯರಿಗೆ ಸಲಹೆ

ಟೆಲ್ ಅವೀವ್ (ಪಿಟಿಐ): ಯುದ್ಧ ಪರಿಸ್ಥಿತಿ ನಿರ್ಮಾಣವಾಗಿರುವ ಕಾರಣ ಇಸ್ರೇಲ್‌ನಲ್ಲಿನ ಭಾರತೀಯ ಪ್ರಜೆಗಳು ಹಾಗೂ ಆ ದೇಶಕ್ಕೆ ಪ್ರಯಾಣಿಸುವವರು ಹೆಚ್ಚು ಜಾಗರೂಕರಾಗಿ ಇರುವಂತೆ ಭಾರತೀಯ ರಾಯಭಾರ ಕಚೇರಿ ಶನಿವಾರ ಸಲಹೆ ನೀಡಿದೆ.

'ಪ್ರಸ್ತುತ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು, ಎಲ್ಲಾ ಭಾರತೀಯ ಪ್ರಜೆಗಳು ಜಾಗ್ರತೆ ವಹಿಸಲು ಮತ್ತು ಸ್ಥಳೀಯ ಅಧಿಕಾರಿಗಳ ಸಲಹೆಯಂತೆ ಸುರಕ್ಷತಾ ಕ್ರಮಗಳನ್ನು ಅನುಸರಿಸಲು ಮನವಿ ಮಾಡಲಾಗಿದೆ. ಅನಗತ್ಯ ಪ್ರಯಾಣ ತಪ್ಪಿಸಿ, ಸುರಕ್ಷಿತ ಸ್ಥಳಗಳಲ್ಲಿ ಇರಬೇಕು' ಎಂದು ತಿಳಿಸಿದೆ.

> **'ದಾಳಿ ಸುದ್ದಿಯಿಂದ ಆಘಾತವಾಗಿದೆ. ಸಂಕಷ್ಟದ ಸಮಯದಲ್ಲಿ ನಾವು ಇಸ್ರೇಲ್ ಜತೆ ನಿಲ್ಲುತ್ತೇವೆ**
> **ನರೇಂದ್ರ ಮೋದಿ,** ಭಾರತದ ಪ್ರಧಾನಿ

ಇಂಗ್ಲಿಷ್, ಹಿಂದಿ, ಮರಾಠಿ, ತಮಿಳು, ತೆಲುಗು, ಮಲಯಾಳ ಮತ್ತು ಕನ್ನಡ ಭಾಷೆಗಳಲ್ಲಿ ಈ ಸಲಹೆ ನೀಡಲಾಗಿದೆ. ತುರ್ತು ಸಂದರ್ಭಗಳಲ್ಲಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳನ್ನು ಸಹ ನೀಡಿದೆ.

ಭಾರತೀಯ ರಾಯಭಾರ ಕಚೇರಿಯ ವೆಬ್‌ಸೈಟ್ ವಿವರಗಳ ಪ್ರಕಾರ, ಇಸ್ರೇಲ್‌ನಲ್ಲಿ ಸುಮಾರು 18,000 ಭಾರತೀಯ ನಾಗರಿಕರಿದ್ದಾರೆ. ವಜ್ರ ವ್ಯಾಪಾರಿಗಳು, ಐ.ಟಿ ವೃತ್ತಿಪರರು ಮತ್ತು ವಿದ್ಯಾರ್ಥಿಗಳು ಇದ್ದಾರೆ.

ದಾಳಿಗೆ ಆಘಾತ, ವ್ಯಾಪಕ ಖಂಡನೆ

ಪ್ಯಾರಿಸ್ (ಎಎಫ್‌ಪಿ): ಇಸ್ರೇಲ್ ಮೇಲೆ ಪ್ಯಾಲೆಸ್ಟೀನ್ ಹಮಾಸ್ ಬಂಡು ಕೋರರು ಶನಿವಾರ ನಡೆಸಿದ ದಾಳಿಯನ್ನು ಹಲವು ದೇಶಗಳು ಖಂಡಿಸಿವೆ.

> **ಹಿಂಸಾಚಾರವನ್ನು ತಕ್ಷಣ ನಿಲ್ಲಿಸಬೇಕು. ನಾಗರಿಕರ ಸಾವು–ನೋವು ತಪ್ಪಿಸಲು ಕ್ರಮ ಕೈಗೊಳ್ಳಬೇಕು.**
> **ವೋಲ್ಕರ್ ಟರ್ಕ್,** ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಹೈಕಮಿಷನರ್

'ತಕ್ಷಣ ಹಿಂಸಾಚಾರ ನಿಲ್ಲಿಸಿ, ಶಾಂತಿ ಸ್ಥಾಪನೆಗೆ ಮುಂದಾಗಬೇಕು ಹಾಗೂ ಒತ್ತೆಯಾಳುಗಳನ್ನು ಕೂಡಲೇ ಬಿಡುಗಡೆ ಮಾಡಬೇಕು' ಎಂದು ಅಮೆರಿಕ, ರಷ್ಯಾ, ಬ್ರಿಟನ್, ಜರ್ಮನಿ, ಸ್ಪೇನ್, ಉಕ್ರೇನ್, ಟರ್ಕಿ ಸೇರಿದಂತೆ ಹಲವು ದೇಶಗಳು ಆಗ್ರಹಿಸಿವೆ. ಆದರೆ, ಇರಾನ್ ಮಾತ್ರ ಹಮಾಸ್ ಬಂಡುಕೋರರಿಗೆ ಬೆಂಬಲ ವ್ಯಕ್ತಪಡಿಸಿದೆ. 'ಹಮಾಸ್ ಬಂಡುಕೋರರು ನಡೆಸಿದ ಅಪ್ರಚೋದಿತ ದಾಳಿಯನ್ನು ಖಂಡಿಸಲಾಗುವುದು. ಇಸ್ರೇಲ್ ಸರ್ಕಾರ ಮತ್ತು ಜನರೊಂದಿಗೆ ದೃಢವಾಗಿ ನಿಲ್ಲುತ್ತೇವೆ' ಎಂದು ಶ್ವೇತಭವನದ ಹೇಳಿಕೆ ತಿಳಿಸಿದೆ.

ಇರಾನ್‌ನ ಸರ್ವೋಚ್ಚ ನಾಯಕ ಅಯಾತ್ ಉಲ್ಲಾ ಖೊಮೇನಿ ಅವರ ಹಿರಿಯ ಸಲಹೆಗಾರ ಯಾಹ್ಯಾ ರಹೀಮ್ ಸಫಾವಿ ಅವರು ದಾಳಿಯನ್ನು ಬೆಂಬಲಿಸಿದ್ದಾರೆ. 'ಪ್ಯಾಲೆಸ್ಟೀನ್ ಮತ್ತು ಜೆರುಸಲೇಂ ವಿಮೋಚನೆ ಆಗುವವರೆಗೂ ಬಂಡುಕೋರರಿಗೆ ಬೆಂಬಲ ವ್ಯಕ್ತಪಡಿಸಲಾಗುವುದು' ಎಂದು ಸಫಾವಿ ಐಎಸ್‌ಎನ್‌ಎ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ. 'ಇಸ್ರೇಲ್–ಪ್ಯಾಲೆಸ್ಟೀನ್ ತಕ್ಷಣ ಕದನ ವಿರಾಮ ಘೋಷಿಸಬೇಕು' ಎಂದು ರಷ್ಯಾ ಆಗ್ರಹಿಸಿದೆ.

ಈ ಹಿಂದೆ ನಡೆದ ದಾಳಿಗಳು

ಪ್ಯಾರಿಸ್ (ಎಎಫ್‌ಪಿ): ಗಾಜಾದ ಕರಾವಳಿ ಪ್ರದೇಶದಲ್ಲಿ ನೆಲೆನಿಂತಿದ್ದ ತನ್ನ ಸೇನೆ ಮತ್ತು ನಾಗರಿಕರನ್ನು ಇಸ್ರೇಲ್ 2005ರಲ್ಲಿ ಹಿಂಪಡೆದ ಬಳಿಕ, ಗಾಜಾಪಟ್ಟಿಯಲ್ಲಿ ಇಸ್ರೇಲ್ ಮತ್ತು ಹಮಾಸ್ ನಡುವೆ ಈಗಾಗಲೇ ನಾಲ್ಕು ಬಾರಿ ಯುದ್ಧ ನಡೆದಿದೆ. ವಿವರ ಹೀಗಿದೆ;

- 2008, ಡಿ 27: ಗಾಜಾದಲ್ಲಿನ ಪ್ಯಾಲೆಸ್ಟೀನಿ ಬಂಡುಕೋರರ ವಿರುದ್ಧ ಇಸ್ರೇಲ್ ವಾಯುದಾಳಿ ಆರಂಭಿಸಿತು. ಅದನ್ನು 'ಆಪರೇಷನ್ ಕ್ಯಾಸ್ಟ್ ಲೀಡ್' ಎಂದು ಕರೆಯಿತು. ಇಸ್ರೇಲ್ ಮೇಲೆ ಪ್ಯಾಲೆಸ್ಟೀನಿ ಬಂಡುಕೋರರು ರಾಕೆಟ್ ದಾಳಿ ನಡೆಸುತ್ತಿದ್ದಾರೆ. ಅದಕ್ಕೆ ಪ್ರತಿಯಾಗಿ ಈ ಕಾರ್ಯಾಚರಣೆ ನಡೆಸುತ್ತಿದ್ದೇವೆ ಎಂದು ಇಸ್ರೇಲ್ ಹೇಳಿಕೊಂಡಿತ್ತು. 2009ರ ಜನವರಿ 18ರಂದು ಕದನವಿರಾಮ ಘೋಷಿಸಿದ ವೇಳೆ 1,400 ಪ್ಯಾಲೆಸ್ಟೀನಿಯನ್ನರು ಮತ್ತು 13 ಇಸ್ರೇಲಿಯನ್ನರು ಮೃತಪಟ್ಟಿದ್ದರು.
- 2012, ನವೆಂಬರ್ 12: 'ಆಪರೇಷನ್ ಪಿಲ್ಲರ್ ಆಫ್ ಡಿಫೆನ್ಸ್' ಹೆಸರಿನಲ್ಲಿ ಗಾಜಾ ಪಟ್ಟಿಯಲ್ಲಿ ಇಸ್ರೇಲ್ ಯುದ್ಧ ನಡೆಸಿತು. ಈ ವೇಳೆ ಹಮಾಸ್‌ನ ಉನ್ನತ ಮಟ್ಟದ ಕಮಾಂಡರ್ ಅಹ್ಮದ್ ಜಾಬರಿ ಮೃತಪಟ್ಟಿದ್ದರು. ಎಂಟು ದಿನಗಳು ನಡೆದ ಈ ಸಂಘರ್ಷದಲ್ಲಿ 177 ಪ್ಯಾಲೆಸ್ಟೀನಿಯನ್ನರು ಮತ್ತು ಆರು ಮಂದಿ ಇಸ್ರೇಲಿಯನ್ನರು ಮೃತಪಟ್ಟಿದ್ದರು.
- 2014, ಜುಲೈ 2014: 'ಆಪರೇಷನ್ ಪ್ರೊಟೆಕ್ಟೀವ್ ಎಡ್ಜ್' ಹೆಸರಿನಲ್ಲಿ ಗಾಜಾ ಮೇಲೆ ಇಸ್ರೇಲ್ ದಾಳಿ ನಡೆಸಿತು. ಪ್ಯಾಲೆಸ್ಟೀನಿ ಬಂಡುಕೋರರ ದಾಳಿಯನ್ನು ತಡೆಯುವ ನಿಟ್ಟಿನಲ್ಲಿ ಈ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಆಗಲೂ ಇಸ್ರೇಲ್ ಹೇಳಿಕೊಂಡಿತ್ತು. ಏಳು ವಾರಗಳು ನಡೆದ ಈ ಸಂಘರ್ಷವು 2,251 ಪ್ಯಾಲೆಸ್ಟೀನಿಯನ್ನರನ್ನು ಮತ್ತು 68 ಸೈನಿಕರೂ ಸೇರಿ 74 ಇಸ್ರೇಲಿಯನ್ನರನ್ನು ಬಲಿಪಡೆದಿತ್ತು.
- 2021, ಮೇ 10: 11 ದಿನಗಳು ನಡೆದ ಯುದ್ಧದಲ್ಲಿ 66 ಮಕ್ಕಳು ಸೇರಿ ಗಾಜಾದ 248 ಮಂದಿ, ಇಸ್ರೇಲ್‌ನ 13 ಮಂದಿ ಮೃತಪಟ್ಟಿದ್ದರು.

ಹಮಾಸ್ ಬಂಡುಕೋರರ ಹಿನ್ನೆಲೆ

ಜೆರುಸಲೇಂ (ರಾಯಿಟರ್ಸ್ ವರದಿ): ಪ್ಯಾಲೆಸ್ಟೀನ್‌ನ ಸುನ್ನಿ ಇಸ್ಲಾಮಿಕ್ ಮೂಲಭೂತವಾದಿ ಬಂಡುಕೋರರ ಸಂಘಟನೆಯಾದ 'ಹಮಾಸ್'ಅನ್ನು (ಇಸ್ಲಾಮಿಕ್ ಪ್ರತಿರೋಧ ಚಳುವಳಿ) 1987ರಲ್ಲಿ ನಡೆದ ಪ್ರಥಮ ಪ್ಯಾಲೆಸ್ಟೀನಿಯನ್ನರ ದಂಗೆ ವೇಳೆ ಸ್ಥಾಪಿಸಲಾಯಿತು.

1920ರಲ್ಲಿ ಈಜಿಪ್ಟ್‌ನಲ್ಲಿ ಸ್ಥಾಪನೆಯಾದ ಸುನ್ನಿ ಇಸ್ಲಾಂ ಸಂಘಟನೆ 'ಮುಸ್ಲಿಂ ಬ್ರದರ್‌ವುಡ್'ನ ಸಿದ್ಧಾಂತಗಳನ್ನು ಹಮಾಸ್ ಬಂಡುಕೋರರು ಅಳವಡಿಸಿಕೊಂಡಿದ್ದಾರೆ. 2006ರ ಪ್ಯಾಲೆಸ್ಟೀನ್ ಸಂಸತ್ತಿನ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದ ಹಮಾಸ್, ಗಾಜಾವನ್ನು ವಶಕ್ಕೆ ಪಡೆಯಿತು. 2007ರ ಗಾಜಾ ಕದನದ (ಪ್ಯಾಲೆಸ್ಟೀನ್ ಅಧ್ಯಕ್ಷ ಮೊಹಮ್ಮದ್ ಅಬ್ಬಾಸ್ ನೇತೃತ್ವದ ಪಡೆ ಮತ್ತು ಹಮಾಸ್ ನಡುವಿನ ಕದನ) ಬಳಿಕ ಗಾಜಾ ಪಟ್ಟಿಯಲ್ಲಿ ಹಮಾಸ್ ಅಧಿಕಾರ ಸ್ಥಾಪಿಸಿತು.

ಅಲ್ಲಿಂದ ಈಚೆಗೆ ಇಸ್ರೇಲ್ ಮತ್ತು ಹಮಾಸ್ ನಡುವೆ ಹಲವಾರು ಬಾರಿ ಸಂಘರ್ಷಗಳು ನಡೆದಿವೆ.

'ಇಝ್ಝುದಿನ್ ಅಲ್‌ಖಸ್ಸಾಂ ಬ್ರಿಗೇಡ್' ಎಂಬ ಹೆಸರಿನ ಸಶಸ್ತ್ರ ಪಡೆಯನ್ನು ಹಮಾಸ್ ಹೊಂದಿದೆ. ತನ್ನ ಪಡೆಯ ಸದಸ್ಯರನ್ನು ಇಸ್ರೇಲ್‌ಗೆ ಕಳಿಸಿ ಬಂದೂಕು ದಾಳಿ ಮತ್ತು ಆತ್ಮಾಹುತಿ ದಾಳಿಗಳನ್ನು ಹಮಾಸ್ ಹಲವಾರು ಬಾರಿ ನಡೆಸಿದೆ. ಇಸ್ರೇಲ್, ಅಮೆರಿಕ, ಯುರೋಪ್ ಒಕ್ಕೂಟ, ಕೆನಡಾ ಮತ್ತು ಜಪಾನ್ ದೇಶಗಳು 'ಹಮಾಸ್'ಅನ್ನು ಭಯೋತ್ಪಾದಕ ಸಂಘಟನೆ ಎಂದು ಘೋಷಿಸಿವೆ.

ಮಹಿಳೆ ವಿರುದ್ಧದ ಅಪರಾಧ ಪ್ರಕರಣಗಳ ವಿಚಾರಣೆ ಪ್ರಸ್ತಾಪಿಸಿದ ಸುಪ್ರೀಂ ಕೋರ್ಟ್

'ಕೋರ್ಟ್‌ಗಳಿಗೆ ಸಂವೇದನಾಶೀಲತೆ ಅಗತ್ಯ'

ನವದೆಹಲಿ(ಪಿಟಿಐ): ಮಹಿಳೆಯರ ವಿರುದ್ಧದ ಅಪರಾಧ ಕೃತ್ಯಗಳನ್ನು ಒಳಗೊಂಡ ಪ್ರಕರಣಗಳ ವಿಚಾರಣೆ ವೇಳೆ ನ್ಯಾಯಾಲಯಗಳು ಸಂವೇದನಾಶೀಲವಾಗಿರಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಕಾರ್ಯವಿಧಾನ, ಕಾಟಾಚಾರದ ತನಿಖೆ ಅಥವಾ ಸಾಕ್ಷ್ಯಗಳಲ್ಲಿ ಮಹತ್ವವೆನಿಸದ ದೋಷಗಳಿವೆ ಎಂಬ ಕಾರಣಗಳಿಂದಾಗಿ ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ನ್ಯಾಯಾಲಯಗಳು ಅವಕಾಶ ನೀಡುವುದಿಲ್ಲ ಎಂಬ ನಿರೀಕ್ಷೆ ಇರುತ್ತದೆ. ಇಲ್ಲದೇ ಹೋದರೆ, ಅಪರಾಧಿಗೆ ಶಿಕ್ಷೆಯಾಗುವುದಿಲ್ಲ. ಇದರಿಂದ ಸಂತ್ರಸ್ತರು ಆತ್ಮವಿಶ್ವಾಸ ಕಳೆದುಕೊಳ್ಳುವಂತಾಗುತ್ತದೆ ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಪಿ.ಕೆ ಮಿಶ್ರಾ ಅವರಿದ್ದ ಪೀಠವು ತೀರ್ಪು ನೀಡಿದೆ.

ಉತ್ತರಾಖಂಡದ ಬಲವೀರ್ ಸಿಂಗ್ ಪತ್ನಿ ಶಂಕಾಸ್ಪದವಾಗಿ ಮೃತಪಟ್ಟಿದ್ದರು. ವಿಷಪ್ರಾಶನದಿಂದಾಗಿ ಆಕೆ ಮೃತಪಟ್ಟಿದ್ದಳು ಎಂಬುದು ತನಿಖೆಯಿಂದ ಕಂಡು ಬಂದಿದ್ದರಿಂದ ವಿಚಾರಣಾ ಕೋರ್ಟ್ ಬಲವೀರ್ ಸಿಂಗ್, ಆತನ ತಾಯಿಗೆ ಶಿಕ್ಷೆ ವಿಧಿಸಿ ಆದೇಶಿಸಿತ್ತು. ವಿಚಾರಣಾ ಕೋರ್ಟ್ ಆದೇಶವನ್ನು ಎತ್ತಿ ಹಿಡಿದು, ಉತ್ತರಾಖಂಡ ಹೈಕೋರ್ಟ್ 2014ರಲ್ಲಿ ಆದೇಶಿಸಿತ್ತು. ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಬಲವೀರ್‌ಸಿಂಗ್ ಹಾಗೂ ಆತನ ತಾಯಿ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಪೀಠ ವಜಾಗೊಳಿಸಿದೆ.

ಕೋರ್ಟ್ ಸುದ್ದಿಗಳು

ಕೊಲಿಜಿಯಂ ಶಿಫಾರಸು ವಿಳಂಬ: ನಾಳೆ ವಿಚಾರಣೆ

ನ್ಯಾಯಮೂರ್ತಿಗಳ ನೇಮಕ ಹಾಗೂ ವರ್ಗಾವಣೆಗೆ ಸಂಬಂಧಿಸಿ ಕೊಲಿಜಿಯಂ ಮಾಡಿರುವ ಶಿಫಾರಸುಗಳ ಅನುಷ್ಠಾನ ಸಂಬಂಧ ಕೇಂದ್ರ ಸರ್ಕಾರವು ತಳೆದಿರುವ ವಿಳಂಬ ಧೋರಣೆ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಅಕ್ಟೋಬರ್ 9ರಂದು ನಡೆಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕಿಷನ್ ಕೌಲ್ ಹಾಗೂ ಸುಧಾಂಶು ಧುಲಿಯಾ ಅವರಿದ್ದ ವಿಭಾಗೀಯ ನ್ಯಾಯಪೀಠವು, ಸೆಪ್ಟೆಂಬರ್ 26ರಂದು ನಡೆದ ವಿಚಾರಣೆ ವೇಳೆ ಕೇಂದ್ರದ ವಿಳಂಬ ನೀತಿ ಬಗ್ಗೆ ಕಳವಳ ವ್ಯಕ್ತಪಡಿಸಿತ್ತು. ಈ ಕುರಿತು ಒಂದು ವಾರದೊಳಗೆ ಪ್ರತಿಕ್ರಿಯೆ ಸಲ್ಲಿಸಲು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರಿಗೆ ಸೂಚಿಸಿತ್ತು. ಕೇಂದ್ರ ಸರ್ಕಾರಕ್ಕೆ ಕೊಲಿಜಿಯಂ ಒಟ್ಟು 80 ಶಿಫಾರಸುಗಳನ್ನು ಮಾಡಿತ್ತು. ಈ ಪೈಕಿ 10 ಶಿಫಾರಸುಗಳು ಅನುಷ್ಠಾನಗೊಂಡಿವೆ. 70 ಬಾಕಿ ಉಳಿದಿವೆ. ಮಣಿಪುರ ಹೈಕೋರ್ಟ್‌ಗೆ ಮುಖ್ಯ ನ್ಯಾಯಮೂರ್ತಿ ನೇಮಕದ ಶಿಫಾರಸು ಕೂಡ ಇದರಲ್ಲಿ ಒಂದಾಗಿದೆ.

ರಾಹುಲ್ ವಿರುದ್ಧ ಪೋಸ್ಟರ್: ಕೋರ್ಟ್ ಮೊರೆಹೋದ ಕಾಂಗ್ರೆಸ್

ಜೈಪುರ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು 'ನವಯುಗದ ರಾವಣ'ನಂತೆ ಚಿತ್ರಿಸಿದ ಪೋಸ್ಟರ್ ಹಂಚಿಕೊಂಡಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ಆ ಪಕ್ಷದ ಐ.ಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ವಿರುದ್ಧ ರಾಜಸ್ಥಾನದ ಕಾಂಗ್ರೆಸ್ ನಾಯಕರು ನ್ಯಾಯಾಲಯ ದಲ್ಲಿ ಮೊಕದ್ದಮೆ ದಾಖಲಿಸಿದ್ದಾರೆ.

ಐಪಿಸಿ ಸೆಕ್ಷನ್ 499 (ಇನ್ನೊಬ್ಬ ವ್ಯಕ್ತಿಯ ವಿರುದ್ಧ ಸುಳ್ಳು ಆರೋಪ), 500 (ಮಾನನಷ್ಟ), 504 (ಉದ್ದೇಶಪೂರ್ವಕ ಅವಮಾನ) ಅಡಿಯಲ್ಲಿ ಬಿಜೆಪಿಯ ಇಬ್ಬರೂ ನಾಯಕರ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ಕಾಂಗ್ರೆಸ್ ರಾಜಸ್ಥಾನ ಘಟಕದ ಪ್ರಧಾನ ಕಾರ್ಯದರ್ಶಿ ಜಸ್ವಂತ್ ಗುರ್ಜರ್ ಅವರು ಜೈಪುರದ ಮೆಟ್ರೊಪಾಲಿಟನ್ ಕೋರ್ಟ್–11ಗೆ ಅರ್ಜಿ ಸಲ್ಲಿಸಿದ್ದಾರೆ. ಈ ಅರ್ಜಿಯನ್ನು ಇದೇ 9ರಂದು ಆಲಿಸಲು ನ್ಯಾಯಾಲಯ ನಿರ್ಧರಿಸಿದೆ. ಬಿಜೆಪಿ ನಾಯಕರು ಉದ್ದೇಶಪೂರ್ವಕವಾಗಿ ರಾಹುಲ್ ಗಾಂಧಿ ಅವರನ್ನು ರಾಮ ವಿರೋಧಿ ಮತ್ತು ಧರ್ಮ ವಿರೋಧಿಯಾಗಿ ಬಿಂಬಿಸಿ ಅವರ ವಿರುದ್ಧ ಜನರನ್ನು ಪ್ರಚೋದಿಸುತ್ತಿದ್ದಾರೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

ಆಸ್ತಿ ಮೇಲೆ 'ಕರ್ತ'ನ ಅಧಿಕಾರ ಎತ್ತಿ ಹಿಡಿದ ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿಂದೂ ಅವಿಭಕ್ತ ಕುಟುಂಬದ ಹಿರಿಯ ಸದಸ್ಯನು ('ಕರ್ತ') ಕುಟುಂಬದ ಆಸ್ತಿಯನ್ನು ಮತ್ತೊಬ್ಬರಿಗೆ ಹಸ್ತಾಂತರಿಸುವ, ಮಾರಾಟ ಮಾಡುವ ಅಥವಾ ಅಡಮಾನ ಇಡುವ ಅಧಿಕಾರ ಹೊಂದಿದ್ದಾನೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಎಸ್.ವಿ.ಎನ್.ಭಟ್ಟಿ ಅವರಿದ್ದ ನ್ಯಾಯಪೀಠವು ಅರ್ಜಿಯೊಂದರ ವಿಚಾರಣೆ ವೇಳೆ ಈ ಮಾತು ಹೇಳಿದೆ. 'ಹಿಂದೂ ಅವಿಭಕ್ತ ಕುಟುಂಬವು ತನ್ನ ಆಸ್ತಿಯನ್ನು 'ಕರ್ತ' ಅಥವಾ ಅದರ ವಯಸ್ಕ ಸದಸ್ಯನ ಮೂಲಕ ನಿರ್ವಹಣೆ ಮಾಡುವ ಸಾಮರ್ಥ್ಯ ಹೊಂದಿದೆ' ಎಂದು ಹೇಳಿರುವ ನ್ಯಾಯಪೀಠ, 'ಆಸ್ತಿಯ ಮೇಲೆ ಕರ್ತನು ಹೊಂದಿರುವ ಹಕ್ಕಿನ ವಿಚಾರವನ್ನು ಈಗಾಗಲೇ ನಿರ್ಣಯಿಸಲಾಗಿದೆ' ಎಂದಿದೆ.

'ಹಿಂದೂ ಅವಿಭಕ್ತ ಕುಟುಂಬದ ಕರ್ತನಾದ ನನ್ನ ತಂದೆ, ಕುಟುಂಬದ ಆಸ್ತಿಯನ್ನು ಅಡಮಾನ ಇಟ್ಟಿದ್ದಾರೆ' ಎಂದು ದೂರಿ ಎನ್.ಎಸ್.ಬಾಲಾಜಿ ಎಂಬುವರು ಮದ್ರಾಸ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಮದ್ರಾಸ್ ಹೈಕೋರ್ಟ್, ಬಾಲಾಜಿ ಅವರ ಅರ್ಜಿಯನ್ನು ತಳ್ಳಿ ಹಾಕಿ ಜುಲೈ 31ರಂದು ತೀರ್ಪು ನೀಡಿತ್ತು. ಈ ತೀರ್ಪನ್ನು ಪ್ರಶ್ನಿಸಿ ಬಾಲಾಜಿ ಅವರು ರಜಾಕಾಲದ ವಿಶೇಷ ಮೇಲ್ಮನವಿ ಸಲ್ಲಿಸಿದ್ದರು. ಮದ್ರಾಸ್ ಹೈಕೋರ್ಟ್‌ನ ತೀರ್ಪಿನಲ್ಲಿ ಮಧ್ಯಪ್ರವೇಶಿಸುವುದಿಲ್ಲ ಎಂದ ನ್ಯಾಯಪೀಠ, ಬಾಲಾಜಿ ಅವರ ಮೇಲ್ಮನವಿಯನ್ನು ವಜಾಗೊಳಿಸಿದೆ.

140 ಜನರಿಗಾಗಿ ಶೋಧ ಮುಂದುವರಿಕೆ

ಪ್ರವಾಹದಲ್ಲಿ ಕೊಚ್ಚಿಹೋದ ಶಸ್ತಾಸ್ತ್ರ, ಸ್ಫೋಟಕ ವಸ್ತುಗಳು

ಗ್ಯಾಂಗ್ಟಕ್ (ಪಿಟಿಐ/ಎಎಫ್‌ಪಿ): ಉತ್ತರ ಸಿಕ್ಕಿಂನ ತೀಸ್ತಾ ನದಿ ಪ್ರವಾಹದಲ್ಲಿ ಮೃತಪಟ್ಟವರ ಸಂಖ್ಯೆ 56ಕ್ಕೆ ಏರಿದ್ದು, ನಾಪತ್ತೆಯಾದ 140 ಜನರಿಗಾಗಿ ಶೋಧ ಕಾರ್ಯಾಚರಣೆ ಇನ್ನೂ ಮುಂದುವರಿದಿದೆ.

ಲಾಚೆನ್, ಲಾಚುಂಗ್, ಮಂಗನ್ ಜಿಲ್ಲೆಯಲ್ಲಿ ಸಿಲುಕಿರುವ ಮೂರು ಸಾವಿರ ಪ್ರವಾಸಿಗರು ಸುರಕ್ಷಿತವಾಗಿದ್ದಾರೆ. ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಭಾರಿ ಮಳೆಯಾಗುತ್ತಿದೆ. ಹೆಲಿಕಾಪ್ಟರ್‌ಗಳ ಮೂಲಕ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆ ಕೈಗೊಳ್ಳಲು ಪ್ರಯತ್ನಿಸಲಾಯಿತು. ಆದರೆ, ಪ್ರತಿಕೂಲ ಹವಾಮಾನದಿಂದಾಗಿ ಸಾಧ್ಯವಾಗಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲಾಚೆನ್ ಮತ್ತು ಲಾಚುಂಗ್‌ಗೆ ಹೋಗುವ ರಸ್ತೆಗಳು ಹಾನಿಯಾಗಿವೆ. ಸಿಂಗ್‌ತಮ್, ಬರ್ದಂಗ್ ಮತ್ತು ರಂಗ್ಪೊ ಪ್ರದೇಶಗಳಲ್ಲಿ ಎನ್‌ಡಿಆರ್‌ಎಫ್ ತಂಡಗಳು ರಕ್ಷಣಾ ಕಾರ್ಯಾಚರಣೆಯಲ್ಲಿ ನಿರತವಾಗಿವೆ.

ಈವರೆಗೂ 56 ಮೃತದೇಹಗಳು ಪತ್ತೆಯಾಗಿವೆ. ರಕ್ಷಣಾ ಕಾರ್ಯಾಚರಣೆ ಇನ್ನೂ ಮುಂದುವರಿದಿದೆ. ಪಶ್ಚಿಮ ಬಂಗಾಳದಲ್ಲಿ ಶನಿವಾರ ಮತ್ತೊಬ್ಬ ಯೋಧನ ಶವ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಿಢೀರ್ ಪ್ರವಾಹದಲ್ಲಿ ಕೊಚ್ಚಿ ಹೋಗಿರುವ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳು/ಸ್ಫೋಟಕಗಳು ಜನರಿಗೆ ಅಪಾಯ ತಂದೊಡ್ಡಬಹುದು ಎಂಬ ಆತಂಕವನ್ನು ಸೇನೆ ವ್ಯಕ್ತಪಡಿಸಿದೆ. ಇವುಗಳನ್ನು ಪತ್ತೆ ಮಾಡಿ, ಮರು ವಶಪಡಿಸಿಕೊಳ್ಳಲು ಕೆಲ ತಂಡಗಳನ್ನು ರಚಿಸಲಾಗಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಪ್ರವಾಹ ಪೀಡಿತ ಸಿಕ್ಕಿಂನಲ್ಲಿ ಸಿಲುಕಿರುವ ಮೇಘಾಲಯದ 26 ವಿದ್ಯಾರ್ಥಿಗಳನ್ನು ಯಶಸ್ವಿಯಾಗಿ ಸ್ಥಳಾಂತರಿಸಲಾಗಿದ್ದು, ಅವರು ಶಿಲ್ಲಾಂಗ್‌ಗೆ ತೆರಳುತ್ತಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಿಕ್ಕಿಂ ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಾಂಗ್ ಶನಿವಾರ ಮಂಗನ್ ಜಿಲ್ಲೆಯ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಸೇನೆ ಮತ್ತು ಸ್ಥಳೀಯ ಆಡಳಿತ ನಡೆಸುತ್ತಿರುವ ರಕ್ಷಣಾ ಮತ್ತು ಪರಿಹಾರ ಕಾರ್ಯಗಳನ್ನು ಪರಿಶೀಲಿಸಿದರು.

'ರಸ್ತೆ ಸಂಪರ್ಕವನ್ನು ಮರುಸ್ಥಾಪಿಸುವುದು ಆದ್ಯತೆಯಾಗಿದೆ. ಇದರಿಂದ ಪರಿಹಾರ ಕಾರ್ಯ ವೇಗಗೊಳ್ಳುವುದರ ಜತೆಗೆ ಜನರನ್ನು ಸ್ಥಳಾಂತರಿಸಲು ಅನುಕೂಲವಾಗುತ್ತದೆ' ಎಂದು ತಮಂಗ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಅಂತರ ಸಚಿವಾಲಯದ ಕೇಂದ್ರ ತಂಡವು ಭಾನುವಾರದಿಂದ ಪ್ರವಾಹ ಪೀಡಿತ ಸಿಕ್ಕಿಂಗೆ ಭೇಟಿ ನೀಡಲಿದೆ ಎಂದು ಕೇಂದ್ರ ಸಚಿವ ಅಜಯ್ ಕುಮಾರ್ ಮಿಶ್ರಾ ಹೇಳಿದ್ದಾರೆ. ಕೇಂದ್ರವು ಸಿಕ್ಕಿಂನ ಪರಿಸ್ಥಿತಿಯನ್ನು ಗಮನಿಸುತ್ತಿದೆ ಮತ್ತು ರಾಜ್ಯಕ್ಕೆ ಅಗತ್ಯವಿರುವ ಎಲ್ಲಾ ನೆರವು ನೀಡಲಿದೆ ಎಂದರು.

ಸಿಕ್ಕಿಂನ ಮಂಗನ್ ಜಿಲ್ಲೆಯಲ್ಲಿ ಪ್ರವಾಹದಿಂದ ರಸ್ತೆ ಹಾನಿಯಾಗಿದೆ ಪಿಟಿಐ ಚಿತ್ರ

8 ಯೋಧರ ಮೃತದೇಹ ಪತ್ತೆ

ಸಿಕ್ಕಿಂ ಪ್ರವಾಹದಲ್ಲಿ ನಾಪತ್ತೆಯಾಗಿದ್ದ ಎಂಟು ಸೇನಾ ಸಿಬ್ಬಂದಿಯ ಮೃತದೇಹಗಳು ಪತ್ತೆಯಾಗಿವೆ.

ಉಳಿದ 14 ಸೈನಿಕರು ಮತ್ತು ಕಾಣೆಯಾದ ನಾಗರಿಕರಿಗಾಗಿ ಶೋಧ ಕಾರ್ಯಾಚರಣೆ ನಡೆಯುತ್ತಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಎಕ್ಸ್‌ನಲ್ಲಿ ತಿಳಿಸಿದ್ದಾರೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಳ್ಳಾರಿಯಲ್ಲಿ ಉಕ್ಕು ಸ್ಥಾವರ ಸ್ಥಾಪಿಸಲು ವಿಶ್ವದ ಅತಿದೊಡ್ಡ ಉಕ್ಕು ಉತ್ಪಾದಕ ಕಂಪನಿ ಸ್ವಾಧೀನಪಡೆದಿದ್ದ ಭೂಮಿ

2,643 ಎಕರೆ ವಾಪಸ್: ಆರ್ಸೆಲರ್ ಮಿತ್ತಲ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಬಳ್ಳಾರಿಯಲ್ಲಿ ಉಕ್ಕಿನ ಸ್ಥಾವರ ಸ್ಥಾಪಿಸಲು ಸ್ವಾಧೀನ ಪಡಿಸಿಕೊಂಡಿದ್ದ 2,643 ಎಕರೆ ಭೂಮಿಯನ್ನು ಹಿಂದಿರುಗಿಸಲು ನಿರ್ಧರಿಸಲಾಗಿದೆ ಎಂದು ವಿಶ್ವದ ಅತಿದೊಡ್ಡ ಉಕ್ಕು ಉತ್ಪಾದಕ ಅರ್ಸೆಲರ್ ಮಿತ್ತಲ್ ಇಂಡಿಯಾ ಕಂಪನಿಯು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ. ಸ್ಥಾವರ ಸ್ಥಾಪಿಸಲು ಪಾವತಿಸಿದ ₹267 ಕೋಟಿಗೂ ಹೆಚ್ಚು ಮೊತ್ತವನ್ನು ಬಿಟ್ಟುಕೊಡಲು ಸಿದ್ಧ ಎಂದೂ ತಿಳಿಸಿದೆ.

ಮುಖ್ಯಾಂಶಗಳು

- ಕುಡಿತಿನಿ, ಹರಗಿನಡೋಣಿ ಗ್ರಾಮಗಳಲ್ಲಿ ಸ್ವಾಧೀನ ಪಡೆದಿದ್ದ ಭೂಮಿ
- ₹267 ಕೋಟಿಗೂ ಹೆಚ್ಚು ಮೊತ್ತ ಬಿಟ್ಟುಕೊಡಲು ಸಿದ್ಧ ಎಂದು ಮಾಹಿತಿ
- ಅಕ್ಟೋಬರ್ 30ಕ್ಕೆ ವಿಚಾರಣೆ ಮುಂದೂಡಿಕೆ

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಹಾಗೂ ಸುಧಾಂಶು ಧುಲಿಯಾ ಅವರ ಪೀಠದ ಎದುರು ಹಿರಿಯ ವಕೀಲ ಎ.ಎಂ. ಸಿಂಘ್ವಿ ನೇತೃತ್ವದ ಕಂಪನಿಯ ವಕೀಲರ ತಂಡವು, 'ಬದಲಾದ ಸನ್ನಿವೇಶದಲ್ಲಿ ಅರ್ಜಿದಾರರು ಭೂಮಿಯನ್ನು ಇಟ್ಟುಕೊಳ್ಳಲು ಬಯಸುವುದಿಲ್ಲ ಮತ್ತು 2,643 ಎಕರೆಗಳ ಸಂಪೂರ್ಣ ಭೂಮಿಯನ್ನು ಹಿಂದಿರುಗಿಸುತ್ತಾರೆ' ಎಂದು ಹೇಳಿತು.

'ಈಗಾಗಲೇ ಪಾವತಿಸಿದ ₹267 ಕೋಟಿಯನ್ನು ಸಹ ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಮುಟ್ಟುಗೋಲು ಹಾಕಿಕೊಳ್ಳಬಹುದು' ಎಂದು ವಕೀಲರ ತಂಡವು ಮಾಹಿತಿ ನೀಡಿತು.

ಕಂಪನಿ ಸಲ್ಲಿಸಿದ ರಿಟ್ ಅರ್ಜಿಯನ್ನು ವಿಚಾರಣೆಗೆ ಅಂಗೀಕರಿಸಿದ ಪೀಠ, ಕೆಐಎಡಿಬಿಗೆ ನೋಟಿಸ್ ಜಾರಿ ಮಾಡಿತು.

ವಿಚಾರಣೆ ವೇಳೆ ನ್ಯಾಯಪೀಠ, ಭೂಮಾಲೀಕರಿಗೆ ಪರಿಹಾರ ಪಾವತಿಸಿದ ನಂತರ ಅಥವಾ ಹಣವನ್ನು ಹಿಂದಿರುಗಿಸಿದ ಬಳಿಕ ಭೂಮಿಯನ್ನು ಉಳಿಸಿಕೊಳ್ಳುತ್ತದೆಯೇ ಎಂಬುದನ್ನು ಸ್ಪಷ್ಟಪಡಿಸುವಂತೆ ಮಂಡಳಿಗೆ ಪ್ರಶ್ನಿಸಿತು.

ಮಂಡಳಿಯ ಪರ ಹಾಜರಿದ್ದ ಹಿರಿಯ ವಕೀಲ ಕಿರಣ್ ಸೂರಿ ಅವರು ಪ್ರತಿಕ್ರಿಯೆ ಸಲ್ಲಿಸಲು ಕಾಲಾವಕಾಶ ಕೋರಿದರು. ವಿಚಾರಣೆಯನ್ನು ಅಕ್ಟೋಬರ್30ಕ್ಕೆಮುಂದೂಡಲಾಗಿದೆ.

ಕೆಐಎಡಿಬಿ 2010ರಲ್ಲಿ ಬಳ್ಳಾರಿಯಲ್ಲಿ ಉಕ್ಕಿನ ಸ್ಥಾವರ ಸ್ಥಾಪನೆಗಾಗಿ ಸ್ವಾಧೀನಪಡಿಸಿಕೊಂಡಿರುವ ಪ್ರತಿ ಎಕರೆಗೆ ಅಲ್ಲಿನ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ನಿಗದಿಪಡಿಸಿದಷ್ಟು ಪರಿಹಾರವನ್ನೇ ಕಂಪನಿ ಪಾವತಿಸಬೇಕು ಎಂದು ಸುಪ್ರೀಂ ಕೋರ್ಟ್ ಈ ವರ್ಷದ ಆರಂಭದಲ್ಲಿ ಆದೇಶಿಸಿತ್ತು. ಈ ಆದೇಶದ ಪ್ರಕಾರ ಪ್ರತಿ ಎಕರೆಗೆ ಕಂಪನಿ ₹ 30.20 ಲಕ್ಷ ಪರಿಹಾರ ಪಾವತಿಸಬೇಕಿತ್ತು.

ಬಳ್ಳಾರಿ ಜಿಲ್ಲೆಯ ಕುಡಿತಿನಿ ಹಾಗೂ ಹರಗಿನಡೋಣಿ ಗ್ರಾಮಗಳಲ್ಲಿ ಕೈಗಾರಿಕೆ ಸ್ಥಾಪಿಸಲು 4,993 ಎಕರೆಯನ್ನು ಸ್ವಾಧೀನಪಡಿಸಿಕೊಳ್ಳಲು 2010ರ ಫೆಬ್ರುವರಿ 5ರಂದು ಕೆಐಎಡಿಬಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು. 4,866 ಎಕರೆ ಭೂಸ್ವಾಧೀನಕ್ಕೆ 2010ರ ಮೇ ತಿಂಗಳಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ಭೂಮಿ ಕಳೆದುಕೊಳ್ಳುವವರಿಗೆ ಪ್ರತಿ ಎಕರೆ ₹1.5 ಲಕ್ಷ ನೀಡಲು ವಿಶೇಷ ಭೂಸ್ವಾಧೀನ ಅಧಿಕಾರಿ ಶಿಫಾರಸು ಮಾಡಿದ್ದರು.

ಆದರೆ, ಅವೈಜ್ಞಾನಿಕ ದರ ನಿಗದಿ ಮಾಡಲಾಗಿದೆ ಎಂದು ಭೂ ಸಂತ್ರಸ್ತರು ಜಿಲ್ಲಾಧಿಕಾರಿ ಅವರಿಗೆ ಮನವಿ ಸಲ್ಲಿಸಿ ಹೋರಾಟ ನಡೆಸಿದ್ದರು. ಬಳಿಕ ಕೃಷಿ ಭೂಮಿಗೆ ಎಕರೆಗೆ ₹8 ಲಕ್ಷ, ಕೃಷಿಯೇತರ ಭೂಮಿಗೆ ಎಕರೆಗೆ ₹12 ಲಕ್ಷ ನಿಗದಿಪಡಿಸಲಾಗಿತ್ತು. ಈ ಭೂ ದರವನ್ನು ಅನೇಕ ಭೂಮಾಲೀಕರು ಒಪ್ಪಿಕೊಂಡು ಭೂಮಿ ಬಿಟ್ಟುಕೊಡಲು ಕೆಐಎಡಿಬಿ ಜತೆಗೆ ಕರಾರು ಮಾಡಿಕೊಂಡಿದ್ದರು. ಕಡಿಮೆ ದರ ನಿಗದಿ ಮಾಡಲಾಗಿದೆ ಎಂದು ಆರೋಪಿಸಿ ಹಲವು ಭೂಮಿ ಮಾಲೀಕರು ಸಿವಿಲ್ ನ್ಯಾಯಾಲಯದ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ್ದ ನ್ಯಾಯಾಲಯ, ರಾಷ್ಟ್ರೀಯ ಹೆದ್ದಾರಿಯಿಂದ 500 ಮೀಟರ್‌ನಷ್ಟು ದೂರದಲ್ಲಿರುವ ಭೂಮಿಗೆ ₹32.20 ಲಕ್ಷ ಹಾಗೂ ಅದರ ಆಚೆಗೆ ಇರುವ ಕೃಷಿ ಭೂಮಿಗೆ ₹8 ಲಕ್ಷ ಪರಿಹಾರ ನೀಡಬೇಕು ಎಂದು 2016ರ ಮಾರ್ಚ್ 1ರಂದು ಆದೇಶ ನೀಡಿತ್ತು.

'ಮಂಡಳಿಯ ವಿಶೇಷ ಭೂಸ್ವಾಧೀನ ಅಧಿಕಾರಿಯವರನ್ನು ಮಾತ್ರ ಪ್ರತಿವಾದಿಯನ್ನಾಗಿ ಮಾಡಲಾಗಿದೆ. ಮಂಡಳಿಯನ್ನು ಪ್ರತಿವಾದಿಯನ್ನಾಗಿ ಮಾಡಿಲ್ಲ' ಎಂದು ಆಕ್ಷೇಪಿಸಿ ಕೆಐಎಡಿಬಿಯು ಹೈಕೋರ್ಟ್‌ನ ಧಾರವಾಡ ಪೀಠದಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಬಳ್ಳಾರಿ ನ್ಯಾಯಾಲಯದ ಆದೇಶವನ್ನು 2018ರಲ್ಲಿ ರದ್ದುಪಡಿಸಿದ ಹೈಕೋರ್ಟ್, ಮಂಡಳಿಯನ್ನು ಪ್ರತಿವಾದಿಯನ್ನಾಗಿ ಮಾಡಿಕೊಂಡು ಪ್ರಕರಣದ ವಿಚಾರಣೆ ನಡೆಸಬೇಕು ಎಂದು ಅಧೀನ ನ್ಯಾಯಾಲಯಕ್ಕೆ ನಿರ್ದೇಶನ ನೀಡಿತ್ತು.

ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಬಿ.ರವಿಪ್ರಕಾಶ್ ಹಾಗೂ ಇತರರು 2018ರಲ್ಲಿ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು.

ವಿಜಯಪುರದ ಬಿ.ಎಲ್‌ಡಿ.ಇ ಆಸ್ಪತ್ರೆಯಲ್ಲಿ ಸಚಿವ ಎಂ. ಬಿ. ಪಾಟೀಲ ಅವರ ಜನ್ಮದಿನದ ಪ್ರಯುಕ್ತ ಶನಿವಾರ ಕುಟುಂಬ ಆರೋಗ್ಯ ಕಾರ್ಡ್ ವಿತರಿಸಲಾಯಿತು. ಬಿ.ಎಲ್‌ಡಿ.ಇ ಡೀಮ್ಡ್ ವಿವಿ ಕುಲಾಧಿಪತಿ ಡಾ. ವೈ. ಎಂ. ಜಯರಾಜ, ಕುಲಪತಿ ಡಾ. ಆರ್. ಎಸ್. ಮುಧೋಳ, ಪ್ರಾಚಾರ್ಯ ಡಾ. ಅರವಿಂದ ಪಾಟೀಲ, ಡಾ. ರಾಘವೇಂದ್ರ ಕುಲಕರ್ಣಿ, ಡಾ. ರಾಜೇಶ ಹೊನ್ನುಟಗಿ, ಡಾ. ಸುರೇಖಾ ಹಿಪ್ಪರಗಿ ಇದ್ದಾರೆ.

ಬಿಎಲ್‌ಡಿಇ ಕಾಲೇಜಿಗೆ ಎನ್‌ಎಬಿಎಚ್ ಮಾನ್ಯತೆ

ಪ್ರಜಾವಾಣಿ ವಾರ್ತೆ

ವಿಜಯಪುರ: ಬಿಎಲ್‌ಡಿಇ ಸಂಸ್ಥೆಯ ಬಿ.ಎಂ.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರಕ್ಕೆ ಆಸ್ಪತ್ರೆಗಳು ಮತ್ತು ಆರೋಗ್ಯ ಸೇವೆ ಒದಗಿಸುವವರಿಗೆ ರಾಷ್ಟ್ರೀಯ ಮಾನ್ಯತೆ ಮಂಡಳಿಯ (ಎನ್‌ಎಬಿಎಚ್) ಮಾನ್ಯತೆ ಲಭಿಸಿದೆ ಎಂದು ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಕುಲಪತಿ ಡಾ. ಆರ್. ಎಸ್. ಮುಧೋಳ ತಿಳಿಸಿದರು.

ನಗರದ ಬಿ.ಎಂ.ಪಾಟೀಲ ವೈದ್ಯಕೀಯ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನೆ ಕೇಂದ್ರದಿಂದ ಶನಿವಾರ ನಡೆದ ಸಚಿವ ಎಂ. ಬಿ. ಪಾಟೀಲ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ರಾಷ್ಟ್ರೀಯ ಮಟ್ಟದಲ್ಲಿ ಎನ್‌ಎಬಿಎಚ್ ಮಾನ್ಯತೆ ಪಡೆದ ಉತ್ತರ ಕರ್ನಾಟಕದ ಮೊದಲ ಆಸ್ಪತ್ರೆ ಎಂಬ ಖ್ಯಾತಿಗೆ ಸಂಸ್ಥೆಯು ಪಾತ್ರವಾಗಿದೆ' ಎಂದರು.

'ಆಸ್ಪತ್ರೆಯಲ್ಲಿ ನೀಡಲಾಗುವ ವೈದ್ಯಕೀಯ ಸೇವೆ, ನೈರ್ಮಲ್ಯ, ವೈದ್ಯರೊಂದಿಗೆ ಸಮಾಲೋಚನೆ, ರೋಗಿಗಳ ಆರೈಕೆ, ಶಸ್ತ್ರಚಿಕಿತ್ಸೆಗಳು, ನಾನಾ ವೈದ್ಯಕೀಯ ತಪಾಸಣೆಗಳು, ವೈದ್ಯಕೀಯ ಮಂಡಳಿಯ ಶಿಫಾರಸುಗಳ ಶೀಘ್ರ ಅನುಷ್ಠಾನ, ಉತ್ತಮ ಚಿಕಿತ್ಸಾ ವ್ಯವಸ್ಥೆ ಸೇರಿ ನಾನಾ ಅಂಶಗಳನ್ನು ಪರಿಗಣಿಸಿ ಈ ಮಾನ್ಯತೆ ನೀಡಲಾಗಿದೆ' ಎಂದರು.

ಕುಟುಂಬದ ಆರೋಗ್ಯ ಕಾರ್ಡ್: 'ಬಿಎಲ್‌ಡಿಇ ಸಂಸ್ಥೆಯ ಅಧ್ಯಕ್ಷರೂ ಆದ ಸಚಿವ ಎಂ.ಬಿ.ಪಾಟೀಲ ಅವರ ಆಶಯದಂತೆ ಅಸಂಘಟಿತ ಕಾರ್ಮಿಕರು ಮತ್ತು ಅವರ ಕುಟುಂಬಕ್ಕೆ ಉತ್ತಮ ಆರೋಗ್ಯ ಸೇವೆಗಾಗಿ 'ಕುಟುಂಬದ ಆರೋಗ್ಯ ಕಾರ್ಡ್' ವಿತರಿಸಲಾಗುತ್ತಿದೆ' ಎಂದರು.

'ಯಾವುದೇ ತುರ್ತು ಸಂದರ್ಭದಲ್ಲಿ ಆಸ್ಪತ್ರೆಗೆ ಚಿಕಿತ್ಸೆಗೆ ಬರುವ ಮತ್ತು ದಾಖಲಾಗುವ ರೋಗಿಗಳ ಅನುಕೂಲಕ್ಕೆ ಈ ವರ್ಷದಿಂದ ₹1 ಕೋಟಿ ಹಣ ಮೀಸಲಿಡಲಾಗುವುದು. ಬಿ.ಎಂ. ಪಾಟೀಲ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಹೃದಯ ಶಸ್ತ್ರಚಿಕಿತ್ಸೆಗೆ ಸಂಬಂಧಿಸಿ ತಜ್ಞವೈದ್ಯರ ಸೇವೆ ಲಭ್ಯವಿದ್ದು, ಜಿಲ್ಲೆಯಲ್ಲಿ ಇದೇ ಮೊದಲ ಬಾರಿಗೆ ಲ್ಯಾಪ್ರೊಸ್ಕೋಪಿಕ್ ತಂತ್ರಜ್ಞಾನದ ಮೂಲಕ ಹೃದಯದ ಶಸ್ತ್ರಚಿಕಿತ್ಸೆ ಪ್ರಾರಂಭವಾಗುತ್ತಿದೆ' ಎಂದರು.

'ಪ್ರತಿ ವಿದ್ಯಾರ್ಥಿಗೆ ಜಾಗ ಮೀಸಲಿಡಿ'

ಬೆಂಗಳೂರು: 9 ಮತ್ತು 10ನೇ ತರಗತಿವರೆಗೆ ವಿಸ್ತರಿಸಲು ಬಯಸುವ ಶಾಲೆಗಳು ಪ್ರತಿ ವಿದ್ಯಾರ್ಥಿಗೆ ಕೊಠಡಿಗಳಲ್ಲಿ ಒಂದು ಚದರ ಮೀಟರ್ ಸ್ಥಳ ಕಡ್ಡಾಯವಾಗಿ ಮೀಸಲಿಡಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸುತ್ತೋಲೆ ಹೊರಡಿಸಿದೆ.

ಕೆಲ ಖಾಸಗಿ ಶಾಲೆಗಳು ಒಂದು ಡೆಸ್ಕ್ ಅಥವಾ ಬೆಂಚ್‌ನಲ್ಲಿ ಮೂವರು ವಿದ್ಯಾರ್ಥಿಗಳನ್ನು ಕೂರಿಸುತ್ತಿದ್ದಾರೆ. ಇದರಿಂದ ಮಕ್ಕಳು ಪಾಠದ ಕಡೆ ಗಮನ ಕೇಂದ್ರೀಕರಿಸಲು ಸಾಧ್ಯವಾಗದೆ ತೊಂದರೆ ಅನುಭವಿಸುತ್ತಿದ್ದಾರೆ. ಕೆಲವೊಮ್ಮೆ ಇಂತಹ ಸ್ಥಿತಿ ಮಕ್ಕಳ ಮಧ್ಯೆ ಜಗಳಗಳಿಗೆ ದಾರಿ ಮಾಡಿಕೊಟ್ಟಿರುವುದು ಇಲಾಖೆಯ ಗಮನಕ್ಕೆ ಬಂದಿದೆ. ಹಾಗಾಗಿ, ಸುತ್ತೋಲೆ ಹೊರಡಿಸಲಾಗಿದೆ ಎಂದು ಇಲಾಖೆ ಮೂಲಗಳು ಹೇಳಿವೆ.

ಬಂಡೀಪುರ, ನಾಗರಹೊಳೆ: ಪ್ರವಾಸಿಗರಿಗೆ ವಿಮೆ ಜಾರಿ

ಪ್ರಜಾವಾಣಿ ವಾರ್ತೆ

ಚಾಮರಾಜನಗರ/ಗುಂಡ್ಲುಪೇಟೆ/ಮೈಸೂರು: ರಾಜ್ಯದ ರಕ್ಷಿತಾರಣ್ಯಗಳಲ್ಲಿ ಪರಿಸರ ಪ್ರವಾಸೋದ್ಯಮ ಸ್ಥಳಗಳಿಗೆ ಭೇಟಿ ನೀಡುವ ಪ್ರವಾಸಿಗರಿಗೆ ವಿಮೆ ಭದ್ರತೆ ಒದಗಿಸುವ ಅರಣ್ಯ ಇಲಾಖೆಯ ಯೋಜನೆ ಬಂಡೀಪುರ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಜಾರಿಗೆ ಬಂದಿದೆ.

ಎರಡೂ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಸಫಾರಿ ವ್ಯವಸ್ಥೆ ಇದ್ದು, ಈ ಸಂದರ್ಭದಲ್ಲಿ ಕಾಡು ಪ್ರಾಣಿಗಳ ದಾಳಿ ಸೇರಿದಂತೆ ಇತರೆ ಯಾವುದೇ ಅವಘಡದ ಸಂದರ್ಭಗಳಲ್ಲಿ ಪ್ರವಾಸಿಗರ ಜೀವ ಹಾನಿಯಾದರೆ ₹1 ಕೋಟಿವರೆಗೆ ವಿಮಾ ಮೊತ್ತ ಪ್ರವಾಸಿಗರ ಕುಟುಂಬದವರಿಗೆ ಸಿಗಲಿದೆ. ಗಾಯಗೊಂಡವರಿಗೆ ₹5 ಲಕ್ಷದವರೆಗೆ ವಿಮೆ ಪರಿಹಾರ ಸಿಗಲಿದೆ.

ಈ ಯೋಜನೆಗೆ ಅರ್ಹರಾಗಲು ನೋಂದಣಿ ಅಗತ್ಯವಿಲ್ಲ, ಸಫಾರಿಗೆ ಹೋಗಿರುವ ಟಿಕೆಟ್ ಇದ್ದರೆ ಸಾಕು. ಕಾಡಿನೊಳಗೆ ಪ್ರಾಣ ಹಾನಿಯಾದರೆ ಆರ್ಥಿಕ ನೆರವು ಸಿಗಲಿದೆ ಎಂದು ಬಂಡೀಪುರ ಹುಲಿ ಯೋಜನೆ ನಿರ್ದೇಶಕ ರಮೇಶ್‌ಕುಮಾರ್ ಮಾಹಿತಿ ನೀಡಿದ್ದಾರೆ.

ಬಂಡೀಪುರದ ಸಫಾರಿಗೆ ಪ್ರತಿ ವರ್ಷ 1.5 ಲಕ್ಷದಷ್ಟು ಪ್ರವಾಸಿಗರು ಬರುತ್ತಾರೆ. ಸಫಾರಿ ವೇಳೆ ಆನೆ, ಹುಲಿ ಚಿರತೆ ಹಾಗೂ ಕಾಡೆಮ್ಮೆಗಳು ಆಕಸ್ಮಿಕವಾಗಿ ಪ್ರವಾಸಿಗರ ಮೇಲೆ ದಾಳಿ ಮಾಡುವ ಅಪಾಯ ಇರುತ್ತದೆ. ಆನೆಗಳು ಸಫಾರಿ ವಾಹನಗಳನ್ನು ಅಟ್ಟಾಡಿಸಿರುವ ನಿದರ್ಶನಗಳೂ ಇವೆ.

'ಪ್ರವಾಸಿಗರಿಂದ ಇಲಾಖೆಗೆ ಅನೇಕ ಉಪಯೋಗ ಆಗುತ್ತದೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಿಂದ ಪ್ರವಾಸಿಗರಿಗೂ ಅನುಕೂಲವಾಗಬೇಕು ಎಂಬ ಉದ್ದೇಶದಿಂದ ವಿಮೆ ಯೋಜನೆ ಜಾರಿಗೊಳಿಸಲಾಗಿದೆ' ಎಂದು ರಮೇಶ್ ಕುಮಾರ್ ತಿಳಿಸಿದರು.

ಅರಣ್ಯ ಇಲಾಖೆಯ ಅಂಗಸಂಸ್ಥೆ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್, ತನ್ನ ರೆಸಾರ್ಟ್ಸ್‌ಗೆ ಭೇಟಿ ನೀಡುವ ಎಲ್ಲ ಪ್ರವಾಸಿಗರಿಗೆ ವಿಮೆಯ ಭದ್ರತೆ ಒದಗಿಸುತ್ತಿದೆ. ಅದೇ ಮಾದರಿಯಲ್ಲಿ ಪರಿಸರ ಪ್ರವಾಸೋದ್ಯಮ ಸ್ಥಳಕ್ಕೆ ಭೇಟಿ ನೀಡುವ ಪ್ರವಾಸಿಗರಿಗೂ ವಿಮಾ ಭದ್ರತೆ ಒದಗಿಸಬೇಕು ಎಂದು ಬೆಳಗಾವಿಯ ಪರಿಸರ ಸಂರಕ್ಷಣವಾದಿ ಗಿರಿಧರ ಕುಲಕರ್ಣಿ ಅವರು ಅರಣ್ಯ ಇಲಾಖೆಗೆ ಪತ್ರ ಬರೆದು, ಒತ್ತಾಯಿಸಿದ್ದರು. ಈ ಪತ್ರಕ್ಕೆ ಸ್ಪಂದಿಸಿದ್ದ ಅರಣ್ಯ ಇಲಾಖೆ ವಿಮೆ ಯೋಜನೆ ಜಾರಿಗೊಳಿಸಲು ತೀರ್ಮಾನಿಸಿತ್ತು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಕುಮಾರ್ ಪುಷ್ಕರ್ ಅವರು ಜಿಲ್ಲೆಯ ಬಂಡೀಪುರ, ಬಿಆರ್‌ಟಿ ಸೇರಿದಂತೆ ರಾಜ್ಯದ ಎಲ್ಲ ಐದು ಹುಲಿಸಂರಕ್ಷಿತ ಪ್ರದೇಶದ ನಿರ್ದೇಶಕರು, ರಕ್ಷಿತಾರಣ್ಯಗಳ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಇದೇ ಜೂನ್ 22ರಂದು ಪತ್ರ ಬರೆದು ಯೋಜನೆ ಅನುಷ್ಠಾನಕ್ಕೆ ಕ್ರಮ ವಹಿಸುವಂತೆ ಸೂಚಿಸಿದ್ದರು.

ಜಿಲ್ಲೆಯ ಬಿಆರ್‌ಟಿ ಹುಲಿ ಯೋಜನೆ ಪ್ರದೇಶದಲ್ಲೂ ಈ ಯೋಜನೆ ಜಾರಿಗೆ ಬರುತ್ತಿದ್ದು, ಕೊನೆಯ ಹಂತದ ಪ್ರಕ್ರಿಯೆ ನಡೆಯುತ್ತಿದೆ. ಬಂಡೀಪುರ, ನಾಗರಹೊಳೆ ಮಾದರಿಯಲ್ಲಿ ನಮ್ಮಲ್ಲೂ ವಿಮಾ ಯೋಜನೆ ಶೀಘ್ರದಲ್ಲಿ ಜಾರಿಗೆ ಬರಲಿದೆ ಎಂದು ಬಿಆರ್‌ಟಿ ಡಿಸಿಎಫ್ ದೀಪ್ ಜೆ.ಕಾಂಟ್ರಾಕ್ಟರ್ 'ಪ್ರಜಾವಾಣಿ'ಗೆ ತಿಳಿಸಿದರು.

ಕೆಎಸ್‌ಆರ್‌ಟಿಸಿ: 140 ಹೊಸ ಬಸ್‌ಗಳ ಸಂಚಾರಕ್ಕೆ ಹಸಿರು ನಿಶಾನೆ

ಬದಲಾಗುತ್ತಿದೆ 'ಕೆಂಪು ಬಸ್' ಸ್ವರೂಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ನೂತನ ಮಾದರಿಯ ಕೆಂಪು ಬಸ್‌ಗಳನ್ನು ಪರಿಚಯಿಸಿದ್ದು, ಮೊದಲ ಹಂತದಲ್ಲಿ 100 ಬಸ್‌ಗಳು ರಸ್ತೆಗೆ ಇಳಿಯಲಿವೆ.

ಹವಾನಿಯಂತ್ರಿತ ಸ್ಲೀಪರ್ ಬಸ್, ಕರ್ನಾಟಕ ಸಾರಿಗೆ ಹಾಗೂ ಹವಾನಿಯಂತ್ರಿತವಲ್ಲದ 40 'ಪಲ್ಲಕ್ಕಿ' ಸೇರಿದಂತೆ 140 ಬಸ್‌ಗಳ ಸಂಚಾರಕ್ಕೆ ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹಸಿರು ನಿಶಾನೆ ತೋರಿದರು.

ಜಿಲ್ಲಾ ಕೇಂದ್ರದಿಂದ ಮತ್ತೊಂದು ಜಿಲ್ಲಾ ಕೇಂದ್ರಕ್ಕೆ ಸಂಚರಿಸುವ ಬಸ್‌ಗಳು (ಪಾಯಿಂಟ್ ಟು ಪಾಯಿಂಟ್) ಹಾಗೂ ದೂರದ ಪ್ರಯಾಣದ ವೇಗದೂತ ಸಾರಿಗೆಗೆ ಒಂದೇ ಮಾದರಿಯ ಕೆಂಪು ಬಸ್‌ಗಳನ್ನು ಇದುವರೆಗೂ ಬಳಸಲಾಗುತ್ತಿತ್ತು. ಈಗ ಜಿಲ್ಲಾ ಕೇಂದ್ರಗಳ ಮಧ್ಯೆ ಸಂಚರಿಸುವ ಬಸ್‌ಗಳ ಸ್ವರೂಪವನ್ನು ಬದಲಾಯಿಸಲಾಗಿದೆ.

ಬೆಂಗಳೂರಿನಲ್ಲಿ ಶನಿವಾರ ಸಂಚಾರಕ್ಕೆ ಮುಕ್ತಗೊಳಿಸಿದ ಕೆಎಸ್‌ಆರ್‌ಟಿಸಿಯ ನೂತನ 'ಪಲ್ಲಕ್ಕಿ' ಬಸ್ – ಪ್ರಜಾವಾಣಿ ಚಿತ್ರ

ಹಳೆಯ ಕೆಂಪು ಬಸ್‌ಗಳು 3.2 ಮೀಟರ್ ಎತ್ತರ ಇದ್ದರೆ, ನೂತನ ಮಾದರಿ 3.4 ಮೀಟರ್ ಎತ್ತರ, ಬಕೆಟ್ ವಿನ್ಯಾಸದ 52 ಆಸನಗಳನ್ನು ಒಳಗೊಂಡಿವೆ. ಹಿಂದಿನ ಹಾಗೂ ಮುಂದಿನ ಗಾಜುಗಳು ವಿಶಾಲವಾಗಿವೆ. ಪ್ರಯಾಣಿಕರು ಬಳಸುವ ಕಿಟಕಿಯ ಗಾತ್ರವನ್ನೂ ಹೆಚ್ಚಿಸಲಾಗಿದೆ. ಎಲ್‌ಇಡಿ ದೀಪ, ಸೆನ್ಸರ್ ಅಳವಡಿಸಿದ ಬಾಗಿಲುಗಳು, ವಿಶಾಲ ಲಗೇಜ್ ಕ್ಯಾರಿಯರ್ ಅಳವಡಿಸಲಾಗಿದೆ.

'ಪಲ್ಲಕ್ಕಿ' ಸ್ಲೀಪರ್ ಬಸ್‌ಗಳು 'ಸಂತೋಷವು ಪ್ರಯಾಣಿಸುತ್ತಿದೆ' ಎಂಬ ಟ್ಯಾಗ್‌ಲೈನ್ ಒಳಗೊಂಡಿವೆ. 11.3 ಮೀಟರ್ ಉದ್ದದ ಈ ಬಸ್‌ಗಳು 197 ಎಚ್‌ಪಿ ಎಂಜಿನ್ ಒಳಗೊಂಡಿವೆ. ಮಲಗಲು ಇರುವಷ್ಟೇ ಆರಾಮದಾಯಕ ವ್ಯವಸ್ಥೆ, ಕುಳಿತುಕೊಳ್ಳಲೂ ಇದೆ. ಪ್ರತಿ ಆಸನಕ್ಕೂ ಮೊಬೈಲ್, ಲ್ಯಾಪ್‌ಟಾಪ್ ಚಾರ್ಜಿಂಗ್, ಆಡಿಯೊ ಸ್ಪೀಕರ್, ಪಾದರಕ್ಷೆಗಳನ್ನು ಇಡುವ ಸೌಲಭ್ಯ ಕಲ್ಪಿಸಲಾಗಿದೆ.

> 'ಶಕ್ತಿ' ಫಲಾನುಭವಿಗಳು ಸೇರಿ ಪ್ರಯಾಣಿಕರ ಅನುಕೂಲಕ್ಕಾಗಿ ಈ ವರ್ಷ 798 ಹೊಸ ಬಸ್ ಖರೀದಿಸಲಾಗುತ್ತಿದೆ. ಪ್ರತಿ ದಿನದ ಸಂಚಾರವನ್ನು 27 ಲಕ್ಷ ಕಿ.ಮೀಗೆ ವಿಸ್ತರಿಸಲಾಗಿದೆ
>
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಕರ್ನಾಟಕ ಸಾರಿಗೆ ಬಸ್‌ಗಳಲ್ಲಿ ಎಲೆಕ್ಟ್ರಾನಿಕ್ ವಾಹನ ಸ್ಥಿರತೆ ನಿಯಂತ್ರಣ ವ್ಯವಸ್ಥೆ ಹಾಗೂ ವಾಹನ ಇರುವಿಕೆ ಸ್ಥಳದ ಟ್ರ್ಯಾಕಿಂಗ್ ವ್ಯವಸ್ಥೆ, ಹಿನ್ನೋಟದ ಕ್ಯಾಮೆರಾ ಅಳವಡಿಸಲಾಗಿದೆ.

ಬಂಟ್ವಾಳ ತಾಲ್ಲೂಕಿನ ಸಜಿಪಮೂಡ ಸರ್ಕಾರಿ ಪದವಿಪೂರ್ವ ಕಾಲೇಜಿನ ಎಂಟನೇ ತರಗತಿಯಲ್ಲಿ ಕಲಿಯುತ್ತಿರುವ ಅವಳಿಜವಳಿ ವಿದ್ಯಾರ್ಥಿನಿಯರು

ಸಜಿಪಮೂಡ: ಐದು ಜೋಡಿ ಅವಳಿ-ಜವಳಿ ವಿದ್ಯಾರ್ಥಿನಿಯರು

ಬಂಟ್ವಾಳ (ದಕ್ಷಿಣ ಕನ್ನಡ): ತಾಲ್ಲೂಕಿನ ಸಜಿಪಮೂಡ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರೌಢಶಾಲೆ ವಿಭಾಗದ ಎಂಟನೇ ತರಗತಿಯಲ್ಲಿ ಐದು ಜೋಡಿ ಅವಳಿ-ಜವಳಿ ವಿದ್ಯಾರ್ಥಿನಿಯರು ಕಲಿಯುತ್ತಿದ್ದಾರೆ. ಈ ಅವಳಿ-ಜವಳಿ ವಿದ್ಯಾರ್ಥಿನಿಯರು ಇದೇ ಊರಿನ ಬೇರೆ ಬೇರೆ ಕುಟುಂಬಗಳಿಗೆ ಸೇರಿದವರು.

ಆಯಿಷಾ ಝಿಬಾ-ಖತೀಝಾ ಝಿಯಾ, ಶ್ರಣವಿ-ಜಾಹ್ನವಿ, ಫಾತಿಮತ್ ಕಮಿಲ-ಫಾತಿಮತ್ ಸಮಿಲ, ಆಯಿಷಾ ರೈಫಾ- ಫಾತೀಮಾ ರೌಲ, ದುಲೈಕತ್ ರುಫಿದಾ- ಹಲೀಮತ್ ರಾಫಿದ ಅವಳಿ-ಜವಳಿ ವಿದ್ಯಾರ್ಥಿನಿಯರು. ಇವರನ್ನು ಗುರುತಿಸುವಾಗ ಶಿಕ್ಷಕರು, ಸಹಪಾಠಿಗಳು ಕೆಲವೊಮ್ಮೆ ಗೊಂದಲಕ್ಕೀಡಾಗುತ್ತಿದ್ದಾರೆ. 'ಈ ಹಿಂದೆ ನಮ್ಮ ಪ್ರೌಢ ಶಾಲೆಯಲ್ಲಿ ಎಂಟು ಜೋಡಿ ಅವಳಿ-ಜವಳಿ ವಿದ್ಯಾರ್ಥಿಗಳು ಬೇರೆ ಬೇರೆ ತರಗತಿಯಲ್ಲಿ ಕಲಿತಿದ್ದರು' ಎಂದು ಮುಖ್ಯ ಶಿಕ್ಷಕಿ ಆಲಿಸ್ ಪಾಯಿಸ್ ನೆನಪಿಸಿಕೊಂಡರು.

Nrupathunga University
NT Road, Bengaluru

REQUIRED

Applications are invited for 03 posts of Research Associates and Research Assistants and 07 posts of Field Investigators under ICSSR short term projects. Remuneration will be paid as per ICSSR norms. The last date for Biodata submission is **11th Oct 2023** and Walk in interview is on 13th Oct 2023 at 11.00 am. For details visit: **www.nrupathungauniversityblr.ac.in** or contact **9513339931.**

ಬರಗಾಲ ಪರಿಸ್ಥಿತಿ ಮನವರಿಕೆ: ಕೇಂದ್ರ ತಂಡ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ/ದಾವಣಗೆರೆ: 'ಜಿಲ್ಲೆಯಲ್ಲಿನ ಬರ ಪರಿಸ್ಥಿತಿಯ ಮನವರಿಕೆಯಾಗಿದೆ. ಬೆಳೆನಷ್ಟ, ರೈತರ ಸಂಕಷ್ಟ ಕುರಿತ ಸಮಗ್ರ ವರದಿಯನ್ನು ಕೇಂದ್ರಕ್ಕೆ ಸಲ್ಲಿಸಲಿದ್ದೇವೆ' ಎಂದು ಕೇಂದ್ರ ಬರ ಅಧ್ಯಯನ ತಂಡದ ನೇತೃತ್ವ ವಹಿಸಿದ್ದ ಜಲಶಕ್ತಿ ಆಯೋಗದ ನಿರ್ದೇಶಕ ವಿ.ಅಶೋಕ್ ಕುಮಾರ್ ಶನಿವಾರ ತಿಳಿಸಿದರು.

ಚಿತ್ರದುರ್ಗ ತಾಲ್ಲೂಕಿನ ಗೋನೂರು ಗ್ರಾಮದಲ್ಲಿ ರೈತ ರವಿ ನಾರಾಯಣ್ ಅವರ ಹೊಲದಲ್ಲಿ ಮೆಕ್ಕೆಜೋಳದ ಬೆಳೆ ಪರಿಶೀಲಿಸಿದ ಅವರು, ಜಿಲ್ಲೆಯಲ್ಲಿ ಮೆಕ್ಕೆಜೋಳ, ರಾಗಿ, ಶೇಂಗಾ, ತೊಗರಿ ಬೆಳೆ ನಷ್ಟ ಆಗಿರುವುದು ಗಮನಕ್ಕೆ ಬಂದಿದೆ' ಎಂದರು.

'ಜಿಲ್ಲೆಯಲ್ಲಿ ಮೇಲ್ನೋಟಕ್ಕೆ ಬೆಳೆ ಹಸಿರು ಕಾಣಿಸುತ್ತಿದೆ. ವಾಸ್ತವದಲ್ಲಿ ಕಾಳು ಕಟ್ಟಿಲ್ಲ. ತೆನೆ ಕಟ್ಟುವ ಹಂತದಲ್ಲಿ ಮಳೆ ಕೈಕೊಟ್ಟಿದ್ದರಿಂದ ಬರಸ್ಥಿತಿ ಎದುರಾಗಿದೆ. ಜಿಲ್ಲೆಯಲ್ಲಿ ಅಂದಾಜು 2.4 ಲಕ್ಷ ಹೆಕ್ಟೇರ್‌ನಷ್ಟು ಬೆಳೆನಷ್ಟ ಉಂಟಾಗಿದೆ' ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಜಿ.ಆರ್.ಜೆ ಅವರು ಕೇಂದ್ರ ತಂಡಕ್ಕೆ ಮನವರಿಕೆ ಮಾಡಿಕೊಟ್ಟರು.

ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕಿನಲ್ಲಿಯೂ ಜಮೀನುಗಳಿಗೆ ಭೇಟಿ ನೀಡಿ ತಂಡವು ಬೆಳೆ ಪರಿಶೀಲಿಸಿತು. ಜಿಲ್ಲೆಯಲ್ಲಿ 2.27 ಲಕ್ಷ ಹೆಕ್ಟೇರ್ ಪೈಕಿ 1.50 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ನಾಶವಾಗಿದೆ' ಎಂದು ಜಿಲ್ಲಾಧಿಕಾರಿ ಡಾ.ಎಂ.ವಿ.ವೆಂಕಟೇಶ್ ತಂಡಕ್ಕೆ ತಿಳಿಸಿದರು.

'4 ಎಕರೆಯಲ್ಲಿ ರಾಗಿ ಬೆಳೆದಿದ್ದೇವು. ಮಳೆಯಿಲ್ಲದೆ ಬೆಳೆ ಹಾಳಾಗಿದ್ದು, ದನಗಳಿಗೆ ಮೇವು ಸಿಗದ ಸ್ಥಿತಿ ಇದೆ' ಎಂದು ಜಗಳೂರು ತಾಲ್ಲೂಕು ದೊಣೆಹಳ್ಳಿಯ ರೈತ ಮಹಿಳೆ ಜಯಮ್ಮ ಅವರು ಕೇಂದ್ರ ತಂಡದ ಸದಸ್ಯರ ಎದುರು ಅಳಲು ತೋಡಿಕೊಂಡರು.

'ಸಾಲ ಮಾಡಿ 10 ಎಕರೆಯಲ್ಲಿ ಈರುಳ್ಳಿ, ಮೆಕ್ಕೆಜೋಳ, ರಾಗಿ ಬೆಳೆದಿದ್ದೇವೆ. ಯಾವ ಬೆಳೆಯೂ ಸಿಗುತ್ತಿಲ್ಲ. ಈಗ ವಿಷ ಕುಡಿಯುವ ಸ್ಥಿತಿ ಎದುರಾಗಿದೆ' ಎಂದು ರೈತ ಗಣೇಶ್ ನೋವು ತೋಡಿಕೊಂಡರು.

ಮತ್ತಷ್ಟು ತಾಲ್ಲೂಕು ಬರ ಘೋಷಣೆ?

ಬೆಂಗಳೂರು: ರಾಜ್ಯದಲ್ಲಿ ಬರ ಪರಿಸ್ಥಿತಿ ಅಂದಾಜು ಮತ್ತು ಪರಿಹಾರ ಕಾಮಗಾರಿಗಳ ನಿರ್ವಹಣೆ ಪರಿಶೀಲಿಸಲು ನೇಮಕವಾಗಿರುವ ಸಂಪುಟ ಉಪ ಸಮಿತಿ ಸೋಮವಾರ ಸಭೆ ಸೇರಲಿದೆ. ಮತ್ತಷ್ಟು ತಾಲ್ಲೂಕುಗಳನ್ನು ಬರಪೀಡಿತ ಪಟ್ಟಿಗೆ ಸೇರಿಸುವ ಸಾಧ್ಯತೆ ಇದೆ.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಧ್ಯಕ್ಷತೆಯ ಸಮಿತಿ, ಈ ಹಿಂದೆ 195 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿತ್ತು. ಸೆ.30ರವರೆಗಿನ ಮಳೆಯ ಪ್ರಮಾಣವನ್ನು ಆಧರಿಸಿ 15ಕ್ಕೂ ಹೆಚ್ಚು ತಾಲ್ಲೂಕುಗಳನ್ನು ಪಟ್ಟಿಗೆ ಸೇರಿಸುವ ಬಗ್ಗೆ ಚರ್ಚಿಸಲಿದೆ. ಬರಪರಿಸ್ಥಿತಿ ಅಧ್ಯಯನಕ್ಕಾಗಿ ಕೇಂದ್ರ ಸರ್ಕಾರ ಕಳುಹಿಸಿರುವ ಅಧಿಕಾರಿಗಳ ತಂಡಗಳು 13 ಜಿಲ್ಲೆಗಳಿಗೆ ಭೇಟಿ ನೀಡಿವೆ. ಕೇಂದ್ರ ತಂಡಗಳು ಸಂಗ್ರಹಿಸಿರುವ ಮಾಹಿತಿ ಹಾಗೂ ರಾಜ್ಯ ಸರ್ಕಾರ ಒದಗಿಸಬೇಕಿರುವ ಮಾಹಿತಿ ಕುರಿತು ಚರ್ಚೆ ನಡೆಯಲಿದೆ. ಕೇಂದ್ರ ತಂಡಕ್ಕೆ ಪೂರಕ ಮಾಹಿತಿ ಸಲ್ಲಿಸುವ ಕುರಿತು ನಿರ್ಧರಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಮೋದಿ, ಶಾ ಸಂಹಾರ ಸಮಯ ಬಂದಿದೆ: ಬೆಳಮಗಿ

ಕಲಬುರಗಿ: 'ನಮ್ಮ ನಾಯಕ ರಾಹುಲ್ ಗಾಂಧಿ ಅವರನ್ನು 'ರಾವಣ'ನಿಗೆ ಹೋಲಿಸಿದ ನಿಮ್ಮ (ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ) ವಧೆಯ (ಸಂಹಾರ) ಸಮಯ ಬಂದಿದೆ' ಎಂದು ಕಾಂಗ್ರೆಸ್ ಮುಖಂಡ ರೇವುನಾಯಕ ಬೆಳಮಗಿ ಗುಡುಗಿದರು.

ರಾಹುಲ್ ಗಾಂಧಿ ಅವರನ್ನು ರಾವಣನಂತೆ ಚಿತ್ರಿಸಿದ ಪೋಸ್ಟರ್ ಖಂಡಿಸಿ ಶನಿವಾರ ನಡೆದ ಪ್ರತಿಭಟನೆಯಲ್ಲಿ ಮಾತನಾಡಿ, 'ನೀವು ಕೇವಲ ರಾಮ ಮಂದಿರ ಕಟ್ಟುತ್ತಿದ್ದೀರಿ. ಆದರೆ, ನಮ್ಮ ಬಳಿ ಶ್ರೀರಾಮನೇ ಇದ್ದಾನೆ. ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ ಶ್ರೀರಾಮ ಇದ್ದಂತೆ. ನಿಮ್ಮ ವಧೆ ಕಾಲ ಬಂದಿದ್ದರಿಂದ ಇಂತಹ ಕೆಲಸ ಮಾಡುತ್ತಿದ್ದೀರಿ' ಎಂದರು.

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)

KSIIDC

"ಖನಿಜ ಭವನ", 4ನೇ ಮಹಡಿ, ಪೂರ್ವ ಭಾಗ, ನಂ. 49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–1 ದೂರವಾಣಿ: 080–22258131–33, ಫ್ಯಾಕ್ಸ್: 080–22255740. ಇ–ಮೇಲ್: murthy.ksiidc@gmail.com // info@ksiidc.com ವೆಬ್‌ಸೈಟ್: www.ksiidc.com

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ತಾಂತ್ರಿಕ ಸಿಬ್ಬಂದಿ (ಗುತ್ತಿಗೆ ಆಧಾರದ ಮೇಲೆ) ನೇಮಕಾತಿಗಾಗಿ ಅಧಿಸೂಚನೆ

ಕರ್ನಾಟಕ ರಾಜ್ಯ ಕೈಗಾರಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿಯು), ಕರ್ನಾಟಕ ಸರ್ಕಾರ, ಇವರು ಶಿವಮೊಗ್ಗ ವಿಮಾನ ನಿಲ್ದಾಣವನ್ನು ನಿರ್ವಹಿಸುತ್ತಿದ್ದಾರೆ. ಏಕೀಕೃತ ವೇತನದ ಮೇಲೆ 1 ವರ್ಷದ ಅವಧಿಗೆ ಗುತ್ತಿಗೆಯ ಮೇಲೆ ಕೆಳಗಿನ ಸಿಬ್ಬಂದಿಯನ್ನು ನೇಮಿಸಲು ಪ್ರಸ್ತಾಪಿಸಲಾಗಿದೆ. ಅಭ್ಯರ್ಥಿಗಳ ಕಾರ್ಯಕ್ಷಮತೆಯ ಆಧಾರದ ಮೇಲೆ ಗುತ್ತಿಗೆಯ ಅವಧಿಯನ್ನು ಅವಶ್ಯಕತೆಗೆ ಅನುಗುಣವಾಗಿ ಇನ್ನೊಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ವಿಸ್ತರಿಸಲಾಗುತ್ತದೆ.

ಕ್ರ. ಸಂ.	ಹುದ್ದೆಯ ಹೆಸರು	ವಿದ್ಯಾರ್ಹತೆ ಮತ್ತು ಅನುಭವ ವಿವರ	ಏಕೀಕೃತ ವೇತನ	ವಯೋಮಿತಿ
01	ವಿಮಾನ ನಿಲ್ದಾಣದ ನಿರ್ದೇಶಕರು (ಒಂದು ಹುದ್ದೆ)	1. ಅಭ್ಯರ್ಥಿಗಳು ಬಿಜಿನೆಸ್, ಏವಿಯೇಷನ್ ಅಡ್ಮಿನಿಸ್ಟ್ರೇಷನ್ ಅಥವಾ ಸಂಬಂಧಿತ ಕ್ಷೇತ್ರದಲ್ಲಿ ಬ್ಯಾಚುಲರ್ಸ್ ಪದವಿಯನ್ನು ಹೊಂದಿರಬೇಕು 2. ಕಾರ್ಯನಿರ್ವಾಹಕ, ವೃತ್ತಿಪರ ಮಟ್ಟದ ವಿಮಾನ ನಿಲ್ದಾಣ ನಿರ್ವಹಣೆಯಲ್ಲಿ 7 ವರ್ಷಗಳ ಅನುಭವ 3. ಅಭ್ಯರ್ಥಿಯು ಅರ್ಹ ಚಾಲನಾ ದಾಖಲಾತಿಗಳೊಂದಿಗೆ ರಾಜ್ಯ ಚಾಲಕರ ಪರವಾನಗಿಯನ್ನು ಹೊಂದಿರಬೇಕು 4. ಪೈಲಟ್ ಪರವಾನಗಿಗೆ ಸಹ ಆದ್ಯತೆ ನೀಡಲಾಗುತ್ತದೆ 5. ಅಭ್ಯರ್ಥಿಗಳು ಕೆಳಗಿನ ಪರಿಶೀಲನೆಯಲ್ಲಿ ಪರಿಣತಿಯನ್ನು ಹೊಂದಿರಬೇಕು: • ಡಿಜಿಸಿಎ ಅನುಸಾರ ಫ್ಲೈಟ್ ಸೇಫ್ಟಿ ಡಾಕ್ಯುಮೆಂಟೇಶನ್ ಸಿಸ್ಟಮ್ ಅನ್ನು ಅನುಷ್ಠಾನಗೊಳಿಸುವುದು ಮತ್ತು ನಿರ್ವಹಿಸುವುದು • ಪರಿಕಲ್ಪನೆ ವಿನ್ಯಾಸ ಏರ್‌ಸೈಡ್ ಇನ್‌ಫ್ರಾಸ್ಟ್ರಕ್ಚರ್, ಟರ್ಮಿನಲ್ ಸಿಸ್ಟಮ್ಸ್ ಮತ್ತು ಲ್ಯಾಂಡ್ ಸೈಡ್ ಸೌಲಭ್ಯಗಳಲ್ಲಿ ಜ್ಞಾನ • ಗ್ರೌಂಡ್ ಟ್ರಾನ್ಸ್‌ಪೋರ್ಟೇಷನ್ ಟರ್ಮಿನಲ್ ಮತ್ತು ಏರ್‌ಸೈಡ್ ಕಾರ್ಯಾಚರಣೆಗಳ ಏಕೀಕರಣ. • ಏರೋಸ್ಪೇಸ್ ಡೊಮಿನಿಯನ್‌ನಲ್ಲಿ ಸಿಸ್ಟಮ್ಸ್ ಸುರಕ್ಷತೆ ಅಗತ್ಯತೆಗಳ ಅಭಿವೃದ್ಧಿ ಮತ್ತು ವಿಮರ್ಶೆ. • ಏರ್ ಟ್ರಾಫಿಕ್ ನಿಯಂತ್ರಣ ಕಾರ್ಯವಿಧಾನದ ಕಾರ್ಯಾಚರಣೆಗಳು. • ಏರ್‌ಕ್ರಾಫ್ಟ್ ಮತ್ತು ವಿಮಾನ ನಿಲ್ದಾಣದ ಕಾರ್ಯಾಚರಣೆಯ ಕೈಪಿಡಿಗಳು, ಡಿಜಿಸಿಎ ಅನುಮೋದನೆಯನ್ನು ಪಡೆದ ನಂತರ ಪರಿಷ್ಕರಣೆ ತಿದ್ದುಪಡಿಗಳ ಸಂಯೋಜನೆ.	ರೂ.1,25,000/–	ಕನಿಷ್ಠ ವಯೋಮಿತಿ: 36 ವರ್ಷಗಳು
02	ಭದ್ರತಾ ಮುಖ್ಯಸ್ಥ (ಒಂದು ಹುದ್ದೆ)	• ಅಭ್ಯರ್ಥಿಗಳು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಪಡೆದಿರಬೇಕು. • ಅಂತರಾಷ್ಟ್ರೀಯ, ಪ್ರಾದೇಶಿಕ ಮತ್ತು ರಾಷ್ಟ್ರೀಯ ವಾಯುಯಾನ ಭದ್ರತಾ ನಿಯಮಗಳ ಜ್ಞಾನ. • ವಿಮಾನ ನಿಲ್ದಾಣದ ವಾಯುಯಾನ ಭದ್ರತಾ ಕಾರ್ಯಾಚರಣೆಗಳಲ್ಲಿ ಸಾಕಷ್ಟು ಅನುಭವ. • ಪೊಲೀಸ್ ಭದ್ರತೆ, ಗುಪ್ತಚರ, ತನಿಖಾ ಸಂಸ್ಥೆಗಳು ಮತ್ತು ಸೈಬರ್ ಭದ್ರತೆಯಂತಹ ಇತರ ಭದ್ರತೆ ಸಂಬಂಧಿತ ಜಾರಿ ಕ್ಷೇತ್ರದಲ್ಲಿ ಅನುಭವ. • ಭದ್ರತಾ ವ್ಯವಸ್ಥೆಗಳ ಜ್ಞಾನ ಮತ್ತು ಪ್ರವೇಶ ನಿಯಂತ್ರಣ, ಗ್ರೌಂಡ್ ಮತ್ತು ವಿಮಾನದ ಭದ್ರತೆ. • ಕಂಪ್ಯೂಟರ್ ಸಾಕ್ಷರತೆ. • ವಿಮಾನ ನಿಲ್ದಾಣದಿಂದ ಭದ್ರತಾ ಅಧಿಕಾರಿಯಾಗಿ 5 ವರ್ಷಗಳ ಅನುಭವ.	ರೂ.75,000/–	ಕನಿಷ್ಠ ವಯೋಮಿತಿ: 36 ವರ್ಷಗಳು

- ➢ ಆಸಕ್ತ ಅಭ್ಯರ್ಥಿಗಳು ಬೆಂಗಳೂರಿನ ಕೆಎಸ್‌ಐಐಡಿಸಿ ಯಲ್ಲಿ **13.10.2023** ರಂದು ಬೆಳಿಗ್ಗೆ **9.00** ಗಂಟೆಗೆ ನಡೆಸಲಾಗುವ ನೇರ ಸಂದರ್ಶನಕ್ಕೆ ವಿದ್ಯಾರ್ಹತೆ/ಅಂಕಪಟ್ಟಿ ಮತ್ತು ಅನುಭವದ ವಿವರಗಳೊಂದಿಗೆ ಹಾಜರಾಗಬಹುದು.
- ➢ ಕೆಎಸ್‌ಐಐಡಿಸಿ ಮಾನದಂಡಗಳ ಅನುಸಾರ ಇತರೆ ಭತ್ಯೆಗಳು, ಟಿಎ, ಡಿಎಗಳು ಅನ್ವಯಿಸುತ್ತವೆ.
- ➢ ಆಯ್ದ ಸಿಬ್ಬಂದಿಯನ್ನು ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ನಿಯೋಜಿಸಲಾಗುವುದು
- ➢ ಯಾವುದೇ ಸ್ಪಷ್ಟನೆಗಾಗಿ ದಯವಿಟ್ಟು ಮೊಬೈಲ್ ಸಂಖ್ಯೆ: 98458 33566 ಅನ್ನು ಸಂಪರ್ಕಿಸಿ

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು

ಬಾಗಲಕೋಟೆ, ವಿಜಯನಗರ, ಧಾರವಾಡ ಜಿಲ್ಲೆಗಳಲ್ಲಿ ಕೇಂದ್ರ ತಂಡದ ಪ್ರವಾಸ

ಕೈಕೊಟ್ಟ ಮಳೆ, ಬೆಳೆ: ಕೃಷಿಕರ ಅಹವಾಲು

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಒಣಗಿದ ಕಬ್ಬು, ಹೂವು ಬಿಡದ, ರೋಗಕ್ಕೆ ತುತ್ತಾದ ತೊಗರಿ, ತೆನೆಯಾಗದ ಮೆಕ್ಕೆಜೋಳ, ನೆಲ ಬಿಟ್ಟು ಮೇಲೇಳದ ಮೆಣಸಿನಕಾಯಿ ಗಿಡಗಳನ್ನು ಶನಿವಾರ ಬಾಗಲಕೋಟೆ ಜಿಲ್ಲೆಯ ವಿವಿಧೆಡೆ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ಜಂಟಿ ಕಾರ್ಯದರ್ಶಿ ಅಜಿತ್ ಕುಮಾರ ಸಾಹು ನೇತೃತ್ವದ ಬರ ಅಧ್ಯಯನ ತಂಡ ವೀಕ್ಷಿಸಿತು.

'ಎರಡು ಎಕರೆ ಕಬ್ಬಿಗೆ ₹70 ಸಾವಿರಕ್ಕೂ ಹೆಚ್ಚು ಖರ್ಚು ಮಾಡಿದ್ದೇನೆ. ಮಳೆ ಹಾಗೂ ನಾಲೆ ನೀರಿನ ಕೊರತೆಯಿಂದ ಬೆಳೆದಿಲ್ಲ. ಇದನ್ನು ತೆಗೆದು ಬೇರೆ ಹಾಕಲು ₹40 ಸಾವಿರ ಬೇಕು. ಹಣವಿಲ್ಲದ್ದರಿಂದ ಹಾಗೆಯೇ ಬಿಟ್ಟಿರುವೆ. ಕುಟುಂಬ ಸಾಗಿಸುವುದು ಕಷ್ಟವಾಗಿದೆ' ಎಂದು ಬಾಗಲಕೋಟೆ ತಾಲ್ಲೂಕಿನ ಹೊಸೂರು ಗ್ರಾಮದ ದಾವಲ್‌ಸಾಬ್ ಕಾಸಿನಕುಂಟೆ, ತಂಡದ ಮುಂದೆ ಅಳಲು ತೋಡಿಕೊಂಡರು.

ಚಿಟಗಿನಕೊಪ್ಪ ಶಿವರಾಯಪ್ಪ ಅವರ ಹೊಲದ ತೊಗರಿಗೆ ರೋಗ ತಗುಲಿರುವುದನ್ನು ಅಜಿತ್ ಕುಮಾರ ಸಾಹು ವೀಕ್ಷಿಸಿದರು. 'ಮುಂದಿನ ದಿನಗಳಲ್ಲಿ ಅದು ಹೂವು ಬಿಟ್ಟು, ಕಾಯಿ ಕಟ್ಟುವುದಿಲ್ಲ. ಇದರಿಂದ ಮಾಡಿದ ಖರ್ಚೂ ಬರುವುದಿಲ್ಲ' ಎಂದು ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಶಶಿಧರ ಕುರೇರ ಅವರಿಗೆ ಮಾಹಿತಿ ನೀಡಿದರು.

ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕಿನ ರೈತರೊಬ್ಬರ ಹೊಲಕ್ಕೆ ಭೇಟಿ ನೀಡಿದ್ದ ಕೇಂದ್ರ ಬರ ಅಧ್ಯಯನ ತಂಡದ ಸದಸ್ಯರು ಒಣಗಿದ್ದ ಮೆಕ್ಕೆಜೋಳ ವೀಕ್ಷಿಸಿದರು

ಎಣ್ಣೆ ಬೀಜಗಳ ಅಭಿವೃದ್ಧಿ ಇಲಾಖೆ ನಿರ್ದೇಶಕ ಜೆ. ಪೊನ್ನುಸ್ವಾಮಿ, ವೆಚ್ಚ ವ್ಯವಹಾರಗಳ ಇಲಾಖೆ ಸಹಾಯಕ ನಿರ್ದೇಶಕ ಮಹೇಂದ್ರ ಚಂಡೇಲಯ, ನೀತಿ ಆಯೋಗದ ಸಂಶೋಧನಾಧಿಕಾರಿ ಶಿವಚರಣ್ ಮೀನಾ, ರಾಜ್ಯ ಕೃಷಿ ಆಯುಕ್ತ ವೈ.ಎಸ್. ಪಾಟೀಲ ಬರ ಅಧ್ಯಯನ ತಂಡದಲ್ಲಿದ್ದರು.

ಭತ್ತ ತೆನೆಗಟ್ಟಿಲ್ಲ (ಧಾರವಾಡ ವರದಿ): 'ಭತ್ತ ತೆನೆಗಟ್ಟಿಲ್ಲ, ಮೆಕ್ಕೆಜೋಳದ ತೆನೆಗಳಲ್ಲಿ ಕಾಳಿಲ್ಲ' ಎಂದು ಬರ ಅಧ್ಯಯನ ತಂಡಕ್ಕೆ ತಾಲ್ಲೂಕಿನ ಹಾರೋಬೆಳವಾಡಿ ಗ್ರಾಮದ ರೈತರು ಪರಿಸ್ಥಿತಿ ವಿವರಿಸಿದರ. ಕಟಾವು ಮಾಡಿಕೊಂಡು ತಂದಿದ್ದ ಬೆಳೆಗಳನ್ನು ತಂಡದ ಅಧಿಕಾರಿಗಳಿಗೆ ತೋರಿಸಿದರು.

ಕಲಘಟಗಿ ತಾಲ್ಲೂಕಿನ ದೇವಿಕೊಪ್ಪ ಗ್ರಾಮದ ರೈತ ನಾಗೇಶ್ ಇಟಗಿ ಅವರು, ತಂಡದ ಅಧಿಕಾರಿಗಳ ಜತೆ ಹಿಂದಿಯಲ್ಲಿ ಮಾತನಾಡಿ ಅಧಿಕಾರಿಗಳಿಗೆ ಅಳಲು ತೋಡಿಕೊಂಡರು.

'ಕಲಘಟಗಿ, ಅಳ್ನಾವರ ಭಾಗದಲ್ಲಿ ಭತ್ತ, ಕಬ್ಬು, ಮುಸುಕಿನ ಜೋಳ ಸೇರಿ ಎಲ್ಲ ಬೆಳೆಗಳು ಸೊರಗಿವೆ, ಮೇಲ್ನೋಟಕ್ಕೆ ಹಸಿರು ಕಾಣುತ್ತದೆ. ಕಲಘಟಗಿ, ಅಳ್ನಾವರ, ಅಣ್ಣಿಗೇರಿ ತಾಲ್ಲೂಕುಗಳನ್ನೂ ಬರಗಾಲ ಪೀಡಿತ ತಾಲ್ಲೂಕುಗಳ ಪಟ್ಟಿಗೆ ಸೇರಿಸಬೇಕು' ಎಂದು ರೈತರು ಮನವಿ ಸಲ್ಲಿಸಿದರು.

'ಸಾಲ ತೀರಿಸಲು ಗುಳೆ ಅನಿವಾರ್ಯ'

ಹೊಸಪೇಟೆ (ವಿಜಯನಗರ): 'ಕೃಷಿಗೆ ಮಾಡಿದ ಸಾಲ ತೀರಿಸಲು ಗುಳೆ ಹೋಗದೆ ಬೇರೆ ದಾರಿ ಇಲ್ಲ' ಎಂದು ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ರಾಯರಾಳ ತಾಂಡಾದ ಪಾದ್ರಿ ಸಕ್ರಿಬಾಯಿ ಅಳಲು ತೋಡಿಕೊಂಡರು.

ವಿಜಯನಗರ ಜಿಲ್ಲೆಯ ನಾಲ್ಕು ಹಾಗೂ ಬಳ್ಳಾರಿ ಜಿಲ್ಲೆಯ ಒಂದು ತಾಲ್ಲೂಕಿಗೆ ಶನಿವಾರ ಭೇಟಿ ನೀಡಿದ್ದ ಕೇಂದ್ರದ ಬರ ಅಧ್ಯಯನ ತಂಡ, ರೈತರೊಂದಿಗೆ ಸಮಾಲೋಚಿಸಿದಾಗ ರೈತರು ತಮ್ಮ ಸ್ಥಿತಿ ಬಿಚ್ಚಿಟ್ಟರು.

ಹಂಪಾಪಟ್ಟಣ ಗ್ರಾಮದ ಗುಲ್ ಶೇಖರನಾಯ್ಕ ಶೇಂಗಾ ಬೆಳೆ ಸಂಪೂರ್ಣ ನಾಶವಾಗಿದ್ದು, ಕೃಷಿ ಸಾಲ ಮನ್ನಾ ಮಾಡಿಸಿ ಎಂದು ಕೋರಿದರು.

ಕೊಟ್ಟೂರು ತಾಲ್ಲೂಕಿನ ಮಲ್ಲನಾಯಕನಹಳ್ಳಿಯ ದೊಡ್ಡಮನಿ ಶ್ಯಾಮಣ್ಣ, '12 ಎಕರೆ ಜಮೀನಿನಲ್ಲಿ ಬೆಳೆದಿದ್ದ ಮೆಕ್ಕೆಜೋಳ, ರಾಗಿ ಹಾಗೂ ಈರುಳ್ಳಿ ಬೆಳೆಗಳು ಹಾಳಾಗಿವೆ. ₹ 2 ಲಕ್ಷ ಸಾಲವಾಗಿದೆ. ಹೊಟ್ಟೆ ಹೊರೆಯಲು ಹಾಗೂ ಸಾಲ ತೀರಿಸಲು ಕೂಲಿ ಕೆಲಸಕ್ಕೆ ಹೋಗುತ್ತಿದ್ದೇನೆ' ಎಂದರು. ಇದನ್ನು ಕೇಳಿದ ಅಧಿಕಾರಿಗಳು ಕ್ಷಣ ಹೊತ್ತು ಮೌನಕ್ಕೆ ಶರಣಾದರು.

ಹೊಸಪೇಟೆ ತಾಲ್ಲೂಕಿನ ನಂದಿಬಂಡಿಯಲ್ಲಿ ತಂಡ ಬೆಳೆ ಹಾನಿ ವೀಕ್ಷಿಸಿತು. ಅಲ್ಲಿನ ಮರಿಯವ್ವ ಅವರ 3.78 ಹೆಕ್ಟೇರ್ ಜಮೀನಿನಲ್ಲಿ ಒಣಗಿ ಹೋಗಿದ್ದ ಮೆಕ್ಕಜೋಳ ಬೆಳೆಯನ್ನು ತಂಡ ವೀಕ್ಷಿಸಿತು.

ಕೇಂದ್ರ ತಂಡದ ನೇತೃತ್ವ ವಹಿಸಿದ್ದ ಡಿ.ರಾಜೇಶ್ವರ ರಾವ್, 'ಹಿಂದೆ ಭೇಟಿ ನೀಡಿದ್ದ ಎರಡು ಜಿಲ್ಲೆಗಳಿಗಿಂತ ವಿಜಯನಗರ ಜಿಲ್ಲೆಯಲ್ಲಿ ಹೆಚ್ಚಿನ ಹಾನಿ ಆಗಿದೆ. ಅಧಿಕಾರಿಗಳು, ರೈತರಿಂದ ಪಡೆದ ಮಾಹಿತಿ ಜತೆಗೆ, ರಾಜ್ಯ ಸರ್ಕಾರದ ಬೇಡಿಕೆಗಳನ್ನು ಸೇರಿ ಕೇಂದ್ರಕ್ಕೆ ವರದಿ ಸಲ್ಲಿಸಲಾಗುವುದು' ಎಂದರು.

ಗೋದಾಮಿಗೆ ನುಗ್ಗಿ ರಕ್ಷಣೆಗೆ ಯತ್ನಿಸಿದ್ದ ಸ್ಥಳೀಯರು • ರಕ್ಷಣೆಗೆ ಅಡ್ಡಿಯಾದ ಬೆಂಕಿಯ ಕೆನ್ನಾಲಗೆ

ಪಟಾಕಿ ಸದ್ದು: ಕೇಳಿಸದ ಕಾರ್ಮಿಕರ ಕೂಗು

ಪ್ರಜಾವಾಣಿ ವಾರ್ತೆ

ಆನೇಕಲ್ ತಾಲ್ಲೂಕಿನ ಗಡಿಭಾಗದ ಅತ್ತಿಬೆಲೆಯ ಪಟಾಕಿ ಗೋದಾಮು ಮತ್ತು ವಾಹನ ಹೊತ್ತಿ ಉರಿದವು

ಬೆಂಗಳೂರು: 'ಶಿವಕಾಶಿಯಿಂದ ಲಾರಿಯಲ್ಲಿ ತರಲಾಗಿದ್ದ ಪಟಾಕಿ ಬಾಕ್ಸ್‌ಗಳನ್ನು ತಮಿಳುನಾಡಿನ ಕಾರ್ಮಿಕರು ಗೋದಾಮಿನೊಳಗೆ ಸಾಗಿಸುತ್ತಿದ್ದರು. ಹೋಲ್‌ಸೇಲ್ ದರದಲ್ಲಿ ಪಟಾಕಿ ಖರೀದಿಸಲು ಕರ್ನಾಟಕದ ನಾಲ್ವರು ಮಳಿಗೆಗೆ ಬಂದಿದ್ದರು. ಏಕಾಏಕಿ ಬೆಂಕಿ ಹೊತ್ತಿಕೊಂಡು ಪಟಾಕಿಗಳು ಸಿಡಿದಿದ್ದರಿಂದ, ಇಡೀ ಮಳಿಗೆ ಬೆಂಕಿಗೆ ಆಹುತಿಯಾಯಿತು'

ಅತ್ತಿಬೆಲೆ ಗಡಿ ಪ್ರದೇಶದಲ್ಲಿರುವ 'ಶ್ರೀ ಬಾಲಾಜಿ ಟ್ರೇಡರ್ಸ್' ಪಟಾಕಿ ಮಳಿಗೆಯಲ್ಲಿ ಶನಿವಾರ ಸಂಭವಿಸಿದ್ದ ಬೆಂಕಿ ದುರಂತದ ಬಗ್ಗೆ ಸ್ಥಳೀಯರು ನೀಡಿದ ಮಾಹಿತಿ ಇದು.

'ಈ ಪ್ರದೇಶದಲ್ಲಿ ಪಟಾಕಿ ಮಳಿಗೆಗಳು ಸಾಮಾನ್ಯ. ಆದರೆ, ಇಷ್ಟು ಪ್ರಮಾಣದಲ್ಲಿ ದುರಂತ ಕಂಡಿರಲಿಲ್ಲ' ಎಂದು ಸ್ಥಳೀಯರು ಕಳವಳ ವ್ಯಕ್ತಪಡಿಸಿದರು.

ಪಟಾಕಿ ಮಳಿಗೆ ಎದುರಿನಲ್ಲಿರುವ ಹೊಗೆ ತಪಾಸಣೆ ಕೇಂದ್ರದ ರಮೇಶ್, 'ಪಟಾಕಿ ಅಂಗಡಿಯಲ್ಲಿ ತಮಿಳುನಾಡಿನ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಮಾಲೀಕ ನವೀನ್ ರೆಡ್ಡಿ ಮಳಿಗೆ ನಿರ್ವಹಣೆ ಮಾಡುತ್ತಿದ್ದರು. ಶನಿವಾರ 20ಕ್ಕೂ ಹೆಚ್ಚು ಮಂದಿ ಮಳಿಗೆಯೊಳಗೆ ಇದ್ದರು. ಮಧ್ಯಾಹ್ನ ಏಕಾಏಕಿ ಪಟಾಕಿ ಸದ್ದು ಕೇಳಿಸಿತ್ತು. ಹೊರಗೆ ಬಂದು ನೋಡಿದಾಗ, ಪಟಾಕಿ ಮಳಿಗೆಗೆ ಬೆಂಕಿ ಹೊತ್ತಿಕೊಂಡಿತ್ತು' ಎಂದರು.

'ದುರಂತದ ವೇಳೆ ಮಾಲೀಕ ನವೀನ್ ಹೊರಗೆ ಓಡಿಬಂದಿದ್ದರು. ಬೆಂಕಿ ಕಡಿಮೆ ಇದ್ದಿದ್ದರಿಂದ, ಗಲ್ಲಾ ಪೆಟ್ಟಿಗೆಯಲ್ಲಿದ್ದ ಹಣ ಪಡೆಯಲು ಪುನಃ ಒಳಗೆ ಹೋಗಿದ್ದರು. ಈ ವೇಳೆ ಅವರಿಗೂ ಬೆಂಕಿ ತಾಗಿತು. ಅದೇ ಸ್ಥಿತಿಯಲ್ಲೇ ಅವರು ಹೊರಗೆ ಓಡಿ ಬಂದರು. ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ದರು' ಎಂದು ತಿಳಿಸಿದರು.

'ಸ್ಥಳೀಯ ಯುವಕರ ಗುಂಪು, ಮಳಿಗೆಯಲ್ಲಿದ್ದ ಕಾರ್ಮಿಕರನ್ನು ರಕ್ಷಿಸಲು ಮುಂದಾಗಿತ್ತು. ಆದರೆ, ಪಟಾಕಿಗಳು ಜೋರಾಗಿ ಸಿಡಿಯುತ್ತಿದ್ದವು. ಹತ್ತಿರ ಹೋಗಲು ಸಹ ಆಗಲಿಲ್ಲ. ಕೆಲ ನಿಮಿಷಗಳಲ್ಲಿ ದೊಡ್ಡ ದೊಡ್ಡ ಪಟಾಕಿಗಳು ಸಿಡಿಯಲಾರಂಭಿಸಿದವು. ಅವುಗಳಿಂದಾದ ಬೆಂಕಿಯಿಂದಾಗಿ ಸ್ಥಳೀಯರು ಭಯಪಟ್ಟು ಹತ್ತಿರ ಹೋಗಲಿಲ್ಲ' ಎಂದು ಪರಿಸ್ಥಿತಿ ವಿವರಿಸಿದರು.

ಕೇಳಿಸದ ಕಾರ್ಮಿಕರ ಕೂಗು: 'ಪಟಾಕಿ ತುಂಬಿದ್ದ ಲಾರಿ ಹಾಗೂ ಮಳಿಗೆ ಎದುರು ನಿಂತಿದ್ದ ಎರಡು ವಾಹನಗಳಿಗೆ ಬೆಂಕಿ ತಗುಲಿತ್ತು. ಪಟಾಕಿಗಳು ಸಿಡಿಯುತ್ತಲೇ ಇದ್ದವು. ಕೆಲ ನಿಮಿಷಗಳಲ್ಲಿ ಇಡೀ ಮಳಿಗೆಯಲ್ಲಿ ಬೆಂಕಿ ಹೊತ್ತಿ ಉರಿಯಿತು' ಎಂದು ರಮೇಶ್ ಹೇಳಿದರು.

'ಮಳಿಗೆಯಲ್ಲಿದ್ದ ನಾಲ್ವರು, ಹೊರಗೆ ಓಡಿ ಬಚಾವಾದರು. ಆದರೆ, ಇತರರು ಮಳಿಗೆಯೊಳಗೆ ಇದ್ದು ಸಜೀವ ದಹನವಾದರು. ಪಟಾಕಿ ಸದ್ದು ಜೋರಾಗಿದ್ದರಿಂದ, ಕಾರ್ಮಿಕರ ಕೂಗು ಯಾರಿಗೂ ಕೇಳಿಸಲಿಲ್ಲ. ಇದರಿಂದಾಗಿ ತಕ್ಷಣವೇ ರಕ್ಷಣಾ ಕಾರ್ಯಾಚರಣೆ ಸಾಧ್ಯವಾಗಲಿಲ್ಲ' ಎಂದು ತಿಳಿಸಿದರು.

'ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು ಸ್ಥಳಕ್ಕೆ ಬಂದು ಕ್ರಮೇಣ ಬೆಂಕಿ ನಂದಿಸಿದರು. ಅಷ್ಟರಲ್ಲೇ ಇಡೀ ಮಳಿಗೆ ಪೂರ್ಣವಾಗಿ ಸುಟ್ಟು ಹೋಗಿತ್ತು. ಅಲ್ಲಲ್ಲಿ ಬಿದ್ದಿದ್ದ ಕಾರ್ಮಿಕರ ಮೃತದೇಹಗಳನ್ನು ಹೊರಗೆ ತೆಗೆದು ಸಮೀಪದ ಆಸ್ಪತ್ರೆಗೆ ಸಾಗಿಸಿದರು' ಎಂದು ಹೇಳಿದರು.

ತಮಿಳುನಾಡಿನಿಂದ ಬಂದ ಕುಟುಂಬಸ್ಥರು: 'ಮೃತರಲ್ಲಿ ಬಹುತೇಕರು, ತಮಿಳುನಾಡಿನ ನಿವಾಸಿಗಳು. ಪಟಾಕಿ ದುರಂತದ ಸುದ್ದಿ ತಿಳಿಯುತ್ತಿದ್ದಂತೆ ತಮಿಳುನಾಡಿನಲ್ಲಿರುವ ಸಂಬಂಧಿಕರು ಸ್ಥಳಕ್ಕೆ ಬಂದರು. ಅವರ ಆಕ್ರಂದನ ಮುಗಿಲುಮುಟ್ಟಿತ್ತು' ಎಂದು ರಮೇಶ್ ತಿಳಿಸಿದರು.

'ಗೋದಾಮು ಅಕ್ರಮ'

'ಪಟಾಕಿ ಮಳಿಗೆ ತೆರೆಯಲು ನಿಯಮಗಳಿವೆ. ಅವುಗಳನ್ನು ಉಲ್ಲಂಘಿಸಿ ಶ್ರೀ ಬಾಲಾಜಿ ಟ್ರೇಡರ್ಸ್ ಮಳಿಗೆ ತೆರೆದಿರುವ ಮಾಹಿತಿ ಇದೆ. ಈ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಸ್ಥಳೀಯ ಪೊಲೀಸ್ ಠಾಣೆ, ಅಗ್ನಿಶಾಮಕ ದಳದ ಅಧಿಕಾರಿಗಳಿಂದ ನಿರಾಕ್ಷೇಪಣಾ ಪತ್ರ ಪಡೆದು ಜಿಲ್ಲಾಧಿಕಾರಿ ಮೂಲಕ ಅನುಮತಿ ಪಡೆಯಬೇಕು. ಆದರೆ, ಪಟಾಕಿ ಮಳಿಗೆ ಮಾಲೀಕರು ಅನುಮತಿ ಪಡೆದಿದ್ದಾರೆಯೇ ಅಥವಾ ಅಕ್ರಮವಾಗಿ ಮಳಿಗೆ ತೆರೆದಿದ್ದರೇ ಎಂಬುದು ಪರಿಶೀಲನೆಯಿಂದ ತಿಳಿಯಬೇಕಿದೆ' ಎಂದು ಮಾಹಿತಿ ನೀಡಿದರು.

'ಪಟಾಕಿ ಚೀಟಿ ನಡೆಸುತ್ತಿದ್ದ ನಾಲ್ವರು'

'ಕರ್ನಾಟಕದ ನಾಲ್ವರು, ಪಟಾಕಿ ಚೀಟಿ ನಡೆಸುತ್ತಿದ್ದರು. ದಸರಾ ಹಬ್ಬ ಹತ್ತಿರ ಬಂದಿದ್ದರಿಂದ, ಚೀಟಿ ಪ್ರಕಾರ ಪಟಾಕಿ ತೆಗೆದುಕೊಂಡು ಹೋಗಲು ಟಾಟಾ ಏಸ್ ವಾಹನದಲ್ಲಿ ಮಳಿಗೆಗೆ ಬಂದಿದ್ದರು. ಅವರು ಸಹ ಮೃತಪಟ್ಟಿರುವ ಮಾಹಿತಿ ಇದೆ' ಎಂದು ಸ್ಥಳೀಯರು ಹೇಳಿದರು.

'ಗುರುತು ಸಿಗದ ಮೃತದೇಹಗಳು'

'ದುರಂತ ಸ್ಥಳದಲ್ಲಿ ಸಿಕ್ಕ ಮೃತದೇಹಗಳನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಹೆಚ್ಚಿನವರ ಮುಖಗಳು ಸುಟ್ಟಿದ್ದು, ಗುರುತು ಸಿಗುತ್ತಿಲ್ಲ. ಆಸ್ಪತ್ರೆ ಆವರಣದಲ್ಲಿ ಸಂಬಂಧಿಕರ ಗೋಳು ನೋಡಲಾಗುತ್ತಿಲ್ಲ' ಎಂದು ಸ್ಥಳೀಯರು ಹೇಳಿದರು.

ಪೊಲೀಸರು, 'ಮೃತರ ಹೆಸರುಗಳು ಸದ್ಯಕ್ಕೆ ಗೊತ್ತಾಗಿಲ್ಲ. ಕೆಲಸ ಮಾಡುತ್ತಿದ್ದ ಕಾರ್ಮಿಕರ ಪಟ್ಟಿ ಸಂಗ್ರಹಿಸಲಾಗುತ್ತಿದೆ. ಜೊತೆಗೆ, ಸಂಬಂಧಿಕರಿಂದಲೂ ಮಾಹಿತಿ ಪಡೆಯಲಾಗುತ್ತಿದೆ' ಎಂದರು.

ಬೆಳಕಿನ ಹಬ್ಬಕ್ಕೂ ಮುನ್ನ ಕಮರಿದ ಜೀವಗಳು

ಪ್ರಜಾವಾಣಿ ವಾರ್ತೆ

ಆನೇಕಲ್ (ಬೆಂಗಳೂರು): ಬೆಳಕಿನ ಹಬ್ಬ ದೀಪಾವಳಿಯಲ್ಲಿ ಪಟಾಕಿ ವ್ಯಾಪಾರದಿಂದ ನಾಲ್ಕು ಕಾಸು ಕಾಣಬಹುದು ಎಂದು ನಿರೀಕ್ಷಿಸಿದ್ದ 12 ಜೀವಗಳು ಬೆಂಕಿಯ ಕೆನ್ನಾಲಿಗೆಯಲ್ಲಿ ಕಮರಿ ಹೋಗಿವೆ.

ತಾಲ್ಲೂಕಿನ ಅತ್ತಿಬೆಲೆಯ ರಾಷ್ಟ್ರೀಯ ಹೆದ್ದಾರಿಯ ಬಳಿ ಪಟಾಕಿ ದಾಸ್ತಾನು ಮಳಿಗೆಯಲ್ಲಿ ಶನಿವಾರ ಸಂಭವಿಸಿದ ಬೆಂಕಿಯಲ್ಲಿ ಕೇವಲ ಪಟಾಕಿಗಳಷ್ಟೇ ಅಲ್ಲ, ಬದುಕು ಕಟ್ಟಿಕೊಳ್ಳಲು ಬಂದ 12 ಅಮಾಯಕ ಜೀವಗಳ ಕನಸುಗಳೂ ದಹನ ಆಗಿವೆ. ಗುರುತಿಸಲಾಗಷ್ಟು ಸುಟ್ಟು ಕರಕಲಾಗಿರುವ 12 ಶವಗಳಲ್ಲಿ ಕೆಲವು ಮಕ್ಕಳ ಶವಗಳೂ ಕಾಣುತ್ತಿವೆ.

ಕರ್ನಾಟಕ-ತಮಿಳುನಾಡು ಗಡಿಭಾಗದ ಅತ್ತಿಬೆಲೆಯಲ್ಲಿ ಪ್ರತಿ ದೀಪಾವಳಿ ಹಬ್ಬಕ್ಕೂ ಒಂದು ತಿಂಗಳ ಮುನ್ನವೇ ಪಟಾಕಿ ಮಾರಾಟ ಮಳಿಗೆಗಳು ತಲೆ ಎತ್ತುತ್ತವೆ. ತಿಂಗಳಿಗೂ ಮುಂಚೆಯೇ ತಮಿಳುನಾಡಿನ ಶಿವಕಾಶಿಯಿಂದ ಪಟಾಕಿ ತಂದು ಇಲ್ಲಿಯ ಗೋದಮುಗಳಲ್ಲಿ ದಾಸ್ತಾನು ಮಾಡಲಾಗುತ್ತದೆ. ಅದೇ ರೀತಿ ಈ ಬಾರಿಯೂ ಶಿವಕಾಶಿಯಿಂದ ಲಾರಿ ಮತ್ತು ಪುಟ್ಟ ಸರಕು ಸಾಗಣೆ ವಾಹನದಲ್ಲಿ ತಂದಿದ್ದ ಪಟಾಕಿಯನ್ನು ಇಳಿಸುವಾಗ ದುರಂತ ಸಂಭವಿಸಿದೆ.

ಹಲವು ವರ್ಷಗಳಿಂದ ಅತ್ತಿಬೆಲೆಯಲ್ಲಿ ಪಟಾಕಿಯ ಮಾರಾಟದ ಭರಾಟೆ ಭರ್ಜರಿಯಾಗಿ ನಡೆಯುತ್ತಿತ್ತು. ಬೆಂಗಳೂರಿಗೂ ಇಲ್ಲಿಂದಲೇ ಪಟಾಕಿ ಸರಬರಾಜು ಆಗುತ್ತದೆ. ಆದರೆ ಹಿಂದೆಂದೂ ಇಂತಹ ಅವಘಡ ಸಂಭವಿಸಿರಲಿಲ್ಲ.

ಯಾವುದೇ ಸುರಕ್ಷಿತ ಕ್ರಮ ಇಲ್ಲ: ಅತ್ತಿಬೆಲೆ ಗಡಿಯಲ್ಲಿ ಹತ್ತಾರು ಬೃಹತ್ ಪಟಾಕಿ ಮಳಿಗೆಗಳು ದೀಪಾವಳಿಗೂ ಮುನ್ನ ಕೋಟ್ಯಂತರ ರೂಪಾಯಿ ವ್ಯಾಪಾರ ನಡೆಸುತ್ತವೆ. ಆದರೂ ಇಲ್ಲಿ ಯಾವುದೇ ಸುರಕ್ಷತೆ ಮತ್ತು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿಲ್ಲ. ಇದರಿಂದಾಗಿಯೇ ಈ ದುರಂತ ನಡೆದಿದೆ ಎನ್ನುತ್ತಾರೆ ಸ್ಥಳೀಯರು.

ಮೃತದೇಹಗಳನ್ನು ಸಾಗಿಸಲಾಯಿತು

ಘಟನೆ ವಿವರ

- **ಮಧ್ಯಾಹ್ನ 3 ಗಂಟೆ:** ಬಾಲಾಜಿ ಕ್ರ್ಯಾಕರ್ಸ್ ಗೋದಾಮಿಗೆ ಪಟಾಕಿ ತುಂಬಿದ ಲಾರಿ ಮತ್ತು ಸರಕು ಸಾಗಣೆ ವಾಹನ ಆಗಮನ
- **ಸಂಜೆ 3.30:** ಪಟಾಕಿ ಇಳಿಸುವಾಗ ಆಕಸ್ಮಿಕವಾಗಿ ಹೊತ್ತಿಕೊಂಡ ಬೆಂಕಿ
- **ಸಂಜೆ 4:** ಬೆಂಕಿ ಹೊತ್ತಿಕೊಂಡ ನಂತರ ಎಲ್ಲಾ ದಿಕ್ಕುಗಳಿಗೂ ಚಿಮ್ಮಲು ಆರಂಭಿಸಿದ ಪಟಾಕಿಗಳು. ಗೋದಾಮಿಗೂ ವ್ಯಾಪಿಸಿದ ಬೆಂಕಿಯ ಕೆನ್ನಾಲಗೆ. ದಟ್ಟವಾಗಿ ಆವರಿಸಿದ ಹೊಗೆ
- **ಸಂಜೆ 4.15:** ಅಗ್ನಿಶಾಮಕ ದಳದ ವಾಹನ ಆಗಮನ. ಸಿಬ್ಬಂದಿಯಿಂದ ಕಾರ್ಯಾಚರಣೆ
- **ಸಂಜೆ 4.30:** ಗಾಯಾಳುಗಳನ್ನು ರಕ್ಷಿಸಿ ಆಸ್ಪತ್ರೆಗೆ ರವಾನೆ
- **ಸಂಜೆ 5:** ಸತತ ಪಟಾಕಿ ಸದ್ದು, ದಟ್ಟವಾದ ಹೊಗೆ, ಸ್ಥಳದಲ್ಲಿ ಜಮಾಯಿಸಿದ ಜನಜಂಗುಳಿ
- **ಸಂಜೆ 7:** ಸತತ ನಾಲ್ಕೈದು ತಾಸು ಹೊತ್ತಿ ಉರಿದ ಗೋದಾಮು, ವಾಹನಗಳು. ಬೆಂಕಿ ನಂದಿಸಲು ಸಿಬ್ಬಂದಿ ಪರದಾಟ
- **ರಾತ್ರಿ 8:** ಬೆಂಕಿ ನಂದಿಸುವ ಕಾರ್ಯಾಚರಣೆ ಮುಕ್ತಾಯ. ಮೃತದೇಹಗಳಿಗಾಗಿ ಹುಡುಕಾಟ.
- **ರಾತ್ರಿ 8.30:** ಗುರುತಿಸಲಾಗದಷ್ಟು ಸುಟ್ಟು ಕರಕಲಾದ 12 ಶವ ಗೋದಾಮಿನಿಂದ ಹೊರಕ್ಕೆ ತಂದ ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ.
- **ರಾತ್ರಿ 8.40:** ನಾಲ್ಕು ಆಂಬುಲೆನ್ಸ್‌ಗಳಲ್ಲಿ ಆಸ್ಪತ್ರೆಗೆ ಶವಗಳ ರವಾನೆ

ಸುದ್ದಿ 2 ನಿಮಿಷ

ಜ್ವರದ ಕಾರಣ ಪತ್ತೆಗೆ ಸಲಕರಣೆ

ಅರಕಲಗೂಡು (ಹಾಸನ ಜಿಲ್ಲೆ): ಮನುಷ್ಯರಿಗೆ ಬರುವ ಜ್ವರದ ಕಾರಣವನ್ನು ನಿಖರವಾಗಿ ಪತ್ತೆ ಹಚ್ಚುವ 'ಸೆಲ್ ಫೇಸ್' ಎಂಬ ಆಧುನಿಕ ತಂತ್ರಜ್ಞಾನದ ಸಲಕರಣೆಯೊಂದನ್ನು ಅರಕಲಗೂಡು ಮೂಲದ ಯುವ ವಿಜ್ಞಾನಿ ಡಾ. ಕೋಮಲ್ ಕುಮಾರ್ ಸಂಶೋಧಿಸಿದ್ದಾರೆ.

ಈ ಬಗ್ಗೆ ಅವರು ಮಂಡಿಸಿರುವ ಪ್ರಬಂಧವು ಇಂಗ್ಲೆಂಡ್‌ನ ವಿಜ್ಞಾನ ಮಾಧ್ಯಮ 'ಸೆಲೆಕ್ಟ್ ಸೈನ್ಸ್'ನಲ್ಲಿ ಪ್ರಕಟವಾಗಿದೆ.

ಡಾ.ಕೋಮಲ್ ಕುಮಾರ್, ಜರ್ಮನಿ ದೇಶದ ಟುಮ್ ಸಂಸ್ಥೆಯ ಪ್ರೊ.ಅಲಿವರ್ ಹೈಡನ್ ಮತ್ತು ಪ್ರೊ. ಪರ್ಸಿನೊಲ್ಲೆ ಮಾರ್ಗದರ್ಶನದಲ್ಲಿ ಸಂಶೋಧಿಸಿರುವ ಈ ಉಪಕರಣದಿಂದ, ಮನುಷ್ಯರಿಗೆ ಬರುವ ಜ್ವರವು ವೈರಸ್‌ನಿಂದ ಬಂದಿದೆಯೇ ಅಥವಾ ಬ್ಯಾಕ್ಟೀರಿಯಾದಿಂದ ಬಂದಿದೆಯೇ ಎಂಬುದನ್ನು ಖಚಿತವಾಗಿ ಪತ್ತೆ ಹಚ್ಚಿ ಚಿಕಿತ್ಸೆ ನೀಡಲು ಸಹಾಯಕವಾಗಿದೆ.

'ಇದುವರೆಗಿನ ವೈದ್ಯಕೀಯ ತಂತ್ರಜ್ಞಾನದ ಸಲಕರಣೆಗಳಲ್ಲಿ ಜ್ವರದ ಕಾರಣದ ಪತ್ತೆ ಕಾರ್ಯ ಶೇ 50ರಷ್ಟು ಮಾತ್ರ ಸಾಧ್ಯತೆ ಇತ್ತು. ಹೊಸ ತಂತ್ರಜ್ಞಾನದ ಸಲಕರಣೆಯ ಮೂಲಕ ಶೇ 100ರಷ್ಟು ಖಚಿತವಾಗಿ ಕಾರಣವನ್ನು ಪತ್ತೆ ಮಾಡಿ, ಅಗತ್ಯ ಚಿಕಿತ್ಸೆ ನೀಡಲು ಸಹಕಾರಿಯಾಗಿದೆ' ಎಂದು ಡಾ.ಕೋಮಲ್ ತಿಳಿಸಿದ್ದಾರೆ.

ಪಟ್ಟಣದ ರತ್ನಮ್ಮ ಹಾಗೂ ದಿ.ಜವರಪ್ಪ ಅವರ ಪುತ್ರರಾದ ಕೋಮಲ್ ಕುಮಾರ್, ಸಿಂಗಪುರದ ಸಂಶೋಧನಾ ಕೇಂದ್ರ 'ಟುಮ್ ಕ್ರಿಯೇಟ್'ನಲ್ಲಿ ವಿಜ್ಞಾನಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕಡ್ಡಾಯ ಗ್ರಾಮೀಣ ಸೇವೆ: ಕಾಯ್ದೆಗೆ ತಿದ್ದುಪಡಿ?

ಬೆಂಗಳೂರು: ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ಕಲಿತ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದಲ್ಲಿ ಕಡ್ಡಾಯವಾಗಿ ಒಂದು ವರ್ಷ ಸೇವೆ ಸಲ್ಲಿಸಬೇಕೆಂಬ ಕಾಯ್ದೆಗೆ ತಿದ್ದುಪಡಿ ತರುವ ಕುರಿತಂತೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹಾಗೂ ಅಧಿಕಾರಿಗಳ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಚರ್ಚಿಸಿದ್ದಾರೆ.

ವೈದ್ಯಕೀಯ ಕೋರ್ಸ್ ಮುಗಿಸಿದವರಿಗೆ ಕಡ್ಡಾಯ ಗ್ರಾಮೀಣ ಸೇವೆಯನ್ನು ಈಗ ಇರುವ ಖಾಲಿ ಹುದ್ದೆಗಳಿಗೆ ಸೀಮಿತಗೊಳಿಸುವ ಬಗ್ಗೆ ಚರ್ಚೆ ನಡೆದಿದೆ ಎಂದು ಗೊತ್ತಾಗಿದೆ.

ಎಂಬಿಬಿಎಸ್, ಸ್ನಾತಕೋತ್ತರ ಮತ್ತು ಸೂಪರ್ ಸ್ಪೆಷಾಲಿಟಿ ಪದವೀಧರರು ಕರ್ನಾಟಕ ಕಡ್ಡಾಯ ಸೇವೆ ಕಾಯ್ದೆ ಅನ್ವಯ ಗ್ರಾಮೀಣ ಪ್ರದೇಶದಲ್ಲಿರುವ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಒಂದು ವರ್ಷ ಕಡ್ಡಾಯವಾಗಿ ಸೇವೆ ಸಲ್ಲಿಸಬೇಕು.

'ಎಂಬಿಬಿಎಸ್ ಪದವೀಧರರು ಮತ್ತು ಸ್ನಾತಕೋತ್ತರ ಪದವೀಧರರನ್ನು ಗ್ರಾಮೀಣ ಸೇವೆಗೆ ಲಭ್ಯವಿರುವ ಖಾಲಿ ಹುದ್ದೆಗಳಿಗೆ ಪರಿಗಣಿಸುವ ಪ್ರಸ್ತಾವನೆಯಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಒಂದು ವರ್ಷದ ಕಡ್ಡಾಯ ಗ್ರಾಮೀಣ ಸೇವೆಗೆ 3,000ಕ್ಕೂ ಹೆಚ್ಚು ವೈದ್ಯಕೀಯ ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಆದರೆ, ಖಾಲಿ ಹುದ್ದೆಗಳ ಸಂಖ್ಯೆ 1,900. ವೆಚ್ಚ ಕಡಿತಗೊಳಿಸುವ ಉದ್ದೇಶದಿಂದ ಗ್ರಾಮೀಣ ಸೇವಾ ಅಭ್ಯರ್ಥಿಗಳ ಸಂಖ್ಯೆಯನ್ನು ಖಾಲಿ ಹುದ್ದೆಗಳಿಗೆ ಸೀಮಿತಗೊಳಿಸಲು ಎಂದು ಆರ್ಥಿಕ ಇಲಾಖೆ ಮುಂದಾಗಿದೆ ಎಂದೂ ಗೊತ್ತಾಗಿದೆ.

ಪಿ.ಜಿ ವೈದ್ಯಕೀಯ: 9ರಿಂದ ಪ್ರವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನಾತಕೋತ್ತರ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಫಲಿತಾಂಶ ಪ್ರಕಟವಾಗಿದ್ದು, ಅ. 9ರಿಂದ ಪ್ರವೇಶ ಪ್ರಕ್ರಿಯೆ ಆರಂಭವಾಗಲಿದೆ.

ಸೀಟು ದೊರೆತ ಅಭ್ಯರ್ಥಿಗಳು ಅ.9ರಂದು ಬೆಳಿಗ್ಗೆ 9ರಿಂದ ಅ.10ರ ರಾತ್ರಿ 8ರವರೆಗೆ ಚಲನ್ ಡೌನ್‌ಲೋಡ್ ಮಾಡಿಕೊಂಡು ಅ.11ರ ಒಳಗೆ ಶುಲ್ಕ ಪಾವತಿಸಬಹುದು.

ಕ್ಲಾಸ್- 'ವೈ' ಅಭ್ಯರ್ಥಿಗಳು ಶುಲ್ಕ ಪಾವತಿ ನಂತರ ಮೂಲ ದಾಖಲೆಗಳನ್ನು ಕೆಇಎ ಕಚೇರಿಗೆ ಸಲ್ಲಿಸಬೇಕು. ಶುಲ್ಕ ಪಾವತಿ ಮತ್ತು ಮೂಲ ದಾಖಲೆಗಳನ್ನು ಸಲ್ಲಿಸಿದ ನಂತರ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಎಲ್ಲ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾಲೇಜಿಗೆ ವರದಿ ಮಾಡಿಕೊಳ್ಳಲು ಅ.12ರವರೆಗೆ ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಮಾಹಿತಿ ನೀಡಿದ್ದಾರೆ.

'ಲಿಂಗಾಯತರಿಗೆ ಅನ್ಯಾಯ ಆಗಬಾರದು'



ಚನ್ನಬಸವಾನಂದ ಸ್ವಾಮೀಜಿ

ಬೀದರ್: 'ಆಯಕಟ್ಟಿನ ಸ್ಥಳಗಳಿಗೆ ಅಧಿಕಾರಿಗಳನ್ನು ವರ್ಗಾವಣೆ ಮಾಡುವಾಗ ಒಂದು ಜನಾಂಗಕ್ಕೆ ಭೇದ-ಭಾವ ಮಾಡುವುದು ಸರಿಯಲ್ಲ. ಈ ವಿಷಯದಲ್ಲಿ ಲಿಂಗಾಯತರಿಗೆ ಅನ್ಯಾಯ ಆಗಬಾರದು' ಎಂದು ಬೆಂಗಳೂರಿನ ಬಸವಗಂಗೋತ್ರಿ ಚನ್ನಬಸವೇಶ್ವರ ಜ್ಞಾನಪೀಠದ ಪೀಠಾಧ್ಯಕ್ಷ ಚನ್ನಬಸವಾನಂದ ಸ್ವಾಮೀಜಿ ಹೇಳಿದರು.

'ಶಾಮನೂರು ಶಿವಶಂಕರಪ್ಪ ಅವರು ಹಿರಿಯ ರಾಜಕಾರಣಿ. ಅವರು ತಮ್ಮ ಅನುಭವದಿಂದಲೇ ಹೇಳಿರಬಹುದು. ಅವರ ಮಾತನ್ನು ಕಡೆಗಣಿಸಬಾರದು. ಎಲ್ಲ ಜಾತಿ, ಜನಾಂಗದವರು ಮತ ಹಾಕಿದರೆ ಸರ್ಕಾರ ಬರುತ್ತದೆ' ಎಂದು ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಲಿಂಗಾಯತಕ್ಕೆ ಸ್ವತಂತ್ರ ಧರ್ಮದ ಸಾಂವಿಧಾನಿಕ ಮಾನ್ಯತೆಗೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಮರು ಪ್ರಸ್ತಾವ ಸಲ್ಲಿಸಬೇಕು. ಈ ದಿಸೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕ್ರಮ ಕೈಗೊಳ್ಳಬೇಕು' ಎಂದರು.

ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಮೊಸಳೆ ಸಾಕ್ಷ್ಯಚಿತ್ರ

ವಿದೇಶಗಳಲ್ಲಿ ಕನ್ನಡ 'ಹಕ್ಕಿಯ ಹಾಡು'

ಪ್ರಜಾವಾಣಿ ವಾರ್ತೆ

ಲೋಕೇಶ್ ಮೊಸಳೆ

ಮೈಸೂರು: ಇಲ್ಲಿನ ವನ್ಯಜೀವಿ ಛಾಯಾಗ್ರಾಹಕ ಲೋಕೇಶ್ ಮೊಸಳೆ ರೂಪಿಸಿರುವ 'ನೆಲದ ಹಕ್ಕಿಯ ಹಾಡು ಟೀಯೀ... ಟೀ...ವ್‌ವಿಟ್...' ಕನ್ನಡ ಸಾಕ್ಷ್ಯಚಿತ್ರವು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಸ್ಪರ್ಧೆ ಹಾಗೂ ಪ್ರದರ್ಶನಕ್ಕೆ ಆಯ್ಕೆಯಾಗಿದೆ.

ಮೈಸೂರಿನ ಹೊರವಲಯದ ಆರ್.ಟಿ ನಗರದಲ್ಲಿ ಚಿತ್ರೀಕರಣಗೊಂಡ ಸಾಕ್ಷ್ಯಚಿತ್ರವು ವಿದೇಶಕ್ಕೆ ಹಾರಲು ಸಜ್ಜಾಗಿದೆ. ಇದೇ 19ರಿಂದ 29ರವರೆಗೆ ಅಮೆರಿಕದ ನ್ಯೂಯಾರ್ಕ್‌ನಲ್ಲಿ ನಡೆಯುವ 'ವನ್ಯಜೀವಿ ಸಂರಕ್ಷಣೆ ಕುರಿತ ಚಲನಚಿತ್ರೋತ್ಸವ ಸ್ಪರ್ಧೆ' ಹಾಗೂ ನ.13ರಿಂದ 15ರವರೆಗೆ ಬಾಸ್ಟನ್ ನಗರದ ಪರ್ಲ್ ಸ್ಟ್ರೀಟ್ ಸ್ಕ್ರೀನಿಂಗ್ ರೂಂನಲ್ಲಿ ನಡೆಯುವ ಚಲನಚಿತ್ರೋತ್ಸವದಲ್ಲಿ ಪ್ರದರ್ಶನ ಕಾಣಲಿದೆ.

2024ರ ಜ.16ರಿಂದ 23ರವರೆಗೆ ಫ್ಲಾರಿಡಾದ ನಪ್ಲೇಸ್ ನಗರದ ರಾಕೆರಿ ಬೇ ಪರಿಸರ ಅಧ್ಯಯನ ಕೇಂದ್ರದಲ್ಲಿ ನಡೆಯುವ ಪ್ರದರ್ಶನಗಳಿಗೆ ಆಹ್ವಾನ ನೀಡಲಾಗಿದೆ. ಪ್ರದರ್ಶನದ ನಂತರ, ಪ್ರಶ್ನೋತ್ತರ-ಚರ್ಚೆ-ಸಂವಾದ ನಡೆಯಲಿದೆ. ಮಲೇಷ್ಯಾ ಸರ್ಕಾರದಿಂದ ಅ.19ರಿಂದ 26ರವರೆಗೆ ನಡೆಯುವ '15ನೇ ಅಂತರರಾಷ್ಟ್ರೀಯ ಕೌಲಾಲಂಪುರ ಇಕೊ ಫಿಲಂ ಫೆಸ್ಟಿವಲ್'ನಲ್ಲಿ ಸಾಕ್ಷ್ಯಚಿತ್ರವು ಪ್ರದರ್ಶನಗೊಳ್ಳಲಿದೆ.

ಚೀನಾದ ಯಾಆ್ಯನ್‌ನಲ್ಲಿ ನಗರದಲ್ಲಿ ಅ.21ರಿಂದ 27ರವರೆಗೆ ನಡೆಯಲಿರುವ ಅಂತರರಾಷ್ಟ್ರೀಯ ಗ್ರೀನ್ ಫಿಲಂ ವೀಕ್‌ಗೆ ಸ್ಪರ್ಧೆ ಮತ್ತು ಪ್ರದರ್ಶನಕ್ಕೆ ಆಯ್ಕೆಯಾಗಿದೆ. ಅಲ್ಲಿನ ಸರ್ಕಾರ ಈ ಚಲನಚಿತ್ರೋತ್ಸವ ಆಯೋಜಿಸಿದೆ. ಮೈಸೂರು ದಸರಾ ಚಲನಚಿತ್ರೋತ್ಸವದಲ್ಲೂ ಐನಾಕ್ಸ್ ಚಿತ್ರಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ.



ಸಾಕ್ಷ್ಯಚಿತ್ರದ ಪೋಸ್ಟರ್

ನಗರೀಕರಣದ ಒತ್ತಡದಿಂದಾಗಿ ವನ್ಯಜೀವಿಗಳ ಬದುಕು-ಹೋರಾಟದ ಕಥೆಯನ್ನು 'ನೆಲದ ಹಕ್ಕಿಯ ಹಾಡು' ಪ್ರಸ್ತುತಪಡಿಸುತ್ತದೆ.

ಚಿತ್ರಕತೆ ಹಾಗೂ ಛಾಯಾಗ್ರಹಣವನ್ನು ಲೋಕೇಶ್ ಮೊಸಳೆ ಮಾಡಿದ್ದಾರೆ. ಸಂಕಲನ ಎಂ.ಎನ್. ಸ್ವಾಮಿ ಅವರದು. ಶಬ್ದ ವಿನ್ಯಾಸವನ್ನು ಬಾಬು ಈಶ್ವರ್ ಪ್ರಸಾದ್, ಚಿತ್ರಕಥಾ ನಿರೂಪಣೆಯನ್ನು ಕೆ.ಟಿ. ಕೃಷ್ಣಕಾಂತ್ ಮಾಡಿದ್ದಾರೆ. ಉಪ ಶೀರ್ಷಿಕೆ ಕವಿ ಕಮಲಾಕರ ಭಟ್ ಅವರದ್ದು. ಪಿಚ್ಚಳ್ಳಿ ಶ್ರೀನಿವಾಸ್ ಅವರ ವಾಚಿಸಿದ ಕವನಗಳನ್ನೂ ಬಳಸಿಕೊಳ್ಳಲಾಗಿದೆ. ಗೋಪಾಲಕೃಷ್ಣ ಅಡಿಗರ 'ಭೂಮಿಗೀತ' ಕವನದ ಸಾಲುಗಳನ್ನು ಚಿತ್ರದಲ್ಲಿ ಬಳಸಲಾಗಿದೆ.

'ಮೈಸೂರಿನ 'ಗ್ರಾವಿಟಿ ಒನ್' ಪ್ರಸ್ತುತಪಡಿಸುವ ಈ ಚಿತ್ರವನ್ನು ಧನಂಜಯ್ ಬಸವರಾಜ್ ಹಾಗೂ ನಂದೀಶ್ ಬಿಳಿಕೆರೆ ನಿರ್ಮಿಸಿದ್ದಾರೆ' ಎಂದು ಲೋಕೇಶ್ ಮೊಸಳೆ ಅವರು ತಿಳಿಸಿದರು.

ಬ್ಯಾಕ್‌ಲಾಗ್ ಹುದ್ದೆ ಭರ್ತಿ: ಪರಾಮರ್ಶೆಗೆ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬ್ಯಾಕ್‌ಲಾಗ್ (ಹಿಂಬಾಕಿ) ಹುದ್ದೆಗಳನ್ನು ಭರ್ತಿ ಮಾಡುವ ಕುರಿತಂತೆ ಪರಾಮರ್ಶಿಸಲು ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿ ರಚಿಸಲಾಗಿದೆ.

ಗೃಹ ಸಚಿವ ಜಿ. ಪರಮೇಶ್ವರ, ಕಾನೂನು ಸಚಿವ ಎಚ್‌.ಕೆ. ಪಾಟೀಲ, ಆಹಾರ ಸಚಿವ ಕೆ.ಎಚ್‌. ಮುನಿಯಪ್ಪ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ತಂಗಡಗಿ, ಪರಿಶಿಷ್ಟ ಕಲ್ಯಾಣ ಸಚಿವ ಬಿ. ನಾಗೇಂದ್ರ ಸಮಿತಿಯ ಸದಸ್ಯರಾಗಿದ್ದಾರೆ.

ಕೃಷಿ ಇಲಾಖೆ
ಉಪ ಕೃಷಿ ನಿರ್ದೇಶಕರು-2 ಕಾರ್ಯಾಲಯ, ಗಿರೀಶ ನಗರ, ಜಮಖಂಡಿ
ದೂರವಾಣಿ : 08353-220052, ಇ-ಮೇಲ್ : dda2jkd@gmail.com
ಸಂಖ್ಯೆ : ಉ.ಕೃ.ನಿ.2ಜ/ಲೆ-1/ಹೊರಗುತ್ತಿಗೆ/ಸಿಬ್ಬಂದಿ/23-24 ದಿನಾಂಕ : 05-10-2023
ಅವಧಿ ವಿಸ್ತರಣೆ ಇ-ಟೆಂಡರ್ ದಾಸ್ತಾವೇಜು
ಸನ್ 2023-24 ನೇ ಸಾಲಿನಲ್ಲಿ ದಿನಾಂಕ : 30-10-2023 ರಂದು ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿದ ಇ-ಟೆಂಡರ್‌ನಲ್ಲಿ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ಟೆಂಡರ್ ಪ್ರಕ್ರಿಯೆಯು ತಾಂತ್ರಿಕ ಕಾರಣದಿಂದ ತಾಂತ್ರಿಕ ಬಿಡ್‌ನ್ನು ಸಲ್ಲಿಸುವ ಕೊನೆಯ ದಿನಾಂಕ : 16-10-2023 ಹಾಗೂ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 18-10-2023 ರಂದು ನಿಗಧಿಪಡಿಸಲಾಗಿದೆ ಎಂದು ಈ ಮೂಲಕ ತಿಳಿಸಲಾಗಿದೆ.
ಸಹಿ/- ಉಪ ಕೃಷಿ ನಿರ್ದೇಶಕರು-2, ಜಮಖಂಡಿ.
ಡಿಐಪಿಆರ್/ಬಾಗಲಕೋಟೆ/142/ಮಣಿಪಾಲ್/2023-24

ಪುರಸಭಾ ಕಾರ್ಯಾಲಯ ಬೊಮ್ಮಸಂದ್ರ
ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-560 099
ಫೋನ್: 080-27834655, E-Mail: itstaff_ulb_bommasandra@yahoo.com
ಸಂ:TMCB/ENG/MF/Tender 07/2023-24 ದಿನಾಂಕ:07.10.2023
ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
(ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ KW1&2ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)
2023-24ನೇ ಸಾಲಿನ ಬೊಮ್ಮಸಂದ್ರ ಪುರಸಭಾ ನಿಧಿ ಅನುದಾನದಡಿ, ಒಟ್ಟು 10 ಕಾಮಗಾರಿಗಳ ಒಟ್ಟು ಮೊತ್ತ ರೂ. 159.30ಲಕ್ಷಗಳಿಗೆ ಐಟಂವಾರು ಮತ್ತು ಇ-ಪ್ರೊಕ್ಯೂರ್‌ಮೆಂಟ್‌ನ ಏಕಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ಮೂಲಕ ಟೆಂಡರ್ ಸಲ್ಲಿಸುವುದು.
ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 25-10-2023ರ ಸಮಯ: 17:00 ಗಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ: 26-10-2023ರ ಸಮಯ: 17:30 ಗಂಟೆಗೆ. ಹೆಚ್ಚಿನ ವಿವರಗಳಿಗಾಗಿ (itstaff_ulb_bommasandra@yahoo.com) ಅಥವಾ ಪುರಸಭೆಯ ಅಭಿಯಂತರರನ್ನು ಸಂಪರ್ಕಿಸುವುದು.
ಸಹಿ/- ಅಧ್ಯಕ್ಷರು ಪುರಸಭೆ, ಬೊಮ್ಮಸಂದ್ರ
ವಾಸಾಸಂಇ/ವಾಪ್ರ/ಜಿಎ/1622/2023-24
ಸಹಿ/- ಮುಖ್ಯಾಧಿಕಾರಿ ಪುರಸಭೆ, ಬೊಮ್ಮಸಂದ್ರ

ಜಿಲ್ಲಾ ಯೋಜನಾಧಿಕಾರಿಗಳ ಕಾರ್ಯಾಲಯ, ಸಮಗ್ರ ಶಿಕ್ಷಣ ಕರ್ನಾಟಕ, ಬೀದರ
ಸಂಖ್ಯೆ:-ಸ.ಶಿ.ಕ.ಬೀ/ಕೆ.ಜಿ.ಬಿ.ವಿ.ಟೈಪ-1/ಆಹಾ/ಪೂ/ಇ-ಟೆಂಡರ/ಆಹ್ವಾನ/2023-24 ದಿ/05-10-2023
ಅಲ್ಪಾವಧಿ ಇ-ಟೆಂಡರ ಅರ್ಜಿ
2023-24 ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ನಡೆಯುತ್ತಿರುವ, 4 ಕೆ.ಜಿ.ಬಿ.ವಿ. ಟೈಪ-1 ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಆಹಾರ ಪುರೈಸುವ ನಿಟ್ಟಿನಲ್ಲಿ ಅಲ್ಪಾವಧಿ ಇ-ಟೆಂಡರ ಈ ಕೆಳಗಿನಂತೆ ಆಹ್ವಾನಿಸಲಾಗಿದೆ. ಟೆಂಡರ ಗೆ ಇಡಲಾದ ಅಂದಾಜು ಮೊತ್ತ ರೂ 81,60,000/-
ದಿನಾಂಕ : 03-10-2023 ರಿಂದ 17-10-2023ರ ವರೆಗೆ ಅರ್ಹ ಆಸಕ್ತ ಬಿಡ್ಡದಾರರಿಂದ ಇ-ಪ್ರೋಕ್ಯೂರಮೆಂಟ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ 17-10-2023 ಇದ್ದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ:- 9448999388 ಹಾಗೂ ಅಂತರ್ಜಾಲತಾಣ ವಿಳಾಸ http://www.eproc.karnataka.gov.in ನಲ್ಲಿ ವಿಕ್ಷಿಸಬಹುದು.
ಸಹಿ/- ಉಪನಿರ್ದೇಶಕರು ಹಾಗೂ ಪದನಿಮಿತ್ತ, ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ - ಬೀದರ.
ವಾ.ಸಾ.ಸಂ.ಇ/ಬೀದರ/87/ಕೆ.ಎಸ್.ಎಂ.ಸಿ.&ಎ/2023-24

ಪುರಸಭೆ ಕಾರ್ಯಾಲಯ ರೋಣ-582209. ಜಿ: ಗದಗ.
ದೂರವಾಣಿ:(08381)267234
E-mail:itstaff_ulb_ron@yahoo.in Website: www.ronatown.mrc.gov.in
ಕ್ರಸಂ/ಪುಸರೋ/2021-22/2022-23/ 15ನೇ ಹ/ವಹಿ/ /2023-24 ದಿನಾಂಕ : 07-10-2023
ಅಲ್ಪಾವಧಿ ಟೆಂಡರ ಪ್ರಕಟಣೆ (ಇ-ಪ್ರಕ್ಯೂರಮೆಂಟ್ ಮುಖಾಂತರ)
ರೋಣ ಪುರಸಭೆಯಿಂದ ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ -2000 ರ ಪ್ರಕಾರ "ಇ-ಪ್ರಕ್ಯೂರಮೆಂಟ್" ಪದ್ಧತಿಯಲ್ಲಿ ಸನ್.2021-22 ಹಾಗೂ 2022-23 ನೇ ಸಾಲಿನ 15ನೇ ಹಣಕಾಸು ಯೋಜನೆಯಡಿಯಲ್ಲಿ ಕ್ರಿಯಾ ಯೋಜನೆಯಲ್ಲಿ ಮಂಜೂರಾದ ವಾಹನ/ಯಂತ್ರೋಪಕರಣಗಳ ಪೂರೈಕೆಗಾಗಿ ಕೆ.ಜಿ ದಾಸ್ತಾವೇಜಿನಲ್ಲಿ "ಇ-ಪ್ರಕ್ಯೂರಮೆಂಟ್" ನೊಂದಾಯಿತ ಅರ್ಹ ಪೂರೈಕೆದಾರರಿಂದ ಟೆಂಡರಗೆ ಆಹ್ವಾನಿಸಲಾಗಿದೆ. ಕಾಮಗಾರಿ ಮೊತ್ತ ರೂ.34.45 ಲಕ್ಷಗಳ ಟೆಂಡರನ್ನು ಇ-ಪ್ರಕ್ಯೂರಮೆಂಟ ವೆಬ್‌ಸೈಟ್ www.ronatown.mrc.gov.in/Tenders, ಅಥವಾ http://kppp.karnataka.gov.in ಮೂಲಕ ಷರತ್ತುಗಳಂತೆ ಟೆಂಡರ ಹಾಕಲು ಪ್ರಚಾರ ಪಡಿಸಲಾಗಿದೆ.

ಅ.ನಂ.	ಇಂಡೆಂಟ್ ನಂಬರ	ಅಂದಾಜು ಮೊತ್ತ (ಲಕ್ಷಗಳಲ್ಲಿ)
1	DMA/2023-24/INDO537	4.70 ಲಕ್ಷ
2	DMA/2023-24/INDO538	6.75 ಲಕ್ಷ
3	DMA/2023-24/INDO477	23.00 ಲಕ್ಷ

ಸೂಚನೆ : ಸದರ ಟೆಂಡರಗಳಿಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳಿದ್ದಲ್ಲಿ ಇ-ಪ್ರಕ್ಯೂರಮೆಂಟ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಣೆ ಮಾಡಲಾಗುವುದು.
ನಿರ್ಧಾರಿತ ದಿನಾಂಕಗಳ ವಿವರ :
1)ದಿನಾಂಕ:- 26-10-2023 ಸಾಯಂಕಾಲ 5-30 ಘಂಟೆವರೆಗೆ ಇ-ಪ್ರಕ್ಯೂರಮೆಂಟನಲ್ಲಿ ಟೆಂಡರ ಫಾರ್ಮಗಳಿಗೆ ಅರ್ಜಿ ಸಲ್ಲಿಸಬಹುದು.
2)ಟೆಂಡರ ತೆರೆಯುವ ದಿನಾಂಕ : 30-10-2023
ಸಹಿ/- ಮುಖ್ಯಾಧಿಕಾರಿ ಪುರಸಭೆ ರೋಣ
ವಾ.ಸಾ.ಇ/ಗದಗ/231/2023-24/ದೇಶಪಾಂಡೆಪಬ್ಲಿಸಿಟಿ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 07/2023-24 ದಿನಾಂಕ : 05.10.2023
ಅಲ್ಪಾವಧಿ ಟೆಂಡರ್ ಪ್ರಕಟಣೆ
ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆ ಲೋಕೋಪಯೋಗಿ ಇಲಾಖೆ ಉಪ ವಿಭಾಗಗಳಿಗೆ ಒಳಪಡುವ ಒಟ್ಟು 31 ಕಾಮಗಾರಿಗಳಿಗೆ ಇ-ಪ್ರೊಕ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document-KW-1, 2 & 4 ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು, ಗುತ್ತಿಗೆದಾರರಿಗೆ ಅಧಿನಿಯಮ 3 ರಲ್ಲಿ ನಮೂದಿಸಿರುವ ಕನಿಷ್ಟ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಟ ಅಂದಾಜು ಮೊತ್ತ ರೂ.0.64 ಲಕ್ಷಗಳು ಹಾಗೂ ಗರಿಷ್ಟ ಅಂದಾಜು ಮೊತ್ತ ರೂ.251.00 ಲಕ್ಷಗಳು ಆಗಿರುತ್ತವೆ. ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸಬೇಕಾಗಿರುವ 31 ಕಾಮಗಾರಿಗಳಿಗೆ (8-ಕಾಮಗಾರಿಗಳಿಗೆ ದಿ:13.10.2023, 18-ಕಾಮಗಾರಿಗಳಿಗೆ ದಿ:16.10.2023, ಹಾಗೂ 5-ಕಾಮಗಾರಿಗಳಿಗೆ ದಿ:18.10.2023 ರಂದು) ಸಂಜೆ 4.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ, ಚಿತ್ರದುರ್ಗ-577501
ಆಕಾಶವಾಣಿ ರಸ್ತೆ, ಸಿ.ಕೆ. ಪುರ, ಚಿತ್ರದುರ್ಗ.
e-mail:cuda.cta@rediffmail.com, ದೂರವಾಣಿ ಸಂಖ್ಯೆ: 08194-222984
ಕ್ರ.ಸಂ.ಚಿನಪ್ರಾ/ಕಾಮಗಾರಿ/ಬಿಡಿ/2023-2024/ ದಿನಾಂಕ:05-10-2023
ಬೇಡಿಕೆ ಸಮೀಕ್ಷೆ
ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರವು ಚಿತ್ರದುರ್ಗ ನಗರದ ಕೆಂಚನಕಟ್ಟೆ ಬಡಾವಣೆಯ (ಧವಳಗಿರಿ ಬಡಾವಣೆ) ಭೀಮಸಮುದ್ರ ರಸ್ತೆಗೆ ಲಗತ್ತಾಗಿರುವ ವಾಣಿಜ್ಯ ನಿವೇಶನ ಸಂಖ್ಯೆ 3ರ 18244 ಚ.ಅಡಿಯ ವಿಸ್ತೀರ್ಣದಲ್ಲಿ ವಾಣಿಜ್ಯ ಸಂಕೀರ್ಣ (Commercial complex) ಕಟ್ಟಡವನ್ನು ನೆಲ ಮಹಡಿ: 4488 ಚ.ಅಡಿ, ಮೊದಲನೇ ಮಹಡಿ: 2264 ಚ.ಅಡಿ, 2380 ಚ.ಅಡಿ, 3224 ಚ.ಅಡಿಗಳ ವಿಸ್ತೀರ್ಣದಲ್ಲಿ ಸುಸಜ್ಜಿತ ವಾಹನ ನಿಲುಗಡೆ ಸೌಲಭ್ಯದೊಂದಿಗೆ ನಿರ್ಮಿಸಲು ಉದ್ದೇಶಿಸಿದ್ದು, ಸದರಿ ಕಟ್ಟಡದ ಮಳಿಗೆಗಳನ್ನು ಬಾಡಿಗೆ ಆಧಾರದ ಮೇಲೆ ನೀಡಲಾಗುವುದು. ಇಚ್ಚೆವುಳ್ಳ ಸಂಸ್ಥೆ/ಬ್ಯಾಂಕ್/ಕಂಪನಿಗಳು ಮತ್ತು ಮಾಲೀಕರು (Office Space, Vehicle Show Room, Departmental Store, Restaurants and Others) ದಿನಾಂಕ: 20-10-2023ರೊಳಗಾಗಿ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಯನ್ನು ಸಂಪರ್ಕಿಸಲು ಕೋರಿದೆ.
DIPR/CTA/KSMCA/256/2023-24
ಸಹಿ/- ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಚಿತ್ರದುರ್ಗ.

ಕರ್ನಾಟಕ ಸರ್ಕಾರ - ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಸಾಗರ ರಸ್ತೆ, ಶಿವಮೊಗ್ಗ-577204.
ಕಛೇರಿ ದೂರವಾಣಿ ಸಂ:08182-250338, ಫ್ಯಾಕ್ಸ್ ಸಂ: 08182-250323
E-Mail ID:shimogaapmc.secy@gmail.com & shimogaapmc@rediffmail.com
ಸಂಖ್ಯೆ: ಕೃಮಾಇ/ಕೃಉಮಾಸ(ಶಿ)/ಲೆ.ವಿ/916/2023-24 ದಿ: 05-10-2023
ಇ-ಟೆಂಡರ್ ಪ್ರಕಟಣೆ
ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಹೆಚ್ಚುವರಿ ಹಣವನ್ನು ಇ-ಪ್ರೊಕ್ಯೂರ್ ಮೆಂಟ್ ಮೂಲಕ ನಿಶ್ಚಿತ ಠೇವಣಿಯಲ್ಲಿ ತೊಡಗಿಸುವ ಕುರಿತು ಆಸಕ್ತ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸ್ಪರ್ಧಾತ್ಮಕ ಇ-ಬಿಡ್ಡಿಂಗ್ ನ್ನು ಆಹ್ವಾನಿಸಲಾಗಿದ್ದು, ಹೆಚ್ಚಿನ ಮಾಹಿತಿಯನ್ನು kppp.karnataka.gov.in ವೆಬ್ ಸೈಟ್ ನಲ್ಲಿ ಪಡೆಯಬಹುದಾಗಿರುತ್ತದೆ.
APMC/2023-24/AUCTION/18
ಸಹಿ/- (ಡಾ.ಕೆ.ಕೋಡಿಗೌಡ., ಕೆ.ಎಂ.ಎಸ್) ಕಾರ್ಯದರ್ಶಿ ಕೃ.ಉ.ಮಾ.ಸ.,ಶಿವಮೊಗ್ಗ
ಸಹಿ/-(ಸಿದ್ದಲಿಂಗರೆಡ್ಡಿ., ಕ.ಆ.ಸೇ) ಆಡಳಿತಾಧಿಕಾರಿಗಳು ಕೃ.ಉ.ಮಾ.ಸ., ಶಿವಮೊಗ್ಗ ಹಾಗೂ ಅಪರ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/28/10/23-24/567

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾ ನಗರಾಭಿವೃದ್ಧಿ ಕೋಶ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು
Phone:0824-2220593 Email :dudc_dkd@yahoo.co.in
ಮುನ್(4)/IC/55/2022-23/ENO153010 ದಿನಾಂಕ: 07-10-2023
ಟೆಂಡರ್ ಪ್ರಕಟಣೆ
ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಇವರು ದಕ್ಷಿಣ ಕನ್ನಡ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇಂದಿರಾ ಕ್ಯಾಂಟೀನ್‌ಗಳಿಗೆ ಅಡುಗೆ ಸೇವೆಗಳನ್ನು ಒದಗಿಸಲು ಈ ಕೆಳಗಿನ ಕೋಷ್ಟಕದಲ್ಲಿರುವಂತೆ ಅರ್ಹ ಟೆಂಡರ್‌ದಾರರಿಂದ Karnataka Public Procurement Portal ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ

ಕ್ರ. ಸಂ	ಸಂಕ್ಷಿಪ್ತ ವಿವರಣೆ	ವರ್ಷಕ್ಕೆ ಸರಕು ಮತ್ತು ಸೇವೆಗಳ ಅಂದಾಜು ಮೌಲ್ಯ (ರೂ. ಲಕ್ಷಗಳಲ್ಲಿ)	ಇ.ಎಮ್.ಡಿ. (ರೂ. ಲಕ್ಷಗಳಲ್ಲಿ)	ವಿತರಣಾ ವೇಳಾಪಟ್ಟಿ
1	ದಕ್ಷಿಣ ಕನ್ನಡ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಾದ ಪುತ್ತೂರು ನಗರಸಭೆ, ಬಂಟ್ವಾಳ ಪುರಸಭೆ ಮತ್ತು ಸುಳ್ಯ ಪಟ್ಟಣ ಪಂಚಾಯತ್ ಗಳಲ್ಲಿ ಇಂದಿರಾ ಕ್ಯಾಂಟೀನ್‌ಗಳಿಗೆ ಅಡುಗೆ ಸೇವೆಗಳನ್ನು ಒದಗಿಸುವುದು. Indent No: DMA/2023-24/IND0601	226.30	3.40	ಟೆಂಡರ್ ದಾಖಲೆಯಲ್ಲಿ ನೀಡಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಈ ವೆಬ್ ಸೈಟ್ ಅನ್ನು ವೀಕ್ಷಿಸಿ https://kppp.karnataka.gov.in/ ಟೆಂಡರ್ ದಿನಾಂಕಗಳು ಈ ಕೆಳಗಿನಂತಿರುತ್ತದೆ.
(1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 07.11.2023 17:30 ಗಂಟೆ (2) ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ: 21.10.2023 11.00 ಗಂಟೆ (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.11.2023 11.00 ಗಂಟೆ (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 13.11.2023 11.00 ಗಂಟೆ. ಟೆಂಡರ್ ದಿನಾಂಕಗಳನ್ನು ಮುಂದೂಡುವುದು ಯಾವುದಾದರೂ ಇದ್ದರೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು ಮತ್ತು ಅದನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.
ಸಹಿ/-, ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ದ.ಕ. ಜಿಲ್ಲೆ ಮಂಗಳೂರು
DIPR/MNG/KSMCA/554/23-24 dt. 07.10.2023

‘ಬೀಡಿ’ಯಿಂದ ಕಮರಿದ ಕನಸು

ಒಂದನೇ ಪುಟದಿಂದ..

ಟೆಂಡು ಎಲೆಗಳನ್ನು ಆಯತಾಕಾರದಲ್ಲಿ ಕತ್ತರಿಸಿ ಹದಗೊಳಿಸಿ, ಅದರೊಳಗೆ ಹೊಗೆಸೊಪ್ಪು ಸೇರಿಸಿ, ಸುರುಳಿ ಮಾಡಿ ದಾರ ಕಟ್ಟಬೇಕು. ಇದೇ ಕ್ರಮದಲ್ಲಿ ಒಂದು ಸಾವಿರ ಬೀಡಿ ಕಟ್ಟಲು ಕನಿಷ್ಠ 6–7 ತಾಸು ಬೇಕು. ತಂಬಾಕಿನ ದೂಳು, ನಿರಂತರ ಗಂಟೆಗಟ್ಟಲೆ ಕುಳಿತು ಸೊಂಟನೋವು, ಕಾಲಿಗೆ ಸೆಳೆತ, ಎಲೆ ಕತ್ತರಿಸಿ ಜಿಡ್ಡುಗಟ್ಟುವ ಕೈ ಇಂತಹ ದೈಹಿಕ ತೊಂದರೆಗಳಾಚೆಯೂ ಹಲವು ವರ್ಷಗಳಿಂದ ರೂಢಿಸಿಕೊಂಡು ಬಂದ ಕೆಲಸ ಬಿಡಲಾಗದ ಸಂದಿಗ್ಧ ಇವರದ್ದು. ಲೆಕ್ಕಕ್ಕೆ ಒಂದು ಸಾವಿರ ಬೀಡಿಯಾದರೂ, ಗುತ್ತಿಗೆದಾರರಿಗೆ ಕೊಡುವಾಗ 1,100 ಬೀಡಿ ಇರಬೇಕು. ಒಂದು ಟಿನ್ (50 ಗ್ರಾಂ ತಂಬಾಕು)ನಲ್ಲಿ 275 ಬೀಡಿಯಂತೆ ನಾಲ್ಕು ಟಿನ್ ಸೇರಿದರೆ ಒಂದು ಸಾವಿರ ಬೀಡಿ ಎಂದು ಲೆಕ್ಕ.

ಒಂದು ಟಿನ್ ತಂಬಾಕು ಮತ್ತು ಎಲೆಯನ್ನು ಮನೆಗೆ ತಂದರೆ ಅದಕ್ಕೆ ಪ್ರತಿಯಾಗಿ 275 ಬೀಡಿಯನ್ನು ಗುತ್ತಿಗೆದಾರರಿಗೆ ಕೊಡಬೇಕು. ಸಮಸ್ಯೆ ಇರುವುದು ಎಲೆಯಲ್ಲಿ. ಎಲೆಗಳು ಒಣಗಿರುವುದರಿಂದ ಒಡೆದು ಹೋಗುತ್ತವೆ. ಹೆಚ್ಚುವರಿ ಎಲೆಯನ್ನು ಖರೀದಿಸುವುದು ಅನಿವಾರ್ಯ. ಸಾವಿರ ಬೀಡಿಗೆ ಹೆಚ್ಚುವರಿ ಎಲೆ, ಹೆಚ್ಚುವರಿ ತಂಬಾಕು ಖರೀದಿಸುವ ವೆಚ್ಚ ನಮ್ಮ ಮೇಲೆಯೇ ಎನ್ನುವ ಈ ಮಹಿಳೆಯರಿಗೆ ನಿರ್ಭಿಡೆಯಿಂದ ಹೇಳಿಕೊಳ್ಳಲೂ ಆಗದ ಅಸಹಾಯಕತೆ. ಎಲೆಯ ಸುರುಳಿಯಲ್ಲಿ ಹೊಗೆಸೊಪ್ಪಿನೊಂದಿಗೆ ಹೆಪ್ಪುಗಟ್ಟಿದ ಸಂಕಟವನ್ನೂ ಅದುಮಿ ಮೌನಿಯಾಗುತ್ತಾರೆ.

‘ನನ್ನ ಅಮ್ಮನೂ ಬೀಡಿ ಕಟ್ಟಿ ನಮ್ಮನ್ನು ಸಾಕಿದರು. ನಾನೂ ಸಹ ಬೀಡಿ ಕಟ್ಟಿಯೇ ಮೂವರು ಮಕ್ಕಳನ್ನು ಬೆಳೆಸಿದೆ. ಗಂಡನಿಗೆ ಅನಾರೋಗ್ಯ, ಕೈಯಲ್ಲಿ ಕೆಲಸವಿಲ್ಲ. ಆದರೂ, ಆಗ ವಾರಕ್ಕೆ ಆರು ದಿನ ಕೆಲಸ, ಕಡಿಮೆ ಮಜೂರಿ ಇದ್ದರೂ ಕುಟುಂಬ ನಿರ್ವಹಣೆ ಆಗುತ್ತಿತ್ತು. ಈಗ ವಾರಕ್ಕೆ ಮೂರು ದಿನಗಳ ಕೆಲಸ ಸಿಕ್ಕರೆ ಹೆಚ್ಚು. ಬೆಲೆ ಏರಿಕೆಯ ಬಿಸಿಯಲ್ಲಿ ಈ ಪುಡಿಗಾಸು ಎಂತದಕ್ಕೂ ಸಾಲದು. ಒಂದು ಸಾವಿರ ಬೀಡಿಗೆ ಕರಾವಳಿಯಲ್ಲಿ ಈಗ ಸಿಗುವ ಮಜೂರಿ ₹252. ಅದರಲ್ಲಿ ಪಿಎಫ್ ಕಡಿತವಾಗಿ ₹227 ಕೈಗೆ ಸಿಗುವ ಹಣ. ಇದು ದಕ್ಕಿದ್ದಾದರೂ ಹೋರಾಟದ ಫಲವಾಗಿ. ಎಲ್ಲ ಕಂಪನಿಗಳ ಬೀಡಿ ಕಾರ್ಮಿಕರಿಗೆ ಸಮಾನ ವೇತನ ಇಲ್ಲ. ದಣಿಗಳು ನಿರ್ಧರಿಸಿದಂತೆ ಮಜೂರಿ. ಕೆಲವೆಡೆಗಳಲ್ಲಿ ಸಾವಿರ ಬೀಡಿಗೆ ₹150 ಕೂಲಿ ಪಡೆಯುವವರೂ ಇದ್ದಾರೆ. ಈಗ ರಾಜ್ಯ ಸರ್ಕಾರ ಒದಗಿಸಿರುವ ಗೃಹಲಕ್ಷ್ಮಿ ಯೋಜನೆಯ ಮಾಸಿಕ ₹2,000 ಹಾಗೂ ಗೃಹಜ್ಯೋತಿ ಯೋಜನೆಯ ಉಚಿತ ವಿದ್ಯುತ್ ಸೌಲಭ್ಯಗಳು ಕೊಂಚ ನಿಟ್ಟುಸಿರು ಬಿಡುವಂತೆ ಮಾಡಿವೆ’ ಎನ್ನುತ್ತಾರೆ ಹೋರಾಟಗಾರ್ತಿ ಮಂಗಳೂರಿನ ಭಾರತಿ ಬೋಳಾರ.

ಬೆಲೆ ಏರಿಕೆಯ ಬಿಸಿ: ರಾಣೆಬೆನ್ನೂರಿನ ಇಸ್ಲಾಂಪುರ ಓಣಿಯಲ್ಲಿ ಓಡಾಡಿದರೆ ಮಡಲಲ್ಲಿ ಮೊರ (ಬೀಡಿ ಸೂಪು), ಗೋಡೆಗೆ ಬೆನ್ನೊರಗಿಸಿ ಕುಳಿತು ಮಹಿಳೆಯರು ಬೀಡಿ ಕಟ್ಟುವ ದೃಶ್ಯ ಕಾಣುತ್ತದೆ. ‘ದಿನಕ್ಕೆ ಸಾವಿರ ಬೀಡಿ ಕಟ್ಟಿದರೆ ₹200 ಕೂಲಿ ಸಿಗುತ್ತದೆ. ಇದೇ ಉದ್ಯೋಗ ಅವಲಂಬಿಸಿರುವ ನಮಗೆ ಮನೆ ಬಾಡಿಗೆ, ನೀರಿನ ಬಿಲ್ ಕಟ್ಟಲೂ ಕಷ್ಟ. ಕೊಳೆಗೇರಿ ವಾಸಿಗಳಾದ ನಮಗೆ ಬೆಲೆ ಏರಿಕೆಯ ಬಿಸಿಯೂ ತಟ್ಟಿದೆ. ಬೀಡಿ ಕಟ್ಟುವ ಕೆಲಸ ಬಿಟ್ಟರೆ ಬೇರೆ ಕೆಲಸ ಗೊತ್ತಿಲ್ಲ’ ಎನ್ನುತ್ತಾರೆ ಈ ಮಹಿಳೆಯರು.

‘ತಂಬಾಕಿಗೆ ಒಡ್ಡಿಕೊಳ್ಳುವ ಬೀಡಿ ಕಾರ್ಮಿಕರಲ್ಲಿ ಶೇ 85ಕ್ಕೂ ಹೆಚ್ಚು ಮಹಿಳೆಯರು ಶ್ವಾಸಕೋಶ, ಗರ್ಭಕೋಶ, ಗಂಟಲಿನ ಸಮಸ್ಯೆ, ಕ್ಯಾನ್ಸರ್, ಬೆನ್ನುನೋವು, ಮಂಡಿನೋವು ಅನುಭವಿಸುತ್ತಿದ್ದಾರೆ. ಅವರ ದುಡಿಮೆಯ ಅರ್ಧದಷ್ಟು ಹಣ ಆಸ್ಪತ್ರೆಗೆ ಸುರಿಯುವಂತಾಗಿದೆ. ಬೀಡಿ ಕಾರ್ಮಿಕರ ಆರೋಗ್ಯ ರಕ್ಷಣೆಗೆ ಸರ್ಕಾರ ಮತ್ತಷ್ಟು ಕ್ರಮ ಕೈಗೊಳ್ಳಬೇಕು’ ಎನ್ನುತ್ತಾರೆ ರಾಣೆಬೆನ್ನೂರಿನ ವನಸಿರಿ ಸ್ವಯಂಸೇವಾ ಸಂಸ್ಥೆಯ ತನರುಮ್ ಖತೀಬ್.

ಬೆಳಗಾವಿ ಜಿಲ್ಲೆಯ ನಿಪ್ಪಾಣಿಯಲ್ಲಿ ಮೂವರು ಮಹಿಳೆಯರು ಬೀಡಿ ಕಟ್ಟುತ್ತಿರುವುದು – ಪ್ರಜಾವಾಣಿ ಚಿತ್ರ: ಸುನೀಲ ಗಿರಿ

> **ಕೆಲ ಏಜೆನ್ಸಿಯವರು ಹೆಚ್ಚು ಕೂಲಿ ನೀಡುವ ಬದಲು ಕಾರ್ಮಿಕರನ್ನು ಸಮಾಧಾನ ಪಡಿಸಲು ಹಬ್ಬದ ಸಂದರ್ಭದಲ್ಲಿ ಒಂದಿಷ್ಟು ಹಣ ನೀಡಿ ಖುಷಿ ಪಡಿಸುತ್ತಾರೆ.**
> **ಬಿ.ಎ.ಮುಧೋಳ, ಅಧ್ಯಕ್ಷ,** ಧಾರವಾಡ ಜಿಲ್ಲಾ ಬೀಡಿ ಕಾರ್ಮಿಕರ ಸಂಘ

> **ಬೆಳಿಗ್ಗೆಯಿಂದ ಸಂಜೆಯವರೆಗೆ ಒಂದು ಸಾವಿರ ಬೀಡಿ ಕಟ್ಟುತ್ತೇನೆ. ಇದಕ್ಕೆ ₹200 ಮಾತ್ರ ಕೂಲಿ ಕೊಡುತ್ತಾರೆ. ನಮಗೆ ಕನಿಷ್ಠ ₹400 ಕೂಲಿ ಬೇಕು.**
> **ಅಲ್ಲಬೂ ಹುಕ್ಕೇರಿ**
> ಬೀಡಿ ಕಟ್ಟುವ ಕಾರ್ಮಿಕ ಮಹಿಳೆ. ಹುಬ್ಬಳ್ಳಿ.

> **ಕಾರ್ಮಿಕ ಇಲಾಖೆ ಬೀಡಿ ಕಾರ್ಮಿಕರನ್ನು ಗುರುತಿಸಬೇಕು. ಕಟ್ಟಡ ಕಾರ್ಮಿಕರಿಗೆ ನೀಡಿದಂತೆ ಸಾಮಾಜಿಕ ಭದ್ರತೆ ಒದಗಿಸಬೇಕು**
> **ಜಬೀನಾ ಖಾನಂ,** ನೆರಳು ಬೀಡಿ ಕಾರ್ಮಿಕರ ಯೂನಿಯನ್ ಅಧ್ಯಕ್ಷೆ

‘ಕನಿಷ್ಠ ಕೂಲಿ: ಸಮಿತಿ ರಚನೆಗೆ ಪ್ರಸ್ತಾವ’

ಬೀಡಿ ಕಾರ್ಮಿಕರ ಕನಿಷ್ಠ ಕೂಲಿ ಐದು ವರ್ಷಕ್ಕೊಮ್ಮೆ ಪರಿಷ್ಕರಣೆಯಾಗುತ್ತದೆ. 2018ರಲ್ಲಿ ನಿಗದಿಪಡಿಸಿದಂತೆ ಪ್ರಸ್ತುತ 1,000 ಬೀಡಿಗೆ ₹304.98 ಕನಿಷ್ಠ ಕೂಲಿ ಇದೆ. ಈಗ ಪುನರ್ ಪರಿಷ್ಕರಣೆಗೆ, ಕಾರ್ಮಿಕರು, ಕಂಪನಿ ಪ್ರತಿನಿಧಿಗಳು, ಅಧಿಕಾರಿಗನ್ನೊಳಗೊಂಡ ತ್ರಿಪಕ್ಷೀಯ ಸಮಿತಿ ರಚನೆಗೆ ಪ್ರಸ್ತಾವ ಸಲ್ಲಿಸಲಾಗಿದೆ. ಸಮಿತಿ ಸಲ್ಲಿಸುವ ವರದಿ ಆಧಾರದಲ್ಲಿ ಕನಿಷ್ಠ ಕೂಲಿ ಪರಿಷ್ಕೃತಗೊಳ್ಳುತ್ತದೆ ಎಂದು ಕಾರ್ಮಿಕ ಇಲಾಖೆ ಆಯುಕ್ತ ಎಚ್.ಎನ್. ಗೋಪಾಲಕೃಷ್ಣ ತಿಳಿಸಿದ್ದಾರೆ.

ಕಂಪನಿಗಳು ಕಡಿಮೆ ಕೂಲಿ ನೀಡಿದರೆ, ಸಂಘಟನೆ ಮೂಲಕ ಅಥವಾ ವೈಯಕ್ತಿಕವಾಗಿ, ಕಾರ್ಮಿಕ ಇನ್‌ಸ್ಪೆಕ್ಟರ್‌ಗಳ ಮೂಲಕ ಸಹ ಕಾರ್ಮಿಕ ಇಲಾಖೆಯಲ್ಲಿ ಪ್ರಕರಣ ದಾಖಲಿಸಲು ಅವಕಾಶ ಇದೆ. ಬೀಡಿ ಕಾರ್ಮಿಕರ ಪುನರ್ವಸತಿಗೆ ಸಂಬಂಧಿಸಿ ಸದ್ಯ ಯಾವುದೇ ಹೊಸ ಯೋಜನೆ ಇಲಾಖೆಯ ಮುಂದೆ ಇಲ್ಲ ಎಂದರು.

ಬೀಡಿ ಕಾರ್ಮಿಕರಿಗೆ ಕಾಡುವ ಕಾಯಿಲೆ

- ಕಾಲುಗಂಟು ನೋವು
- ಬೆನ್ನುನೋವು
- ಸೊಂಟನೋವು
- ತಲೆನೋವು
- ಮಧುಮೇಹ
- ರಕ್ತದೊತ್ತಡ

ಬೆಳಗಾವಿ ಜಿಲ್ಲೆ ನಿಪ್ಪಾಣಿ ಮಹಿಳೆಯರದು ಇನ್ನೊಂದು ಗೋಳಿನ ವ್ಯಥೆ. ‘ಬೀಡಿ ಕಾರ್ಖಾನೆಯಲ್ಲಿ ಮೂರು ವರ್ಷ ಕೆಲಸ ಮಾಡಿದೆ. ಏಕಾಏಕಿ ಅದನ್ನು ಮುಚ್ಚಿದ ಮಾಲೀಕರು ಯಾವ ಸೌಲಭ್ಯವನ್ನೂ ಕೊಡದೆ ಓಡಿಹೋದರು. ಈ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಹೂಡಿದ್ದೇವೆ. 19 ವರ್ಷಗಳಾದರೂ ನ್ಯಾಯ ಸಿಕ್ಕಿಲ್ಲ’ ಎಂದು ಬೇಸರಿಸುತ್ತಾರೆ ಕಾರ್ಮಿಕ ಮಹಿಳೆ ಪರ್ವೀನ್ ನಾಯ್ಕವಾಡೆ.

'ಬೀಡಿ ಕಾರ್ಖಾನೆಯವರು ಕಾರ್ಮಿಕರಿಗೆ ವಂಚಿಸಿದ್ದಾರೆ. ಸದ್ಯ ಇರುವ ಕಾರ್ಖಾನೆಯವರು ಕಾರ್ಮಿಕರಿಗೆ ಅತ್ಯಲ್ಪ ವೇತನ ನೀಡಿ ದುಡಿಸಿಕೊಳ್ಳುತ್ತಾರೆ’ ಎನ್ನುವ ಬೆಳಗಾವಿ ಜಿಲ್ಲಾ ಬೀಡಿ ಕಾರ್ಮಿಕರ ಸಂಘದ ಅಧ್ಯಕ್ಷ ಚಂದ್ರಕಾಂತ ಕರಾಡೆ, ನ್ಯಾಯಕ್ಕಾಗಿ ಕಾರ್ಖಾನೆಯವರ ವಿರುದ್ಧ ಹೋರಾಟ ಮುಂದುವರಿಸಿದ್ದಾಗಿ ಹೇಳುತ್ತಾರೆ.

‘ಮದುವೆಗೂ ಮುಂಚಿನಿಂದ ಬೀಡಿ ಕಟ್ಟಲು ಆರಂಭಿಸಿರುವ ನಾನು ಈಗಲೂ ಮುಂದುವರಿಸಿರುವೆ. ಒಂದು ಸಾವಿರ ಸಿದ್ಧ ಬೀಡಿಗೆ ₹150 ಕೂಲಿ ಕೊಡುತ್ತಾರೆ’ ಎನ್ನುವಾಗ 70ರ ಆಸುಪಾಸಿನ ಅಂಜನಾ ಕುಂಬರ ಅವರ ಕಣ್ಣಲ್ಲಿ ಹತಾಶೆಯ ಭಾವವಿತ್ತು.

ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿರುವ ನಿಪ್ಪಾಣಿಯಲ್ಲಿ ಈಗ ನಾಲ್ಕು ಕಾರ್ಖಾನೆಗಳಿವೆ. ಕೆಲವರಷ್ಟೇ ಅಲ್ಲಿ ಕೆಲಸ ಮಾಡುತ್ತಾರೆ. ಉಳಿದವರು ಕಾರ್ಖಾನೆಯಿಂದ ಕಚ್ಚಾ ಸಾಮಗ್ರಿ ತಂದು, ಮನೆಗಳಲ್ಲಿ ಬೀಡಿ ಕಟ್ಟುತ್ತಾರೆ.

ಕಾರ್ಮಿಕ ಇಲಾಖೆಯ ಮಾಹಿತಿ ಪ್ರಕಾರ ದಾವಣಗೆರೆ ಜಿಲ್ಲೆಯಲ್ಲಿ ಅಂದಾಜು 4,200 ಬೀಡಿ ಕಾರ್ಮಿಕರು, 85 ಗುತ್ತಿಗೆದಾರರು ಇದ್ದಾರೆ. ಆದರೆ, ವಾಸ್ತವದಲ್ಲಿ ದಾವಣಗೆರೆ ನಗರ, ಹರಿಹರ, ಹೊನ್ನಾಳಿ, ಚನ್ನಗಿರಿ, ಜಗಳೂರು ಸೇರಿ 25,000ಕ್ಕೂ ಹೆಚ್ಚು ಕಾರ್ಮಿಕರು ಕಾಣ ಸಿಗುತ್ತಾರೆ.

ಬ್ರ್ಯಾಂಡೇತರ ಮತ್ತು ನೋಂದಾಯಿಸದ ಕಂಪನಿಗಳು ಹಾಗೂ ನೂರಾರು ಗುತ್ತಿಗೆದಾರರ ಬಳಿ ಕೆಲಸ ಪಡೆದು ಮಹಿಳೆಯರು ತಮ್ಮ ಮನೆಗಳಲ್ಲಿಯೇ ಬೀಡಿ ಕಟ್ಟುತ್ತಾರೆ. ಗುತ್ತಿಗೆದಾರರು ಮನೆಗಳಿಗೇ ಎಲೆ, ತಂಬಾಕು ತಂದು ಕೊಡುತ್ತಾರೆ. ಆದರೆ ಕಾರ್ಮಿಕ ಇಲಾಖೆಯಲ್ಲಿ ಬೀಡಿ ಕಾರ್ಮಿಕರ ಲೆಕ್ಕವೇ ಇಲ್ಲ. ಹೀಗಾಗಿ ಅವರಿಂದ ಯಾವುದೇ ಸೌಲಭ್ಯ ಸಿಗುತ್ತಿಲ್ಲ ಎನ್ನುತ್ತಾರೆ ನೆರಳು ಬೀಡಿ ಕಾರ್ಮಿಕರ ಸಂಘಟನೆ ಅಧ್ಯಕ್ಷೆ ಜಬೀನಾ ಖಾನಂ.

ನಿಷೇಧಿತ ಪದಾರ್ಥಕ್ಕೆ ಬೇಡಿಕೆ: ‘ಧೂಮಪಾನ ಕ್ಯಾನ್ಸರ್‌ಗೆ ಕಾರಣ’ ಎಂಬ ವೈಜ್ಞಾನಿಕ ಅಧ್ಯಯನ ವರದಿ, ಅದರ ಹಿನ್ನೆಲೆಯಲ್ಲಿ ತಂಬಾಕು ನಿಷೇಧ, ಕೋಟ್ಪಾ ಕಾಯ್ದೆ–2003 (ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ ಕಾಯ್ದೆ) ಜಾರಿ, ತಂಬಾಕುಮುಕ್ತ ಭಾರತ ಒಡಂಬಡಿಕೆ ಎಲ್ಲವನ್ನೂ ಒಪ್ಪಿಕೊಳ್ಳುತ್ತೇವೆ. ಆದರೆ, ಯಾವುದೆಲ್ಲ ನಿಷೇಧಿತಕ್ಕೆ ಒಳಗಾಗಿವೆಯೋ ಅವುಗಳೇ ಹೆಚ್ಚು ಮಾರಾಟವಾಗುತ್ತವೆ. ತಂಬಾಕು ಉತ್ಪನ್ನದ ಮೇಲೆ ಸರ್ಕಾರ ವಿಧಿಸಿದ ಗರಿಷ್ಠ ಜಿಎಸ್‌ಟಿಯ ನೆಪವೊಡ್ಡಿ, ಬೀಡಿ ಕಂಪನಿಗಳ ಮಾಲೀಕರು, ಕಾರ್ಮಿಕರನ್ನು ಕಡಿಮೆ ಕೂಲಿಗೆ ದುಡಿಸಿಕೊಳ್ಳುತ್ತಾರೆ. ಸಿಗರೇಟ್ ಧೂಮದಿಂದ ಬೀಡಿ ಉದ್ಯಮ ಕೊಂಚ ಸೊರಗಿರಬಹುದು. ಆದರೆ, ದಕ್ಷಿಣ ಭಾರತದ ಬೀಡಿಗೆ ಈಗಲೂ ಉತ್ತರ ಭಾರತದ ರಾಜ್ಯಗಳಲ್ಲಿ ಬೇಡಿಕೆ ಇದೆ’ ಎನ್ನುವುದು ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ತುಮಕೂರಿನ ಸೈಯ್ಯದ್ ಮುಜೀಬ್ ಅಭಿಪ್ರಾಯ.

‘ತಂಬಾಕು ಬೆಳೆಗಾರರಿಗೆ ಪುನರ್ವಸತಿ ಯೋಜನೆಗಳನ್ನು ಸರ್ಕಾರ ಜಾರಿಗೊಳಿಸಿದೆ. ಆದರೆ, ತಂಬಾಕು ಅವಲಂಬಿಸಿರುವ ಕಾರ್ಮಿಕರಿಗೆ ಪರ್ಯಾಯ ಏನು? ತಲೆತಲಾಂತರಗಳಿಂದ ಬೀಡಿ ಕಟ್ಟುವ ಕಾರ್ಮಿಕರ ಕುಟುಂಬದವರು, ಎಲೆ ಕೊಯ್ಯುವವರು, ಹೊರುವವರು, ಸಾಗಣೆ ಮಾಡುವ ವಾಹನಗಳ ಚಾಲಕರು ಇವರೆಲ್ಲ ದೀರ್ಘಕಾಲೀನ ಬಡತನದಲ್ಲಿ ಬೆಂದವರು. ಇವರಿಗೆ ಪರ್ಯಾಯ ಕಲ್ಪಿಸಲು ಯಾಕೆ ಸರ್ಕಾರ ಯೋಚಿಸುತ್ತಿಲ್ಲ’ ಎಂದು ಖಾರವಾಗಿ ಪ್ರಶ್ನಿಸುತ್ತಾರೆ ಅವರು.

ಬೀಡಿ ಕಟ್ಟುಗಳು

ದೈನಂದಿನ ಬದುಕಿಗೆ ಸಾಲದು: ‘ಹಿಂದೆ ಇದ್ದ ಕಾರ್ಖಾನೆಗಳು ಬಂದಾಗಿವೆ. ಪ್ರಸ್ತುತ ಮಂಗಳೂರಿನ ಕೆಲವು ಕಾರ್ಖಾನೆಯವರು ಇಲ್ಲಿನ ಏಜೆನ್ಸಿಗಳ ಮೂಲಕ ಬೀಡಿ ಕಟ್ಟಿಸುತ್ತಾರೆ. ಅವರು ನೀಡುವ ಕೂಲಿ ದೈನಂದಿನ ಬದುಕಿಗೆ ಸಾಲದು’ ಎಂದು ಧಾರವಾಡ ಜಿಲ್ಲಾ ಬೀಡಿ ಕಾರ್ಮಿಕರ ಸಂಘದ ಅಧ್ಯಕ್ಷ ಬಿ.ಎ.ಮುಧೋಳ ಹೇಳುತ್ತಾರೆ.

‘ಕಡಿಮೆ ಕೂಲಿ ಕೊಡುತ್ತಾರೆ ಎಂದು ಯಾರಾದರೂ ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೆ ದೂರು ನೀಡಿದರೆ, ಇದು ಸಂಬಂಧಿಸಿದ ಏಜೆನ್ಸಿಯವರ ಗಮನಕ್ಕೆ ಹೋಗುತ್ತದೆ. ಏಜೆನ್ಸಿಯವರು ಬೀಡಿ ಕಟ್ಟುವ ಕೆಲಸ ಕೊಡಲ್ಲ. ಆ ಕಾರ್ಮಿಕರು ಕೆಲಸ ಇಲ್ಲದೆ ತೊಂದರೆ ಅನುಭವಿಸುತ್ತಾರೆ’ ಎಂದು ಅವರು ತಿಳಿಸಿದರು.

ಬೀಡಿ ಬೇಡಿಕೆ ಕುಸಿತ: ಗ್ರಾಮೀಣ ಭಾಗದಲ್ಲೂ ಸಿಗರೇಟ್ ಬಳಕೆ ಜಾಸ್ತಿಯಾಗಿದೆ. ಇದರಿಂದ ಬೀಡಿ ಕೇಳುವವರು ಕಡಿಮೆಯಾಗಿದ್ದಾರೆ. ಬೀಡಿ ಮೇಲೆ ಸರ್ಕಾರ ಹೆಚ್ಚಿನ ತೆರಿಗೆ ವಿಧಿಸಿರುವುದರಿಂದ ಬೀಡಿ ತಯಾರಿಕೆ ಕುಸಿತವಾಗುತ್ತಿದೆ. ಸೂಕ್ತ ಮಾರುಕಟ್ಟೆ ಇಲ್ಲದ ಕಾರಣಕ್ಕೆ ಕೂಲಿ ಕಾರ್ಮಿಕರಿಗೆ ವಾರದ ಪೂರ್ತಿ ಕೆಲಸ ನೀಡಲು ಆಗುತ್ತಿಲ್ಲ. ಹೀಗಾಗಿ ಕಾರ್ಮಿಕರ ಜತೆಗೆ ಮಾಲೀಕರಿಗೂ ಕಷ್ಟವಾಗುತ್ತಿದೆ. ಒಂದು ಸಾವಿರ ಬೀಡಿ ಕಟ್ಟಿದರೆ ₹260 ಕೂಲಿ, ಶೇ 8.3ರಷ್ಟು ಬೋನಸ್ ನೀಡಲಾಗುತ್ತಿದೆ ಎನ್ನುತ್ತಾರೆ ತುಮಕೂರಿನ ಅಶೋಕ ಬೀಡಿ ಮಾಲೀಕ ರಿಯಾಜ್ ಅಹ್ಮದ್.

ಬೀಡಿ ಕಾರ್ಮಿಕರ ಕ್ಷೇಮನಿಧಿ ದುರ್ಬಲ: ಬೀಡಿ ಉತ್ಪಾದನೆಯ ಮೇಲೆ ಸೆಸ್ ವಿಧಿಸಿ ಆ ಹಣವನ್ನು ಬೀಡಿ ಕಾರ್ಮಿಕರ ಕ್ಷೇಮನಿಧಿ ಮೂಲಕ ಕಾರ್ಮಿಕರ ಮಕ್ಕಳಿಗೆ ಸ್ಕಾಲರ್‌ಷಿಪ್, ಕಾಯಿಲೆಗೆ ತುತ್ತಾದವರ ಚಿಕಿತ್ಸೆಗೆ ನೆರವು ಮೊದಲಾದ 15ಕ್ಕೂ ಹೆಚ್ಚು ಕಲ್ಯಾಣ ಕಾರ್ಯಕ್ರಮಗಳಿಗೆ ಬಳಕೆ ಮಾಡಲಾಗುತ್ತಿತ್ತು. ಈಗ ಜಿಎಸ್‌ಟಿ ಬಂದ ಮೇಲೆ ಸೆಸ್ ಅನ್ನು ನಿಲ್ಲಿಸಿರುವ ಕೇಂದ್ರ ಸರ್ಕಾರ, ಕ್ಷೇಮನಿಧಿಯನ್ನು ದುರ್ಬಲಗೊಳಿಸಿದೆ. ರಾಜ್ಯದಲ್ಲಿ 28 ಕಡೆಗಳಲ್ಲಿ ಬೀಡಿ ಕಾರ್ಮಿಕರ ಚಿಕಿತ್ಸಾ ಕೇಂದ್ರಗಳು, ಯಾದಗಿರಿ ಮತ್ತು ಮೈಸೂರಿನಲ್ಲಿ ತಲಾ ಒಂದು ಆಸ್ಪತ್ರೆ ಇವೆ. ಇವನ್ನು ಇಎಸ್‌ಐಗೆ ಹಸ್ತಾಂತರಿಸುವ ವಿಚಾರ ಪ್ರಸ್ತಾಪದಲ್ಲಿದೆ. ಕಾರ್ಮಿಕರ ಆರೋಗ್ಯ ತಪಾಸಣೆಗೆ ಹಳ್ಳಿಗಳಿಗೆ ಹೋಗುತ್ತಿದ್ದ ಮೊಬೈಲ್ ವಾಹನಗಳು ಬಹುತೇಕ ಮೂಲೆ ಸೇರಿವೆ. ಅನುದಾನದ ಕೊರತೆಯಿಂದ ಇವೆಲ್ಲ ಮಂಕಾಗಿವೆ ಎಂಬುದು ಕಾರ್ಮಿಕರಪರ ಹೋರಾಟಗಾರರ ಆರೋಪ.

‘ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರ 10 ಚಿಕಿತ್ಸಾಲಯಗಳಿದ್ದು, ಔಷಧ ಸಂಗ್ರಹ ಸಾಕಷ್ಟಿದೆ. ಹೃದಯ ಕಾಯಿಲೆ ₹1.5 ಲಕ್ಷ, ಕ್ಯಾನ್ಸರ್ ಮತ್ತು ಮೂತ್ರಪಿಂಡ ವಿಫಲವಾದರೆ ₹2 ಲಕ್ಷದವರೆಗೆ ಬೀಡಿ ಕಾರ್ಮಿಕರಿಗೆ ಆರ್ಥಿಕ ನೆರವು ಸಿಗುತ್ತದೆ. ಹೆರಿಗೆ ಭತ್ಯೆ, ಕನ್ನಡಕ ವಿತರಣೆ ಇನ್ನಿತರ ಕೆಲವು ಯೋಜನೆಗಳು ಬಂದ್ ಆಗಿವೆ. ಬೀಡಿ ಕಾರ್ಮಿಕ ಮಹಿಳೆಯರಲ್ಲಿ ಬೆನ್ನುನೋವು, ಗಂಟು ನೋವು, ತಲೆನೋವು ಸಮಸ್ಯೆಯಿಂದ ಬಳಲುವವರು ಹೆಚ್ಚಿದ್ದಾರೆ’ ಎನ್ನುತ್ತಾರೆ ಗುರುಪುರ ಕೈಕಂಬ ಬೀಡಿ ಕಾರ್ಮಿಕರ ಆಸ್ಪತ್ರೆಯ ಮುಖ್ಯ ಆರೋಗ್ಯಾಧಿಕಾರಿ ಡಾ. ರಾಮಕೃಷ್ಣ ಭಟ್.

‘ಹೊಸಬರು ಬೀಡಿ ಕಟ್ಟಲು ಬರುತ್ತಿಲ್ಲ. ಹಳಬರಿಗೆ ಹೆಚ್ಚು ಕೆಲಸ ಸಿಗುತ್ತಿಲ್ಲ. ಇದನ್ನೇ ನಂಬಿದರೆ ಬದುಕಿನ ಬಂಡಿ ಓಡುವುದಿಲ್ಲ. ಕೆಲ ವಯಸ್ಸಾದವರು ಸಮಯ ಕಳೆಯಲು ಮಕ್ಕಳ ಹೆಸರಿನಲ್ಲಿ ಬೀಡಿ ಕಟ್ಟುತ್ತಾರೆ. ಆರೆಂಟು ವರ್ಷಗಳ ಹಿಂದಿನವರೆಗೂ ದಿನಕ್ಕೆ ಗರಿಷ್ಠ 1 ಲಕ್ಷ ಬೀಡಿ ಸಂಗ್ರಹಿಸಿದ್ದಿದೆ. ಈಗ ಹೆಚ್ಚೆಂದರೆ ದಿನಕ್ಕೆ 5,000 ಬೀಡಿ ಸಂಗ್ರಹವಾಗುತ್ತದೆ. ಈ ಉದ್ಯಮಕ್ಕೆ ಇನ್ನು ನಾಲ್ಕಾರು ವರ್ಷ ಆಯಸ್ಸು ಅಷ್ಟೇ’ ಎನ್ನುತ್ತ ಸುಕ್ಕುಗಟ್ಟಿದ ಕೈಯಲ್ಲಿ ಲೆಕ್ಕಪುಸ್ತಕದಲ್ಲಿ ದಾಖಲಿಸಿಕೊಳ್ಳುತ್ತ, ಬೀಡಿ ಕಟ್ಟು ತಂದ ಮಹಿಳೆಯರಿಗೆ ಹಣ ಎಣಿಸಿ ಕೊಡುತ್ತಿದ್ದರು ಮಂಗಳೂರು ಅಡ್ಯಾರ್‌ನ ಬಿ.ಎ. ಖಾದರ್.

ಬೀಡಿ ಉದ್ಯಮ ಸೂರ್ಯಾಸ್ತಮಾನದಲ್ಲಿದೆ. ಇದೇ ವೃತ್ತಿಯನ್ನು ದಶಕಗಳಿಂದ ಆಶ್ರಯಿಸಿರುವ ಮಹಿಳೆಯರು ಈಗ ಇಳಿವಯಸ್ಸಿಗೆ ಜಾರಿದ್ದಾರೆ. ಬದುಕಿನ ಸಂಜೆಯಲ್ಲಿರುವ ಸಹಸ್ರಾರು ಜೀವಗಳ ಒಡಲ ನೋವಿಗೆ ಸರ್ಕಾರ ಕಿವಿಯಾಗಬೇಕಾಗಿದೆ.

ಪೂರಕ ಮಾಹಿತಿ: ಎಲ್. ಮಂಜುನಾಥ, ಸಿದ್ದು ಆರ್.ಜಿ.ಹಳ್ಳಿ, ಇಮಾಮ್ ಹುಸೇನ್ ಗೂಡುನವರ, ಎಂ. ಮಹೇಶ್, ಅನಿತಾ ಎಚ್, ಮೈಲಾರಿ ಲಿಂಗಪ್ಪ, ಆದಿತ್ಯ ಕೆ.ಎ.

‘ಹೃದ್ರೋಗ, ಶ್ವಾಸಕೋಶ ಸಂಬಂಧಿ ಕಾಯಿಲೆ’

ಬೀಡಿ ಸುತ್ತುವ ಕಾಯಕ ನೆಚ್ಚಿಕೊಂಡಿರುವ ಮಹಿಳೆಯರಿಗೆ ಹಲವು ರೀತಿಯ ಆರೋಗ್ಯ ಸಮಸ್ಯೆಗಳು ಕಂಡುಬರುವ ಸಾಧ್ಯತೆ ಹೆಚ್ಚಿರುತ್ತದೆ. ತಂಬಾಕಿನ ಕಣ, ದೂಳಿನಿಂದ ಆರೋಗ್ಯದ ಮೇಲೆ ಖಂಡಿತ ದುಷ್ಪರಿಣಾಮ ಬೀರುತ್ತದೆ.

ಬೀಡಿ ಕಟ್ಟುವವರು ಮೂಗು ಮುಚ್ಚುವ ರೀತಿಯಲ್ಲಿ ಗುಣಮಟ್ಟದ ಮಾಸ್ಕ್ ಧರಿಸಬೇಕು. ಕೈಗವಸು ಹಾಕಿಕೊಳ್ಳಬೇಕು. ಕೆಲಸ ಮುಗಿದ ಮೇಲೆ ಕೈ ತೊಳೆದುಕೊಳ್ಳುವುದು ಮೊದಲಾದ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ಇಲ್ಲದಿದ್ದರೆ ಅಪಾಯ ಖಚಿತ. ಶ್ವಾಸಕೋಶದ ಕ್ಯಾನ್ಸರ್, ಹೃದಯ ಸಂಬಂಧಿ ಕಾಯಿಲೆಗಳು, ರಕ್ತದೊತ್ತಡ ಹೆಚ್ಚಾಗುವ ಸಾಧ್ಯತೆ ಜಾಸ್ತಿ ಇರುತ್ತದೆ. ತಂಬಾಕಿನಲ್ಲಿ ‘ನಿಕೊಟಿನ್’ ಅಂಶ ಇರುವುದರಿಂದ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ.

–ಡಾ.ಕೆ.ಎಸ್. ಸದಾನಂದ, ಮೈಸೂರು ಜಯದೇವ ಹೃದ್ರೋಗ ವಿಜ್ಞಾನ ಸಂಸ್ಥೆಯ ವೈದ್ಯಕೀಯ ಸೂಪರಿಂಟೆಂಡೆಂಟ್

ಮಂಗಳೂರಿನಲ್ಲಿ ಬೀಡಿ ಕಟ್ಟುತ್ತ ಮಹಿಳೆಯರ ಉಭಯ ಕುಶಲೋಪರಿ
– ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

‘ತುಟ್ಟಿಭತ್ಯೆ ಪಾವತಿ ಬಾಕಿ’



ಬಾಲಕೃಷ್ಣ ಶೆಟ್ಟಿ

ಬೀಡಿ ಕಾರ್ಮಿಕರಿಗೆ ರಾಷ್ಟ್ರೀಯ ಕನಿಷ್ಠ ಕೂಲಿ ನಿಯಮ ಜಾರಿಯಾಗಿಲ್ಲ. ಮಧ್ಯಪ್ರದೇಶ, ಆಂಧ್ರ ಪ್ರದೇಶ, ಪಶ್ಚಿಮ ಬಂಗಾಳ, ಒಡಿಶಾ ಇನ್ನಿತರ ಕೆಲವು ರಾಜ್ಯಗಳಲ್ಲಿ ಅತಿ ಕಡಿಮೆ ಕೂಲಿಗೆ ಬೀಡಿ ಕಟ್ಟಿಸಿಕೊಂಡು ಕಾರ್ಮಿಕರ ಶೋಷಣೆ ಮಾಡಲಾಗುತ್ತಿದೆ. ಇಲ್ಲಿನ ಬ್ರ್ಯಾಂಡ್ ಬೀಡಿಗಳು ಅಲ್ಲಿಂದಲೂ ಸಿದ್ಧವಾಗಿ ಬರುತ್ತವೆ. 1,000 ಬೀಡಿಗೆ ಕನಿಷ್ಠ ಕೂಲಿ ₹210 ನೀಡಬೇಕು, ಒಂದು ಬೀಡಿಗೆ ನಾಲ್ಕು ಪೈಸೆ ತುಟ್ಟಿಭತ್ಯೆ ನೀಡಬೇಕು ಎಂದು 2018ರಲ್ಲಿ ಸರ್ಕಾರದ ತ್ರಿಪಕ್ಷೀಯ ಸಮಿತಿಯಲ್ಲಿ ನಿರ್ಣಯವಾಗಿತ್ತು. ಈ ವಿಚಾರದ ಸಂಬಂಧ ಬೀಡಿ ಕಂಪನಿಗಳ ಮಾಲೀಕರು ನ್ಯಾಯಾಲಯದ ಮೊರೆ ಹೋಗಿದ್ದಾರೆ. ಅದೇ ಮಾನದಂಡ ಜಾರಿಯಾಗಿದ್ದರೆ ಈಗ ಸಾವಿರ ಬೀಡಿಗೆ ಸುಮಾರು ₹300ರಷ್ಟು ಮಜೂರಿ ಸಿಗುತ್ತಿತ್ತು. 2015ರಿಂದ ಮೂರು ವರ್ಷಗಳ ತುಟ್ಟಿಭತ್ಯೆ ಕಾರ್ಮಿಕರಿಗೆ ಪಾವತಿಸಲು ಬಾಕಿ ಇದೆ ಎಂದು ತಿಳಿಸಿದರು ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ ಅಧ್ಯಕ್ಷ ಜೆ. ಬಾಲಕೃಷ್ಣ ಶೆಟ್ಟಿ.

‘ಪರ್ಯಾಯ ಯೋಜನೆ ಪ್ರಕಟಿಸಲಿ’



ಸೈಯದ್ ಮುಜೀಬ್

ರಾಜ್ಯದಲ್ಲಿ 10 ಲಕ್ಷದಷ್ಟಿದ್ದ ಬೀಡಿ ಕಾರ್ಮಿಕರ ಸಂಖ್ಯೆ ಈಗ ಸುಮಾರು ನಾಲ್ಕು ಲಕ್ಷಕ್ಕೆ ಇಳಿದಿದೆ. ಬೀಡಿ ಕಂಪನಿಗಳು, ಕಾರ್ಮಿಕ ಇಲಾಖೆ, ಚಿಕಿತ್ಸಾಲಯಗಳಲ್ಲಿ ನೋಂದಣಿಯಾದವರ ಸಂಖ್ಯೆ ಒಂದಕ್ಕೊಂದು ತಾಳೆಯಾಗುತ್ತಿಲ್ಲ. ಸಂದರ್ಭದ ಲಾಭ ಪಡೆಯುವ ಕಂಪನಿಗಳು ಕಾನೂನುಬದ್ಧವಾಗಿ 2–3 ದಿನ ಮಾತ್ರ ಕೆಲಸ ನೀಡುತ್ತಿವೆ. ದಾಖಲೆರಹಿತ ಕೆಲಸಕ್ಕೆ ಒಪ್ಪಿದರೆ ವಾರವಿಡೀ ಬರವಿಲ್ಲ ಎಂದು ಆರೋಪಿಸುತ್ತಾರೆ ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಸೈಯದ್ ಮುಜೀಬ್.

1990ರ ದಶಕದ ಪೂರ್ವ ಬೀಡಿ ಉದ್ಯಮದ ಪ್ರವರ್ಧಮಾನ ಕಾಲ. ಆಗ ಕಂಪನಿಯವರು ಸೂಪರ್ ತೆರಿಗೆದಾರರಾಗಿದ್ದರು. ಈಗಲೂ ಅವರಿಗೆ ಆದಾಯ ಕಡಿಮೆಯೇನಿಲ್ಲ. ದೊಡ್ಡ ಬಂಡವಾಳ ಹೂಡಿಕೆ ಇಲ್ಲದ ಈ ಉದ್ಯಮದಲ್ಲಿ ದಣಿಗಳು ಇನ್ನಷ್ಟು ಶ್ರೀಮಂತರಾಗುತ್ತಿದ್ದಾರೆ. ಕಾರ್ಮಿಕರೂ ಅಂದು–ಇಂದೂ ‘ಅಂತ್ಯೋದಯ’ ಕಾರ್ಡ್‌ನಲ್ಲೇ ಇದ್ದಾರೆ. ಸರ್ಕಾರವು ಬೀಡಿ ಕಾರ್ಮಿಕರ ಆರೋಗ್ಯ ಸ್ಥಿತಿಯ ಬಗ್ಗೆ ಗಮನಹರಿಸಿ, ಸಮಗ್ರ ಅಧ್ಯಯನಕ್ಕೆ ಮುಂದಾಗಬೇಕು ಎಂದು ಅವರು ಆಗ್ರಹಿಸಿದರು.

ಗುಂಡಣ್ಣ

25 ವರ್ಷಗಳ ಹಿಂದೆ — ಗುರುವಾರ, 8-10-1998

1 ಚಳ್ಳಕೆರೆಯಲ್ಲಿ ದಾಖಲೆ ಮಳೆ: ಮನೆ ಕುಸಿತ– 12 ಸಾವು

ಚಿತ್ರದುರ್ಗ, ಅ. 7– ಇಲ್ಲಿಗೆ 30 ಕಿಮಿ ದೂರದ ಚಳ್ಳಕೆರೆ ಪಟ್ಟಣದಲ್ಲಿ ಇಂದು ಬೆಳಗಿನ ಜಾವ ರೌದ್ರಾವತಾರ ತಾಳಿದ ಮಳೆಯಿಂದಾಗಿ ಎರಡು ಮನೆ ಕುಸಿದು 11 ಮಂದಿ, ಹಿರಿಯೂರು ಸಮೀಪದ ಕೂಡ್ಲಹಳ್ಳಿಯಲ್ಲಿ ಗೋಡೆ ಬಿದ್ದು ಒಬ್ಬ ಬಾಲಕ ಸ್ಥಳದಲ್ಲಿಯೇ ಮೃತಪಟ್ಟರು.

ಚಳ್ಳಕೆರೆ ಪಟ್ಟಣದ ಹೊರವಲಯದ ಸೋಮಗುದ್ದು ಗ್ರಾಮದ ಬೋವಿ ಕಾಲೋನಿಯಲ್ಲಿ ಮಳೆ ನೀರು ನುಗ್ಗಿ 132 ಕುರಿಗಳು ಸತ್ತಿದ್ದು, 70ಕ್ಕೂ ಹೆಚ್ಚು ಕುಟುಂಬ ಬೀದಿಪಾಲಾಗಿದೆ.

50 ವರ್ಷಗಳ ಹಿಂದೆ — ಸೋಮವಾರ, 8-10-1973

• ಮಧ್ಯಪ್ರಾಚ್ಯದಲ್ಲಿ ಉಗ್ರ ಕಾಳಗ: ರಣರಂಗಕ್ಕೆ ಇರಾಕ್, ಜೋರ್ಡಾನ್

ಕೈರೋ, ಅ. 7– ಇರಾಕ್ ಮತ್ತು ಜೋರ್ಡಾನ್ ಸೈನ್ಯಬಲವೂ ಇಂದು ರಣರಂಗಕ್ಕಿಳಿದು, ಮಧ್ಯಪ್ರಾಚ್ಯದಲ್ಲಿ ಶನಿವಾರ ಆರಂಭವಾದ ಸಮರವು ಇಂದು ಉಗ್ರ ಹಾಗೂ ಪೂರ್ಣ ಪ್ರಮಾಣದ ಯುದ್ಧಘಟ್ಟವನ್ನು ಮುಟ್ಟಿತು.

ಮಧ್ಯಪ್ರಾಚ್ಯದಲ್ಲಿ ಹೋರಾಟದ ಎರಡನೇ ದಿನವಾದ ಇಂದೂ ಉಗ್ರ ಕದನ ನಡೆಯುತ್ತಿರುವುದಾಗಿ ವರದಿಯಾಗಿದೆ. ಭೂಪಡೆ ಮತ್ತು ವಿಮಾನ ಬಲದ ನಡುವೆ ಭೀಕರ ಸಮರ ನಡೆದ ವರದಿಗಳು ಬಂದಿವೆ.

ದಿನ ಭವಿಷ್ಯ — ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಅಕ್ಟೋಬರ್ 8, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣನವಮಿ ಗಂ. 10-13 ನಕ್ಷತ್ರ: ಪುಷ್ಯ ಗಂ. 26-45 ಯೋಗ: ಶಿವ ಗಂ 06-02 ಕರಣ: ಗರ ಗಂ. 10-13, ಕನ್ಯಾ ಮಾಸದ 21 ನೇ ದಿನ, ಮಳೆನಕ್ಷತ್ರ: ಹಸ್ತ 4.
ರಾಹುಕಾಲ: ಸಾಯಂಕಾಲ 04-30 - 06-00.
ಸೂರ್ಯೋದಯ: 06-24 ಸೂರ್ಯಾಸ್ತ: 06-13, ಮುಸ್ಲಿಂ ದಿನಾಂಕ: 22 ರಬೀಉಲ್ಲಾವಲ್, ದಿನ ವಿಶೇಷ: ಸುಖ್ಖೋತ್ ಕೊನೆಯ ದಿನ (ಸಿಂಹತ್ ತೊರಾಹ್) (ಜ್ಯೂಯಿಷ್), ಅದೃಷ್ಟ ಸಂಖ್ಯೆ : 7, 10

ಮೇಷ: ಮೇಲಧಿಕಾರಿಗಳಿಗೂ ನಿಮಗೂ ಇರುವ ವಿಶ್ವಾಸ ಹೆಚ್ಚಾಗುವುದು. ಬಹಳ ದಿನಗಳ ನಂತರದಲ್ಲಿ ಇಂದು ವ್ಯವಹಾರಗಳು ತೃಪ್ತಿಕರವಾಗಿರುವುದು. ಮನೆಯಲ್ಲಿ ವಾರ್ಷಿಕ ಧಾರ್ಮಿಕ ಕಾರ್ಯಕ್ರಮ ಮಾಡಲು ತೀರ್ಮಾನಿಸುವಿರಿ.

ವೃಷಭ: ತೂಕದ ವ್ಯಕ್ತಿಯಾಗಿರುವ ನಿಮಗೆ ಅನುಯಾಯಿಗಳು ವೃದ್ಧಿಯಾಗುವರು. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಪರಿಪೂರ್ಣ ಪ್ರಯತ್ನ ಹಾಕುವುದು ಅಗತ್ಯ. ಸಾಲ ಮಾಡುವ ಸಾಧ್ಯತೆಗಳಿರುವುದು.

ಮಿಥುನ: ವೃತ್ತಿಯ ಕೆಲಸದ ಮುಕ್ತಾಯದ ಸಮಯದಲ್ಲಿ ಬಹಳ ಆಯಾಸವಾಗುವಂತಾಗಲಿದೆ. ಅವಿವಾಹಿತರಿಗೆ ವಿವಾಹ ಯೋಗವಿದೆ. ಶ್ರೀ ವೆಂಕಟೇಶ್ವರನ ಆರಾಧನೆಯಿಂದ ನಿಮ್ಮ ಕಾರ್ಯಗಳಲ್ಲಿ ಯಶಸ್ಸನ್ನು ಪಡೆದುಕೊಳ್ಳುವಿರಿ.

ಕರ್ಕಾಟಕ: ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ಪ್ರಶಸ್ತಿ, ಗೌರವ ಸಿಗುವುದು. ವೃತ್ತಿ ಬದಲಾವಣೆ ಅಥವಾ ಆಸ್ತಿ ಖರೀದಿಯ ಯೋಚನೆ ಮುಂದೂಡುವುದು ಉತ್ತಮ. ಶೀತ ರೋಗ ಬಾಧೆ ಬರಬಹುದು.

ಸಿಂಹ: ಅಧಿಕಾರಿಗಳಿಗೆ ನಿಮ್ಮ ಮೇಲೆ ಅಪನಂಬಿಕೆ ಮೂಡುವಂಥ ಘಟನೆ ನಿಮ್ಮಿಂದ ಸಂಭವಿಸಬಹುದು. ಧರ್ಮ ಕಾರ್ಯಕ್ಕಾಗಿ ಧನ ವಿನಿಯೋಗವಾಗುತ್ತದೆ. ನಿಮ್ಮ ಎಲ್ಲಾ ವ್ಯವಹಾರಗಳೂ ಸಾಮಾನ್ಯ ಗತಿಯಲ್ಲಿ ಮುಂದುವರಿಯಲಿದೆ.

ಕನ್ಯಾ: ಇಂದಿನ ಕೆಲಸ ಕಾರ್ಯಗಳಿಗೆ ದೇವತಾ ಅನುಗ್ರಹ ಸ್ವಲ ಕಡಿಮೆ ಇರುವುದರಿಂದ ಕಾರ್ಯ ಸಾಧನೆಗೆ ಇನ್ನೂ ಹೆಚ್ಚಿನ ಪರಿಶ್ರಮ ಬೇಕಾಗುತ್ತದೆ. ಭಾವನಾತ್ಮಕ ಸಂಬಂಧಗಳನ್ನು ಬೆಳೆಸಲು ಇದು ಸೂಕ್ತ ಕಾಲವಾಗಿದೆ.

ತುಲಾ: ಕರ್ತವ್ಯ ಮತ್ತು ಸಮಯ ಪ್ರಜ್ಞೆಯಿಂದಾಗಿ ನೀವು ದುಡಿಯುವ ಸಂಸ್ಥೆಗೆ ನಿಮ್ಮಿಂದ ಲಾಭ ಉಂಟಾಗುವುದು. ಆಧ್ಯಾತ್ಮ ಚಿಂತನೆಯು ಜೀವನ ಧೈರ್ಯವನ್ನು ವೃದ್ಧಿಸುತ್ತದೆ. ಗಣಪತಿಯ ಆರಾಧನೆಯಿಂದ ನೆಮ್ಮದಿ.

ವೃಶ್ಚಿಕ: ಕುಟುಂಬದ ಹಾಗೂ ಕಾರ್ಯಕ್ಷೇತ್ರದ ಸಮಸ್ಯೆಯನ್ನು ಹಂತಹಂತವಾಗಿ ಸುಧಾರಣೆ ಮಾಡುವಿರಿ. ಎಂಥ ಪರಿಸ್ಥಿತಿಯನ್ನೂ ನಿಭಾಯಿಸುವ ಸಾಮರ್ಥ್ಯ ದುರ್ಗಾಪರಮೇಶ್ವರಿಯ ಆರಾಧನೆಯಿಂದ ಪ್ರಾಪ್ತಿಯಾಗಲಿದೆ.

ಧನು: ಭವಿಷ್ಯದ ಭದ್ರತೆ ಕುರಿತ ನಿಮ್ಮ ಕಾಳಜಿ ಸಂತೃಪ್ತಿ ನೀಡುವುದು. ಮಾನಸಿಕ ಸ್ಥೈರ್ಯವನ್ನು ಹೆಚ್ಚಿಸಿಕೊಂಡು ಸಂಸಾರದ ಜವಾಬ್ದಾರಿಯನ್ನು ನೋಡಿಕೊಳ್ಳುವಂತೆ ಆಗಲಿದೆ. ನೆರೆಯವರ ಸಹಾಯ ದೊರಕಲಿದೆ.

ಮಕರ: ವ್ಯಾಪಾರ ಸಂಬಂಧಿತ ವಿಷಯಗಳ ಕುರಿತು ನಾನಾ ಮೂಲಗಳಿಂದ ಮಾಹಿತಿ ಸಂಗ್ರಹಿಸಿ. ವಾದಗಳು ಕಾರ್ಯಕ್ಕೆ ಅಡ್ಡಿಯಾಗದಂತೆ ಗಮನಹರಿಸಿ. ಜೀವನೋಪಾಯಕ್ಕೆ ಸರಿಯಾದ ದಾರಿಗಳನ್ನು ಹುಡುಕಬೇಕಾಗುತ್ತದೆ.

ಕುಂಭ: ವಾಣಿಜ್ಯ ಕ್ಷೇತ್ರದ ವಿದ್ಯಾರ್ಥಿಗಳಿಗೆ ಶುಭ ಸಮಯವಾಗಿದ್ದು, ಅವರು ಪಟ್ಟ ಶ್ರಮಕ್ಕೆ ಅತಿ ಹೆಚ್ಚಿನ ಅಂಕ ಪಡೆದು ತಮ್ಮ ಗುರಿ ಮುಟ್ಟುವ ಸಾಧ್ಯತೆಗಳಿವೆ. ಒಳಾಂಗಣ ವಿನ್ಯಾಸಗಾರರಿಗೆ ಅಧಿಕ ವರಮಾನ ಪ್ರಾಪ್ತಿಯಾಗುವುದು.

ಮೀನ: ಮಿತ್ರರಲ್ಲಿ ಸ್ನೇಹ, ಬಂಧುಗಳಲ್ಲಿ ಸಂಬಂಧವನ್ನು ಉಳಿಸಿಕೊಂಡು ಹೋಗುವುದು ಇಹಕ್ಕೂ ಪರಕ್ಕೂ ಒಳಿತು ಉಂಟುಮಾಡುತ್ತದೆ. ನೂತನ ವಾಹನ ಕೊಳ್ಳುವ ಬಗ್ಗೆ ಯೋಚನೆ ಬರುವುದು.

ಪದಬಂಧ 5464 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮಂಡಲ ಬರೆದ ಯತಿ ಬಳಸಿದ ನೀರಿನ ಪಾತ್ರೆ (4)
3.ಒಂದೇ ಗೋತ್ರಕ್ಕೆ ಸೇರಿದುದು (3)
5.ಜಳಕ ಎಂದರೆ ಹೀಗೆ ರೋಮಾಂಚವೇ? (3)
7.ದಯವನ್ನು ಹೊಂದಿರುವ ಹುಟ್ಟು! (3)
8.ಎಲ್ಲರೂ ಸೇರಿ ಒಟ್ಟಾಗಿ ಹಾಡುವುದು (5)
11.ಬಾಣ ಹಿಡಿದಿರುವ ಶೈವ ಭಕ್ತೆ (3)
12.ಕಮ್ಮಾರನ ಒಲೆಯಿದು (3)
15.ಕೊನೆಗೆ ಬೆಲೆಯಿಟ್ಟರೆ ಕಣಿವೆ ಕಂಡೀತು (3)
16.ಹೊಸ ಜೀವನವಿದು (4))

ಮೇಲಿಂದ ಕೆಳಕ್ಕೆ
1.ಕದಕ್ಕೆ ತಾಕಿರುವ ಕೆನ್ನೆ (3)
2.ಹೆಜ್ಜೆ ಊರಲೂ ನಾಚಿಕೆಯೇ? (2)
3.ಮಯನ ಬಳಿ ಕಳೆದಿರುವ ವೇಳೆ (3)
4.ಪಕ್ಷದ ಹದಿಮೂರನೆಯ ದಿನ (4)
6.ಪೂಜಾ ಸಮಯದಲ್ಲಿ ನೀರು ತುಂಬಿಟ್ಟಿರುವ ಕೊಡ (3)
7.ದಾಹಗೊಂಡವನಿಗೆ ನೀಡಿರುವ ದೃಷ್ಟಾಂತ (5)
9.ಬೆಳಗಿನ ಜಾವವಿದು (3)
10.ಗರ್ಜಿಸುವ ಸಿಂಹ ತಿರುಗಿದೆಯಲ್ಲಾ? (4)
11.ಶರದೊಳಗೆ ತೂರಿಕೊಂಡ ಮೈ! (3)
13.ಮಡಿಕೆಗಳುಳ್ಳ ಮಸ್ತಿಷ್ಕ (3)
14.ಮಾತಾಡದಿರುವಿಕೆ ಅಥವಾ ನೀರವತೆ(2)



5463ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆಡಂಬರ 3.ಅಧ್ವಾನ 4.ಹವೀಜ 6.ಯಜಮಾನ 9.ಪದವೀದಾನ 12.ಮನೋಗತ 15.3ಜೋರಿ 16.ರಸಿಕೆ 17.ಗೆಳೆತನ

ಮೇಲಿಂದ ಕೆಳಕ್ಕೆ:
1.ಆಗಂತುಕ 2.ರಹಸ್ಯ 4.ನಸುನಗು 5.ಜಯ 7.ಜನನ 8.ನಾವೀನ್ಯ 9.ಪಲ್ಲಂಗ 10.ನಮಸ್ಕಾರ 11.ಅಂತರ್ಧಾನ 13.ತತ 14.ಸರಿಗೆ

ಸುಡೊಕು 5850

6		4			1			3
	7					6		
5			8		9		4	7
		5	4			3		
	6			9			7	
3					8	5		9
4	1			8			3	
		2	7		4	9		1
7		9		3			2	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5849 ಸುಡೊಕು

2	4	8	3	7	1	5	6	9
9	5	6	4	8	2	3	7	1
7	3	1	9	5	6	2	8	4
6	9	4	1	3	8	7	5	2
5	7	2	6	4	9	1	3	8
8	1	3	7	2	5	9	4	6
3	6	7	2	1	4	8	9	5
4	2	5	8	9	3	6	1	7
1	8	9	5	6	7	4	2	3

ಪ್ರಜಾವಾಣಿ
ಭಾನುವಾರದ
ಪುರವಣಿ
ಭಾನುವಾರ, 8 ಅಕ್ಟೋಬರ್ 2023



'ಹೊಸ ಚಿಗುರಿನ ಪಾರಿಜಾತ' 9
ಕತ್ತಲೆಯ ಗಾಳಿಯಂತಹ ಫೊಸ್ಸೆ ಕೃತಿಗಳು 10
ಕತ್ತಲಲ್ಲಿ ಕ್ಯಾಮೆರಾ ಕಣ್ಣು ತೆರೆದಾಗ... 11

ಇದೋ... ಹೊಸ ಸಂಸತ್ ಭವನ

ಮಂಜುನಾಥ ಹೆಬ್ಬಾರ್

ರಾಷ್ಟ್ರ ರಾಜಧಾನಿಯಲ್ಲಿ ಅತ್ಯಲ್ಪ ಸಮಯದಲ್ಲೇ ತಲೆಎತ್ತಿ ನಿಂತಿರುವ 'ಮಾತಿನ ಮನೆ' ಈಗ ನೋಡುಗರ ಕಣ್ಮನ ಸೆಳೆಯುತ್ತಿದೆ. ಇದು ಕೃತಕ ಬುದ್ಧಿಮತ್ತೆಯ ಅತ್ಯಾಧುನಿಕ ತಂತ್ರಜ್ಞಾನವನ್ನೂ ಹೊಂದಿರಲಿದ್ದು, ಭೂಕಂಪಕ್ಕೂ ಜಗ್ಗುವುದಿಲ್ಲ. ವಿಪಕ್ಷಗಳಿಂದ 'ಮೋದಿ ಮಲ್ಟಿಪ್ಲೆಕ್ಸ್' ಎಂದು ಟೀಕೆ ಎದುರಿಸಿದ ಹೊಸ ಸಂಸತ್ ಭವನದ ನೋಟವಿದು.

ಪ್ರಜಾಪ್ರಭುತ್ವದ ದೇಗುಲವಾದ ಹೊಸ ಸಂಸತ್ ಭವನವು ಪರಂಪರೆಯೊಂದಿಗೆ ಆಧುನಿಕತೆಯನ್ನು ಮೇಳೈಸಿಕೊಂಡಿದೆ. ಈ ಐತಿಹಾಸಿಕ ಕಟ್ಟಡ ದೇಶದ ಮೂಲೆಮೂಲೆಯ ಐತಿಹಾಸಿಕ ವಾಸ್ತುಶಿಲ್ಪಗಳ ಸಮ್ಮಿಲನವಾಗಿದೆ. ಸುಮಾರು 27 ವರ್ಷಗಳಿಂದ ಹಲವು ಅಡೆತಡೆಗಳನ್ನು ಎದುರಿಸಿ ಶೈತ್ಯಾಗಾರಕ್ಕೆ ಸೇರಿದ್ದ 'ಮಹಿಳೆ ಮೀಸಲಾತಿ ಮಸೂದೆ' ಅಂಗೀಕಾರ ಪಡೆದಿದ್ದು ಇದೇ ಭವನದಲ್ಲಿ.

ಅಂದಹಾಗೆ, ಈ ಐತಿಹಾಸಿಕ ಹಾಗೂ ವಿಶಾಲ ಭವನ ನಿರ್ಮಾಣಕ್ಕೆ ತೆಗೆದುಕೊಂಡಿದ್ದು ಎರಡು ವರ್ಷ ಏಳು ತಿಂಗಳಷ್ಟೇ. ಹಾಗೆಂದು, ಈ ಭವನದ ನಿರ್ಮಾಣವು ವಿವಾದಗಳಿಂದೇನು ಮುಕ್ತವಾಗಿರಲಿಲ್ಲ. ಹಲವು ಅಡ್ಡಿ ಆತಂಕಗಳು ಹಾಗೂ ಕಾನೂನು ತೊಡಕುಗಳ ನಡುವೆಯೇ ಈ ಭವನ ತಲೆಎತ್ತಿದ್ದು, ಸಂಸತ್ ವಿಶೇಷ ಅಧಿವೇಶನಕ್ಕೂ ಸಾಕ್ಷಿಯಾಗಿದೆ. ಆದರೆ, ಭವನದ ಎಲ್ಲ ಕಾಮಗಾರಿಗಳು ಹಾಗೂ ತಾಂತ್ರಿಕ ಕೆಲಸಗಳು ಮುಗಿಯಲು ಇನ್ನೂ ಆರು ತಿಂಗಳುಗಳು ಬೇಕು.

> ಹೊಸ ಸಂಸತ್ ಭವನ ಎರಡು ವರ್ಷ ಏಳು ತಿಂಗಳಲ್ಲೇ ನಿರ್ಮಿತವಾಗಿದೆ. ಇನ್ನೂ 150 ವರ್ಷಗಳ ಕಾಲ ಬಾಳಿಕೆ ಬರುವಂತೆ ಇರುವ ಅದರಲ್ಲಿ ಏನೇನೆಲ್ಲ ಇವೆ ಎಂದು ತಿಳಿಯೋಣ ಬನ್ನಿ...

ಈ ಕಟ್ಟಡವನ್ನು ಸುಮಾರು 150 ವರ್ಷಗಳಿಗಿಂತ ಹೆಚ್ಚು ಕಾಲ ಬಾಳಿಕೆ ಬರುವಂತೆ ವಿನ್ಯಾಸಗೊಳಿಸಲಾಗಿದೆ. ಇದರ ಮೂರು ಮುಖ್ಯ ದ್ವಾರಗಳಿಗೆ 'ಜ್ಞಾನ ದ್ವಾರ', 'ಶಕ್ತಿ ದ್ವಾರ' ಮತ್ತು 'ಕರ್ಮ ದ್ವಾರ' ಎಂದು ಹೆಸರಿಸಲಾಗಿದೆ. ಇದರಲ್ಲಿ ವಿಐಪಿಗಳು, ಸಂಸದರು ಮತ್ತು ಸಂದರ್ಶಕರಿಗೆ ಪ್ರತ್ಯೇಕ ಪ್ರವೇಶದ್ವಾರಗಳನ್ನು ವ್ಯವಸ್ಥೆ ಮಾಡಲಾಗಿದೆ. ಐತಿಹಾಸಿಕ ಮಹತ್ವದ್ದು ಎಂದು ಹೇಳಲಾದ 'ಸೆಂಗೋಲ್ (ಅಧಿಕಾರ ದಂಡ)' ಸಹ ಹೊಸ ಭವನದಲ್ಲಿ ವಿರಾಜಮಾನವಾಗಿದೆ. ಇದು ಐದು ಅಡ್ಡಿ ಎತ್ತರವಿದ್ದು, ತುದಿಯಲ್ಲಿ ಚಿಕ್ಕ ನಂದಿ ವಿಗ್ರಹ ಇದೆ. ಲೋಕಸಭಾ ಸ್ಪೀಕರ್ ಅವರ ಪೀಠದ ಸಮೀಪ ಈ 'ಸೆಂಗೋಲ್' ಅನ್ನು ಪ್ರತಿಷ್ಠಾಪಿಸಲಾಗಿದೆ. ಈ ಸೆಂಗೋಲ್ ಅನ್ನು ತಿರುವಾವದುತ್ತುರೈ ಅಧೀನಮ್‌ನ ಕುಮಾರಸ್ವಾಮಿ ತಂಬಿರನ್ ಅವರು ಜವಾಹರಲಾಲ್ ನೆಹರೂ ಅವರಿಗೆ ನೀಡಿದ್ದರು.

ಈ ಭವನದ ನಿರ್ಮಾಣಕ್ಕಾಗಿ ದೇಶದ ವಿವಿಧ ಸ್ಥಳಗಳಿಂದ ವಸ್ತುಗಳನ್ನು ಬಳಸಿಕೊಳ್ಳಲಾಗಿದೆ. ತೇಗದ ಮರವನ್ನು ನಾಗ್ಪುರದಿಂದ ತಂದಿದ್ದರೆ, ಕೆಂಪು ಮತ್ತು ಬಿಳಿ ಮರಳುಗಲ್ಲು ರಾಜಸ್ಥಾನದ ಸರ್ಮಥುರಾದಿಂದ ಬಂದಿದೆ (ದೆಹಲಿಯ ಕೆಂಪು ಕೋಟೆಯ ಮರಳುಗಲ್ಲುಗಳನ್ನು ಕೂಡ ಇಲ್ಲಿಂದಲೇ ಪಡೆಯಲಾಗಿದೆ). ಕೇಶರಿಯಾ ಹಸಿರು ಕಲ್ಲನ್ನು ಉದಯಪುರದಿಂದ, ಕೆಂಪು ಗ್ರಾನೈಟ್ ಅನ್ನು ಅಜ್ಮೀರ್‌ನ ಲಾಖಾದಿಂದ ಸಂಗ್ರಹಿಸಲಾಗಿದೆ. ಬಿಳಿ ಅಮೃತಶಿಲೆಯನ್ನು ರಾಜಸ್ಥಾನದ ಅಂಬಾಜಿಯಿಂದ ತರಿಸಲಾಗಿದೆ. ಸಂಸತ್ ಭವನದ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಫಾಲ್ಸ್ ಸೀಲಿಂಗ್‌ಗಾಗಿ ಬಳಸಲಾದ ಉಕ್ಕಿನ ರಚನೆಗಳು ದಮನ್ ಮತ್ತು ದಿಯುನಿಂದ ಬಂದಿವೆ. ಕಲ್ಲಿನ ಜಾಲರಿ ಕೆಲಸದಲ್ಲಿ ಇರುವುದು ರಾಜಸ್ಥಾನದ ರಾಜನಗರ ಮತ್ತು ಉತ್ತರಪ್ರದೇಶದ ನೋಯ್ಡಾದವರ ಕೌಶಲ. ಕಾಂಕ್ರೀಟ್ ಮಿಶ್ರಣದಲ್ಲಿ ಬಳಸಲಾಗಿರುವ ಮರಳು ಅಥವಾ ಎಂ-ಸ್ಯಾಂಡ್ ಬಂದಿರುವುದು ಹರಿಯಾಣದ ಚರ್ಖಿ ದಾದ್ರಿಯಿಂದ. ಇದರಲ್ಲಿ ಬಳಕೆಯಾಗಿರುವ ಕಾರ್ಪೆಟ್‌ಗಳನ್ನು ಉತ್ತರಪ್ರದೇಶದಿಂದ ತರಿಸಲಾಗಿದೆ. ಒಂದರ್ಥದಲ್ಲಿ ದೇಶದ ಪ್ರಜಾಪ್ರಭುತ್ವದ ಅತಿ ದೊಡ್ಡ ದೇಗುಲವನ್ನು ನಿರ್ಮಿಸಲು ಇಡೀ ದೇಶವೇ ಒಂದಾದಂತಾಗಿದೆ. ಇದು 'ಏಕ ಭಾರತ್ ಶ್ರೇಷ್ಠ ಭಾರತ್' ಪರಿಕಲ್ಪನೆಗೆ ಉತ್ತಮ ಉದಾಹರಣೆ ಎಂಬಂತಿದೆ.

ಹೊಸ ಸಂಸತ್ ಕಟ್ಟಡದಲ್ಲಿರುವ ಕಲಾಕೃತಿಗಳು ವೇದಗಳ ಕಾಲದಿಂದ ಪ್ರಸ್ತುತ ದಿನದವರೆಗಿನ ಭಾರತದ ಪ್ರಜಾಪ್ರಭುತ್ವದ ಪರಂಪರೆಯ ಕಥೆಗಳನ್ನು ಸಾರುತ್ತವೆ. ನೂತನ ಸಂಸತ್ ಭವನದ ಕಟ್ಟಡದ ಪ್ರವೇಶದಲ್ಲಿ ಮಹಾತ್ಮ ಗಾಂಧಿ, ಚಾಣಕ್ಯ, ಸರ್ದಾರ್ ವಲ್ಲಭಭಾಯಿ ಪಟೇಲ್, ಅಂಬೇಡ್ಕರ್ ಹಾಗೂ ಕೊನಾರ್ಕ್‌ನ ಸೂರ್ಯ ದೇವಾಲಯದ ಸೂರ್ಯನ ರಥದ ದೊಡ್ಡ ಕಂಚಿನ ಪ್ರತಿಮೆಗಳನ್ನು ಪ್ರತಿಷ್ಠಾಪಿಸಲಾಗಿದೆ. ಚಿತ್ರಕಲೆ, ಲೋಹದಿಂದ ಮಾಡಿದ ಭಿತ್ತಿಪತ್ರಗಳು ಸೇರಿದಂತೆ 5 ಸಾವಿರಕ್ಕೂ ಅಧಿಕ ಕಲಾಕೃತಿಗಳು ಭವನದಲ್ಲಿವೆ. 'ಭವನ ಸುಂದರಿ'ಯ ಸೌಂದರ್ಯವು ನೋಡುಗರ ಮಂತ್ರಮುಗ್ಧಗೊಳಿಸುವಂತಿದೆ.

ಹಳೆಯ ಕಟ್ಟಡದಲ್ಲಿದ್ದ ಸೆಂಟ್ರಲ್ ಹಾಲ್ ಅನ್ನು ಹೊಸ ಕಟ್ಟಡದಲ್ಲಿ ಕೈಬಿಡಲಾಗಿದೆ. ಬದಲಿಗೆ, ದೇಶದ ಪ್ರಜಾಪ್ರಭುತ್ವ ಪರಂಪರೆಯನ್ನು ಪ್ರದರ್ಶಿಸುವ ಭವ್ಯವಾದ 'ಸಂವಿಧಾನ ಸಭಾಂಗಣ (ಕಾನ್‌ಸ್ಟಿಟ್ಯೂಷನ್ ಹಾಲ್) ನಿರ್ಮಾಣವಾಗಿದೆ. ಸೆಂಟ್ರಲ್ ಹಾಲ್ ಬದಲಿಗೆ ಸಂಸದರ ಲಾಂಜ್ ಬಂದಿದೆ. ಅಸ್ತಿತ್ವದಲ್ಲಿರುವ ಸಂಸತ್ತಿನ ಗ್ರಂಥಾಲಯ ಕಟ್ಟಡದ ಹೊರತಾಗಿ, ಹೊಸ ಕಟ್ಟಡವು ಬಹು ಕಮಿಟಿ ಕೊಠಡಿಗಳು, ಊಟದ ಪ್ರದೇಶಗಳ ಜೊತೆಗೆ ಗ್ರಂಥಾಲಯವನ್ನು ಹೊಂದಿದೆ. ಇಲ್ಲಿ ದೇಶದ ಪ್ರಜಾಪ್ರಭುತ್ವದ ಬೆಳವಣಿಗೆಯನ್ನು ಸಾರುವ ಸರಣಿ ಪ್ರದರ್ಶನವಿದೆ. ಇದು ಹಿಂದೂ ಸಂಪ್ರದಾಯದಲ್ಲಿ ಪ್ರಾರ್ಥನೆಗೆ ಬಳಸುವ 'ಶ್ರೀ ಯಂತ್ರ'ದಿಂದ ಪ್ರೇರಣೆ ಪಡೆದಿದೆ. ಇದರೊಂದಿಗೆ ಈ ಹಾಲ್‌ಗೆ ಆಧುನಿಕ ಸ್ಪರ್ಶವನ್ನೂ ನೀಡಲಾಗಿದೆ. ಭೂಮಿಯ ಪರಿಭ್ರಮಣವನ್ನು ತೋರಿಸುವ ಫೂಕೊನ ಲೋಲಕವನ್ನು ಹಾಗೂ ಡಿಜಿಟಲ್ ಸಂವಿಧಾನವನ್ನು ಇಲ್ಲಿ ಪ್ರದರ್ಶಿಸಲಾಗಿದೆ.

ಲೋಕಸಭೆಯ ಸಭಾಂಗಣ ರಾಷ್ಟ್ರೀಯ ಪಕ್ಷಿ ನವಿಲಿನ ವಿನ್ಯಾಸದಲ್ಲಿದೆ. ರಾಜ್ಯಸಭೆಯ ಸಭಾಂಗಣ ರಾಷ್ಟ್ರೀಯ ಹೂವು ಕಮಲದ ಪರಿಕಲ್ಪನೆಯಲ್ಲಿದೆ. ಕಟ್ಟಡವು ಭಾರತೀಯ ಸಾಂಸ್ಕೃತಿಕ ವೈವಿಧ್ಯದ ಪ್ರತೀಕವಾಗಿದೆ. ನಾಲ್ಕು ಅಂತಸ್ತು ಹಾಗೂ ಮೂರು ಬಾಗಿಲುಗಳನ್ನು ಹೊಂದಿರುವ ಪ್ರಜಾತಂತ್ರದ ಹೊಸ ದೇಗುಲವು ಭೂಕಂಪದ ಯಾವ ಪರಿಣಾಮಗಳೂ ಬೀರದಂತಹ ಸದೃಢ ನಿರ್ಮಾಣ. ಇದೊಂದು ಅಭೇದ್ಯ ಕೋಟೆಯಂತಿದೆ.

ನೂತನ ಭವನದಲ್ಲಿ 1,700 ಕಿಟಕಿಗಳು ಹಾಗೂ ಬಾಗಿಲುಗಳಿವೆ. ಸಂಸತ್ ಭವನದ ಕಾರಿಡಾರ್ 3.5 ಕಿ.ಮೀ.ನಷ್ಟು ಇದೆ. ಭವನದ ನಿರ್ಮಾಣ ಕಾಮಗಾರಿಗೆ 60 ಸಾವಿರ ಕಾರ್ಮಿಕರನ್ನು ಬಳಸಿಕೊಳ್ಳಲಾಗಿದೆ. ಅವರ ಸಂಚಿತ ಕೆಲಸದ ಅವಧಿಯು ಬರೋಬ್ಬರಿ 23 ಲಕ್ಷ ಕೆಲಸದ ದಿನಗಳು.

ಕೃತಕ ಬುದ್ಧಿಮತ್ತೆ ಬಳಕೆಯನ್ನು ಭವನದ ಹಲವು ಭಾಗಗಳಲ್ಲಿ ಅಳವಡಿಸಿಕೊಳ್ಳಲಾಗುತ್ತಿದೆ. ಯಾವುದೇ ರಾಜ್ಯದ ಸಂಸದರು ತಮ್ಮ ಪ್ರಾದೇಶಿಕ ಭಾಷೆಯಲ್ಲಿ ಮಾತನಾಡಿದರೂ, ಎಲ್ಲ ಸಂಸದರಿಗೆ ಅರ್ಥಪಡಿಸುವ ವ್ಯವಸ್ಥೆಯು ಇರಲಿದೆ.

9ನೇ ಪುಟಕ್ಕೆ...

ಸಂಸತ್ ಭವನದ ಒಳನೋಟ...

ಹೆಬ್ಬಾವಿನ ಊಟವನ್ನೇ ಕಸಿದವರು

ಅಖಿಲೇಶ್ ಚಿಪ್ಪಳಿ

> ವಿಶ್ವ ವನ್ಯಜೀವಿ ಸಪ್ತಾಹ ಅಕ್ಟೋಬರ್ 8ಕ್ಕಷ್ಟೆ ಮುಗಿಯುತ್ತಿದೆ. ಹೆಬ್ಬಾವಿನ ಊಟವನ್ನು ನಮ್ಮ ನಾಗರಿಕತೆ ಹೇಗೆಲ್ಲ ಕಸಿದುಕೊಳ್ಳುತ್ತಿದೆ ಎನ್ನುವ ಸೂಕ್ಷ್ಮ ಸಂಗತಿಯ ಮೇಲೆ ಈ ಲೇಖನವು ಇಂಥ ಸಂದರ್ಭದಲ್ಲಿ ಬೆಳಕು ಚೆಲ್ಲುತ್ತಿದೆ.

ಸಾಗರದಿಂದ ಹೆಗ್ಗೋಡಿಗೆ ಹೋಗುವ ಮಾರ್ಗದ ಬಲಭಾಗದಲ್ಲಿ ರಾಮನಗರವೆಂಬ ಜನವಸತಿ ಪ್ರದೇಶವಿದೆ. ಈಗೊಂದು 25 ವರ್ಷಗಳ ಹಿಂದೆ ಅಲ್ಲಿ ಹೇರಳವಾದ ಕಾಡಿತ್ತು. ಅಸಂಖ್ಯ ಜೀವಿವೈವಿಧ್ಯಗಳ ತವರಾಗಿದ್ದ ಅಬೇಧ್ಯವಾದ ಕಾಡನ್ನು ಸಾಗರ ನಗರ ನುಂಗಿಹಾಕಿತು. ಜನರಹಿತವಾಗಿದ್ದ ದಟ್ಟಾರಣ್ಯವನ್ನು ಜನರ ಹಿತಕ್ಕಾಗಿ ಬಲಿಕೊಡಲಾಯಿತು. ಅಲ್ಲೀಗ ಸಾವಿರಕ್ಕೂ ಹೆಚ್ಚು ಮನೆಗಳಿವೆ. ಸರ್ಕಾರವೂ ಬೆಳೆಯುತ್ತಿರುವ ಜನಸಂಖ್ಯೆಗೆ ಬೇಕೆಂದು ಅಲ್ಲಿ ಆಶ್ರಯ ನಿವೇಶನಗಳನ್ನು ರಚಿಸಿತು. ಈಗೊಂದು ಹತ್ತು ವರ್ಷಗಳ ಹಿಂದೆ ರಾಮನಗರಕ್ಕೆ ತಾಗಿಕೊಂಡಂತೆ, ಇದ್ದ ನೂರು ಎಕರೆ ಪ್ರದೇಶದಲ್ಲಿ ಐ.ಟಿ.ಐ. ಕಾಲೇಜನ್ನು ಕಟ್ಟಲಾಯಿತು. ಈಗ ರಾಮನಗರ ಬೆಳೆಯುತ್ತಾ ಓತಿಗೋಡು ಊರಿನತ್ತ ಸಾಗಿದೆ. 1980ರಲ್ಲೇ ಎಂ.ಪಿ.ಎಂ. ಕಾರ್ಖಾನೆಗೆ ಕಚ್ಚಾ ಸಾಮಗ್ರಿಗಳನ್ನು ಒದಗಿಸಲು, ಇದೇ ಪ್ರದೇಶದಲ್ಲಿದ್ದ ನೈಸರ್ಗಿಕ ಕಾಡನ್ನು ಬುಲ್ಡೋಜರ್ ಬಳಸಿ ಕಿತ್ತುಹಾಕಿ, ಅಕೇಶಿಯಾ ನೆಡಲಾಗಿತ್ತು. ಜೀವಿವೈವಿಧ್ಯಕ್ಕೆ ಯಾವುದೇ ತರಹದ ಸೇವೆ ನೀಡದ ಅಕೇಶಿಯಾವೆಂಬ ಪ್ಲಾಸ್ಟಿಕ್ ಕಾಡು ಕಾಟಿಗಳ, ಜಿಂಕೆ-ಕಾನುಕುರಿಗಳ ಊಟವನ್ನು ಕಸಿಯಿತು. ಅವು ಅನಿವಾರ್ಯವಾಗಿ ರೈತರ ಬೆಳೆ ಪ್ರದೇಶಕ್ಕೆ ಬರುವ ಹಾಗಾಯಿತು.

ಗಾಂಧಿ ಜಯಂತಿಯ ಮುನ್ನಾದಿನದಂದು, ದೇಶದ ಸುಮಾರು ಆರು ಲಕ್ಷ ಸ್ಥಳಗಳಲ್ಲಿ ಸ್ವಚ್ಛತಾ ಕಾರ್ಯಕ್ರಮ ನಡೆಯುತ್ತಿತ್ತು. ಅದೇ ಹೊತ್ತಿನಲ್ಲಿ ಅರಣ್ಯ ಇಲಾಖೆಗೆ ದೂರವಾಣಿ ಕರೆ ಬಂತು. ರಾಮನಗರದ ವಸತಿ ಪ್ರದೇಶದ ಅಂಚಿನಲ್ಲಿ ಹೆಬ್ಬಾವೊಂದು ನರಿಯನ್ನು ಹಿಡಿದಿದೆ, ನಮಗೆ ರಕ್ಷಣೆ ಕೊಡಿ! ರಕ್ಷಣಾ, ಪೊಲೀಸ್ ಇಲಾಖೆಯ ಹಾಗೆಯೇ ಅರಣ್ಯ ಸಿಬ್ಬಂದಿಯದ್ದೂ 24x7 ಡ್ಯೂಟಿ. ರಜಾದಿನವೆಂದು ಕಾಲುದ್ದ ಮಾಡಿ ಮಲಗುವ ಹಾಗಿಲ್ಲ. ಸಿಬ್ಬಂದಿಯು ಸ್ಥಳಕ್ಕೆ ದೌಡಾಯಿಸುವ ಹೊತ್ತಿಗೆ ರಾಮನಗರದ ಸಾಕಷ್ಟು ಜನ ಹೆಬ್ಬಾವಿನ ಸುತ್ತ ನೆರೆದಾಗಿತ್ತು. ಅದೆಷ್ಟು ದಿನಗಳಿಂದ ಹೊಂಚಿ ಕುಳಿತು ತನ್ನ ಊಟವನ್ನು ಹಿಡಿದಿತ್ತೋ? ಉಸಿರುಗಟ್ಟಿಸಿ ಕೊಂದುಕೊಂಡ ನರಿಯನ್ನು ತಿನ್ನುವ ಭಾಗ್ಯ ಹೆಬ್ಬಾವಿಗೆ ಇಲ್ಲದಾಯಿತು. ಹೆಬ್ಬಾವಿನ ಬೇಟೆ ಮಾಡುವ ಹಾಗೂ ಬಲಿಯನ್ನು ಕೊಲ್ಲುವ ವಿಧಾನ ತುಂಬಾ ವಿಶಿಷ್ಟವಾದದು. ಹೊಂಚು ಹಾಕಿಕೊಂಡು ಒಂದು ಸ್ಥಳದಲ್ಲಿ ಚಲನಾರಹಿತ ಸ್ಥಿತಿಯಲ್ಲಿ ಇರುವ ಹೆಬ್ಬಾವು ಎಟಗುವಷ್ಟು ಸಮೀಪಕ್ಕೆ ಬಲಿ ಬಂದಾಗ ಮಿಂಚಿನ ವೇಗದಲ್ಲಿ ದಾಳಿ ಮಾಡುತ್ತದೆ. ಇಡೀ ಬಲಿಯನ್ನು ಬಲವಾಗಿ ಸುತ್ತಿಕೊಂಡು ಉಸಿರುಗಟ್ಟಿಸುತ್ತದೆ. ಗಾಬರಿಗೊಂಡ ಬಲಿಯು ತಪ್ಪಿಸಿಕೊಳ್ಳಲು ಹೋದಷ್ಟೂ ಅದರ ಸಾವು ಹತ್ತಿರವಾದಂತೆ. ಬಲಿಯು ಉಸಿರನ್ನು ನಿಶ್ವಾಸಗೊಳಿಸಿದಾಗ, ಹೆಬ್ಬಾವು ತನ್ನ ಹಿಡಿತವನ್ನು ಮತ್ತಷ್ಟು ಬಿಗಿಮಾಡುತ್ತದೆ. ಬಲಿಯ ರಕ್ತ ಸಂಚಾರವನ್ನು ನಿಲ್ಲಿಸಿ, ಉಸಿರುಗಟ್ಟಿಸಿ ಒಂದೆರಡು ನಿಮಿಷದಲ್ಲಿ ಕೊಲ್ಲುತ್ತದೆ. ಬಲಿಯು ನಿಶ್ಚೇಷ್ಟಿತಗೊಂಡ ಮೇಲೆ ತನ್ನ ಹಿಡಿತವನ್ನು ಸಡಿಲಗೊಳಿಸಿ, ಅದರ ತಲೆಯ ಭಾಗದಿಂದ ನುಂಗುತ್ತದೆ. ಬಲಿಪ್ರಾಣಿಯ ಗಾತ್ರದ ಮೇಲೆ ಹೆಬ್ಬಾವಿನ ಊಟ ಪೂರೈಸಲು ಹಿಡಿಯುವ ಸಮಯ ನಿರ್ಧರಿತವಾಗುತ್ತದೆ. ದೊಡ್ಡ ಪ್ರಾಣಿಯಾದಲ್ಲಿ ಹಲವು ತಾಸುಗಳು ಬೇಕಾಗುತ್ತದೆ.

ಮಲೆನಾಡಿನಲ್ಲಿ ಹೆಬ್ಬಾವಿನ ಕುರಿತಾಗಿ ಒಂದು ಜನಪ್ರಿಯ ಕಟ್ಟುಕತೆಯಿದೆ. ಹೆಬ್ಬಾವು ತನ್ನ ಬಲಿಯನ್ನು ನುಂಗಿದ ನಂತರದಲ್ಲಿ, ದೊಡ್ಡ ಮರಕ್ಕೆ ಸುತ್ತಿಕೊಳ್ಳುತ್ತದಂತೆ. ಬಲಿ ಪ್ರಾಣಿಯ ಎಲುಬು, ಕೋಡು ಇತ್ಯಾದಿ ಪುಡಿ ಪುಡಿಯಾಗುತ್ತವಂತೆ. ಚೂಪಾದ ಕೆಲವು ಎಲುಬಿನ ತುಂಡುಗಳು ಹೆಬ್ಬಾವಿನ ಹೊಟ್ಟೆಯನ್ನು ಬಗೆದು ಹೊರಗೆ ಬರುತ್ತವಂತೆ. ಆಮೇಲೆ ಹೆಬ್ಬಾವಿಗೆ ಆದ ಗಾಯ ವಾಸಿಯಾಗುತ್ತದೆಯಂತೆ. ಇದು ಕತೆಯಷ್ಟೆ. ವಾಸ್ತವವಾಗಿ ಹೆಬ್ಬಾವಿನ ಕರುಳಿನ ಜೀರ್ಣ ಕಿಣ್ವಗಳು ತೀವ್ರತರವಾಗಿರುತ್ತವೆ. ಕೋಡು ಎಲುಬಿನ ಸಮೇತ ಹೊಟ್ಟೆಯಲ್ಲಿ ಜೀರ್ಣವಾದಂತೆ, ಸಕಲವೂ ಜೀರ್ಣಗೊಳ್ಳುತ್ತವೆ ಎನ್ನುವುದು ಜೀವವಿಜ್ಞಾನಿಗಳು ಕಂಡುಕೊಂಡಿರುವ ಸತ್ಯ.

ಎರಡು ವರ್ಷಗಳ ಹಿಂದೆ ಚಿಕ್ಕಮಗಳೂರು ಜಿಲ್ಲೆಯ ಕೊಟ್ಟಿಗೆಹಾರದ ಜಾವಳಿ ಸಮೀಪದ ಕಾಫಿತೋಟವೊಂದರಲ್ಲಿ ಹೆಬ್ಬಾವೊಂದು ಕಾನುಕುರಿಯನ್ನು ಬೇಟೆಯಾಡಿ ನುಂಗಿತ್ತು. ಕಾಫಿತೋಟದ ಮಾಲೀಕರ ದೂರಿನ ಆಧಾರದ ಮೇಲೆ ಅಲ್ಲಿನ ಅರಣ್ಯ ಇಲಾಖೆಯವರು ಹೆಬ್ಬಾವನ್ನು ಹಿಡಿದು ಚಾರ್ಮಾಡಿ ಘಾಟಿಯಲ್ಲಿ ಬಿಟ್ಟಿದ್ದರು. ಈ ಪ್ರಕ್ರಿಯೆಯಲ್ಲಿ ಹೆಬ್ಬಾವು ತಾನು ನುಂಗಿದ ಕಾನುಕುರಿಯನ್ನು ವಾಂತಿ ಮಾಡಿತ್ತು.

10ನೇ ಪುಟಕ್ಕೆ...

ಗಾಂಧಿ ನೆಲದಲ್ಲಿ 'ದೂಸರೀ ಆಜಾದಿ' ಅನುರಣನ

> ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಪರಿಕಲ್ಪನೆಯ ಕುರಿತು ಮಾತನಾಡುವಾಗ, 'ರಾಜಕೀಯ ಸ್ವಾತಂತ್ರ್ಯವೇನೋ ಸಿಕ್ಕಿತು. ಆದರೆ ದೂಸರೀ ಆಜಾದಿ ಸಿಕ್ಕಿದೆಯೇ' ಎಂಬ ಪ್ರಶ್ನೆ ಮೂಡುತ್ತದೆ. 'ಸೇವಾ' ಸಂಸ್ಥೆಯ ಸದಸ್ಯರಾಗಿರುವ ಸ್ವಉದ್ಯೋಗಿ ಮಹಿಳೆಯರ ಕಣ್ಣಿನಲ್ಲಿ ಮೂಡುವ 'ಆಜಾದಿ'ಯ ಚಿತ್ರಣವಾದರೂ ಏನು?

ಸುಮಂಗಲಾ

ಇತ್ತೀಚೆಗೆ ನಾನು ಇಳಾಬೆನ್ ಭಟ್ ಮತ್ತು ಅವರು ಹುಟ್ಟುಹಾಕಿದ ಅಸಂಘಟಿತ ಮಹಿಳೆಯರ ಸಂಘಟನೆ 'ಸ್ವಉದ್ಯೋಗಿ ಮಹಿಳೆಯರ ಸಂಘ (ಸೆಲ್ಫ್ ಎಂಪ್ಲಾಯ್ಡ್ ವುಮನ್ಸ್ ಆರ್ಗನೈಸೇಶನ್-ಸೇವಾ)' ಕುರಿತು ಹೆಚ್ಚು ತಿಳಿದುಕೊಳ್ಳಲೆಂದು ಗುಜರಾತಿನ ಸುರೇಂದ್ರನಗರ ಮತ್ತು ಅರವಲ್ಲಿ ಜಿಲ್ಲೆಗಳಿಗೆ ಭೇಟಿ ನೀಡಿದ್ದೆ.

ಇವರೆಡೂ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದ ಜಿಲ್ಲೆಗಳು. ನಾನು ಭೇಟಿ ನೀಡಿದ ಸುರೇಂದ್ರನಗರ ಜಿಲ್ಲೆಯ ಧ್ರಾಂಗದ್ರಾ ತಾಲ್ಲೂಕಿನ ಹಳ್ಳಿಗಳಲ್ಲಿ ಹೆಚ್ಚಿನವರು 'ಉಪ್ಪಿನ ರೈತರು'. ಉಪ್ಪನ್ನು ಬೆಳೆಯುವುದು ಎನ್ನುವುದೇ ನಮಗೆ ವಿಚಿತ್ರವಾಗಿ ಕಾಣಬಹುದು. ಇಲ್ಲಿಯ ಹಳ್ಳಿಗಳಿಂದ ಹತ್ತಿರದ 'ಛೋಟಾ ರಣ್' ಪ್ರದೇಶಕ್ಕೆ ವರ್ಷದಲ್ಲಿ ಎಂಟು ತಿಂಗಳು ವಲಸೆ ಹೋಗುವ ಅಗಾರಿಯ ಬುಡಕಟ್ಟಿನವರು ಅಲ್ಲಿ ಚಿಕ್ಕಚಿಕ್ಕ ಚೌಕಾಕಾರದ ಗದ್ದೆಗಳಲ್ಲಿ ಲವಣದ ನೀರನ್ನು ಹಾಯಿಸಿ, ಉಪ್ಪು ಮಾಡುತ್ತಾರೆ. ಇವರಿಗೆ ಗುಜರಾತಿಯಲ್ಲಿ 'ಮೀಟಾ ಕಾಮಗಾರ್' ಎಂದು ಕರೆಯುತ್ತಾರೆ.

2013ರಲ್ಲಿ ಸಾಬರ್ ಕಾಂಟ ಜಿಲ್ಲೆಯಿಂದ ಪ್ರತ್ಯೇಕಗೊಂಡು ಹೊಸದಾಗಿ ರೂಪಿತವಾದ ಅರವಲ್ಲಿ ಜಿಲ್ಲೆಯಲ್ಲಿಯೂ ಯಾವುದೇ ಕೈಗಾರಿಕೆಗಳಿಲ್ಲ. ಅಲ್ಲಿಯ ಬಾಯಡ್ ತಾಲ್ಲೂಕಿನ ಹಳ್ಳಿಗಳಲ್ಲಿ ಹೆಚ್ಚಿನವರು ಮಳೆಯಾಧಾರಿತ ಕೃಷಿಯನ್ನು ನೆಚ್ಚಿಕೊಂಡವರು. ಬಾಯಡ್ ಮತ್ತು ಧ್ರಾಂಗದ್ರಾದಲ್ಲಿರುವ ಸೇವಾ ಸಂಸ್ಥೆಯ ಜಿಲ್ಲಾ ಕೃಷಿ ಸಹಕಾರಿ ಸಂಘದಲ್ಲಿ ಸೇರಿದ್ದ ಆಗೇವಾನ್(ಮುಂದಾಳು) ಮಹಿಳೆಯರು ಎರಡು ಮೂರು ದಶಕಗಳ ಹಿಂದೆ ಹೇಗಿದ್ದರು, ಈಗ ಸೇವಾದ ಸದಸ್ಯರಾಗಿ, ತಮ್ಮದೇ ಸಹಕಾರಿ ಸಂಘ ಸ್ಥಾಪಿಸಿಕೊಂಡ ನಂತರ ಹೇಗೆ ಪ್ರಗತಿ ಹೊಂದಿದ್ದಾರೆ ಎನ್ನುವುದನ್ನು ವಿವರಿಸುತ್ತಿದ್ದರು. 'ನಿಮ್ಮ ದೃಷ್ಟಿಯಲ್ಲಿ ಆಜಾದಿ (ಸ್ವಾತಂತ್ರ್ಯ) ಅಂದರೆ ಏನು' ಎಂಬ ಪ್ರಶ್ನೆಯನ್ನು ಮುಂದಿಟ್ಟಾಗ ಎಲ್ಲರೂ ಗಟ್ಟಿದನಿಯಲ್ಲಿ ತಮಗನ್ನಿಸಿದ್ದನ್ನು ಹೇಳಿದರು.

ನಿರ್ಧಾರದ ಸ್ವಾತಂತ್ರ್ಯ

ಹೆಚ್ಚಿನವರು ಈಗ ತಮಗೆ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯವಿದೆ ಎಂದರು. ಇದನ್ನು ಅವರು ಕುಟುಂಬದ ನೆಲೆಯಲ್ಲಿ ಹಾಗೂ ಸಾಮುದಾಯಿಕ ಬದುಕಿನ ನೆಲೆಯಲ್ಲಿ ವ್ಯಕ್ತಪಡಿಸಿದರು. 'ಮೊದಲೆಲ್ಲ ಕುಟುಂಬಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಮನೆಯ ಗಂಡಸರೇ (ಗಂಡ ಅಥವಾ ಮಾವ) ನಿರ್ಧಾರ ತೆಗೆದುಕೊಳ್ಳುತ್ತಿದ್ದರು. ಆದರೆ ಈಗ ನಿರ್ಧಾರ ತೆಗೆದುಕೊಳ್ಳುವಾಗ ನಮ್ಮ ಅಭಿಪ್ರಾಯ ಕೇಳ್ತಾರೆ' ಎಂಬ ಸುರೇಖಾಬೆನ್ ವಿವರಣೆಯೇ ಇಲ್ಲಿ ಆಗಿರುವ ಬದಲಾವಣೆಗೆ ಕನ್ನಡಿ ಹಿಡಿಯಿತು.

'ಜಮೀನು ನಮ್ಮದೇ, ನಾವೂ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದೆವು. ಆದರೆ ನಮ್ಮ ಮಾತಿಗೆ ಏನೂ ಬೆಲೆ ಇರಲಿಲ್ಲ. ಜಮೀನಿನಲ್ಲಿ ಏನೇ ಬೆಳೆದರೂ, ಮನೆಯ ಗಂಡಸರೇ ಮಾರುಕಟ್ಟೆಗೆ ಸಾಗಿಸಿ, ಮಾರಾಟ ಮಾಡುತ್ತಿದ್ದರು. ಎಷ್ಟಕ್ಕೆ ಮಾರಾಟವಾಯಿತು, ಎಷ್ಟು ದುಡ್ಡು ಬಂತು ಏನೂ ಹೇಳುತ್ತಿರಲಿಲ್ಲ. ಈಗ ಮಾರಾಟ ಮಾಡುವ ಮೊದಲು ಕೇಳುತ್ತಾರೆ. ಹೆಚ್ಚಿನ ವೇಳೆ ಗಂಡನ ಜೊತೆಗೆ ನಾನೂ ಹೋಗುತ್ತೇನೆ. ಉಳಿತಾಯದ ದುಡ್ಡಿನಿಂದ ಮನೆಗೆ ಬೇಕಾಗಿದ್ದನ್ನು ಕೊಳ್ಳುತ್ತೇನೆ' ಎಂದು ಹೆಮ್ಮೆಯಿಂದ ಹೇಳುತ್ತಾ ನಕ್ಕವರು ಧೂಲಿಬೆನ್.

ಕೃಷಿಗೆ ಸಂಬಂಧಿಸಿದ ನಿರ್ಣಯವನ್ನು ತೆಗೆದುಕೊಳ್ಳುವುದು ಕೂಡ ಹಲವು ನೆಲೆಗಳಲ್ಲಿ ಇದೆ. ಜಮೀನಿನಲ್ಲಿ ಏನು ಬೆಳೆ ಬೆಳೆಯಬೇಕು, ಯಾವಾಗ ಏನು ಬಿತ್ತಬೇಕು, ಔಷಧ-ಗೊಬ್ಬರ ಯಾವುದಾಗಿರಬೇಕು, ಒಳ್ಳೆಯ ಬೀಜ ಖರೀದಿಯ ದಾರಿಗಳೇನು ಎನ್ನುವುದನ್ನು ನಿರ್ಧರಿಸುವ ವಿಷಯ ಆಗಿರಬಹುದು; ಸೌರಶಕ್ತಿ, ಗೋಬರ್ ಗ್ಯಾಸ್ ಇಂತಹ ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳುವುದಾಗಿರಬಹುದು, ಮಹಿಳೆಯರು ಖುದ್ದು ನಿರ್ಣಯ ತೆಗೆದುಕೊಳ್ಳುತ್ತಾರೆ ಅಥವಾ ಮನೆಯ ಗಂಡಸರ ಜೊತೆಗೆ ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಸಮಭಾಗಿಯಾಗುತ್ತಾರೆ.

ಸಾಮುದಾಯಿಕ ಬದುಕಿನಲ್ಲಿ ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಈ ಮಹಿಳೆಯರಿಗೆ ತುಂಬ ಅಭಿಮಾನದ ಸಂಗತಿ. 'ಗ್ರಾಮದಲ್ಲಿ ಏನಾದರೂ ಕೆಲಸಗಳಾಗಬೇಕಿದ್ದರೆ, ಪಂಚಾಯಿತಿಯವರು ಮಶಿನ್ ಬಳಸಿ ಮಾಡೋಣ ಎನ್ನುತ್ತಾರೆ ಎಂದಿಟ್ಟುಕೊಳ್ಳಿ. ಆಗ ಬೇಡ, ಎಲ್ಲ ಮಹಿಳೆಯರಿಗೆ ಕೆಲಸ ಸಿಗೋ ಹಾಗೆ ಮಾಡೋಣ ಅಂತ ಹೇಳಿ ಒಪ್ಪಿಸುತ್ತೇವೆ. ಪಂಚಾಯಿತಿಯಲ್ಲಿ ಏನಾದರೂ ಕೆಲಸದ ಅವಕಾಶಗಳು ಬಂದರೆ, ಹೊರಗಿನಿಂದ ಯಾರನ್ನೂ ಕರೆತರಬೇಡಿ, ಓದುಬರೆಹ ಬಲ್ಲ ಹೆಣ್ಣುಮಕ್ಕಳು ಅಥವಾ ಸೊಸೆಯಂದಿರಿಗೇ ಆ ಕೆಲಸ ಕೊಡಿ ಎಂದು ಹೇಳ್ತೇವೆ'-ಸಣ್ಣಪುಟ್ಟ ನಿರ್ಧಾರದ ಖುಷಿಯನ್ನು ಚಂದ್ರಿಕಾಬೆನ್ ಹಂಚಿಕೊಂಡಿದ್ದು ಹೀಗೆ.

RUDI ಸಂಸ್ಕರಣಾ ಕೇಂದ್ರದಲ್ಲಿ ಕಾರ್ಯ ತತ್ಪರರಾದ ಮಹಿಳೆಯರು

ಗ್ರಾಮದ ಅಭಿವೃದ್ಧಿಗೆ ಸಾಮೂಹಿಕ ಅಭಿಪ್ರಾಯಕ್ಕೆ ಬೆಲೆ ಕೊಡಿ ಎಂದು ಪಂಚಾಯಿತಿಯ ಸರಪಂಚರಿಗೆ ಈಗ ಈ ಮಹಿಳೆಯರು ಧೈರ್ಯವಾಗಿ ಹೇಳಬಲ್ಲರು.

ಹೀಗೆ ಹಲವು ಹಲವು ನಿರ್ಣಯಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗಿಗಳಾಗುತ್ತಿರುವ ಕುರಿತು ಮಾತುಕತೆ ನಡೆದಿದ್ದಾಗಲೇ ಬಾಯಡ್ ತಾಲ್ಲೂಕಿನ ಶಾರದಾಬೆನ್ ಮೆಲ್ಲಗೆ ವಿವರಿಸಿದ ಈ ಸಂಗತಿ ನನ್ನಲ್ಲಿ ಕುತೂಹಲ ಮೂಡಿಸಿತು: 'ಇಲ್ಲಿ ಎರಡು ಮೂರು ದಶಕಗಳ ಕೆಳಗೆ ಮಹಿಳೆಯರು ಆತ್ಮಹತ್ಯೆ ಮಾಡಿಕೊಳ್ಳುವುದು ಜಾಸ್ತಿ ಇತ್ತು. ಮನೆಯಲ್ಲಿ ಏನಾದರೂ ದುಡ್ಡಿನ ಸಮಸ್ಯೆಯಾದರೆ, ಕುಡುಕ ಗಂಡ ತುಂಬ ಹಿಂಸೆ ಕೊಡುತ್ತಿದ್ದರೆ, ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ತುಂಬಾ ಶೋಷಣೆಯಾಗುತ್ತಿತ್ತು. ಆದರೆ ಈಗ ಮಹಿಳೆಯರು ಸಾಕಷ್ಟು ಸಶಕ್ತವಾಗಿದ್ದಾರೆ. ಆತ್ಮಹತ್ಯೆಗೆ ಮುಂದಾಗುವ ಮೊದಲು, ಸಮಸ್ಯೆಯನ್ನು ಬಗೆಹರಿಸಿಕೊಳ್ಳುವ ದಾರಿಯನ್ನು ಹುಡುಕುತ್ತಾರೆ. ಎರಡು ಮೂರು ದಶಕಗಳ ಹಿಂದಿನ ಸ್ಥಿತಿಗೆ ಹೋಲಿಸಿದರೆ, ಈಗ ಆತ್ಮಹತ್ಯೆ ಕಡಿಮೆಯಾಗಿದೆ'.

'ಘೂಂಗಟ್' ಭಯವನ್ನು ಮೀರಿ...

ಇನ್ನು ಕೆಲವರಿಗೆ ಹಲವು ಬಗೆಯ 'ಭಯ'ವನ್ನು ಮೀರಿ ನಿಂತಿರುವುದು ಸ್ವಾತಂತ್ರ್ಯದ ಕಲ್ಪನೆಯಾಗಿ ಕಂಡಿದೆ. 'ಮೊದಲೆಲ್ಲ ನಾವು ಘೂಂಗಟ್(ಸೆರಗಿನ ಮುಸುಕು) ಹಾಕಿಕೊಂಡೇ ಇರಬೇಕಿತ್ತಲ್ಲ.

9ನೇ ಪುಟಕ್ಕೆ...

‘ಹೊಸ ಚಿಗುರಿನ ಪಾರಿಜಾತ’

ಸಣ್ಣಾಟದಲ್ಲಿ ಕಂಡಿದ್ದ ‘ಶ್ರೀಕೃಷ್ಣ ಪಾರಿಜಾತ’ ಈಗ ಹೊಸಬಗೆಯಲ್ಲಿ ರಂಗರೂಪು ಪಡೆದುಕೊಂಡಿದೆ. ಅದನ್ನು ನಿರ್ದೇಶಿಸುತ್ತಿರುವ ಬಿ. ಜಯಶ್ರೀ ಅವರು ಈ ರಂಗಪ್ರಯೋಗದ ಒಳ–ಹೊರಗಿನ ಕುರಿತು ಮಾತುಕತೆಗೆ ತೆರೆದುಕೊಂಡರು.

ರಂಗಭೂಮಿ

ಸಂದರ್ಶನ: ರೂಪಾ ಕೆ.ಎಂ.

• ಸಣ್ಣಾಟಗಳ ಮೂಲಕ ಶ್ರೀಕೃಷ್ಣ ಪಾರಿಜಾತ ಕಥೆ ಜನರಿಗೆ ಚಿರಪರಿಚಿತ. ನಿಮ್ಮ ಈ ‘ಪಾರಿಜಾತ’ ಇದಕ್ಕಿಂತ ಹೇಗೆ ಭಿನ್ನ?

ಉತ್ತರಕರ್ನಾಟಕದಲ್ಲಿ ಸಾಕಷ್ಟು ಜನಪದ ತಂಡಗಳು ‘ಶ್ರೀಕೃಷ್ಣ ಪಾರಿಜಾತ’ವನ್ನು ಸಣ್ಣಾಟದ ಮೂಲಕ ಪ್ರಸ್ತುತಪಡಿಸಿವೆ. ಅಷ್ಟೆ ಅಲ್ಲ, ಕರ್ನಾಟಕದಲ್ಲಿ ‘ಕೃಷ್ಣ ಪಾರಿಜಾತ’ ಇರುವಂತೆ , ಅಸ್ಸಾಂನಲ್ಲಿ ‘ಪಾರಿಜಾತ ಹರಣ್’, ಆಂಧ್ರದಲ್ಲಿ ‘ಭಾಮಾ ಕಲಾಪ’ ಪ್ರಸಿದ್ಧಿ ಪಡೆದಿವೆ. ಎಲ್ಲವೂ ಜನಪದದ ಶೈಲಿಯಲ್ಲಿಯೇ ಇವೆ. ಈ ಕಥೆಯನ್ನೇ ರಂಗಕ್ಕೆ ಅಳವಡಿಸಿದ್ದೇವೆ. ಆದರೆ, ನಮ್ಮ ಈ ನಾಟಕದ ಚಿತ್ತ ಸಂಪೂರ್ಣ ‘ಪಾರಿಜಾತ’ ಎನ್ನುವ ಹೂವನ್ನು ಕೇಂದ್ರೀಕರಿಸಿದೆ.

ಬಿ. ಜಯಶ್ರೀ

• ಕಥೆ ನಿಮ್ಮನ್ನು ಕಾಡಿದ್ದು ಯಾವಾಗಿನಿಂದ?

ನಾನು ಸಣ್ಣಾಟದ ರೂಪದಲ್ಲಿಯೇ ಈ ಕಥೆಯನ್ನು ನೋಡಿ ಬೆಳೆದಿದ್ದೇನೆ. ಪುರಾಣದಲ್ಲಿ ಶ್ರೀಕೃಷ್ಣ ಪರಮಾತ್ಮ ಅಮೃತ ನೀಡಿ ದೇವತೆಗಳಿಗೆ ಅಮರತ್ವ ಕೊಟ್ಟ. ಅಂಥ ಕೃಷ್ಣ ಪರಮಾತ್ಮನಿಗೆ ಪಾರಿಜಾತ ಕೊಡುವುದಕ್ಕೆ ಏಕೆ ಆಗಲಿಲ್ಲ ಅಂಥ ಇಂದ್ರ ಯಾಕೆ ಯುದ್ಧ ಮಾಡಿದ ಎನ್ನುವುದು ಯಾವಾಗಲೂ ಕಾಡುವ ಪ್ರಶ್ನೆ. ಈ ಪ್ರಶ್ನೆಯನ್ನು ಕೆ.ವೈ.ನಾರಾಯಣಸ್ವಾಮಿ ಅವರ ಮುಂದೆಯೂ ಇಟ್ಟೆ. ಹೀಗೆ ಕಾಡಿದ ಹಲವು ವಿಚಾರಗಳು ರಂಗರೂಪು ಪಡೆದಿವೆ. ಯಾವುದನ್ನಾದರೂ ಯಥಾವತ್ತಾಗಿ ತಂದರೆ ಅರ್ಥ ಇರುವುದಿಲ್ಲ ಅಲ್ಲವೇ? ಹೊಸತನ ಇರಲೇಬೇಕು. ಇಲ್ಲಿಯ ಪ್ರತಿ ದೃಶ್ಯವನ್ನು ನನ್ನ ಕಲ್ಪನೆಯಲ್ಲಿಯೇ ಅರಳಿಸಿದ್ದೇನೆ. ಕೆವೈಎನ್ ಅವರು ಬರೆದು ಮುಗಿಸಿದ ಮೇಲೆ ಆರರಿಂದ ಏಳು ಬಾರಿ ಈ ನಾಟಕದ ಕರಡು ಬದಲಾಯಿತು. ಅದಾದ ಮೇಲೆ ಸುಮಾರು ಹದಿನೈದು ಬಾರಿ ಓದಿದ್ದೀನಿ. ಸಂಭಾಷಣೆ ಕಡಿಮೆಯಾಯಿತು ಎನಿಸಿದ ಕಡೆಯೆಲ್ಲ ರಚನೆಕಾರರ ಅನುಮತಿ ಪಡೆದು ಸೇರಿಸಿದ್ದೀನಿ.

• ಯಾವ ಬಗೆಯ ಪ್ರಯೋಗಶೀಲತೆಗಳಿಗೆ ಈ ನಾಟಕ ತೆರೆದುಕೊಂಡಿದೆ?

ಆರಂಭದಲ್ಲಿ ಈ ನಾಟಕಕ್ಕೆ ‘ದೇವತರು’ ಎನ್ನುವ ಹೆಸರಿಡಲಾಗಿತ್ತು. ಆದರೆ ಇದು ಸುಲಭಕ್ಕೆ ಅರ್ಥವಾಗದು ಎನ್ನುವ ಕಾರಣಕ್ಕೆ ‘ಪಾರಿಜಾತ’ ಎಂದು ಕರೆಯಲಾಯಿತು. ಈ ನಾಟಕವು ರಂಗದ ಮೇಲೆ ಸಣ್ಣಾಟದ ರೂಪದಲ್ಲಿಯೇ ಇರುತ್ತದೆ. ಸಾಮಾನ್ಯವಾಗಿ ‘ಶ್ರೀ ಕೃಷ್ಣ ಪಾರಿಜಾತ’ ಎನ್ನುವ ಸಣ್ಣಾಟವು 12\12 ಚೌಕಟ್ಟಿನಲ್ಲಿರುತ್ತದೆ. ಅಲ್ಲಿ ಇಬ್ಬರು ಅಥವಾ ಮೂರು ಜನ ನಿರಂತರವಾಗಿ ಇರುತ್ತಾರೆ. ಯಾವುದೇ ರೀತಿಯ ಸೆಟ್ ಹಾಗೂ ಪ್ರಾಪರ್ಟೀಸ್ ಇರುವುದಿಲ್ಲ. ಇಂಥದ್ದೆ ಚೌಕಟ್ಟಿನಲ್ಲಿ ರಂಗಪ್ರಯೋಗ ನಡೆಯಲಿದೆ. ಸಂಗೀತದ ವಿಷಯಕ್ಕೆ ಬಂದಾಗ, ಕರ್ನಾಟಕ ಹಾಗೂ ಉತ್ತರ ಭಾರತದ ಎರಡೂ ಶೈಲಿಗಳನ್ನು ಬಳಸಲಾಗಿದೆ. ಇಲ್ಲಿ ಕಂಪನಿ ನಾಟಕಗಳ ಚಹರೆಯೂ ಕಾಣುತ್ತದೆ. ಅಸ್ಸಾಂನ ‘ಪಾರಿಜಾತ ಹರಣ್’ ಪಕ್ಕಾ ಶಾಸ್ತ್ರೀಯ ನೃತ್ಯರೂಪ ‘ಸತ್ರಿಯಾ’ವನ್ನು ಆಧರಿಸಿದೆ. ಆದರೆ ನನಗೆ ಇಲ್ಲಿ ‘ಸತ್ರಿಯಾ’ ತಂಡ ಸಿಗದೇಹೋಗಿದ್ದರಿಂದ ಕಳರಿಯನ್ನೂ ಬಳಸಿದ್ದೇನೆ. ವಸ್ತ್ರವಿನ್ಯಾಸ ಜನಪದ ಶೈಲಿಯಲ್ಲಿಯೇ ಇದ್ದರೂ ಒಂದಷ್ಟು ಮಾರ್ಪಾಟು ಮಾಡಿಕೊಂಡು ನನ್ನ ಶೈಲಿಯನ್ನು ಸೇರಿಸಿದ್ದೇನೆ.

ಪಾರಿಜಾತದ ನಾಟಕದ ತಾಲೀಮಿನ ದೃಶ್ಯ ಚಿತ್ರ: ತಾಯಿ ಲೋಕೇಶ್

• ನಾಟಕ ನಿರ್ದೇಶಿಸುವಾಗ ಎದುರಾದ ಸವಾಲುಗಳೇನು?

ಸಣ್ಣಾಟದ ರೂಪದಲ್ಲಿ ಪ್ರಸ್ತುತಪಡಿಸುವುದೇ ದೊಡ್ಡ ಸವಾಲು. ಇಷ್ಟೇ ಚೌಕಟ್ಟಿನಲ್ಲಿ ನಾಟಕವನ್ನು ಸುಂದರವಾಗಿ ಕಟ್ಟುವುದು, ನೋಡುಗರನ್ನು ಹಿಡಿದಿಟ್ಟುಕೊಳ್ಳುವುದು, ಅದರಲ್ಲಿಯೇ ಹಲವು ಪ್ರಯೋಗಗಳನ್ನು ನಡೆಸುವುದು ಎಲ್ಲವೂ ಸವಾಲೇ. ಇಲ್ಲಿ ವಿಶೇಷವಾಗಿ ಭರತನಾಟ್ಯ ಹಾಗೂ ಕಥಕ್ ಶೈಲಿಯನ್ನು ಬಳಸಿಕೊಳ್ಳಲಾಗಿದೆ. ಸಣ್ಣಾಟದಲ್ಲಿರುವಂತೆ ಬರೀ ಸಂಗೀತವಷ್ಟೆ ಅಲ್ಲದೆ ಸಂಭಾಷಣೆಗೂ ಮಹತ್ವ ನೀಡಲಾಗಿದೆ.

• ಪಾರಿಜಾತದಲ್ಲಿ ಸಮಕಾಲೀನತೆಯ ಸಮನ್ವಯ ಹೇಗೆ?

ರುಕ್ಮಿಣಿ–ಸತ್ಯಭಾಮಾರ ಕಲಹ ಪ್ರಸಂಗವನ್ನು ತುಸು ತಮಾಷೆಯ ಧಾಟಿಯಲ್ಲಿಯೇ ನಿರೂಪಿಸಲಾಗಿದೆ. ಇಲ್ಲಿ ರುಕ್ಮಿಣಿ, ಸತ್ಯಭಾಮಾ ಇಬ್ಬರೂ ಕೃಷ್ಣನನ್ನು ಪ್ರಶ್ನಿಸುವ ಪ್ರಸಂಗವೂ ಇದೆ. ಹಾಗೆಯೇ ನಾರದ–ಕೃಷ್ಣ ಮತ್ತು ಕೃಷ್ಣ–ರುಕ್ಮಿಣಿ–ಸತ್ಯಭಾಮಾರ ಸಂಭಾಷಣೆಗಳಲ್ಲಿ ಸರಳ ಸ್ನೇಹವಿದೆ. ಎಂಥದ್ದೇ ಕಥೆಯಾದರೂ ಮೊದಲು ಅದು ಅದನ್ನು ನಿರ್ದೇಶಿಸುವ ನಿರ್ದೇಶಕರನ್ನು ತಟ್ಟಬೇಕು. ನಿರ್ದೇಶಕರ ಮನಸ್ಸನ್ನು ತಟ್ಟಿದರೆ ಅದು ಪ್ರೇಕ್ಷಕ ಪ್ರಭುವನ್ನು ಮುಟ್ಟುತ್ತದೆ ಎನ್ನುವುದರಲ್ಲಿ ನಂಬಿಕೆ ಇಟ್ಟವಳು. ಇಲ್ಲಿ ಕಲಾವಿದರೆ ಪಾತ್ರದಿಂದ ಹೊರಗೆ ನಿಂತು ಪಾತ್ರವನ್ನು ವಿಮರ್ಶೆ ಮಾಡುವ ಜನಪದರ ಶೈಲಿಯ ಪ್ರಭಾವ ಗಾಢವಾಗಿದೆ.

• ಈಗಿನ ನಟ–ನಟಿಯರ ಬಗ್ಗೆ ಏನನ್ನಿಸುತ್ತದೆ?

ಈ ನಾಟಕದಲ್ಲಿ ನೃತ್ಯಪಟುಗಳು ಬಹುಮುಖ್ಯ ಪಾತ್ರ ವಹಿಸುತ್ತಾರೆ. ಇಬ್ಬಿಬ್ಬರೇ ರಂಗದ ಮೇಲೆ ಇರುವುದರಿಂದ ಕಲಾವಿದರು ಬಹು ಎಚ್ಚರದಿಂದ ಇರಬೇಕಾಗುತ್ತದೆ. ನಮ್ಮ ಸ್ಪಂದನ ತಂಡದಲ್ಲಿ ಎಂದಿನಂತೆ ಹೊಸ ಕಲಾವಿದರು ಇದ್ದಾರೆ. ಎಲ್ಲವನ್ನೂ ಹೇಳಿಕೊಟ್ಟು ಮಾಡಿಸುವುದಕ್ಕೆ ಅಷ್ಟು ಇಷ್ಟವಿಲ್ಲ. ಸ್ವಲ್ಪ ತೀಡುವುದು, ತಿದ್ದುವುದು ಇದ್ದೇ ಇರುತ್ತದೆ. ಹೊಸ ಚಿಗುರು ಬರಲೇಬೇಕು. ❖

ಪಾರಿಜಾತ ನಾಟಕದ ಮಾಹಿತಿ

ರಚನೆ: ಕೆ.ವೈ.ನಾರಾಯಣಸ್ವಾಮಿ, ನಿರ್ದೇಶನ: ಬಿ. ಜಯಶ್ರೀ
ಸಂಗೀತ: ಪ್ರವೀಣ್ ಡಿ.ರಾವ್ ಮತ್ತು ಸುಶೀಲ್ ಶರ್ಮಾ
ರಂಗಸಜ್ಜಿಕೆ: ಶಶಿಧರ್ ಅಡಪ ಮತ್ತು ಅರುಣ್ ಸಾಗರ್
ಬೆಳಕು ವಿನ್ಯಾಸ: ಅರುಣ್ ಡಿ.ಟಿ.
ಅ. 11 ಮತ್ತು 12– ರಂಗಶಂಕರ, ಬೆಂಗಳೂರು; ಸಂಜೆ 7.30

ಮುನ್ನೋಟ 08-10-2023 ರಿಂದ -14-10-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಆತ್ಮವಿಶ್ವಾಸದಿಂದ ಹಿಡಿದ ಕೆಲಸವನ್ನು ಮಾಡುವಿರಿ. ಸಮೂಹದ ಮಧ್ಯೆ ಉತ್ತಮವಾಗಿ ಮಾತನಾಡಿ ಅವರ ಮನ ಗೆಲ್ಲುವಿರಿ. ಸ್ಥಿರಾಸ್ತಿ ಮಾಡುವ ವಿಚಾರದಲ್ಲಿ ಶುಭ ಸೂಚನೆಗಳು ಈಗ ಕಾಣುವ ಸಾಧ್ಯತೆ ಇದೆ. ಕಣ್ಣಿನ ತೊಂದರೆ ಅಥವಾ ರಕ್ತ ಸಂಬಂಧಿ ತೊಂದರೆಗಳಿರುವವರು ಚಿಕಿತ್ಸೆ ಪಡೆಯುವುದು ಉತ್ತಮ. ವಿವಾಹ ಅಪೇಕ್ಷಿತರಿಗೆ ಸಂಬಂಧಗಳು ಒದಗಿಬರುವ ಸಾಧ್ಯತೆಗಳಿವೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಹೆಚ್ಚು ಅಲಂಕಾರಿಕವಾಗಿ ಕಾಣಿಸಿಕೊಳ್ಳಲು ಪ್ರಯತ್ನ ಮಾಡುವಿರಿ. ಬುದ್ಧಿವಂತಿಕೆಯಿಂದ ಮಾತನಾಡಿ ದೂಷಣೆಯಿಂದ ತಪ್ಪಿಸಿಕೊಳ್ಳುವಿರಿ. ಚುರುಕಾಗಿ ಕೆಲಸಮಾಡಿ ಸ್ವಚ್ಛತೆಯ ಕಡೆಗೆ ಹೆಚ್ಚು ಗಮನ ಕೊಡುವಿರಿ. ಗಣಿತ ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ಮಕ್ಕಳ ಅಭಿವೃದ್ಧಿಯ ಬಗ್ಗೆ ಉತ್ತಮವಾದ ವಾರ್ತೆಗಳನ್ನು ಕೇಳುವಿರಿ. ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಆದಾಯವಿರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ವಾರದ ಆರಂಭ ಸಂತೋಷದಾಯಕವಾಗಿರುತ್ತದೆ. ನಿರೀಕ್ಷಿತ ಮೂಲಗಳಿಂದ ಧನ ಆದಾಯವು ಬರುತ್ತದೆ. ಬುದ್ಧಿವಂತಿಕೆಯಿಂದ ಹಿರಿಯರೊಡನೆ ವ್ಯವಹರಿಸಿ ನಿಮ್ಮ ಕೆಲಸ ಸಾಧಿಸಿಕೊಳ್ಳುವಿರಿ. ಸ್ಥಿರಾಸ್ತಿ ಮಾಡುವ ವಿಚಾರದಲ್ಲಿ ಪ್ರಗತಿಯನ್ನು ಕಾಣಬಹುದು. ಕೃಷಿಯಿಂದ ಹೆಚ್ಚು ಆದಾಯವಿರುತ್ತದೆ. ಹೈನುಗಾರಿಕೆ ಮಾಡುವವರಿಗೆ ಆದಾಯ ವೃದ್ಧಿಸುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಒಂದು ರೀತಿಯ ಹುಮ್ಮಸ್ಸು ನಿಮ್ಮಲ್ಲಿ ಮನೆ ಮಾಡಿರುತ್ತದೆ. ಹಣದ ಒಳಹರಿವು ನಿರೀಕ್ಷಿತ ಮಟ್ಟದಲ್ಲಿರುತ್ತದೆ. ಅತ್ಯಂತ ಚುರುಕಾಗಿ ಓಡಾಡಿ ಜಾಣತನದಿಂದ ಕೆಲಸ ಸಾಧಿಸುವಿರಿ. ಕೃಷಿಭೂಮಿಯನ್ನು ಕೊಳ್ಳಬಹುದು. ಉದ್ಯೋಗದಲ್ಲಿ ಆದಾಯ ಹೆಚ್ಚಾದರೂ ಅಷ್ಟೇ ಖರ್ಚು ಇರುತ್ತದೆ. ಸಂಗಾತಿಯೊಂದಿಗೆ ಮೌನ ಇರಬಹುದು. ಹಿರಿಯರ ಸಹಾಯದಿಂದ ಉದ್ಯೋಗದಲ್ಲಿ ಮೇಲ್ದರ್ಜೆಗೇರುವ ಅವಕಾಶವಿದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಎಚ್ಚರಿಕೆಯಿಂದ ಮಾತನಾಡಿ ನಿಮ್ಮ ಗುರಿ ಸಾಧಿಸುವಿರಿ. ನೃತ್ಯಗಾರರಿಗೆ ಹೆಚ್ಚಿನ ಅವಕಾಶ ದೊರೆಯುವ ಸಾಧ್ಯತೆ ಇದೆ. ಸರ್ಕಾರದ ಜೊತೆ ಮಾಡಿಕೊಂಡ ವ್ಯವಹಾರ ಒಪ್ಪಂದಗಳಲ್ಲಿ ನಿಮಗೆ ಹೆಚ್ಚು ಲಾಭವಿರುತ್ತದೆ. ಭೂಮಿ ವ್ಯಾಪಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಅಧ್ಯಾಪಕರಿಗೆ ಉತ್ತಮ ಹೆಸರು ಮತ್ತು ಗೌರವ ದೊರೆಯುವ ಸಾಧ್ಯತೆಯಿದೆ. ಹಣದ ಒಳಹರಿವು ಮಧ್ಯಮ ಗತಿಯಲ್ಲಿರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಅತಿಯಾದ ಗತ್ತು ನಿಮಗೆ ಮುಜುಗರ ತರುವಂತಹ ವಾತಾವರಣವನ್ನು ನಿರ್ಮಾಣ ಮಾಡಬಹುದು. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆ ಸಾಕಷ್ಟು ವ್ಯಾವಹಾರಿಕವಾಗಿರುತ್ತದೆ. ಸಂಸಾರದಲ್ಲಿ ಸ್ವಲ್ಪಮಟ್ಟಿನ ಮುಸುಕಿನ ಗುದ್ದಾಟಗಳಿರುತ್ತವೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಮಟ್ಟದ ಯಶಸ್ಸು ಇರುವುದಿಲ್ಲ. ಸಾಲಕೊಟ್ಟವರು ಬಂದು ಹಣ ವಾಪಸಿಗೆ ಬೇಡಿಕೆ ಇಡುವರು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ವಾರದ ಆರಂಭದಲ್ಲಿ ನಿಮ್ಮಲ್ಲಿ ಆಕ್ರೋಶ ಮನೆ ಮಾಡಿರುತ್ತದೆ. ನಿಮ್ಮ ಕೋಪ ನಿಮ್ಮ ಕೆಲವು ಆಪ್ತಮಿತ್ರರನ್ನು ದೂರ ಮಾಡಬಹುದು. ಕೃಷಿಕರಿಗೆ ಬೆಳೆಗಳಿಂದ ಆದಾಯ ಬರುತ್ತದೆ. ನಿಮ್ಮೆಲ್ಲಾ ಕಾರ್ಯಗಳಿಗೆ ಸಂಗಾತಿಯ ಸಹಾಯ ಸ್ವಲ್ಪಮಟ್ಟಿಗೆ ದೊರೆಯಲಿದೆ. ರಾಜಕೀಯ ವ್ಯಕ್ತಿಗಳು ಅವರಾಡಿದ ಮಾತುಗಳಿಂದ ದೂಷಣೆಗೆ ಒಳಗಾಗುವ ಸಂದರ್ಭವಿದೆ. ಸರ್ಕಾರಿ ಮಟ್ಟದ ಕೆಲಸಗಳಲ್ಲಿ ನಿಧಾನ ಗತಿ ಇರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಸ್ವಲ್ಪ ನಿರ್ಲಿಪ್ತತೆ ನಿಮ್ಮನ್ನು ಆವರಿಸಿಕೊಳ್ಳಬಹುದು, ಇದು ತಾತ್ಕಾಲಿಕ ಮಾತ್ರ. ಧನ ಆದಾಯವು ಮಂದಗತಿಯಲ್ಲಿರುತ್ತದೆ. ಕೃಷಿಯಲ್ಲಿ ಹೆಚ್ಚು ಆಸಕ್ತಿ ಮೂಡುತ್ತದೆ. ರಾಜಕೀಯಕ್ಕೆ ಸೇರಬೇಕೆಂದು ಓಡಾಡುವ ಕೆಲ ಜನರಿಗೆ ನಿರಾಸೆಯಾಗಬಹುದು. ವಿದ್ಯಾರ್ಥಿಗಳಿಗೆ ಮಧ್ಯಮ ದರ್ಜೆಯ ಫಲಿತಾಂಶವಿರುತ್ತದೆ. ಲೇವಾದೇವಿ ವ್ಯವಹಾರಗಳು ಖಂಡಿತ ಬೇಡ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಆತ್ಮವಿಶ್ವಾಸವು ಹೆಚ್ಚಾಗಿದ್ದು, ನಿಮ್ಮ ಕಾರ್ಯ ಸಾಧನೆಯ ಮೇಲೆ ಸಕಾರಾತ್ಮಕ ಪರಿಣಾಮವನ್ನು ಬೀರುತ್ತದೆ. ನಿಮ್ಮ ಹಿತಶತ್ರುಗಳನ್ನು ಗುರುತಿಸಿ ತರಾಟೆಗೆ ತೆಗೆದುಕೊಳ್ಳುವಿರಿ. ವಿದ್ಯಾರ್ಥಿಗಳಿಗೆ ಹೆಚ್ಚಿನ ರೀತಿಯ ಯಶಸ್ಸು ಇರುತ್ತದೆ. ವಾಯುಯಾನ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಹೆಚ್ಚು ಅಭಿವೃದ್ಧಿ ಇರುತ್ತದೆ. ಹಿರಿಯರ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಬಹಳ ಶ್ರದ್ಧೆಯಿಂದ ಕೆಲಸ ಮಾಡಿ ಉತ್ತಮ ಹೆಸರು ಗಳಿಸುವಿರಿ. ಮಾತನಾಡುವಾಗ ಎಚ್ಚರಿಕೆ ಇರಲಿ. ಆಸ್ತಿ ಕೊಳ್ಳುವ ವಿಚಾರದಲ್ಲಿ ಹಣ ಒದಗಿದರೂ ದಾಖಲೆ ಪರಿಶೀಲನೆ ಮಾಡಿ ಮುಂದುವರೆಯಿರಿ. ವಾಹನಗಳ ಬಿಡಿ ಭಾಗಗಳನ್ನು ಮಾರಾಟ ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ. ಯಂತ್ರೋಪಕರಣಗಳನ್ನು ರಿಪೇರಿ ಮಾಡುವವರಿಗೆ ಕೈ ತುಂಬಾ ಕೆಲಸವಿರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಸಾಂಪ್ರದಾಯಿಕ ಕೃಷಿಯ ಕಡೆಗೆ ಹೆಚ್ಚು ಆಸಕ್ತಿ ಮೂಡುತ್ತದೆ. ಹಿರಿಯರು ಎಲ್ಲರೊಂದಿಗೆ ಸಮಾಧಾನವಾಗಿ ಮಾತನಾಡಿ ತಿಳಿವಳಿಕೆ ನೀಡುವರು. ವಿದೇಶಿ ಹಣಕಾಸಿನ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ. ಧಾನ್ಯಗಳ ಬೀಜೋತ್ಪಾದನೆ ಮಾಡಲು ಮುಂದಾಗುವಿರಿ. ವ್ಯಾಪಾರದಲ್ಲಿನ ಸರ್ಕಾರಿ ಕಾನೂನಿನ ತೊಡಕುಗಳು ಬಗೆಹರಿಯುತ್ತವೆ. ವೃತ್ತಿಯಲ್ಲಿ ಸ್ವಲ್ಪ ಮಟ್ಟಿನ ತೊಡಕು ಎದುರಾಗಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ನಿಮ್ಮನ್ನು ನೀವು ಅತ್ಯಂತ ಪ್ರಭಾವಿಗಳೆಂದು ಪರಿಭಾವಿಸುವಿರಿ. ಹಣದ ಒಳಹರಿವು ಉತ್ತಮವಾಗಿದ್ದರೂ ಅದು ನಿಮಗೆ ತಲುಪುವುದು ನಿಧಾನವಾಗಬಹುದು. ಆರೋಗ್ಯ ವ್ಯತ್ಯಾಸಗಳು ನಿಮ್ಮನ್ನು ಸ್ವಲ್ಪ ಕಾಡಬಹುದು. ಆಸ್ತಿ ಕೊಳ್ಳುವ ವಿಚಾರದಲ್ಲಿ ನಿರೀಕ್ಷಿತ ಮೂಲಗಳಿಂದ ಹಣ ಒದಗಿ ಬರುತ್ತದೆ. ವಿದ್ಯಾರ್ಥಿಗಳಿಗೆ ಅವರ ಶ್ರಮಕ್ಕೆ ತಕ್ಕಂತೆ ಫಲ ದೊರೆಯುತ್ತದೆ. ಲೇವಾದೇವಿಯಂತಹ ಹಣಕಾಸಿನ ವ್ಯವಹಾರ ಮಾಡುವುದು ಅಷ್ಟು ಶ್ರೇಯಸ್ಕರವಲ್ಲ. ಕಾಲ ನೋವಿನ ಬಗ್ಗೆ ಹೆಚ್ಚಿನ ಗಮನವಿರಲಿ.

ಮೌನಕ್ಕೆ ಜಾರಿದ ದಳವಾಯಿಗಳ ಏಕತಾರಿ

ತತ್ವಜ್ಞಾನಿಗಳ ತತ್ವ ಪದಗಳನ್ನು ತಮ್ಮದೇ ಧಾಟಿಯಲ್ಲಿ ಹಾಡುತ್ತಾ ಜನರನ್ನು ಆಧ್ಯಾತ್ಮಿಕ ಚಿಂತನೆಗೆ ಒಳಪಡಿಸುವ ತಾಕತ್ತು ಈಚೆಗೆ ನಿಧನರಾದ ವಿಜಯಪುರ ಜಿಲ್ಲೆಯ ನಿಡಗುಂದಿ ತಾಲ್ಲೂಕಿನ ಮುದ್ದಾಪುರ ಗ್ರಾಮದ ಏಕತಾರಿ ಹಾಗೂ ಭಜನಾ ಕಲಾವಿದ ವೀರಭದ್ರಪ್ಪ ದಳವಾಯಿ ಅವರ ಗಾಯನದಲ್ಲಿತ್ತು.

ಚಂದ್ರಶೇಖರ ಕೋಳೇಕರ

ವಿಜಯಪುರ ಜಿಲ್ಲೆ ಕೊಲ್ಹಾರ ತಾಲ್ಲೂಕಿನ ಕಲಗುರ್ಕಿ ಹುಟ್ಟೂರು. ಬದುಕು ಕಟ್ಟಿಕೊಂಡಿದ್ದು ನಿಡಗುಂದಿ ತಾಲ್ಲೂಕಿನ ಮುದ್ದಾಪುರದಲ್ಲಿ. ಚಿಕ್ಕಂದಿನಿಂದಲೂ ಭಜನಾ ಪದಗಳನ್ನು ಕೇಳುವುದು, ಹಾಡುವುದು ಎಂದರೆ ಇಷ್ಟ. ಬಾಲ್ಯದಿಂದಲೇ ಜನಪದ ಕಲೆಯತ್ತ ಮುಖ ಮಾಡಿ ಏಕತಾರಿ ಹೇಳುವುದನ್ನು ಕರಗತ ಮಾಡಿಕೊಂಡಿದ್ದರು. ರಾಜ್ಯ ಮತ್ತು ರಾಷ್ಟ್ರಮಟ್ಟದ ಹಲವು ಕಡೆ ಕಾರ್ಯಕ್ರಮಗಳಲ್ಲಿ ತಮ್ಮ ಗಾಯನದ ಮೂಲಕ ಜನರ ಮನಸ್ಸಲ್ಲಿ ಅಚ್ಚಳಿಯದೆ ಉಳಿದಿದ್ದಾರೆ. ಅವರೇ ವೀರಭದ್ರಪ್ಪ ದಳವಾಯಿ.

1970ರ ದಶಕದಲ್ಲಿ ಆಕಾಶವಾಣಿ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ, ಪಕ್ಕದ ಹಲ್ಲೂರಿನ ಖ್ಯಾತ ಭಜನಾ ಕಲಾವಿದ ಗುರುಪಾದಪ್ಪ ಚಲವಾದಿ ಅವರ ಜೊತೆಗೂಡಿದ್ದರು ವೀರಭದ್ರಪ್ಪ. ಸುಮಾರು 20 ವರ್ಷಗಳ ಕಾಲ ಧಾರವಾಡದ ಆಕಾಶವಾಣಿ ಕೇಂದ್ರದಲ್ಲಿ ವರ್ಷಕ್ಕೆರೆಡು ಕಾರ್ಯಕ್ರಮ ನೀಡುತ್ತಲೇ ಶ್ರೋತೃಬಳಗವನ್ನು ವಿಸ್ತರಿಸಿಕೊಂಡರು. ಇವರು ಆಕಾಶವಾಣಿಯ ‘ಬಿ’ ಗ್ರೇಡ್ ಕಲಾವಿದರಾಗಿದ್ದರು. ಅಲ್ಲಿ ಭಜನಾ ಪದ ಹಾಡುತ್ತಿದ್ದರು.

ಯಾರಾದರೂ ಮೃತಪಟ್ಟರೆ ಇವರದ್ದೇ ಭಜನಾ ಮಂಡಳಿಯ ಉಪಸ್ಥಿತಿ. ರಾತ್ರಿಯಿಡೀ ಹಾಡುವುದು ಹವ್ಯಾಸವಾಯಿತು. ಆದರೆ, ದೊರಕುತ್ತಿದ್ದದ್ದು ನೂರು ರೂಪಾಯಿ ಮಾತ್ರ. ಅದು ಹೊಟ್ಟೆಪಾಡಿಗೆ ಸಾಲುತ್ತಿರಲಿಲ್ಲ. ಸಂಸಾರ ದೊಡ್ಡದಾದಂತೆ ಭಜನೆ ಬಿಟ್ಟು ಹೋಟೆಲ್ ಹಾಗೂ ಕೃಷಿ ಕಾಯಕದಲ್ಲಿ ತೊಡಗಿದರು ವೀರಭದ್ರಪ್ಪ. ತಮ್ಮ ಬದುಕಿನ 79ನೇ ವಯಸ್ಸಿನ ಸಾಯುವ ಕೊನೆಯ ದಿನವರೆಗೂ ಹೋಟೆಲ್ ಹಾಗೂ ಕೃಷಿ ಕಾಯಕದಲ್ಲಿ ಅವರು ತೊಡಗಿಕೊಂಡಿದ್ದರು.

ಭಜನಾ ಪದ ಹಾಡುವುದು ಕಡಿಮೆಯಾದ ನಂತರ ಆತ್ಮತೃಪ್ತಿಗಾಗಿ ತತ್ವಪದಗಳನ್ನು ಹಾಡಲು ಶುರುಮಾಡಿದ್ದರು. ಆದರೆ, ಮನಸ್ಸನ್ನು ಕೇಂದ್ರೀಕರಿಸುವ ಮಾರ್ಗವಾಗಿ ಏಕತಾರಿ ವಾದ್ಯ ನುಡಿಸುವುದನ್ನು ಕರಗತ ಮಾಡಿಕೊಂಡು ಎಲ್ಲೆಲ್ಲಿ ಜಾಗ ಸಿಗುತ್ತದೆಯೋ ಅಲ್ಲಲ್ಲಿ ಕುಳಿತು ಹಾಡುವುದೇ ಅವರ ಹವ್ಯಾಸವಾಯಿತು. ಹಲವರು ಇವರ ಹಾಡುಗಾರಿಕೆಯನ್ನು ಹೀಯಾಳಿಸಿದರೂ, ಅದನ್ನು ಕೇಳಿಸಿಕೊಳ್ಳದಂತೆ ತಮ್ಮೊಳಗೆ ಲೀನವಾಗುತ್ತಾ ಹಾಡುವುದು ಅವರಿಗೆ ಅಭ್ಯಾಸವಾಗಿತ್ತು. ಹೋಟೆಲ್‌ನಲ್ಲಿ, ತೋಟಗಳಲ್ಲಿ, ಮನೆಯಲ್ಲಿ ಹಾಡುಗಳನ್ನು ಹಾಡುವುದೇ ಕಾಯಕ.

ಹಳ್ಳಿಗಳಿಗೆ ಸೀಮಿತವಾಗಿದ್ದ ಇವರ ಕಲೆಯನ್ನು ಗುರುತಿಸಿ ಪ್ರೋತ್ಸಾಹಿಸಿದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಲವು ಅಧಿಕಾರಿಗಳು. ಅವರು ನಾನಾ ಕಡೆ ವೇದಿಕೆ ಕಲ್ಪಿಸಿದ್ದು, ಹಳ್ಳಿಗಷ್ಟೆ ಸೀಮಿತವಾಗಿದ್ದ ಏಕತಾರಿ ಕಲೆಯನ್ನು ಐದು ರಾಜ್ಯಗಳಲ್ಲಿ ಪ್ರದರ್ಶಿಸಲು ಕಾರಣವಾಯಿತು.

650ಕ್ಕೂ ಹೆಚ್ಚು ಕಾರ್ಯಕ್ರಮ

ಮೈಸೂರು ದಸರಾ, ನವರಸಪುರ, ಪಟ್ಟದಕಲ್ಲು, ಕಂದಬೋತ್ಸವ, ಅಯ್ಯನ ಗುಡಿ ಉತ್ಸವ, ರಾಜ್ಯ ಮಟ್ಟದ ಗಿರಿಜನ ಉತ್ಸವ, ಸಿಕ್ಕಿಂನ ಇಂಫಾಲ್‌ನಲ್ಲಿ ನಡೆದ ಹೊರನಾಡು ಉತ್ಸವ, ಗೋವಾದ ಪಣಜಿ, ಕೇರಳದ ಕಾಸರಗೋಡು ಸೇರಿ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದ ನಾನಾ ಕಡೆ ವೀರಭದ್ರಪ್ಪ ದಳವಾಯಿ ತಮ್ಮ ತಂಡದ ಜತೆಗೂಡಿ ಪ್ರದರ್ಶನ ನೀಡಿದ್ದಾರೆ. ಇಟಗಿಯ ತಬಲಾ ಮೇಷ್ಟ್ರು ಚಾಂದ್‌ಸಾಬ್ ವಾಲೀಕಾರರ ಜತೆ ಸೇರಿ ಬಸವರಾಜ ಬಿರಾದಾರ, ಶಿವಪ್ಪ ಮಾದರ, ಹನುಮಂತ ಬಿರಾದಾರ ಹಿಮ್ಮೇಳ ಜತೆ ಏಕತಾರಿ ಪದಗಳನ್ನು ವೀರಭದ್ರಪ್ಪ ಹಾಡುತ್ತಿದ್ದರು.

ಈ ಭಾಗದಲ್ಲಿ ಪ್ರಚಲಿತರಾಗಿರುವ ನಿಡಗುಂದಿ ತಾಲ್ಲೂಕಿನ ಬಳಬಟ್ಟಿಯ ಮೌನಪ್ಪ ಅಜ್ಜನವರ ತತ್ವಪದಗಳಿಂದ ಹೆಚ್ಚು ಪ್ರಭಾವಿತರಾಗಿದ್ದರು. ಆ ತತ್ವಪದಗಳನ್ನೇ ಭಜನಾರೂಪದಲ್ಲಿ ಹಾಡುತ್ತಿದ್ದರು. ಮೌನಪ್ಪ ಅಜ್ಜನವರ ಸಾಹಿತ್ಯ, ಅವರ ತತ್ವಪದಗಳು ಬಾಯಿಂದ ಬಾಯಿಗೆ ಹರಡಿವೆ. ಆದರೆ, ಲಿಖಿತರೂಪದಲ್ಲಿ ದೊರೆಯುವುದು ಅತಿ ಕಡಿಮೆ. ಶಿಶುನಾಳ ಷರೀಫರಂತೆಯೇ ಅವರು ಅಧ್ಯಾತ್ಮ ಜೀವಿಯಾಗಿದ್ದರು. ಆದರೆ, ಅವರ ಹಾಗೂ ಅವರ ಸಾಹಿತ್ಯದ ಬಗ್ಗೆ ಅಧ್ಯಯನ, ಪ್ರಚಾರದ ಕೊರತೆ ಹೆಚ್ಚು ಎಂದು ಪ್ರತಿ ಕಾರ್ಯಕ್ರಮಕ್ಕೂ ಮೊದಲು ಹೇಳುತ್ತಿದ್ದ ವೀರಭದ್ರಪ್ಪ, ಅವರನ್ನು ನೆನೆಸಿಕೊಂಡೇ ಹಾಡನ್ನು ಹಾಡುತ್ತಿದ್ದರು. ಜೊತೆಗೆ ಕಡಕೋಳ ಮಲ್ಲಪ್ಪ, ಶಿಶುನಾಳ ಷರೀಫ, ಬಬಲಾದಿ ಶಿವಶರಣ ಹಲವು ಪದಗಳನ್ನು ಹಾಡುತ್ತಿದ್ದರು.

ವೀರಭದ್ರಪ್ಪ ಕಲಿತಿದ್ದು ಏಳನೇ ತರಗತಿಯಾದರೂ ತಮ್ಮ ಕಲಾಪ್ರೌಢಿಮೆಯಿಂದ ಕರ್ನಾಟಕ ಜಾನಪದ ಅಕಾಡೆಮಿಯ 2022ನೇ ಸಾಲಿನ ಪ್ರಶಸ್ತಿ ಪಡೆದಿದ್ದರು. ವಿಜಯಪುರ ಜಿಲ್ಲಾಡಳಿತ ನೀಡುವ ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿ, ರಾಜ್ಯ ಮಟ್ಟದ ಸನಾದಿ ಅಪ್ಪಣ್ಣ ಪ್ರಶಸ್ತಿ ಸೇರಿ ನಾನಾ ಸಂಘ–ಸಂಘಟನೆಗಳ ಪ್ರಶಸ್ತಿಗಳು ಅವರಿಗೆ ಸಂದಿದ್ದವು.

ವೀರಭದ್ರಪ್ಪನವರ ಪುತ್ರ, ಗೊಂಬೆಯಾಟದ ಕಲಾವಿದ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ಸಿದ್ದು ಬಿರಾದಾರ, ಬಾಲ್ಯದಿಂದಲೇ ತಮ್ಮ ತಂದೆಯವರ ಕಲೆ ನೋಡಿದ್ದರು. ತಂದೆಯ ಕಲೆಗೆ ಹೆಚ್ಚು ವೇದಿಕೆ ಕಲ್ಪಿಸಲು ಅವರೂ ಶ್ರಮಿಸಿದ್ದರು.

ನುಡಿ ನಮನ

ಸಾಂಸ್ಕೃತಿಕ ಭವನಕ್ಕೆ ಜಾಗ ಕೊಟ್ಟದ್ದು...

ಸಾಂಸ್ಕೃತಿಕ ಸಂರಕ್ಷಣೆಗಾಗಿ ಮಹರ್ಷಿ ವಾಲ್ಮೀಕಿ ಸಾಂಸ್ಕೃತಿಕ ಸಂರಕ್ಷಣಾ ಕಲಾ ಸಂಘ ಸ್ಥಾಪಿಸಿ, ಅದರ ಮೂಲಕ ಕಾರ್ಯಕ್ರಮ ನೀಡುತ್ತಿದ್ದ ದಳವಾಯಿ, ಮುದ್ದಾಪುರದಲ್ಲಿ ನಾಲ್ಕು ಗುಂಟೆಯಷ್ಟು ತಮ್ಮ ಸ್ವಂತ ಜಾಗವನ್ನು ನೀಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ₹ 25 ಲಕ್ಷ ವೆಚ್ಚದಲ್ಲಿ ಸಾಂಸ್ಕೃತಿಕ ಭವನ ನಿರ್ಮಿಸಲು ಕಾರಣರಾಗಿದ್ದರು. ಆರ್ಥಿಕವಾಗಿ ಹಿಂದುಳಿದ, ದೀನ ದಲಿತ ಕಲಾವಿದರಿಗೆ ಪ್ರೋತ್ಸಾಹ ನೀಡಿ, ಅವರ ಕಲೆಗಳ ಪ್ರದರ್ಶನಕ್ಕೆ ವೇದಿಕೆ ಕಲ್ಪಿಸಿದ್ದರು. ವೀರಭದ್ರಪ್ಪ ಏಕತಾರಿ ಹಿಡಿದು ಹಾಡುತ್ತ ನಿಂತರೆ ಜಗತ್ತನ್ನೇ ಮರೆಸುವ ಶಕ್ತಿ ಹೊಂದಿದ್ದರು. ಇದೇ ಅಕ್ಟೋಬರ್ 2ರಂದು ಗಾಂಧಿ ಜಯಂತಿ ದಿನ ಅವರು ನಿಧನರಾದರು. ಅವರ ಏಕತಾರಿ ಸ್ವರ ಹೊಮ್ಮಿಸದೆ ಶಾಂತವಾಗಿರುವುದನ್ನು ನೋಡಿದಾಗಲೆಲ್ಲ ಅವರ ನಾದದ ನೆನಪು ಮರುಕಳಿಸುತ್ತದೆ. ❖

ವೀರಭದ್ರಪ್ಪ ದಳವಾಯಿ

ಒಂದೇ ತಂತಿಯಿಂದ ಹೊಮ್ಮುವ ನಾದ

‘ಏಕತಾರಿ’, ‘ಏಕ್ ತಾರ್’ ಅಂದರೆ ಒಂದೇ ತಂತಿಯಿಂದ ನಾದ ಹೊಮ್ಮಿಸುವ ವಾದ್ಯ. ಕುಂಬಳಕಾಯಿಗೆ ಒಂದೇ ತಂತಿಯನ್ನು ಕಟ್ಟಿ ಅದರ ಮೂಲಕ ನಾದ ಹೊಮ್ಮಿಸುವ ಸಂಗೀತ ಉಪಕರಣ ಇದಾಗಿದೆ. ಇದೇ ಶಬ್ದ ವಿನ್ಯಾಸದಲ್ಲಿ ದೋತಾರ್, ತೀನ್ ತಾರ್, ಸೀತಾರ್ (ಅಂದರೆ, ಆರು ತಂತಿ) ಕೂಡ ಇವೆ.

ಏಕಾಗ್ರತೆಗಾಗಿ ಹಾಗೂ ರಾಗಸಿದ್ಧಿಗಾಗಿ ಏಕತಾರಿ ಹಲವು ಅಧ್ಯಾತ್ಮ ಜೀವಿಗಳಿಗೆ ಸಾಥಿಯಂತೆ. ಒಂದೇ ತಂತಿಯಿಂದ ನಾದ ಹೊಮ್ಮಿಸಿ, ನಮ್ಮ ರಾಗಕ್ಕೆ ತಂತಿಯ ನಾದವನ್ನು ಹೊಂದಿಸಿ ಹಾಡುವ ವಾದ್ಯವಿದು.

ಸೂಫಿ ಸಂತರು, ನಾಥಪಂಥದ ಹಲವು ಅಧ್ಯಾತ್ಮಜೀವಿಗಳು, ಸಂತರು ಮೊದಲಾದವರ ತಂಬೂರಿ ಏಕತಾರಿಯದ್ದಾಗಿತ್ತು. ಮಾನವ ದೇಹವು ತಂತಿವಾದ್ಯವಾಗಿ ರೂಪಾಂತರಗೊಳ್ಳುವ ಈ ಕ್ರಿಯೆ ಯಲ್ಲಮ್ಮ ಸಂಪ್ರದಾಯದಲ್ಲಿ ಹಳ್ಳಿ ಹಳ್ಳಿಗಳಲ್ಲಿ ಇನ್ನೂ ಜೀವಂತವಿದೆ. ಆದರೆ, ಅವರು ನುಡಿಸುವುದು ಚೌಡಿಕೆ. ಏಕತಾರಿಯಾಗಿದ್ದರೂ ಅದು ತಂಬೂರಿಯಲ್ಲ.

ಉತ್ತರ ಕರ್ನಾಟಕದ ಬಹುತೇಕ ದೇವಸ್ಥಾನಗಳಲ್ಲಿ ಏಕತಾರಿಗಳನ್ನು ತೂಗಿಬಿಟ್ಟಿರುವುದು ಕಾಣುತ್ತೇವೆ. ಈಗ ಅದನ್ನು ನುಡಿಸುವ ಕಲಾವಿದರು ಮಾತ್ರ ಕಡಿಮೆಯಾಗಿದ್ದಾರೆ. ಪ್ರತಿ ಭಜನಾ ಪದ, ತತ್ವಪದಗಳಲ್ಲಿ ಏಕತಾರಿ ಮೊದಲೆಲ್ಲ ಇರುತ್ತಿತ್ತು. ಈಗ ಆ ಜಾಗವನ್ನು ಹಾರ್ಮೋನಿಯಂ ಹಾಗೂ ತಬಲಾ ಆವರಿಸಿಕೊಂಡಿವೆ.

ಗಾಂಧಿ ನೆಲದಲ್ಲಿ...

8ನೇ ಪುಟದಿಂದ...

ಊರಿನ ಗಂಡಸರು ಬಿಡಿ, ನಾವು ಮನೆಯ ಗಂಡಸರ ಎದುರೂ ಮಾತನಾಡುತ್ತಿರಲಿಲ್ಲ. ಈಗ ನಾಲ್ಕಾರು ಜನ ಗಂಡಸರು ಕುಳಿತಿದ್ದರೂ, ಅವರ ಎದುರು ಹೋಗಿ ನಿಂತು, ನಮ್ಮ ಅಭಿಪ್ರಾಯವನ್ನು ಧೈರ್ಯವಾಗಿ ವ್ಯಕ್ತಪಡಿಸುತ್ತೇವೆ, ಮಾತನಾಡುತ್ತೇವೆ. ನಾನು ಈಗ ಹೆದರೋದಿಲ್ಲ’ ಧ್ರಾಂಗದ್ರಾದ ಪಾಲೂಬೆನ್ ಕೈಯಾಡಿಸಿ, ಜೋರಾಗಿ ನಕ್ಕು ಹೇಳುತ್ತಿದ್ದಂತೆ ನಾಲ್ಕಾರು ಹೆಣ್ಣುಮಕ್ಕಳು ದನಿಗೂಡಿಸಿದರು: ‘ಅಬ್ ಹಮ್ ಕಿಸೀ ಸೇ ಡರ್‌ತೇ ನಹೀ’ (ಈಗ ನಾವು ಯಾರಿಗೂ ಹೆದರುವುದಿಲ್ಲ).

ತಾಲ್ಲೂಕು ಕಚೇರಿಗಳಲ್ಲಿ ಅಥವಾ ಬ್ಯಾಂಕಿನಲ್ಲಿ ಏನಾದರೂ ಕೆಲಸಗಳಿದ್ದರೆ ಈಗ ‘ಭಯ’ವಿಲ್ಲದೆ, ಒಬ್ಬೊಬ್ಬರೇ ಹೋಗಿ, ಅಧಿಕಾರಿಗಳೊಂದಿಗೆ ಮಾತನಾಡಿ ತಮ್ಮ ಕೆಲಸ ಮಾಡಿಸಿಕೊಳ್ಳುತ್ತಾರೆ. ಮನೆಯಿಂದ ಹೊರಗೆ ಕಾಲಿಡದಿದ್ದವರು ಇಂದು ಹಲವು ಬಾರಿ ವಿದೇಶಗಳಿಗೆ ಹೋಗಿ, ಸಮ್ಮೇಳನಗಳಲ್ಲಿ ಭಾಗಿಯಾಗಿದ್ದಾರೆ. ಬೇರೆ ರಾಜ್ಯಗಳಿಗೆ ಹೋಗಿ, ತಾವೂ ತರಬೇತಿ ತೆಗೆದುಕೊಂಡಿದ್ದಾರೆ. ಬೇರೆಯವರಿಗೂ ತೆರಬೇತಿ ಕೊಟ್ಟಿದ್ದಾರೆ.

‘ತಾಯಂದಿರಿಗೆ ದೊರೆತ ಈ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯ ಹಾಗೂ ಆರ್ಥಿಕ ಸ್ವಾವಲಂಬನೆಯಿಂದಾಗಿ ಕೌಟುಂಬಿಕ ಬದುಕಿನ ಒಟ್ಟಾರೆ ಚಿತ್ರಣವನ್ನು ಸಕಾರಾತ್ಮಕವಾಗಿ ಬದಲಾಯಿಸಿದೆ. ಮಗಳಿರಲಿ ಅಥವಾ ಮಗನಿರಲಿ, ಹೆಚ್ಚು ಓದಿಸುವುದಕ್ಕೆ ಸಾಧ್ಯವಾಗಿದೆ’ ಎಂದು ಸುರೇಂದ್ರನಗರದ ಜಿಲ್ಲಾ ಸಂಯೋಜನಾಧಿಕಾರಿ ಹೀನಾ ವಿವರಿಸುತ್ತಾರೆ.

ಈಗ ಮೊದಲಿನಂತೆ ತಮ್ಮ ಹೆಣ್ಣುಮಕ್ಕಳಿಗೆ ಹದಿನಾರು-ಹದಿನೇಳು ವರ್ಷಕ್ಕೆಲ್ಲ ಮದುವೆ ಮಾಡಲು ಬಿಡುವುದಿಲ್ಲ. ‘ಅವಳಿನ್ನೂ ಓದಲಿ, ಯಾಕಿಷ್ಟು ಬೇಗ ಮದುವೆ? ವರದಕ್ಷಿಣೆಗೆ ಕೊಡುವ ದುಡ್ಡಿನಲ್ಲಿ ಓದಿಸಬಹುದಲ್ಲ ಅಂತ ಹೇಳ್ತೀವಿ. ಸೇವಾದಲ್ಲಿ ಕೆಲಸ ಮಾಡುತ್ತ ನಮಗೀಗ ದೂಸರೀ ಆಜಾದಿ ಸಿಕ್ಕಿದೆ’ ಎಂದು ಜೆಸ್ಸಿಬೆನ್ ಚರ್ಚೆಯ ಕೊನೆಯಲ್ಲಿ ಆತ್ಮವಿಶ್ವಾಸದ ನಗು ಬೀರುತ್ತ ಹೇಳಿದಳು.

ಈ ಎಲ್ಲ ಮಹಿಳೆಯರು ಹದಿನೇಳು-ಹದಿನೆಂಟು ವರ್ಷಕ್ಕೆ ಮದುವೆಯಾಗಿ, ‘ಘೂಂಗಟ್’ ಹಿಂದೆ ಮುಖ ಮಾತ್ರವಲ್ಲ ತಮ್ಮ ವ್ಯಕ್ತಿತ್ವವನ್ನೇ ಮರೆಯಾಗಿಸಿಕೊಂಡವರು. ಜನಗಣತಿಯಲ್ಲಿ ‘ಕೆಲಸ ಮಾಡದವರು (ನಾನ್-ವರ್ಕರ್ಸ್)’ ಎಂಬ ಕಾಲಂ ಅಡಿಯಲ್ಲಿ ಗುರುತಿಸಿಕೊಂಡವರು. ಬಾಯಡ್ ತಾಲ್ಲೂಕಿನ ಗ್ರಾಮೀಣ ಭಾಗದ ಶೇ. 58ರಷ್ಟು ಮಹಿಳೆಯರನ್ನು 2001ರ ಜನಗಣತಿಯು ‘ಕೆಲಸ ಮಾಡದವರು (ನಾನ್-ವರ್ಕರ್ಸ್)’ ಎಂಬ ಕಾಲಂ ಅಡಿಯಲ್ಲಿ ಗುರುತಿಸಿದೆ. ಎರಡು ದಶಕಗಳ ಹಿಂದೆ ಮನೆಗೆಲಸ, ಆಗೀಗ ಹೊಲದ ಕೆಲಸ ಮತ್ತು ಮನೆಯಲ್ಲಿದ್ದುಕೊಂಡೇ ಕಸೂತಿಯಂತಹ ಚಿಕ್ಕಪುಟ್ಟ ಕೆಲಸ ಮಾಡುತ್ತಿದ್ದರೂ, ಗಣತಿಯ ಕಣ್ಣಿನಲ್ಲೂ ‘ನಾನ್-ವರ್ಕರ್ಸ್’ ಎಂಬ ಲೇಬಲ್ ಅಂಟಿಸಿಕೊಂಡ ಹೆಣ್ಣುಮಕ್ಕಳು ಇವರು. ಈ ಹಿನ್ನೆಲೆಯಲ್ಲಿ ನೋಡಿದಾಗ ಅವರು ಈಗ ದಕ್ಕಿಸಿಕೊಂಡಿರುವ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯ, ಆರ್ಥಿಕ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಬಹಳ ಮುಖ್ಯವೆನ್ನಿಸುತ್ತದೆ. ❖

ಹೊಸ ಸಂಸತ್...

8ನೇ ಪುಟದಿಂದ...

ಸಂಸದರ ಮಾತುಗಳು ಮಿಕ್ಕವರಿಗೆ ಅವರು ಬಲ್ಲ ಭಾಷೆಗಳಲ್ಲೇ ಭಾಷಾಂತರ ಡಿಸ್‌ಪ್ಲೇ ಮೂಲಕ ತಲುಪುತ್ತಾ ಇರುತ್ತದೆ. ಇಂಗ್ಲಿಷ್, ಹಿಂದಿ ಭಾಷೆಯನ್ನು ನಿರರ್ಗಳವಾಗಿ ಮಾತನಾಡಲು ಗೊತ್ತಿಲ್ಲದ ಸಂಸದರು ಇನ್ನು ಮುಂದೆ ಹಿಂಜರಿಕೆ ಪಡಬೇಕಿಲ್ಲ.

ಕಟ್ಟಡದ ಇತಿಹಾಸ: ಹಳೆಯ ಸಂಸತ್ ಕಟ್ಟಡ 100 ವರ್ಷಗಳಷ್ಟು ಪುರಾತನವಾದುದು. ಇದು ವಸಾಹತುಶಾಹಿ ಯುಗದ ಕಟ್ಟಡ. ಸಂಸತ್ ಸದಸ್ಯರು ಮತ್ತು ಸಿಬ್ಬಂದಿಗೆ ಸ್ಥಳಾವಕಾಶದ ಕೊರತೆ ಎದುರಾಗಿತ್ತು. ಅಲ್ಲದೆ, ಕಟ್ಟಡದ ಸ್ಥಿರತೆಯ ಬಗ್ಗೆ ಕೂಡ ಪ್ರಶ್ನೆ ಎದ್ದಿತ್ತು. ಸಾಕಷ್ಟು ಸಲ ದುರಸ್ತಿ, ಪುನರ್ ನಿರ್ಮಾಣ, ಸುಣ್ಣ-ಬಣ್ಣ ಎಲ್ಲವನ್ನೂ ಕಂಡಿತ್ತು. ಅದು ಭೂಕಂಪ–ನಿರೋಧಕವಲ್ಲದ ಕಟ್ಟಡವಾಗಿದ್ದು, ಅದರಲ್ಲಿ ಯಾವುದೇ ಮಾರ್ಪಾಡು ಮಾಡುವುದು ಅದರ ರಚನಾತ್ಮಕ ಸಮಗ್ರತೆಯೊಂದಿಗೆ ರಾಜಿ ಮಾಡಿಕೊಂಡಂತಾಗುತ್ತಿತ್ತು. ಆದ್ದರಿಂದ 2010ರ ಆರಂಭದಲ್ಲಿ ಹೊಸ ಕಟ್ಟಡ ನಿರ್ಮಾಣದ ವಿಷಯ ಪ್ರಸ್ತಾಪವಾಗಿತ್ತು. 2012ರಲ್ಲಿ ಅಂದಿನ ಸ್ಪೀಕರ್ ಮೀರಾ ಕುಮಾರ್ ಅವರು ಅಸ್ತಿತ್ವದಲ್ಲಿರುವ ಸಂಕೀರ್ಣವನ್ನು ಬದಲಿಸುವ ಪರ್ಯಾಯ ಆಯ್ಕೆಗಳ ಅನ್ವೇಷಣೆಗೆ ಸಮಿತಿಯೊಂದನ್ನು ರಚಿಸಿದರು. ಅದರ ಪರಿಣಾಮವಾಗಿ ಇಂದು ವ್ಯವಸ್ಥಿತ ಹಾಗೂ ವಿಶಾಲವಾದ ನೂತನ ಕಟ್ಟಡ ತಲೆಎತ್ತಿದೆ. ಇನ್ನೊಂದೆಡೆ, ಭಾರತದ ರಾಷ್ಟ್ರೀಯ ಪರಂಪರೆಯ ಸಂಕೇತವಾಗಿ ಹಳೆಯ ಕಟ್ಟಡವನ್ನು ಸಂರಕ್ಷಿಸಲು ಕೂಡ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಕಟ್ಟಡದ ವಾಸ್ತುಶಿಲ್ಪ: 1927ರಲ್ಲಿ ನಿರ್ಮಾಣಗೊಂಡಿದ್ದ ಹಿಂದಿನ ಸಂಸತ್ತಿನ ಕಟ್ಟಡವು ಮಿಟಾವೊಲಿಯಲ್ಲಿರುವ ಹಿಂದೂ ಯೋಗಿನಿ ದೇವಾಲಯದಿಂದ ಹೆಚ್ಚು ಪ್ರಭಾವಿತವಾಗಿತ್ತು. ಇದನ್ನು 1912 ಮತ್ತು 1913ರ ನಡುವೆ ಬ್ರಿಟಿಷ್ ವಾಸ್ತುಶಿಲ್ಪಿಗಳಾದ ಸರ್ ಎಡ್ವಿನ್ ಲುಟ್ಯೆನ್ಸ್ ಮತ್ತು ಸರ್ ಹರ್ಬರ್ಟ್ ಬೇಕರ್ ವಿನ್ಯಾಸಗೊಳಿಸಿದ್ದರು. ಈ ಕಟ್ಟಡ 1927ರಲ್ಲಿ ಪೂರ್ಣಗೊಂಡಿತ್ತು.

ಹೊಸ ಹಾಗೂ ಹಳೆಯ ಸಂಸತ್ ಭವನ

ಹೊಸ ಸಂಕೀರ್ಣವು ಷಡ್ಭುಜಾಕೃತಿಯ ಆಕಾರದಲ್ಲಿದೆ ಮತ್ತು ಹಳೆಯ ಕಟ್ಟಡದ ಸನಿಹದಲ್ಲಿಯೇ ಹೊಸ ಭವನ ಇದೆ. ಹಿಂದಿನ ವೃತ್ತಾಕಾರದ ಕಟ್ಟಡಕ್ಕೆ ಹೋಲಿಸಿದರೆ ಇದು ಗಾತ್ರದಲ್ಲಿ ಸಾಕಷ್ಟು ದೊಡ್ಡದಾಗಿದೆ. ಹಳೆಯ ಭವನ 24,291 ಚದರ ಮೀಟರ್ ಇದ್ದರೆ, ಹೊಸ ಭವನ 64,500 ಚದರ ಮೀಟರ್ ಇದೆ. ಹಳೆಯ ಕಟ್ಟಡದಲ್ಲಿ ಲೋಕಸಭೆಯಲ್ಲಿ ಸದಸ್ಯರ ಆಸನ ಸಾಮರ್ಥ್ಯ 543 ಹಾಗೂ ರಾಜ್ಯಸಭೆಯಲ್ಲಿ 250 ಇದ್ದರೆ, ನೂತನ ಭವನದಲ್ಲಿ ಲೋಕಸಭೆಯಲ್ಲಿ 888 ಆಸನಗಳು ಹಾಗೂ ರಾಜ್ಯಸಭೆಯಲ್ಲಿ 384 ಆಸನಗಳು ಇವೆ.

ಸಂಸತ್ ಭವನದಲ್ಲಿರುವ ವಸ್ತುಸಂಗ್ರಹಾಲಯದಲ್ಲಿ ವಿಶ್ವಪ್ರಸಿದ್ಧ ಹಂಪಿ ಸ್ಮಾರಕದ ಚಿತ್ರಗಳು ಕಂಗೊಳಿಸಲಿವೆ. ದೇಶದ ಇತಿಹಾಸ, ಸಾಂಸ್ಕೃತಿಕ ಹಿರಿಮೆಯನ್ನು ಪ್ರತಿನಿಧಿಸುವ ದೇಶದ ಪ್ರಮುಖ ಸ್ಮಾರಕಗಳು, ಕಟ್ಟಡಗಳ 3ಡಿ ಛಾಯಾಚಿತ್ರಗಳನ್ನು ಅಲ್ಲಿ ಅಳವಡಿಸಲಾಗುತ್ತದೆ. ವಸ್ತುಸಂಗ್ರಹಾಲಯದಲ್ಲಿ 12ನೇ ಶತಮಾನದ ‘ಅನುಭವ ಮಂಟಪ’ದ ಮಾದರಿಯೂ ಬರಲಿದೆ. ಈ ವಸ್ತುಸಂಗ್ರಹಾಲಯದಲ್ಲಿ ಎಲ್ಲ ರಾಜ್ಯಗಳ ಸಾಂಸ್ಕೃತಿಕ ಹಿರಿಮೆ ಗರಿಮೆಗಳನ್ನು ಪ್ರದರ್ಶಿಸಲಾಗುತ್ತದೆ. ❖

ಪದಬಂಧ 2810



ಮೇಲಿನಿಂದ ಕೆಳಕ್ಕೆ

1. ಯಾವುದಕ್ಕೂ ಹೆದರದ ಆಂತರ್ಯ ಬಲ 5
2. ಸರೋವರದಂತೆ ಸೇರುವ ಮಂದಿಯ ಅಂತರಂಗ 5
3. ಹಸುವಿನ ಕಾಲಡಿ ನಿಮಗಿದು ಸಿಗುತ್ತೆ 5
4. ಹಿಂದಿನಿಂದ ಮುಂದಕ್ಕೆ, ಮುಂದಿನಿಂದ ಹಿಂದಕ್ಕೆ ಪಲ್ಲಿ ಹೊಡೆದರೂ ಒಮ್ಮೊಮ್ಮೆ ಕೆಲಸವಾಗುವುದು ಕಷ್ಟ 5
6. ಒಂಭತ್ತು ಬಗೆಯ ಬಣ್ಣದ ವೇದಿಕೆ 4
10. ರಾಧೆ ಅನುಭವಿಸಿದ ಅಗಲಿಕೆಯ ನೋವು 3
11. ಸಂಸ್ಕೃತದ ಲೆಕ್ಕದಲ್ಲಿ ಒಂಭತ್ತನೆಯದು 3
12. ಬ್ರಷ್ ಆಡಿಸಿ ಮೂಡಿಸಿದ ಚಿತ್ರ ರಚನೆ 5
13. ಬಸ್ಸು, ರೈಲು, ವಿಮಾನಗಳಲ್ಲಿ ಜೊತೆಯಾಗಿ ಸಂಚಾರ 5
14. ಕಳೆದು ಹೋದ ಪ್ರಾಣ 4
15. ಹರಿಯುವ ನೀರಿಗಾಗಿ ನಡೆಯುವ ಜಗಳ 5
16. ಅಕ್ಟೋಬರ್ ಎರಡಕ್ಕೆ ಮಹಾತ್ಮನ ನೆನಪು 5

ಎಡದಿಂದ ಬಲಕ್ಕೆ

1. ಗುಂಪಿನ ಅರಸ - ಸಂವಿಧಾನದಂತೆ ಇದೀಗ ಭಾರತ ವ್ಯವಸ್ಥೆಯ ಮೂಲ 4
3. ಹತ್ತು ರೀತಿಯ ಮಂಗಳ ನೀರಾಜನ 4
5. ಇದು ಎಂದೆಂದಿಗೂ ಹೊಚ್ಚ ಹೊಸದು 5
7. ಹತ್ತು ಕೊಡುಗೆಗಳಲ್ಲಿ ಒಂದು ಕಡಿಮೆ 4
8. ಸೂರ್ಯನಿಂದ ಕಲೆಯನ್ನು ಪಡೆದ ಹೆಣ್ಣು 4
9. ಮತ್ತೆ ಮತ್ತೆ ಮೆಲುಕು ಹಾಕಬೇಕಿನಿಸುವ ಸುಂದರ ಸ್ವಪ್ನ 5
13. ಪತಿಯ ಜೊತೆಯಲ್ಲಿ ಹೋಗುವ ಸತಿ ಪದ್ಧತಿ 5
17. ಅಭಿಮನ್ಯು ಪ್ರವೇಶಿಸಿ ಮೋಸಕ್ಕೊಳಗಾದ ಗಾಲಿ ಜಾಲ 4
18. ಇದು ಅಲ್ಪವಲ್ಲ ಬಹು ಉದ್ದನೆಯ ಕಾಲ 4
19. ಮಥುರಾ, ದ್ವಾರಕಾ, ಬಿಹಾರಗಳಲ್ಲಿ ಪ್ರಬಲವಾಗಿರುವ ಕೃಷ್ಣ ಪಂಗಡ 5
20. ತನ್ನದೆಲ್ಲವನ್ನೂ ಅರ್ಪಿಸುವ ಭಾವ 4
21. ಕೈಯಲ್ಲಿ ಬರೆದ ಪ್ರಕಟಿತ ಸಾಹಿತ್ಯದ ಮೂಲ 4

ಪದಬಂಧ ಉತ್ತರ -2809

ಮೇಲಿಂದ ಕೆಳಕ್ಕೆ

1.ಕೈಗಾರಿಕೋದ್ಯಮ 2.ರಸಾತಲ 3.ಕಾರ 4.ವಿಜಯನಗರ 5.ದಯಾಮಯ 8.ಕಾಯಕಪ್ರವೇಶ 10.ಹೃದಯಕಮಲ 13.ತನುಮನಧನ 15.ಮರಾಠಸಂಸ್ಥಾನ 16.ಕಷ್ಟಜೀವಿ 18.ಕಿನ್ನುಮವಜೀ 21.ಜಾಲ

ಎಡದಿಂದ ಬಲಕ್ಕೆ

1.ಕೈದಾರ 3.ಕಾವೇರಿವಿವಾದ 6.ಸಾವಿರ 7.ಸಾರಿ 8.ಕಾಷಾಯ 9.ಕೋಮಲಹೃದಯ 11.ನತಯ 12.ಯಮತನಯ 14.ಪ್ರಚಾರಮಯ 16.ಕದೀಮ 17.ಮಹಾಶಕ್ತಿಪೀಠ 19.ನಕುಲ 20.ಸಂಚು 21.ಜಾದವ 22.ವಿಧಾನಮಂಡಲ 23.ಜೀವನ

ಕತ್ತಲೆಯ ಗಾಳಿಯಂತಹ ಫೊಸ್ಸೆ ಕೃತಿಗಳು

ಕರುಣಾಕರನ್
ಕನ್ನಡಕ್ಕೆ: ಎ.ಕೆ. ರಿಯಾಝ್ ಮೊಹಮ್ಮದ್

2023ರ ಸಾಹಿತ್ಯದ ನೊಬೆಲ್ ಪ್ರಶಸ್ತಿ ಪುರಸ್ಕೃತ ನಾಟಕಕಾರ ಹಾಗೂ ಲೇಖಕ ಯೋನ್ ಫೊಸ್ಸೆ ಮೌನವನ್ನೂ ಸಶಕ್ತ ಸಂವಹನ ಆಗಿಸಿದವರಲ್ಲಿ ಒಬ್ಬರು. ಮಲಯಾಳದ ಸಾಹಿತಿ ಕರುಣಾಕರನ್ ಸ್ವಗತದಂಥ ಶೈಲಿಯಲ್ಲಿ ಫೊಸ್ಸೆ ಅವರ ಕುರಿತು ಕಟ್ಟಿಕೊಟ್ಟಿರುವ ಬರಹ ಇದು.

'ಚೆನ್ನಾಗಿ ಸಂವಹನ ಮಾಡಲು ಸಾಧ್ಯವಾದರೆ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಬಹುದೆನ್ನುವುದು ನಮ್ಮ ಭ್ರಮೆಯೆಂದೇ ನಾನು ಭಾವಿಸುತ್ತೇನೆ' ಯೋನ್ ಫೊಸ್ಸೆ ಒಂದು ಸಂದರ್ಶನದಲ್ಲಿ ಹೇಳುತ್ತಾರೆ. ''ಯಾವುದು ಒಂದು ಸಂವಹನದ ವಿರುದ್ಧವಾಗಿ ಇರುವುದೊ ಅದನ್ನು ಕಲೆ ಅಂತ ಹೇಳಬಹುದು' ಎಂದು ಜರ್ಮನ್ ತತ್ವಜ್ಞಾನಿ ಅಡೋರ್ನೊ ಹೇಳಿದ್ದಾರೆ. ಅವರು ಹೇಳುವುದರಲ್ಲಿಯೇ ಒಂದು ವಿಷಯ ಅಂತರ್ಗತವಾಗಿದೆ. ಆ ವಿಷಯಕ್ಕೂ ಬದುಕಿಗೂ ಏನೋ ಒಂದು ಸಂಬಂಧವಿರುವುದಂತೂ ನಿಜ'– ನಾರ್ವೀಜಿಯನ್ ಬರಹಗಾರ ಫೊಸ್ಸೆ ಅವರ ಈ ತೀರ್ಮಾನವನ್ನು ಒಪ್ಪಿಕೊಂಡರೆ, ಕಲೆಯನ್ನು ಗ್ರಹಿಸುವ ನಿಟ್ಟಿನ ನಮ್ಮ ಚರ್ಚೆಗಳು ಬೇರೆ ದಿಕ್ಕಿನತ್ತ ಸಾಗಬಹುದು. ಆದರೆ, ಕಲೆ ಮತ್ತು ಸಾಹಿತ್ಯ ಉಪಯುಕ್ತವಾದ ಬೇರೆ ಯಾವುದೋ ಸಂಗತಿಗಳು ಎಂದು ತಪ್ಪಾಗಿ ಗ್ರಹಿಸಿದರೆ ಫೊಸ್ಸೆ ಅವರ ಈ ಅಭಿಪ್ರಾಯ ವಿವಾದಾತ್ಮಕ ಹೇಳಿಕೆಯಾಗುತ್ತದೆ.

ಕೆಲವು ವರ್ಷಗಳ ಹಿಂದೆ ಕವಿ ಮತ್ತು ಅನುವಾದಕ ಸಚ್ಚು ಥಾಮಸ್ ನನಗೆ ಬರೆದರು: 'ಯೋನ್ ಫೊಸ್ಸೆ ಅವರ Scenes From A Childhood ಮಲಯಾಳದ ಎಲ್ಲಾ ಕತೆಗಾರರು ಓದಲೇಬೇಕಾದ ಪುಸ್ತಕವಾಗಿದೆ. ಇನ್ನೊಂದು ಸಂದರ್ಭದಲ್ಲಿ ಕತೆಗಾರರಾದ ಸುರೇಶ್ ಪಿ. ಥಾಮಸ್ ನನಗೆ ಫೊಸ್ಸೆ ಬಗೆಗಿನ ಒಂದು ಪುಸ್ತಕ ಕಳುಹಿಸಿದರು. ನನ್ನ ಈ ಯುವ ಗೆಳೆಯರು ನಮ್ಮ ಸಾಹಿತ್ಯವನ್ನು 'ಮುಂಗಾಣಬಲ್ಲರು' ಮಾತ್ರವಲ್ಲ, ಮಲಯಾಳದ ಕಲ್ಪನೆಯಲ್ಲಿ ತಮ್ಮ ವಿಶಿಷ್ಟವಾದ ಒಳಗೊಳ್ಳುವಿಕೆಯಿಂದಾಗಿ ವಿಭಿನ್ನ ಓದಿನ ಅನುಭವವನ್ನು ಕೂಡ ನೀಡಬಲ್ಲವರು. ಫೊಸ್ಸೆ ನನ್ನ ಮೆಚ್ಚಿನ ಬರಹಗಾರರಲ್ಲಿ ಒಬ್ಬರಾದದ್ದು ಈ ಗೆಳೆಯರಿಂದ. ಬಾಲ್ಯ ಮತ್ತು ಯೌವನದ ನೆನಪುಗಳನ್ನು ಕಲೆಯಲ್ಲಿ ಕದಡುವ ಯಾರಿಗೇ ಆಗಲಿ ಈ ಬರಹಗಾರರನ್ನು ಇಷ್ಟಪಡಲು ಕಾರಣಗಳು ಇರಬಹುದು. ಚೆನ್ನಾಗಿ ಸಂವಹನ ನಡೆಸಿದರಷ್ಟೆ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಬಹುದು ಎನ್ನುವುದೇ ಒಂದು ಭ್ರಮೆ ಎಂದು ನೀವು ನಂಬಬೇಕು.

'ಸಮುದ್ರದ ಬಗ್ಗೆ ಏನೂ ತಿಳಿದಿಲ್ಲದ ಮೀನಿನ ಕತೆ'- ನಾರ್ವೀಜಿಯನ್ ಸಂಸ್ಕೃತಿಯಲ್ಲಿನ ತನ್ನ ಸಾಹಿತ್ಯದ ಬಗ್ಗೆ ಯೋನ್ ಫೊಸ್ಸೆ ಹೀಗೆ ಹೇಳುತ್ತಾರೆ. ನಾರ್ವೀಜಿಯನ್ನರು ಹೆಚ್ಚು ಮಾತನಾಡದ, ಮೌನವಾಗಿರಲು ಇಷ್ಟಪಡುವ ಜನರಂತೆ. ತಮ್ಮ ನಾಟಕಗಳು ಕೂಡ ಹಾಗೆಯೇ ಎಂದು ಫೊಸ್ಸೆ ಹೇಳುತ್ತಾರೆ.

'ಹೆಚ್ಚು ಮಾತನಾಡದ ಬರವಣಿಗೆ'ಯು ಸಾಹಿತ್ಯ ಮಾತ್ರವಲ್ಲದೆ ಭಾಷೆ ಮತ್ತು ಮಾಧ್ಯಮದ ಸಾಧ್ಯತೆಯೂ ಆಗಿದೆ. ಸ್ವಾರಸ್ಯಕರ ಮತ್ತು ವಿಷಾದವಾದ ಮನುಷ್ಯಸ್ಥಿತಿಯನ್ನು ಬರವಣಿಗೆಯಲ್ಲಿ ಮೂಡುವಂತೆ ಮಾಡುವುದೇ ಇಂತಹ ಬರವಣಿಗೆ. ಹೆಚ್ಚು ಮಾತನಾಡದ ವ್ಯಕ್ತಿಯೇ ಅಲ್ಲವೇ ಥಟ್ಟನೆ ಗಮನಸೆಳೆಯುವುದು? ಯೋನ್ ಫೊಸ್ಸೆ ಅವರ ಬರವಣಿಗೆ ಮೇಲೆ ನನಗೆ ಇರುವುದು ಇಂತಹ ಪ್ರೀತಿಯೇ. ಕೆಲವು ನಾಟಕಗಳು, ಕೆಲವು ಕತೆಗಳು, ಕೆಲವು ಕಾದಂಬರಿಗಳ ಮೂಲಕ ಫೊಸ್ಸೆ ಅವರ ಬರವಣಿಗೆಯನ್ನು ಪರಿಚಯಿಸುವ ಯಾರೂ ಅವುಗಳಲ್ಲಿ ಇರುವ 'ಖಾಲಿ ಜಾಗಗಳನ್ನು' ಗಮನಿಸಿರುತ್ತಾರೆ. ಅಲ್ಲೊಂದು ದ್ರವೀಕೃತ ನಿಶ್ಶಬ್ದ ಕಾಡುತ್ತದೆ. ಕಟ್ಟಿ ನಿಂತಿರುವ ಒಂದನ್ನು-ಅದು ಏನೇ ಇರಲಿ, ಕೆಲವೊಮ್ಮೆ ಸ್ಮರಣೆ, ಕೆಲವೊಮ್ಮೆ ದುಃಖ, ಕೆಲವೊಮ್ಮೆ ಪ್ರೀತಿ, ಹೀಗೆ ಏನೂ ಆಗಬಹುದು- ಮನುಷ್ಯಸ್ಥಿತಿಯ ದೃಷ್ಟಿಯಾಗಿ ರೂಪಾಂತರಗೊಳಿಸುತ್ತದೆ. ಕಟ್ಟಿ ನಿಂತಿರುವ ಒಂದನ್ನು ಮುರಿಯಲು ಇಚ್ಛಿಸುತ್ತದೆ.

ಅವರ Scenes From A Childhood ಎಂಬ ಕಥಾ ಸಂಕಲನದಲ್ಲಿ ಒಂದು ನೀಳ್ಗಥೆಯಿದೆ, And Then My Dog will Come Back to me ಎಂಬ ಹೆಸರಿನಲ್ಲಿ. ಒಂದು ನಾರ್ವೀಜಿಯನ್ ಹಳ್ಳಿಯ ಒಬ್ಬ ವ್ಯಕ್ತಿ ತನ್ನ ಸಾಕುನಾಯಿಯನ್ನು ಕೊಂದಿದ್ದಕ್ಕಾಗಿ ನೆರೆಯವನನ್ನು ಕೊಲ್ಲುತ್ತಾನೆ. ಈ ಎರಡೂ ಕೊಲೆಗಳು- ನಾಯಿಯ ಮತ್ತು ನೆರೆಯವರ-ನಿಜಕ್ಕೂ ಸಂಭವಿಸಿವೆಯೇ ಎಂದು ನಿರ್ದಿಷ್ಟವಾಗಿ ಹೇಳದ ನಿರೂಪಣೆಯ ಮೂಲಕ ಕತೆಯನ್ನು ಕಟ್ಟುತ್ತಾರೆ. ನೆನಪಿನ ಅಥವಾ ಒಂದು ಘಟನೆಯ ವಿವರಣೆ, ಅದರ ಅಂಚುಗಳನ್ನು ಬಿಡುಗಡೆ ಮಾಡುವ ಕ್ರಮ ಇದು. ಕತೆಯ ಆರಂಭದಿಂದ ಅಂತ್ಯದವರೆಗೆ ನಾವು ಪ್ರಯಾಣಿಸುವುದು ಒಂದು ಅನಿಶ್ಚಿತತೆಯೊಂದಿಗೆ. ಆದರೆ, ಅಂತಹ ಒಂದು ಸಂದರ್ಭದಲ್ಲಿ ಕೂಡ, ಈ ಎರಡೂ ಅಪರಾಧಗಳ ಸಾಧ್ಯತೆಯನ್ನು–ಮನುಷ್ಯ ಮತ್ತು ಓದುಗನಾಗಿ–ನಮಗೆ ತೆರೆದಿಡುತ್ತದೆ. ಒಂದು ಕತೆಯನ್ನು ಓದಲು ಯೋಗ್ಯತೆ ಪಡೆಯುವುದನ್ನು ಮತ್ತು ಒಂದು ಅಪರಾಧಕ್ಕೆ ಸಾಕ್ಷಿಯಾಗುವುದನ್ನು ತುಂಬಾ ಸಹಜವಾಗಿಯೂ, ಕೆಲವೊಮ್ಮೆ ಜೀವನದ ಘಟನೆಯೆಂಬಂತೆಯೂ ನಾವು ಅನುಭವಿಸುತ್ತೇವೆ. 'ನಾನು ಎಂದಿಗೂ ಅವನನ್ನು ಇಷ್ಟಪಡಲಿಲ್ಲ' ಎಂಬ ಮಾತನ್ನು, ಕತೆಯಲ್ಲಿ ನಡೆಯುವ ಕೊಲೆಗೆ ಕಾರಣ ಅದೊಂದಷ್ಟೆ ಎಂದು ನಾವು ಅರ್ಥಮಾಡಿಕೊಳ್ಳುತ್ತೇವೆ ಅಥವಾ ಅದು ಹುಚ್ಚು ಹುಚ್ಚು ಮಾತಾಗಿ ಮುಂದುವರಿಯುವ ಸ್ವಗತದಂತೆ ಕಾಣಿಸುತ್ತದೆ.

ಯೋನ್ ಫೊಸ್ಸೆ

Scenes From A Childhood ಖಂಡಿತವಾಗಿಯೂ ಮತ್ತೊಂದು ಸುಂದರವಾದ ಕತೆ. ಇದು ಬಾಲ್ಯವನ್ನು ಜೀವನದ ಆಸ್ತಿಯನ್ನಾಗಿ ಮಾಡಿಬಿಡುತ್ತದೆ. ಹಲವಾರು ತುಣುಕುಗಳಲ್ಲಿ ಸಣ್ಣ ಸಣ್ಣ ಟಿಪ್ಪಣಿಗಳಂತೆ ಈ ಕತೆಯನ್ನು ಬರೆಯಲಾಗಿದೆ; ಭಾಷೆಯೂ ಸರಳ. 'ನಮ್ಮ ಜೀವನದಲ್ಲಿ ಅತ್ಯಂತ ಮುಖ್ಯವಾದದ್ದು ಕಾಣೆಯಾಗಿದೆ ಎಂದೇ ನಾನು ಅರ್ಥಮಾಡಿಕೊಂಡಿದ್ದೇನೆ. ಹಾಗಾಗಿ ಒಂದು ಕ್ರಾಂತಿಯ ಅಗತ್ಯವಿದೆ' ಈ ಎರಡು ಸಾಲುಗಳಿರುವ ಒಂದು ತುಣುಕು ಕೂಡ ಈ ಕತೆಯಲ್ಲಿ ಇದೆ. 1987 ಮತ್ತು 2013ರ ನಡುವೆ ಬರೆದ ಕತೆಗಳ ಮತ್ತು ಒಂದು ಕಿರು ಕಾದಂಬರಿಯ ಸಂಗ್ರಹವಾಗಿದೆ Scenes from a Childhood ಎಂಬ ಪುಸ್ತಕ.

ವಾಸ್ತವದಲ್ಲಿ, ಮೊದಲು ನಾನು ಓದಿದ್ದು ಯೋನ್ ಫೊಸ್ಸೆ ಅವರ ಕೆಲವು ನಾಟಕಗಳನ್ನು. ಅವರ ಕತೆಗಳಲ್ಲಿಯೂ ಅಲಂಕಾರವಿಲ್ಲದ ಭಾಷೆ ಮತ್ತು ಸಣ್ಣ ನಾಟಕೀಯ ಕ್ರಿಯೆ ಮಿಳಿತವಾಗಿರುವುದನ್ನು ಆಮೇಲೆ ಗಮನಿಸಿದೆ. ಹೀಗಾಗಿಯೇ ಅವೂ ವಿಶಿಷ್ಟ ಬರಹಗಳಾಗಿವೆ. 'ರಂಗಭೂಮಿಯಲ್ಲಿ ನಾವೆಲ್ಲ ಬೇರೆಯವರ ಕೈಗೊಂಬೆಗಳು, ಜೀವನದಲ್ಲಿಯೂ ಹಾಗೆಯೇ' ಎಂದು ಯೋನ್ ಫೊಸ್ಸೆ ಹೇಳುತ್ತಾರೆ. ನಾರ್ವೀಜಿಯನ್ನರ ಮೌನವನ್ನು ಘನೀಭೂತವಿಸಿಕೊಂಡೇ ಅವರು ಬರೆಯುತ್ತಿರುವುದನ್ನೂ ಅವರ ಸಾಹಿತ್ಯದಲ್ಲಿ ಗುರುತಿಸಬಹುದು.

ಅವರ ಕೆಲವು ನಾಟಕಗಳನ್ನು (Plays Six) ಮತ್ತು ಕೆಲವು ಕತೆಗಳನ್ನು ನಾನು ಒಂದೇ ಕಾಲಘಟ್ಟದಲ್ಲಿ ಓದಿದ್ದೆ. ಕೋವಿಡ್‌ನ ಮೊದಲ ಲಾಕ್‌ಡೌನ್ ಕಾಲದಲ್ಲಿ ಫೊಸ್ಸೆ ಅವರ ಎರಡು ಪುಸ್ತಕಗಳನ್ನು ಓದಿದೆ. ಬದುಕಿನಂತೆ ಸಾಹಿತ್ಯವೂ ಕ್ಷುಲ್ಲಕ ಎನಿಸಿದ್ದ ಆ ದಿನಗಳಲ್ಲಿ ಫೊಸ್ಸೆಯ ಬರಹಗಳು ನನಗೆ ಒಂದು ಅಸಾಮಾನ್ಯವಾದ ಅನುಭವವನ್ನು ನೀಡಿದ್ದವು.

ಅಲಂಕಾರವಿಲ್ಲದ ಹೆಜ್ಜೆಗಳೊಡನೆ ಆದಿಮ ನೃತ್ಯವೊಂದು ಸಾಗುತ್ತಿರುವಂತೆ ಅವರ ಸಾಹಿತ್ಯ ತೋರುತ್ತದೆ. ಕೆಲವೊಮ್ಮೆ ಮಹಡಿಯಲ್ಲಿ ನಿರಂತರವಾಗಿ ಕಾಣುವ ಒಬ್ಬ ವ್ಯಕ್ತಿಯ ಅಗಲುವಿಕೆಯ ನೋಟವೂ ನಮ್ಮೊಳಗೆ ಯಾವುದೋ ಹುಡುಕಾಟವನ್ನು ಮೂಡಿಸುವಂತೆ ಭಾಸವಾಗುತ್ತದೆ.

ಫೊಸ್ಸೆ ಅವರ ನಾಟಕಗಳು ಸ್ಯಾಮ್ಯುಯೆಲ್ ಬೆಕೆಟ್‌ನ ಮುಂದುವರಿಕೆ ಎಂದು ಹೇಳಲಾಗುತ್ತದೆ. ಘನೀಭೂತವಿಸುವ ಪಾತ್ರಗಳು ಮತ್ತು ಸಣ್ಣದಾಗಿ ಮುರಿಯುವ ಸಂಭಾಷಣೆಗಳು ಬೆಕೆಟ್‌ನಲ್ಲಿರುವಂತೆ ಈ ನಾಟಕಗಳಲ್ಲಿಯೂ ಇವೆ. ಅವರ ನಾಟಕಗಳೂ ಆ ಭಾಷೆಯ ಅನುಭವವನ್ನು ನೆನಪಿಸುತ್ತವೆ. ರಂಗಭೂಮಿಯ ಬಗ್ಗೆ ಫೊಸ್ಸೆ ಹೀಗೆ ಹೇಳುತ್ತಾರೆ: Theatre is very old-fashioned art form. It existed before capitalism, before communism, before industrialism, before mass production. Perhaps because it is pre-modern, theatre feels right for our times.

ಫೊಸ್ಸೆ ಅವರ ಬರಹಗಳಲ್ಲಿ ಸಮಕಾಲೀನವಾದದ್ದು ಹರಿದುಹೋಗಿದೆ ಅಥವಾ ಸಂಪೂರ್ಣವಾಗಿ ಉಪೇಕ್ಷೆಗೆ ಒಳಗಾಗಿದೆ ಎಂದು ಇನ್ನೊಬ್ಬರು ನಾರ್ವೀಜಿಯನ್ ಬರಹಗಾರರಾದ ಕಾರ್ಲ್ ಓವ್ ಕ್ನಾಸ್‌ಗಾರ್ಡ್ (Karl Ove Knausgaard) ಹೇಳುತ್ತಾರೆ: 'ಅವರ ರಚನೆಗಳು ಯಾವಾಗಲೂ ಸಾವನ್ನು ಸಮೀಪಿಸುತ್ತವೆ ಮತ್ತು ಒಂದು ರೀತಿಯ ಅಸ್ತಿತ್ವವಾದದ 'ಗ್ರೌಂಡ್ ಝೀರೋ'ವನ್ನು ಕಂಡುಹಿಡಿಯುತ್ತವೆ. ಆದರೂ, ಎಂದಿಗೂ ನಿರಾಶೆಗೊಳಿಸುವುದಿಲ್ಲ, ಅವು ದುರುದ್ದೇಶಪೂರಿತವೂ ಆಗಿಲ್ಲ'.

ಫೊಸ್ಸೆ ಅವರ ಬಗೆಗೆ ಹೇಳಿದಷ್ಟೂ ಮುಗಿಯುವುದೇ ಇಲ್ಲ. ಆದರೆ ಈಗ ಒಂದು ಮುಂಜಾನೆ ಕಂಡ ಕನಸನ್ನು ಹೇಳಲು ಬಯಸುತ್ತೇನೆ. ಅದಕ್ಕೂ ಈ ಬರಹಕ್ಕೂ ಏನೇನೂ ಸಂಬಂಧವಿಲ್ಲ. ದಾರಿ ತಿಳಿಯದೆ ತಲುಪುವ ಪ್ರಯಾಣ ಅದೆಂದು ಭಾವಿಸಿದರೆ ಸಾಕು. ಇದುವೇ ಆ ಕನಸು: 'ನಾನು ಒಂದು ಚಿಕ್ಕ ಮಗುವಿನೊಂದಿಗೆ ಮರದ ಕುರ್ಚಿಯ ಮೇಲೆ ಕುಳಿತಿದ್ದೇನೆ. ಕುರ್ಚಿ ನಿಧಾನವಾಗಿ ಹಿಂದಕ್ಕೆ ಬಾಗಲಾರಂಭಿಸುತ್ತದೆ. ನೋಡು, ನಾವಿಬ್ಬರೂ ಈಗ ಬೀಳುತ್ತೇವೆ ಎಂದು ನಾನು ಮತ್ತು ಅವಳು ಎಡೆಬಿಡದೆ ನಗುತ್ತಿದ್ದೇವೆ. ಬೀಳಬಹುದಾದ ಆಳ, ಬೀಳುವಿಕೆಯ ಪರಿ ಆವರಿಸಿ ಎರಡು ನಗೆಗಳು ಕದಡುವ ಸದ್ದು ಕೇಳಿಸುತ್ತದೆ'.

ನಾನು ಯೋನ್ ಫೊಸ್ಸೆ ಬಗ್ಗೆ ಈ ಬರಹವನ್ನು ಬರೆಯುವಾಗಲೂ, ನಮ್ಮ ಬೀಳುವಿಕೆ ನನಗೆ ನಗು ತರಿಸುತ್ತದೆ. ಪ್ರಿಯವಾದ ಏನೋ ಒಂದು, ಈಗ ಕೈಗೆ ಸಿಗುತ್ತದೆ. ಬಹುಶಃ ಈ ಪುಸ್ತಕಗಳ ನೆನಕೆಯೇ ಜೊತೆಗಿರುವ ಬೀಳುವಿಕೆಯೂ ಆಗಿರಬಹುದು! ❖

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಕುವೆಂಪು ಹಲವು ಹೊಸ ಪದಗಳನ್ನು ಪ್ರಯೋಗಿಸಿದ್ದಾರೆ. ಅವುಗಳ ಅರ್ಥ–ವ್ಯಾಕರಣದ ಮೇಲೆ ಬೆಳಕು ಚೆಲ್ಲುವ ಸ್ಥಿರಶೀರ್ಷಿಕೆ ಇದು.

ನಿಡುವೊಸಗೆ

ನಿಡುವೊಸಗೆ (ನಾ). (ಮದುವೆಯ) ದೊಡ್ಡ ಉತ್ಸವ, ಮೆರವಣಿಗೆ.

[ನಿಡು (< ನಿಡಿದು) + ಒಸಗೆ]

'ನಿಡಿದು' ಎಂಬುದಕ್ಕೆ ಸಮಾಸಗಳಲ್ಲಿ ಬರುವ ಆದೇಶರೂಪ 'ನಿಡು'.

ಸೀತೆಯನ್ನು ವರಿಸಿದ ರಾಮಚಂದ್ರನೊಡನೆ ಅವನ ಮೂರು ಜನ ಸಹೋದರರು ಸೀತೆಯ ಮೂರು ಜನ ತಂಗಿಯರನ್ನು ವಿವಾಹವಾಗುವರು. ಅವರೆಲ್ಲರ ಮದುವೆಯ ಮೆರವಣಿಗೆ ಅದ್ದೂರಿಯಾಗಿ ಅಯೋಧ್ಯೆಗೆ ಹೋಗುತ್ತಿರುತ್ತದೆ. ಆ ಅತಿ ಉದ್ದನೆಯ ವಿಸ್ತಾರವಾದ ಶುಭಮಂಗಳ ಸಂತೋಷ ಉತ್ಸವದ ಭಾವವಾಹಕವಾಗಿ ಕುವೆಂಪು ಅವರು 'ನಿಡುವೊಸಗೆ' ಹೊಸ ನುಡಿ ನಿರ್ಮಿಸಿ ಪ್ರಯೋಗಿಸಿದ್ದಾರೆ.

ಜನಕ ನೃಪನಂ ಮರಳಿ
ಮಿಥಿಲಾಪುರಿಗೆ ಬೀಳುಕೊಟ್ಟು, ದೊರೆವಟ್ಟೆಯಂ
ಪಿಡಿದು ಮಂಗಳವರೆಯ ನಾದಕ್ಕೆ ನಡೆನಡೆಯೆ
ನಿಡುವೊಸಗೆ.

ಮಹೋಪಮೆ

ಕುವೆಂಪು ಅವರು ಪುರಾಣಕವಿ ಹೋಮರನು ತನ್ನ ಕಾವ್ಯದಲ್ಲಿ ಮೊಟ್ಟ ಮೊದಲಿಗೆ ಮಹೋಪಮೆಗಳನ್ನು ಪ್ರಯೋಗಿಸಿರುವುದನ್ನು ತಿಳಿದರು. ಅದನ್ನು 'ಹೋಮರೋಪಮೆ' ಎಂದು ಕರೆಯುವರು. ಅಂತಹ ಮಹೋಪಮೆಯ ಪ್ರಯೋಗ ನಮ್ಮ ಭಾರತೀಯ ಕಾವ್ಯಗಳಲ್ಲಿ ಇಲ್ಲ. ಕುವೆಂಪು ಅವರು ಪ್ರಥಮ ಬಾರಿಗೆ ಮಹೋಪಮೆಯನ್ನು 'ಚಿತ್ರಾಂಗದಾ' ಕಾವ್ಯದಲ್ಲಿ ಪ್ರಯೋಗಕ್ಕೆ ತಂದರು. ಅದನ್ನು 'ಶ್ರೀ ರಾಮಾಯಣದರ್ಶನಂ ಮಹಾಕಾವ್ಯ'ದಲ್ಲಿ ವಿಪುಲವಾಗಿ ಬಳಸಿದರು.

ಅವರೇ ಹೇಳುವಂತೆ 'ಮಹೋಪಮೆ ಎಂದರೆ ಮಹಾ ಉಪಮೆ. ಮಹಾ ಎಂದರೆ ದೀರ್ಘ ಎಂದಷ್ಟೇ ಅರ್ಥವಾಗದಿದ್ದರೂ ದೀರ್ಘತೆಯೂ ಅದಕ್ಕೊಂದು ಅನಿವಾರ್ಯವಾದ ಆತ್ಮ ಲಕ್ಷಣ... ಮಹಾಕಾವ್ಯಗಳಲ್ಲಿ ಮಾತ್ರ ಮಹೋಪಮೆ ಒಪ್ಪುತ್ತದೆ... ಮಹೋಪಮೆಯಲ್ಲಿ ಪರಿಣಾಮ ರಮಣೀಯತೆಯೆ ಅಗ್ರಗಣ್ಯಫಲ ಮತ್ತು ಪರಮಗಮ್ಯ... ಪಾಶ್ಚಾತ್ಯರಲ್ಲಿ ಮಹೋಪಮೆ ಒಂದು ವಿಶೇಷಕಲೆಯಾಗಿ ಪರಿಣಮಿಸಿದೆ... ನಮ್ಮ ಕಾವ್ಯದೇವಿಗೆ ಪಾಶ್ಚಾತ್ಯ ಕಾವ್ಯದೇವಿಯಿತ್ತ ಹೊಸ ಕಾಣಿಕೆ- ಮಹೋಪಮೆ.'

ಮೊದಲ ಓದು

ಯೂರೋಪ್ ದರ್ಶನ ಮಾಡಿಸುವ ಕೃತಿ

ಲೇಖಕಿ ಉಮಾದೇವಿ ಉರಾಳ ಅವರ ಯೂರೋಪ್, ಚೀನಾ, ಸ್ಕಾಂಡಿನೇವಿಯಾ, ಈಶಾನ್ಯ ಭಾರತದ ಪ್ರವಾಸ ಕಥನದ ಗುಚ್ಛವೆ 'ಬಾನಾಡಿ ಕಂಡ ಬೆಡಗು'. ಈ ಸ್ಥಳಗಳಿಗೆ ಪ್ರವಾಸ ಹೋಗಲು ಬಯಸುವ ಪ್ರವಾಸಿಗರಿಗೆ ಕೈಪಿಡಿಯಂತಿರುವ ಕೃತಿ, ಲೇಖಕಿಯ ಅನನ್ಯ ಅನುಭವಗಳ ಮೂಟೆಯೂ ಹೌದು. ಒಟ್ಟು 19 ಲೇಖನಗಳು ಈ ಪುಸ್ತಕದಲ್ಲಿವೆ. ಇಂಗ್ಲೆಂಡಿನ ರಾಜಧಾನಿ ಲಂಡನ್ನಿನ ಪ್ರವಾಸ ಲೇಖನದೊಂದಿಗೆ ಕೃತಿ ಪ್ರಾರಂಭವಾಗುತ್ತದೆ. ಪ್ಯಾರಿಸ್, ಬ್ರಸೆಲ್ಸ್, ಹಾಲೆಂಡ್, ಜರ್ಮನಿ, ಸ್ವಿಟ್ಜರ್ಲೆಂಡ್ ಮೊದಲಾದ ದೇಶಗಳ ಬದುಕು, ಬವಣೆಯನ್ನು ಕಟ್ಟಿಕೊಡುತ್ತ ಸೊಬಗನ್ನು ವರ್ಣಿಸುತ್ತದೆ.

'ಉಮಾದೇವಿಯವರು ಈ ಕೃತಿಯಲ್ಲಿ ನಾಲ್ಕು ಹಂತದ ತಮ್ಮ ಪ್ರವಾಸವನ್ನು ಮುಂದಿಡುತ್ತಾರೆ. ಯುನೈಟೆಡ್ ಕಿಂಗ್‌ಡಂ ಮತ್ತು ಮಧ್ಯ ಯೂರೋಪಿನ ಪ್ರವಾಸ, ಸ್ಕಾಂಡಿನೇವಿಯಾ ಪ್ರವಾಸ, ಚೀನಾ ಪ್ರವಾಸ ಮತ್ತು ಕೊನೆಯದೆಂಬಂತೆ ನಮ್ಮದೇ ಆದ ಸಪ್ತ ರಾಜ್ಯಗಳಾದ ಅಸ್ಸಾಂ, ಮೇಘಾಲಯ, ಮಿಜೋರಾಂ,ನಾಗಾಲ್ಯಾಂಡ್, ತ್ರಿಪುರ,ಮಣಿಪುರ, ಅರುಣಾಚಲ ಪ್ರದೇಶ ಹಾಗೂ ಕೊನೆಯದಾಗಿ ಮಯನ್ಮಾರಿನ ತಮು ಇವುಗಳ ಪರಿಚಯ ಮಾಡಿಕೊಡುತ್ತಾರೆ. ಈಶಾನ್ಯ ರಾಜ್ಯಗಳ ಪರಿಚಯವನ್ನು 'ಸಪ್ತ ಸೋದರಿಯರ ಮಡಿಲಲ್ಲಿ' ಎಂದು ಕರೆದು ಪರಿಚಯ ಮಾಡಿಕೊಡುವುದು ಅರ್ಥಪೂರ್ಣ ಎನಿಸುತ್ತದೆ' ಎಂದು ನಾ.ಡಿಸೋಜ ಕೃತಿಯ ಮುನ್ನುಡಿಯಲ್ಲಿ ಬರೆದಿದ್ದಾರೆ.

ಕೃತಿಯಲ್ಲಿ ಲೇಖಕಿ ಸ್ಥಳದ ಜೊತೆಗೆ ಅವುಗಳ ಇತಿಹಾಸ, ಅಲ್ಲಿನ ಸಂಸ್ಕೃತಿಯನ್ನು ಪರಿಚಯಿಸುವ ಯತ್ನ ಮಾಡುತ್ತಾರೆ. ಆ ದೇಶಗಳ ಕುರಿತು ಇರುವ ತಪ್ಪು ಕಲ್ಪನೆಗಳನ್ನು ನಿವಾರಿಸುತ್ತಾರೆ. 'ನೆರೆಯ ಚೀನಾ ನೆಲದಲ್ಲಿ' ಲೇಖನ ಚೀನಾ ದೇಶದ ಕುರಿತಾಗಿ ಸಾಕಷ್ಟು ವಿವರವನ್ನು ಒದಗಿಸುತ್ತದೆ. ಇಡೀ ಕೃತಿಯಲ್ಲಿ ಪ್ರವಾಸದ ಜೊತೆಗೆ ಅಲ್ಲಿನ ಬದುಕನ್ನು ಬೆಸೆಯುತ್ತ, ತಮಗಾದ ಅನುಭವಗಳನ್ನು ಹೇಳುತ್ತ ಓದನ್ನು ಸುಲಭವಾಗಿಸಿದ್ದಾರೆ.



ಪು: 268 ₹270

ಬಾನಾಡಿ ಕಂಡ ಬೆಡಗು
ಲೇ: ಕೆ.ಆರ್.ಉಮಾದೇವಿ ಉರಾಳ
ಪ್ರ: ಫೀನಿಕ್ಸ ಬುಕ್ ಹೌಸ್, ಮೈಸೂರು
ಸಂ:9480113111

ತಿಮ್ಮಯ್ಯನವರ ಕುದಿಬಿಂದುಗಳಿಗೆ ಅಕ್ಷರರೂಪ

'ನನಿಗೆ ಕಾಚ ಹಾಕ್ಯಣದೆ ಗೊತ್ತಿರ್ಲಿಲ್ಲ. ದಾಸಪ್ಪರು ಮನೆಗೆ ಕರ್ಕಂಡು ಹೋಗಿ ಕಾಚ ಕೊಡ್ಸಿದ್ರು. ನಾನು ಆಗ ಕಬಡ್ಡಿ ಪ್ಲೇಯರ್ ಆಗಿದ್ದು ಎತ್ತಿ ಒದ್ದು ಎದುರಾಳಿ ಮೇಲೆ ಅಟ್ಯಾಕ್ ಮಾಡ್ತಿದ್ದೆ. ನನ್ನ ಆಟವನ್ನು ಗಮನಿಸಿದ್ದ ಅವರಿಗೆ ನನ್ನತ್ರ ಕಾಚ ಇಲ್ದೆ ಇರೋದು ಕಂಡಿರ್ಬೇಕು.'–ದಲಿತ ಹೋರಾಟಗಾರ ಕುಂದೂರು ತಿಮ್ಮಯ್ಯನವರ ಆತ್ಮಕಥನದ ಮೊದಲ ಕೆಲವು ಪುಟಗಳಲ್ಲೇ ತೆರೆದುಕೊಳ್ಳುವ ಅಧ್ಯಾಯವೊಂದರ ಸಾಲುಗಳಿವು. ಗುರುಪ್ರಸಾದ್ ಕಂಟಲಗೆರೆ ಈ ಆತ್ಮಕಥೆಯ ನಿರೂಪಣೆ ಮಾಡಿದ್ದಾರೆ. ಕುಂದೂರು ತಿಮ್ಮಯ್ಯ ಅವರ ದಲಿತ ಚಳವಳಿಯ ಕುದಿಬಿಂದುಗಳನ್ನು ಅವರ ಮಾತಿನಲ್ಲೇ ಕೃತಿಪಾತ್ರೆಗೆ ಇಳಿಸುವ ದೀರ್ಘಾವಧಿ ಪ್ರಯತ್ನದ ಫಲವಿದು. ಸಾಕ್ಷಾತ್ ತಿಮ್ಮಯ್ಯನವರೇ ಆಡಿದ ಮಾತನ್ನು ಯಥಾವತ್ ಅಕ್ಷರಗಳಾಗಿ ಮೂಡಿಸಿರುವುದು ಅನುಭವದ ಕಚ್ಚಾದರ್ಶನದಂತೆ ಕಾಣುತ್ತದೆ.

'ತಿಮ್ಮಯ್ಯನವರಂತಹ ದಿಟ್ಟ ದಲಿತ ತರುಣರನ್ನು ದೊಡ್ಡ ಹೋರಾಟಗಾರರನ್ನಾಗಿ ಮಾಡಿದ ಪ್ರೊ. ಬಿ. ಕೃಷ್ಣಪ್ಪ ಹಾಗೂ ಕೆ.ಬಿ. ಸಿದ್ದಯ್ಯ ತರಹದವರ ತಾತ್ವಿಕ ಶ್ರಮ ಹಾಗೂ ದಲಿತ ಸಂಘರ್ಷ ಸಮಿತಿಯ ವಿಕಾಸದ ಚರಿತ್ರೆಯೂ ಇದರಲ್ಲಿ ಇದೆ' ಎಂದು ಕೃತಿಯ ಬೆನ್ನುಡಿಯಲ್ಲಿ ನಟರಾಜ್ ಹುಳಿಯಾರ್ ಬರೆದಿದ್ದಾರೆ. ತಿಮ್ಮಯ್ಯನವರ ರಾಜಕೀಯದ ಹೆಜ್ಜೆಗಳು, ಆತ್ಮವಿಶ್ವಾಸದ ಅಸಲಿ ಲಯಗಳನ್ನು ಕುಂದೂರು ಭಾಷೆಯಲ್ಲೇ ಕಥೆಗಾರ ಗುರುಪ್ರಸಾದ್ ಕಂಟಲಗೆರೆ ಮರುಸೃಷ್ಟಿ ಮಾಡಿರುವುದನ್ನೂ ಹುಳಿಯಾರರು ಗುರುತಿಸಿದ್ದಾರೆ.

ದಲಿತ ಹೋರಾಟದ ಕೆಲವು ಝಲಕ್‌ಗಳನ್ನು ಕಾಣಿಸುವಂತಹ ಕಪ್ಪು–ಬಿಳುಪು ಚಿತ್ರಗಳು ಕೃತಿಯ ಕೊನೆಯಲ್ಲಿರುವುದು ಬೋನಸ್ಸು. ಒಟ್ಟು ನಲವತ್ತಾರು ಎಪಿಸೋಡ್‌ಗಳಲ್ಲಿ ತಿಮ್ಮಯ್ಯನವರ ಬದುಕಿನ ಪುಟಗಳನ್ನು ಗುರುಪ್ರಸಾದ್ ಮರುಸೃಷ್ಟಿ ಮಾಡಿದ್ದಾರೆ. ಯಾವ ಅಧ್ಯಾಯವನ್ನು ಓದಿದರೂ ಕಣ್ಣುಗಳನ್ನು ಅರಳಿಸುವಂತೆ ಮಾಡುವ ಗುಣ ಇರುವುದು ನಿರೂಪಕರ ಆಸಕ್ತಿಕರ ತಂತ್ರಗಾರಿಕೆಯೇ ಹೌದು.



ಅಂಗುಲಿಮಾಲ–ದಲಿತ ಹೋರಾಟಗಾರ ಕುಂದೂರು ತಿಮ್ಮಯ್ಯನವರ ಆತ್ಮಕಥನ
ನಿರೂಪಣೆ: ಗುರುಪ್ರಸಾದ್ ಕಂಟಲಗೆರೆ
ಪ್ರ: ಕಾರುಣ್ಯ ಪ್ರಕಾಶನ, ಕುಂದೂರು, ತಿಪಟೂರು ತಾಲ್ಲೂಕು
ಸಂ: 8722541713

ಪು: 136 ₹150

ಉರಿಧಗೆಯ ಬದುಕಿನ ಬಿಡಿ ಚಿತ್ರಗಳು

ಗೌರಿ

ಧಣೇರ ಬಾವಿ' ಸಂಕಲನದ ಮೂಲಕ ಗಮನಸೆಳೆದಿದ್ದ ಶರಣಬಸವ ಕೆ. ಗುಡದಿನ್ನಿ ಅವರ ಇತ್ತೀಚೆಗಿನ ಕಥಾಸಂಕಲನ 'ಏಳು ಮಲ್ಲಿಗೆ ತೂಕದವಳು'. ಬಿಸಿಲನಾಡಿನ ಉರಿಧಗೆಯ ಬದುಕಿನ ಬಿಡಿ ಚಿತ್ರಗಳು ಈ ಕಥೆಗಳಲ್ಲಿ ಹೊಗೆಯಾಡುತ್ತಿವೆ.

ಸಂಕಲನದ ಮೊದಲ ಕಥೆ 'ಭೂಮಿಗೆ ಅರ್ಧ ಬೆಳದಿಂಗಳು' ವಸ್ತುವಿನ ಕಾರಣಕ್ಕೆ, ಗ್ರಹಿಕೆಯ ಕಾರಣಕ್ಕೆ ಗಮನಸೆಳೆಯುತ್ತದೆ. ವಾದಿರಾಜನ ಗೆಳೆಯ ರಾಘು ಮುತ್ತು ಕಟ್ಟಿಸಿಕೊಳ್ಳುವ ಪ್ರಸಂಗದೊಂದಿಗೆ ಕಥೆ ಆರಂಭವಾಗುತ್ತದೆ. ವಾದಿಯ ತಂದೆಯೂ ಸಲಿಂಗಿಯಾಗಿದ್ದವನು. ಜನ್ಮದತ್ತವಾಗಿ ಬಂದಿರುವ 'ಜೆಂಡರ್' ಅನ್ನು, ಒಂದು ಊನವಾಗಿ ನೋಡುವ ವಾದಿ, ತಂದೆಯನ್ನು ದ್ವೇಷಿಸುತ್ತಲೇ ಬೆಳೆಯುತ್ತಾನೆ. ಅವನ ದ್ವೇಷ ತುಂಬಿದ ಕಣ್ಣಿಗೆ ತಂದೆಯ ಉಳಿದ ಯಾವ ಗುಣವೂ, ತನ್ನೆಡೆಗಿನ ಅಮಿತವಾದ ಪ್ರೀತಿಯೂ ಕಾಣಿಸುವುದೇ ಇಲ್ಲ. ಆದರೆ ತಂದೆ ತೀರಿಕೊಂಡಾಗ ಸೇರಿದ್ದ ಅಪಾರ ಪ್ರಮಾಣದ ಜನರನ್ನು ನೋಡಿ ಅವನಿಗೆ ದಿಗ್ಭ್ರಮೆಯಾಗುತ್ತದೆ. ಈ ಕಥೆ, ಇತ್ತೀಚೆಗೆ ಜಗತ್ತಿನ ಸಾಹಿತ್ಯಲೋಕದಲ್ಲಿ ಸಾಕಷ್ಟು ಸದ್ದು ಮಾಡುತ್ತಿರುವ ಲಿಂಗ ಸಂವೇದನೆಯ ಅದರಲ್ಲಿಯೂ ಎಲ್‌ಜಿಬಿಟಿಕ್ಯೂ ಸಮುದಾಯದವರ ಸಮಸ್ಯೆಯನ್ನು ಹೊರಗಿನ ಕಣ್ಣಿನಿಂದ ನೋಡುತ್ತದೆ. ಎರಡು ತಲೆಮಾರಿನ ಚಿತ್ರಣವನ್ನು ಕಟ್ಟಿಕೊಡುತ್ತಲೇ ಸಮಾಜದೊಳಗೇ ಇರುವ ಒಂದು ಚಲನೆಯನ್ನೂ ಹಿಡಿಯಲು ಯತ್ನಿಸುತ್ತಿರುವುದು ಈ ಕಥೆಯನ್ನು ಇನ್ನಷ್ಟು ಜೀವಂತಗೊಳಿಸಿದೆ. ರಾಘು ಜೋಗತಿಯಾಗುವುದನ್ನು ನೋವಿನಿಂದಲಾದರೂ ಒಪ್ಪಿಕೊಳ್ಳುವ ಅವನ ಅಮ್ಮನ ನಿಲುವು ಈ ಚಲನೆಯ ಸೂಚನೆಯೇ ಆಗಿದೆ.

'ತಾಂಬೇಲು' ಈ ಸಂಕಲನದ ಇನ್ನೊಂದು ಗಮನಾರ್ಹವಾದ ಕಥೆ. ಜೈನಾಬಿ ಎಂಬ ಮುಸ್ಲಿಂ ಸಮುದಾಯದ ಹೆಣ್ಣಿನ ಬದುಕಿನ ಚಿತ್ರಣವನ್ನು ಕಟ್ಟಿಕೊಡುವ ಈ ಕಥೆ, ಅವಳ ಛಲವನ್ನು, ಬದುಕುವ ಹಟವನ್ನು ಹೇಳುತ್ತಲೇ, ಅವಳ ಜೀವಪರವಾದ ನಿಲುವನ್ನು ಬಹುಸಶಕ್ತವಾಗಿ ಕಟ್ಟಿಕೊಡುತ್ತದೆ. ಬದುಕಿನುದ್ದಕ್ಕೂ ಹಿಂಸಿಸಿ ಕಾಡಿದ ಗಂಡ, ಹರೆಯಕ್ಕೆ ಬರುತ್ತಲೇ ತನ್ನ ಬಿಟ್ಟುಹೋದ ಮಗ ಅವಳ ಬದುಕನ್ನು, ಜೀವದೃಷ್ಟಿಯಲ್ಲಿನ ಶ್ರೀಮಂತಿಕೆಯನ್ನು ಬರಡುಗೊಳಿಸಲು ಸಾಧ್ಯವಾಗುವುದಿಲ್ಲ ಎಂಬುದನ್ನು ಕಥೆಯ ಕೊನೆಯೇ ಸೂಚಿಸುತ್ತದೆ.

'ಏಳುಮಲ್ಲಗೆ ತೂಕದವಳು' ಕಥೆ ಸರಾಗವಾಗಿ ಓದಿಸಿಕೊಂಡು ಹೋಗುವಂತಿದ್ದರೂ ಈಗಾಗಲೇ ಬಹುವಾಗಿ ಬಳಕೆಯಾಗಿಬಿಟ್ಟಿರುವ ವಸ್ತು ಮತ್ತು ರಚನೆಯ ಕಾರಣಕ್ಕೆ ಮನಸ್ಸಿಗೆ ಅಷ್ಟಾಗಿ ತಾಕುವುದಿಲ್ಲ. ಹಳೆಯ ವಸ್ತುವನ್ನು ಆಯ್ದುಕೊಂಡ ಕಥೆ ಗೆಲ್ಲಬಾರದು ಎಂದೇನಿಲ್ಲ. ಆದರೆ ಅನುಭವದ ಮೂಲಕ ಆ ವಸ್ತುವಿಗೆ ಹೊಸ ನೋಟವನ್ನು, ಜೀವನದೃಷ್ಟಿಯನ್ನು ಕೊಡುವ ಸಾಮರ್ಥ್ಯ ಕತೆಗಾರನಿಗಿರಬೇಕು. ಅಂಥ ಹೊಸ ಅನುಭವವಾಗಲಿ, ಜೀವನದೃಷ್ಟಿಯಾಗಲಿ ಈ ಕಥೆಯಲ್ಲಿ ಕಾಣಿಸುವುದಿಲ್ಲ.

ಇಲ್ಲಿನ ಬಹುತೇಕ ಎಲ್ಲ ಕಥೆಗಳಲ್ಲಿಯೂ ಕೆಳವರ್ಗದ ಜನರ ಬವಣೆಯ ಬದುಕು ದಟ್ಟವಾಗಿ ಚಿತ್ರಿತಗೊಂಡಿದೆ. ಸಾಲುಸಾಲಿಗೂ ಎದುರಾಗುವ ಕಾಗುಣಿತ ದೋಷ ಓದಿಗೆ ತೊಡಕೇ ಹೌದು. ಭಾಷೆಯ ಬಳಕೆ ಮತ್ತು ಅನುಭವವನ್ನು ಹೊಸ ರೀತಿಯಲ್ಲಿ ಗ್ರಹಿಸುವ ಬಗ್ಗೆ ಗಮನಹರಿಸಿದರೆ ಖಂಡಿತ ಶರಣಬಸವ ಅವರಿಂದ ಇನ್ನಷ್ಟು ಗಟ್ಟಿಯಾದ ಕಥೆಗಳನ್ನು ನಿರೀಕ್ಷಿಸಬಹುದು. ❖

ಪು: 100 ₹120

ಏಳು ಮಲ್ಲಿಗೆ ತೂಕದವಳು
ಲೇ: ಶರಣಬಸವ ಕೆ. ಗುಡದಿನ್ನಿ
ಪ್ರ: ಟಾಮಿ ಪ್ರಕಾಶನ
ಸಂ: 8217337933

ಒಳನೋಟ

ಭಿನ್ನ ರಾಗ ತಂತಿಯ ಕೃತಿ

ಚಾಂದ್ ಪಾಷ ಎನ್.ಎಸ್.

ಎಂದೋ ಬರೆದು ಮುಗಿಸಿದ ಬದುಕಿನ ಪುಟಗಳನ್ನು ಮತ್ತೆ ತಿರುವಿಹಾಕಿದರೆ, ನಮ್ಮೊಳಗಿನ ಅಸಂಖ್ಯಾತ ಭಾವ–ಬುದ್ಧಿ ಒಂದೊಂದಾಗಿ ಬಿಚ್ಚಿಕೊಳ್ಳುತ್ತವೆ. ಮುಗ್ಧ ಕೀಟಲೆಯಿಂದ ಹಿಡಿದು, ಯೌವನದ ಹಸಿ ಬಿಸಿ ಪ್ರೇಮದವರೆಗೂ, ನಂತರದ ಮುಪ್ಪಿನ ಬದುಕಿಗೆ ಹಾತೊರೆಯುವ ನಿತ್ರಾಣ ಜೀವಿಗಳಂತೆ ಬದುಕ ಕಳೆದದ್ದು ಆತ್ಮಕಥೆಯನ್ನು ಬರೆಯಹೊರಟ ಪ್ರತಿಯೊಬ್ಬರಿಗೂ ಆಗುವ ಅನುಭವವೇ ಹೌದಾಗಿರಬೇಕು.

ಕನ್ನಡದಲ್ಲಿ ಸಾಕಷ್ಟು ಆತ್ಮಕಥೆಗಳು ಬಂದಿವೆ. ಆದರೆ, ಲಿಂಗಾಧಾರಿತ ಆತ್ಮಕಥೆಗಳನ್ನು ನೋಡಿದರೆ ಗಂಡಸರದೇ ಮೈಲುಗೈ. ಹೆಂಗಸರದ್ದು ಬರತೊಡಗಿದ್ದರೂ ಅದನ್ನು ಮುಖ್ಯವೆಂದು ಪರಿಗಣಿಸಿದ್ದು ತೀರಾ ಕಡಿಮೆ. ಕಳೆದ ಒಂದು ದಶಕದಿಂದಲೂ ಟ್ರಾನ್ಸ್ ಸಮುದಾಯದ ಆತ್ಮಕಥೆಗಳು ಬೆಳಕಿಗೆ ಬರುತ್ತಿವೆ. ಬಹುತೇಕವು ಗಂಡಿನಿಂದ ಹೆಣ್ಣಾದವರ ಬದುಕಿನ ಪುಟಗಳಾದರೆ, ಹೆಣ್ಣಿಂದ ಗಂಡಾದ ರೂಮಿ ಹರೀಶ್ ಅವರ 'ಜೋನ್ಪುರಿ ಖಯಾಲ್' ಮತ್ತೊಂದು ಬಗೆಯ ಆತ್ಮಕಥಾಸಂವೇದನೆ. ಇರುವುದರಲ್ಲಿಯೇ ತೃಪ್ತಿ ಇರದೇಹೋದರೆ ಹೊಸತರೆಡೆಗೆ ತುಡಿಯುವುದು ಮನುಷ್ಯ ಸಹಜವಾದ ಸಂಚಲನವೆಂದೇ ಹೇಳಬೇಕಾಗುತ್ತದೆ. ಅಂತಹ ಸಂಚಾರಿ ಭಾವವೇ 'ಜೋನ್ಪುರಿ ಖಯಾಲ್'.

ಸುಮತಿಯಿಂದ ರೂಮಿ ಹರೀಶ್ ಆಗುವುದು ದೊಡ್ಡ ಸ್ಥಾನಪಲ್ಲಟ. ತನ್ನೊಳಗಿನ ಮತ್ತು ತನ್ನವರೊಡಗಿನ ನಿರಂತರ ಹೋರಾಟದ ಫಲಶ್ರುತಿಯೂ ಹೌದು. ಈ ಆತ್ಮಕತೆಗೆ ಹಲವು ಆಯಾಮದ ಗ್ರಹಿಕೆಗಳಿವೆ. ಇದು ಏಕಕಾಲಕ್ಕೆ ರೂಮಿ ಜೊತೆಯಲ್ಲಿ ಹಲವರ ಆತ್ಮಕತೆಯ ಭಾಗವೂ ಆಗಿ ಮೂಡಿಬಂದಿದೆ. ಬಹಳ ಮುಖ್ಯವಾಗಿ ರೂಮಿಯವರ ತಾಯಿ, ಶಿಲ್ಪ ಕಲಾವಿದೆ ಕನಕ ಮೂರ್ತಿಯವರ ಬದುಕಿನ ಪುಟಗಳು ಕೂಡ ಇಲ್ಲಿ ಸಿಗುತ್ತವೆ. ರೂಮಿ ಬಾಲ್ಯದಿಂದಲೇ ತಾಯಿಯನ್ನು ಅನುಸರಿಸುತ್ತಾ, 'ನಾನು ಮಿನಿ ಕನಕ ಮೂರ್ತಿ ಅಂತ ಅನಿಸುತ್ತೆ' ಎನ್ನುವಾಗ ತಾಯಿಯಂತೆ 'ಗಟ್ಟಿಗ'ನಾಗಬೇಕು ಎನ್ನುವ ಮನಃಸ್ಥಿತಿ ಆಗಲೇ ಇದ್ದುದು ವೇದ್ಯವಾಗುತ್ತದೆ. ಕನಕ ಮೂರ್ತಿ ಅವರೊಳಗೂ ಒಬ್ಬ ಟ್ರಾನ್ಸ್‌ಮ್ಯಾನ್ ಇರಬೇಕು ಎನ್ನುವ ಅರಿವು ಮೂಡಿದ ಕ್ಷಣದಿಂದ ಸುಮತಿಯಿಂದ ರೂಮಿಯತ್ತ ಹೆಜ್ಜೆ ಹಾಕಿರಬಹುದು ಎಂದೆನ್ನಿಸುತ್ತದೆ.

ಹೆಣ್ಣಿಂದ ಗಂಡಾಗುವ ದೇಹದ ಪುನರ್ ರಚನೆಯಿಂದ ಹಿಡಿದು ಬದುಕಿನ ನ್ಯಾಯಯುತ ಹಕ್ಕಿಗಾಗಿ ನಡೆಸುವ ಹೋರಾಟವು ಸರಳ ರೇಖೆ ಚಲನೆಯಂತೆ ಇರಲಾಗದು. ಸಣ್ಣ ವಯಸ್ಸಿನಿಂದಲೇ ಸಂಗೀತ ಕಲಿತ ಸುಮತಿ ಬಹು ಮುಖ್ಯ ಹಾಡುಗಾರರಾಗಿ ಅನೇಕ ಕಡೆ ಕಾರ್ಯಕ್ರಮ ನೀಡಿ ಕೀರ್ತಿಗಳಿಸಿಕೊಂಡವರು. ರೂಮಿಯಾಗಿ ಬದಲಾಗಿ, ದೈಹಿಕ ಚಿಕಿತ್ಸೆಯ ನಂತರ ಹಾರ್ಮೋನ್‌ಗಳ ಬದಲಾವಣೆ ಆಯಿತು. ಹಾಡುವುದನ್ನು ನಿಲ್ಲಿಸಿ ಚಿತ್ರಕಾರನಾಗಿ, ಕವಿಯಾಗಿ, ರಂಗಕರ್ಮಿಯಾಗಿ ಬದಲಾಗಲು ತುಡಿಯುವುದೇ ಸೃಜನಶೀಲ ಮನಸ್ಸಿನ ಅನಂತ ಸಾಧ್ಯತೆಗೆ ಸಾಕ್ಷಿ.

ರೂಮಿಯ ಬಾಲ್ಯದಲ್ಲಿ ಆಗಿಹೋದ ಲೈಂಗಿಕ ಶೋಷಣೆ, ಸ್ವಲಿಂಗ ಪ್ರೇಮ ಮತ್ತು ತನ್ನ ಹೆಣ್ತನದ ನಿರಾಕರಣೆಯೊಂದಿಗೆ ಪ್ರೀತಿಗಾಗಿ ಹಂಬಲಿಸುವ, ಸದಾ ಪ್ರೀತಿಸುತ್ತಲೇ ಇರುವ ಉತ್ಕೃಷ್ಟ ಪ್ರೇಮಿಯ ಮತ್ತೊಂದು ಮುಖವೂ ಈ ಆತ್ಮಕತೆಗಿದೆ. 'ಲೈಂಗಿಕ ಹಿಂಸೆಯಿಂದ ಆಗುವ ಗಾಯ ಸಾವಿನಂತೆ ಕೇವಲ ದೇಹಕ್ಕಷ್ಟೇ ಆಗುವ ಗಾಯವಾಗಿರುವುದಿಲ್ಲ' ಎನ್ನುವ ರೂಮಿ, 'ಅತ್ಯಾಚಾರದಂತಹ ಹೀನ ಕೃತ್ಯದಿಂದಾಗಿ ಅದೆಷ್ಟು ಜನರ ಬದುಕು ಛಿದ್ರವಾಗಿದೆ' ಎಂದು ಪರಿತಪಿಸುತ್ತಾರೆ.

ಟ್ರಾನ್ಸ್‌ಮ್ಯಾನ್ ಆಗಿ ತನ್ನ ಸಂಗಾತಿ ಸುನಿಲ್ ಅವರೊಂದಿಗೆ ಎಲ್ಲಾ ಹೋರಾಟಗಳ ಒಡನಾಡಿಯಾಗಿರುವ ರೂಮಿಯ ಬದುಕಿನ ಪುಟಗಳು, ಕನ್ನಡ ಸಾಹಿತ್ಯ ಪರಂಪರೆಗೆ ತೀರಾ ಹೊಸತು. ಈ ಆತ್ಮಕಥೆಯನ್ನು ಪ್ರಾಮಾಣಿಕವಾಗಿ ದಾದಾಪೀರ್ ಜೈಮನ್ ನಿರೂಪಣೆ ಮಾಡಿರುವುದು ಶ್ಲಾಘನೀಯ. ಭಾವಗಳ ತಿರುವುಗಳಂತೆ ಬದುಕಿನ ತಿರುವುಗಳೂ ಪುಟದಿಂದ ಪುಟಕ್ಕೆ ನೆಗೆಯುವುದು ಓದುಗರಲ್ಲಿ ಸ್ವಲ್ಪ ಗೊಂದಲವನ್ನು ಸೃಷ್ಟಿಸುವುದು ಬಿಟ್ಟರೆ, ಇದೊಂದು ವಿಶಿಷ್ಟ ಪ್ರಯೋಗಶೀಲ ಆತ್ಮಕಥನವೇ ಹೌದು. ❖

ಪು: 132 ₹165

ಜೋನ್ಪುರಿ ಖಯಾಲ್–ರೂಮಿ ಹರೀಶ್ ಬದುಕಿನ ಪುಟಗಳು
ಸಂಯೋಜನೆ–ನಿರೂಪಣೆ: ದಾದಾಪೀರ್ ಜೈಮನ್
ಪ್ರ: ಅಹರ್ನಿಶಿ ಪ್ರಕಾಶನ
ಸಂ: 9449174662

ಹೆಬ್ಬಾವಿನ ಊಟವನ್ನೇ...

8ನೇ ಪುಟದಿಂದ...

ಕಾನುಕುರಿಯನ್ನು ನುಂಗಿ ಭಾರವಾಗಿದ್ದ ಹೆಬ್ಬಾವು, ಜನರಿಂದ ತಪ್ಪಿಸಿಕೊಳ್ಳಲು ತನ್ನ ಬಲಿಯನ್ನೇ ವಾಂತಿ ಮಾಡಿತ್ತು. ಆ ಮೂಲಕ ತನ್ನ ತೂಕವನ್ನು ಕಡಿಮೆಮಾಡಿಕೊಂಡಿತ್ತು. ಒಮ್ಮೆ ನುಂಗಿದ ಬೇಟೆಯನ್ನು ಬಲವಂತವಾಗಿ ಹೊರಹಾಕುವ ಸಂದರ್ಭ ಬಂದಲ್ಲಿ ಅದು ಹೆಬ್ಬಾವಿನ ಜೀರ್ಣಾಂಗಗಳಿಗೆ ಗಾಸಿಯಾಗಿ, ಪ್ರಾಣಪಾಯವಾಗಲೂಬಹುದು.

ಅರಣ್ಯ ಸಿಬ್ಬಂದಿ ಸ್ಥಳಕ್ಕೆ ಬರುವ ಹೊತ್ತಿಗೆ ಜನಸಂದಣಿಯಿಂದ ತನ್ನನ್ನು ತಾನು ರಕ್ಷಿಸಿಕೊಳ್ಳುವ ಕಾರಣಕ್ಕೆ ಹೆಬ್ಬಾವು ಬಿಗಿಯಾದ ತನ್ನ ಹಿಡಿತವನ್ನು ಸಡಿಲಿಸಿ, ಬಲಿಯನ್ನು ಬಿಟ್ಟು ಪೂರ್ವಾಭಿಮುಖವಾಗಿ ಇಳಿಜಾರಿನಲ್ಲಿ ಚಲಿಸಿತು. ಹೆಬ್ಬಾವನ್ನು ಹಿಡಿದುಕೊಂಡು ಹೋಗಿ ದೂರದಲ್ಲಿ ಬಿಡಿ ಎಂಬ ಜನರ ಬೇಡಿಕೆಯನ್ನು ಅರಣ್ಯ ಇಲಾಖೆಯ ಸಿಬ್ಬಂದಿ ಮಾನ್ಯ ಮಾಡಲಿಲ್ಲ. ಅದೃಷ್ಟಕ್ಕೆ ಅದು ಕಾಡಿಗೆ ಹೋಗಿ ಬದುಕಿಕೊಳ್ಳುತ್ತದೆ ಎಂದರು. ಇತ್ತ ಸತ್ತ ನರಿಯನ್ನು ಎತ್ತಿಕೊಂಡ ಯುವಕರ ಗುಂಪು ಸೆಲ್ಫಿ ತೆಗೆದುಕೊಳ್ಳುವ ಭರಾಟೆಯಲ್ಲಿ ತೊಡಗಿತ್ತು. ರಾಮನಗರದ ಜನವಸತಿ ಪ್ರದೇಶದ ಹಿಂಭಾಗದಲ್ಲಿ ಲಿಂಗದಹಳ್ಳಿ ಗ್ರಾಮಕ್ಕೆ ಸೇರಿದ ಒಂದಿಷ್ಟು ಅರಣ್ಯ ಪ್ರದೇಶ ಇನ್ನೂ ಇದೆ. ಸುಮಾರು ಐದುನೂರು ಎಕರೆಯಷ್ಟು ಕಾಡು ಇಲ್ಲಿ ಕಾನೂನುಬದ್ಧವಾಗಿ ಉಳಿದುಕೊಂಡಿದೆ. ಆ ಕಾಡಿನ ಇಳಿಜಾರಿನಲ್ಲಿ ಹರಿದುಹೋದ ಹೆಬ್ಬಾವು, ಸುಮಾರು ಐದುನೂರು ಮೀಟರ್ ಚಲಿಸಿ, ಒಬ್ಬರ ಅಡಕೆ ತೋಟಕ್ಕೆ ಇಳಿಯಿತು. ಹೆಬ್ಬಾವಿಗೆ ಇಲ್ಲೂ ಫಜೀತಿ ತಪ್ಪಲಿಲ್ಲ. 12 ಅಡಿಯಷ್ಟು ದೊಡ್ಡದಾದ ಹೆಬ್ಬಾವನ್ನು ನೋಡಿದ ಕೆಲಸದವರು ತೋಟದ ಮಾಲೀಕರಿಗೆ ತಿಳಿಸಿದರು. ಮಾಲೀಕರು ಮತ್ತೆ ಅರಣ್ಯ ಇಲಾಖೆಗೆ ಕರೆ ಮಾಡಿದರು.

ಹೆಬ್ಬಾವಿನಂತಹ ಜೀವಿಗೆ ಅದರ ಮೂಲ ಸ್ಥಾನದಿಂದ 2-3 ಕಿಲೋಮೀಟರ್ ಸುತ್ತಳತೆಯಷ್ಟು ಗಡಿ ಇರುತ್ತದೆ. ಅದನ್ನು ಹಿಡಿದು ಅದರ ಆವಾಸಸ್ಥಾನದಿಂದ ಬಹುದೂರಕ್ಕೆ ಬಿಟ್ಟರೆ, ಹೊಸ ವಾತಾವರಣಕ್ಕೆ ಹೊಂದಿಕೊಳ್ಳುವುದು ಕಷ್ಟವಾಗುತ್ತದೆ. ವಿಷರಹಿತವಾದ ಹೆಬ್ಬಾವನ್ನು ಉರಗ ಸಂರಕ್ಷಕರಾದ ಅನೂಪ್ ಚೀಲಕ್ಕೇನೊ ತುಂಬಿದರು. ಅದನ್ನು ಎಲ್ಲಿ ಬಿಡುವುದು ಎಂಬ ಜಿಜ್ಞಾಸೆ ಶುರುವಾಯಿತು. ಪೇಟೆಯ ಹತ್ತಿರದ ಯಲಗಳಲೆ ಕಾಡಿಗೆ ಬಿಡೋಣವೆಂದು ಒಂದು ಬಾರಿ ಯೋಚಿಸಿಲಾಯಿತು. ಆದರೆ, ಅಲ್ಲೂ ಜನವಸತಿ ಪ್ರದೇಶ ಹತ್ತಿರವಿದೆ. ಅಲ್ಲದೇ ಆ ಊರಿನ ಜಾನುವಾರುಗಳು ಕಾಡಿಗೆ ಮೇಯಲು ಹೋಗುತ್ತವೆ. ಜೊತೆಗೆ ಮಧ್ಯದಲ್ಲಿ ಹೊಸನಗರಕ್ಕೆ ಹೋಗುವ ರಸ್ತೆಯಿದೆ. ಒಂದೊಮ್ಮೆ ಹೆಬ್ಬಾವು ರಸ್ತೆ ದಾಟುವ ಸಂದರ್ಭ ಬಂದಲ್ಲಿ, ಅಪಘಾತವಾಗುವ ಸಾಧ್ಯತೆಯೂ ಇದೆ. ಹೀಗೆಲ್ಲಾ ಯೋಚಿಸಿ, ಶರಾವತಿ ಹಿನ್ನೀರಿನ ಸಮೀಪದ ಕಾಡಿನಲ್ಲಿ ಬಿಡುವುದು ಎಂದು ಯೋಜಿಸಲಾಯಿತು.

ಹೆಬ್ಬಾವಿನ ಕಠಿಣವಾದ ಹಿಡಿತದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದೇ ಸತ್ತುಹೋದ ನರಿಯನ್ನು ಏನು ಮಾಡುವುದು? ಹೆಬ್ಬಾವನ್ನು ಬಿಡುವ ಸ್ಥಳದಲ್ಲೇ ನರಿಯ ಶವವನ್ನೂ ಹಾಕಿದ್ದರೆ, ಹೆಬ್ಬಾವು ಮತ್ತೆ ಅದನ್ನು ತಿನ್ನುವ ಸಾಧ್ಯತೆಯಿತ್ತಾ? ಬಹುಶಃ ಇಲ್ಲ. ಏಕೆಂದರೆ, ಈಗಾಗಲೇ ಸತ್ತ ನರಿಯನ್ನು ಎತ್ತಿಕೊಂಡು ಹಲವರು ಸೆಲ್ಫಿ ತೆಗೆದಿದ್ದರು, ಮನುಷ್ಯರ ವಾಸನೆ ನರಿಯ ಮೈಯಲ್ಲಿತ್ತು. ಇಲಾಖೆಗೆ ಈಗ ಎರಡು ಸಂಕಟಗಳು. ಸತ್ತ ನರಿಯನ್ನು ನಿಯಮಗಳ ಪ್ರಕಾರ ನಿರ್ವಹಣೆ ಮಾಡಬೇಕು. ಜೊತೆಗೆ ಹೆಬ್ಬಾವನ್ನು ಸುರಕ್ಷಿತ ಸ್ಥಳದಲ್ಲಿ ಬಿಡಬೇಕು. ಮೊದಲನೆಯದಾಗಿ, ನರಿಯನ್ನು ಪಶುಚಿಕಿತ್ಸಾ ವೈದ್ಯರು ತಪಾಸಣೆ ಮಾಡಿ, ಅದು ಸತ್ತಿದೆಯೆಂದು ಅಧಿಕೃತವಾಗಿ ಘೋಷಣೆ ಮಾಡಿದರು. ನಂತರದಲ್ಲಿ ಒಂದೈವತ್ತು ಕೆ.ಜಿ. ಒಣಕಟ್ಟಿಗೆಯನ್ನು ಹಾಕಿ ನರಿಯ ಶವವನ್ನು ಸುಟ್ಟುಹಾಕಲಾಯಿತು.

ರಾಮನಗರದ ಜನರು ನರಿಯನ್ನು ಹಿಡಿದ ಹೆಬ್ಬಾವನ್ನು ನೋಡಿದ ನಂತರದಲ್ಲಿ, ಒಂದಿಷ್ಟು ಸಂಯಮದಿಂದ ವರ್ತಿಸಿದ್ದರೆ, ಹೆಬ್ಬಾವಿಗೆ ಭೂರಿ ಭೋಜನವಾಗುತ್ತಿತ್ತು. ಕನಿಷ್ಠ ಇನ್ನು ನಾಲ್ಕು ತಿಂಗಳು ಅದು ತಿಂದ ನರಿಯನ್ನು ಸುರಕ್ಷಿತ ಪ್ರದೇಶದಲ್ಲಿ ಜೀರ್ಣಗೊಳಿಸಿಕೊಳ್ಳುವ ಕ್ರಿಯೆಯಲ್ಲಿ ತೊಡಗಿಕೊಳ್ಳುತ್ತಿತ್ತು. ಜೀವಿವೈವಿಧ್ಯಗಳ ಅಥವಾ ವನ್ಯಜೀವಿಗಳ ಕುರಿತಾಗಿ ಜಾಗೃತಿಯಿಲ್ಲದ ಕಾರಣಕ್ಕೆ ಹೆಬ್ಬಾವು ಅನ್ಯಾಯವಾಗಿ ತನ್ನ ತುತ್ತು ಕಳೆದುಕೊಂಡಿತು. ಮಲೆನಾಡಿನಲ್ಲೂ ಅಪರೂಪವಾಗುತ್ತಿರುವ ನರಿಯೊಂದು ಹೆಬ್ಬಾವಿಗಾಗಿ ತನ್ನ ಪ್ರಾಣ ತೆತ್ತರೂ, ಅದರ ತ್ಯಾಗ ಸಾರ್ಥಕವಾಗಲಿಲ್ಲವೆಂಬುದೇ ಈ ಹೊತ್ತಿನ ದುರಂತ. ❖

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ
ಪಾರ್ವತಿ ಪಿಟಗಿ ಅವರ ಪಯಣ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಸವಿತಾ ನಾಗಭೂಷಣ ಅವರ ಕಳೆದುದು ಸಿಕ್ಕಿತು
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಕತ್ತಲಲ್ಲಿ ಕ್ಯಾಮೆರಾ ಕಣ್ಣು ತೆರೆದಾಗ...

ಮುದ್ದುಮುದ್ದಾಗಿದ್ದ ಕಾಡುಪಾಪ

ಬಂಡೆಯ ಮೇಲೆ ಕಲ್ಲಿನಂತೆ ಕೂತಿದ್ದ ನತ್ತಿಂಗ್ ಟಾರ್ಚ್ ಬೆಳಕಿನಲ್ಲಿ ಕಂಡ ಬಗೆ

ತೆಂಗಿನಮರದಲ್ಲಿ ನವಿಲು

ಜಯಸಿಂಹ ಆರ್.

ವಾರಾಂತ್ಯಕ್ಕೆ ಗೆಳೆಯರೆಲ್ಲರೂ ತೋಟದ ಮನೆಯಲ್ಲಿ ಸೇರಿದ್ದೆವು. ಸಂಜೆಯ ವೇಳೆಗೆ ಸೊಳ್ಳೆಗಳ ಕಡಿತದಿಂದ ತಪ್ಪಿಸಿಕೊಳ್ಳಲು ಬೆಂಕಿ ಹಾಕಿ ಕೂತಿದ್ದೆವು. ಒಣಗಿದ ಸೌದೆಗಳು ಉರಿದು ಕೆಂಡವಾಗಿ ಸೊಳ್ಳೆಗಳನ್ನೂ ದೂರವಿಟ್ಟು, ನಮ್ಮನ್ನೂ ಬೆಚ್ಚಗಿಟ್ಟಿದ್ದವು. ಎಲ್ಲವೂ ಆಪ್ಯಾಯಮಾನವಾಗಿ ಇದೆ ಎನಿಸುವಷ್ಟರಲ್ಲಿ ಎಲ್ಲಿಲ್ಲದ ಮಳೆ. ಮಳೆ ಜೋರಾಗುವ ಮುನ್ನವೇ ಎಲ್ಲರೂ ಎದ್ದು ಮನೆ ಸೇರಿದೆವು. ಕೆಲವೇ ನಿಮಿಷಗಳಲ್ಲಿ ಮಳೆ ನಿಂತಿತಾದರೂ, ಮತ್ತೆ ಹೊರಹೋಗಲು ಯಾರಿಗೂ ಮನಸ್ಸಿರಲಿಲ್ಲ.

ಅಷ್ಟರಲ್ಲೇ ಕಿಟಕಿಯ ಬಳಿ ಏನೊ ಸದ್ದಾಯಿತು. ಎಲ್ಲರೂ ಅತ್ತ ನೋಡಲು, ಕಿಟಕಿ ಗಾಜನ್ನು ದಾಟಿ ಒಳಗೆ ಬರಲು ಇಲಿಯೊಂದು ಪರದಾಡುತ್ತಿರುವುದು ಕಾಣಿಸಿತು. ಗಾಜಿನ ಮೂಲಕ ಒಳಗೆ ಹಾರಿ ಬರಲು ಇಲಿ ಪದೇ ಪದೇ ಯತ್ನಿಸಿ, ವಿಫಲವಾಯಿತು. ಕಿಟಕಿಗೆ ಗಾಜು ಹಾಕದೇ ಹಲವು ತಿಂಗಳು ಹಾಗೇ ಬಿಡಲಾಗಿತ್ತು. ಬಹುಶಃ ಆ ಇಲಿ ಅಲ್ಲಿಂದಲೇ ಮನೆಯೊಳಗೆ ಓಡಾಡುತ್ತಿದ್ದಿರಬೇಕು. ಅವತ್ತೇ ಕಿಟಕಿಗೆ ಗಾಜು ಹಾಕಿದ್ದರಿಂದ, ಒಳಗೆ ಬರಲು ಅದಕ್ಕಿದ್ದ ದಾರಿ ಮುಚ್ಚಿಹೋಗಿತ್ತು.

ಅದನ್ನು ನೋಡಿದ ಮಧು, 'ಮನೆಯೊಳಗೆ ಬರಲು ಆ ಇಲಿ ಏನು ಮಾಡಬಹುದು' ಎಂದು ಕುತೂಹಲದಿಂದ ಪ್ರಶ್ನಿಸಿದ.

'ಪ್ರಕೃತಿ ಅದಕ್ಕೊಂದು ದಾರಿ ಇಟ್ಟೇ ಇರುತ್ತದೆ' ಎಂಬ ಕೃಷ್ಣಮೂರ್ತಿ ತತ್ತ್ವ ನಿರೀಕ್ಷೆ ಗರಿಗೆದರುವಂತೆ ಮಾಡಿತು.

''ನಮಗೆ ನಮ್ಮ ಸಮಾಜದ ಹೊರಗಿನ ವಿಶ್ವಸಮಾಜದ ಪರಿಚಯಕ್ಕೆ ನರಭಕ್ಷಕನೇ ಬಂದು ಹೊತ್ತೊಯ್ಯಬೇಕೆ? ಇಲಿಗಳು ಬಿಲಗಳಿಂದ ಕಲ್ಲುಗಳನ್ನು ಎತ್ತಿಟ್ಟರೂ ಸಾಕಲ್ಲವೇ?' ಎಂದು ತೇಜಸ್ವಿ ಹೇಳಿದ್ದಾರೆ. ಅಂದರೆ ನಮ್ಮ ಸುತ್ತಮುತ್ತಲಿನ ಪರಿಸರದಲ್ಲೇ ಹಲವು ವಿಸ್ಮಯಗಳಿವೆ. ಅದನ್ನು ನಾವು ನೋಡಬೇಕಷ್ಟೆ'' ಎಂದು ಪರಿಸರದ ಕಥೆಯ ಪ್ರಸಂಗವೊಂದನ್ನು ಮುಂದಿಟ್ಟು, ಶಿವು ಚರ್ಚೆ ಮುಂದುವರೆಸಿದ.

'ಈಗ ಏನು? ತೇಜಸ್ವಿ ಹೇಳಿದಂತಹ ಹಲವು ವಿಸ್ಮಯಗಳನ್ನು ನೀವೂ ನೋಡಬೇಕಾ? ಹಾಗಿದ್ದರೆ ಬನ್ನಿ... ಈ ರಾತ್ರಿಯಲ್ಲೇ ಕಾಡು ಸುತ್ತಿ ಬರೋಣ. ಇಲ್ಲೇ ಹತ್ತಾರು ವಿಸ್ಮಯಗಳು ಕಾಣುತ್ತವೆ' ಎಂದು ತಕ್ಷಣಕ್ಕೆ ಹೇಳಿದೆ. ಟಾರ್ಚ್ ಹಿಡಿದು, ಕ್ಯಾಮೆರಾ ಹೆಗಲಿಗೇರಿಸಿ ಹೊರಟೇಬಿಟ್ಟೆವು.

ತೋಟದಿಂದ ಒಂದೆರಡು ಮಾರು ದೂರ ಹೋಗುವಷ್ಟರಲ್ಲೇ ಮಂಜಣ್ಣ ಎದುರಾದ. ಕಾಡುಮೇಡು ಅಲೆದ ಅನುಭವಿ ಮಂಜಣ್ಣ. ನಮ್ಮ ಕಣ್ಣಿಗೆ ಕಾಣದಿದ್ದ ಹುಳಹುಪ್ಪಟೆ-ಹಾವು ಹಕ್ಕಿಗಳೆಲ್ಲವನ್ನೂ ಹುಡುಕಿ ತೋರಿಸುತ್ತಿದ್ದ ಮಂಜಣ್ಣನ ಸೂಕ್ಷ್ಮತೆ ಅಚ್ಚರಿ ಮೂಡಿಸುವಂತಹದ್ದು. ಈಗ ಕ್ಯಾಮೆರಾ ಹೊತ್ತು ನಾವು ಹೊರಟ ಉದ್ದೇಶ ತಿಳಿದ ಮೇಲೆ ಮಂಜಣ್ಣನೂ ನಮಗೆ ಜತೆಯಾದ. ಹೊಲಗದ್ದೆಗಳಿಗೆ ಅಂಟಿಕೊಂಡೇ ಕಾಡು ಇರುವುದರಿಂದ, ಆಗಾಗ್ಗೆ ಕಾಡುಪ್ರಾಣಿಗಳು ಇತ್ತ ಹಾಜರಿ ಹಾಕಿ ಹೋಗುವುದುಂಟು. ಈಗ ನಾವು ಹೊರಟ ಯಾತ್ರೆಯಲ್ಲಿ ಏನೆಲ್ಲಾ ಸಿಗಬಹುದು, ಏನು ಬಂದರೆ ಏನು ಮಾಡಬೇಕು ಎಂದೆಲ್ಲಾ ಮಂಜಣ್ಣ ವಿವರಿಸುತ್ತಾ ಹೋದ. ಮಧ್ಯೆ ತಕ್ಕಲು ಬಿದ್ದ ಹೊಲ, ಖರಾಬು ಜಮೀನು, ಸ್ಥಗಿತವಾದ ಕ್ವಾರಿಯು ಹೊಲಗಳ ಏಕತಾನತೆಯನ್ನು ಮುರಿಯುತ್ತಿತ್ತು.

ಮಂಜಣ್ಣ, 'ಕಲ್ಲು ಗಿಡುಗ ನೋಡಿದ್ದೀರಾ?' ಎಂದ. ಉಹೂಂ ಎಂದೆವು. ಹಾದಿಯ ಮಧ್ಯೆ ಇದ್ದ ಹಾಸುಬಂಡೆಯ ಮೇಲೆ ಮಂಜಣ್ಣ ತನ್ನ ಟಾರ್ಚ್ ಫೋಕಸ್ ಮಾಡಿದ. ಬಂಡೆಯ ಮೇಲೆ ಅದನ್ನೇ ಹೋಲುವಂತೆ ಮುದುಡಿ ಕೂತಿತ್ತು ಆ ಹಕ್ಕಿ. ಸ್ವಲ್ಪ ಹತ್ತಿರ ಹೋಗುತ್ತಲೇ ಅದು ನೈಟ್‌ಜಾರ್ (ನತ್ತಿಂಗ) ಎಂಬುದು ಗೊತ್ತಾಯಿತು. ಮಂಜಣ್ಣ ಅದನ್ನೇ ಕಲ್ಲುಗಿಡುಗ ಎಂದಿದ್ದ. ಊರಬದಿಯಲ್ಲಿ, ರಸ್ತೆಗಳಲ್ಲಿ ಬೀದಿ ದೀಪದಡಿ ಕಾಣುವ ಈ ಸಾಮಾನ್ಯ ಹಕ್ಕಿ ಅಲ್ಲಿ ಬರುವ ಹುಳು ಹುಪ್ಪಟೆಗಳನ್ನು ಹಿಡಿದು ಹೊಟ್ಟೆ ತುಂಬಿಸಿಕೊಳ್ಳುತ್ತವೆ. ರಾತ್ರಿ ಚಾಲನೆ ವೇಳೆ ವಾಹನಗಳ ಹೆಡ್‌ಲೈಟ್ ಬೆಳಕು ಬಿದ್ದೊಡನೆ ಸ್ತಬ್ಧವಾಗಿಬಿಡುವ ಈ ಹಕ್ಕಿಗಳನ್ನು, ಆ ರೀತಿ ನೋಡದೇ ಇರುವವರು ಬಹಳ ಕಡಿಮೆಯೇ. ಆದರೆ, ಅದೇ ಹಕ್ಕಿಯನ್ನು ಬಂಡೆಹಾಸಿನ ಮೇಲೆ ನೋಡುವುದರಲ್ಲಿದ್ದ ಕುತೂಹಲವೇ ಬೇರೆ. ಥಟ್ಟನೆ ನೋಡಿದರೆ, ಒಂದು ಕಲ್ಲು ಎಂದು ನಿರ್ಲಕ್ಷಿಸಿಬಿಡುವಷ್ಟೂ ಆ ಹಕ್ಕಿ ತನ್ನನ್ನು ಮರೆಮಾಡಿಕೊಂಡಿತ್ತು. ಹೊಲಗದ್ದೆಗಳ ಬಳಿ, ಪೊದೆಗಳ ಬಳಿ, ಹುಲ್ಲುಗಂಟಿನ ಬಳಿ ನೆಲದಲ್ಲಿಯೇ ಮೊಟ್ಟೆ ಇಟ್ಟು ಮರಿಮಾಡುವ ಈ ಹಕ್ಕಿ, ಗೂಬೆಗಿಂತಲೂ ಕಡುನಿಶಾಚರಿ. ದಿನದ ಬೆಳಗಿನಲ್ಲಿ ಕಾಲಿನ ಪಕ್ಕವೇ ಇದ್ದರೂ ಗೊತ್ತಾಗದಷ್ಟು ತನ್ನನ್ನು ತಾನು ಮರೆಮಾಡಿಕೊಳ್ಳುತ್ತದೆ. ಅಂತಹ ಒಂದು ಹಕ್ಕಿ ಬೋಳು ಬಂಡೆಹಾಸಿನ ಮೇಲೆ ನಮ್ಮಿಂದ ಕೆಲವೇ ಅಡಿಗಳಷ್ಟು ದೂರದಲ್ಲಿತ್ತು.

ಟಾರ್ಚ್ ಬಿಟ್ಟಿದ್ದರಿಂದ ಅತ್ತಿತ್ತ ಅಲ್ಲಾಡದೆ ನತ್ತಿಂಗ ಅಲ್ಲಿಯೇ ಬಂಡೆಗಂಟಿ ಕೂತಿತು. ಹಕ್ಕಿಯ ಫೋಟೊ ಹಿಡಿಯಲು ಬೇಕಾದ ಟೆಲಿಲೆನ್ಸ್ ಇಲ್ಲದಿದ್ದ ಕಾರಣ, ಇದ್ದ ಕಿಟ್ ಲೆನ್ಸ್‌ನಲ್ಲಿಯೇ ಅದನ್ನು ಸೆರೆಹಿಡಿಯಬೇಕಿತ್ತು. ಹಕ್ಕಿ ನೆಲಮಟ್ಟದಲ್ಲಿ ಇದ್ದುದ್ದರಿಂದ ಕ್ಯಾಮೆರಾ ಕಣ್ಣಿಗೆ ಹಿಡಿದು, ನಾನು ಮಕಾಡೆ ಮಲಗಿದೆ. ಲೆನ್ಸ್‌ನ ವ್ಯಾಪ್ತಿಗೆ ಹಕ್ಕಿ ಬರಲಿಲ್ಲ. ಹಾಗೇ ತೆವಳುತ್ತಾ ನಿಮಿಷಕ್ಕೊಂದು ಅಡಿಯಂತೆ ಹಕ್ಕಿಯತ್ತ ಸರಿದೆ. ಹತ್ತಾರು ನಿಮಿಷಗಳ ನಂತರ ಲೆನ್ಸ್ ವ್ಯಾಪ್ತಿಗೆ ಹಕ್ಕಿ ಬಿತ್ತು. ಕಂದು-ಕಪ್ಪು ರೆಕ್ಕೆಗಳ ಮಧ್ಯೆ ಹೆಚ್ಚು ಆಕರ್ಷಕವಾಗಿದ್ದದ್ದು ಅದರ ಕಣ್ಣುಗಳು. ಕೆಂಪನೆ ಗುಲಗಂಜಿಯಂತಿದ್ದ ಕಣ್ಣುಗುಡ್ಡೆಯನ್ನು ಅಲುಗಾಡಿಸದಯೇ ಹಕ್ಕಿ ಕುಳಿತಿತ್ತು. ಸಾಕಷ್ಟು ಫೋಟೊ ತೆಗೆದು, ಕ್ಯಾಮೆರಾ ಕೆಳಗಿಳಿಸಿದೆ. ಮಂಜಣ್ಣ ಟಾರ್ಚ್ ಆರಿಸಿದ. ಅಲ್ಲಿಯವರೆಗೆ ಕಲ್ಲಿನಂತೆ ಕೂತಿದ್ದ ನತ್ತಿಂಗ, ಪುರ್ರೆಂದು ಕತ್ತಲನ್ನು ಸೀಳಿಕೊಂಡು ಹಾರಿತು. ಮಂಜಣ್ಣ ಅಲ್ಲಿಂದ ನಮ್ಮ ತೋಟದತ್ತಲೇ ಹಾದಿ ತಿರುಗಿಸಿದ. ಹೊಲ-ಗದ್ದೆಗಳನ್ನು ದಾಟಿ ಹೋಗುವಾಗ ಇನ್ನೂ ಹತ್ತಾರು ನತ್ತಿಂಗಗಳು, ಕೆಂಪು ಕೊಕ್ಕಿನ ಟಿಟ್ಟಿಬಗಳು (ನಮ್ಮ ಕಡೆ ಇವನ್ನು ಕೀನಕ್ಕಿ ಎನ್ನುತ್ತಾರೆ) ಕಂಡವು. ನಮ್ಮ ಉಪಸ್ಥಿತಿಯಿಂದ ಗಾಬರಿಯಾದ ಕೀನಕ್ಕಿಗಳಂತೂ, ಕಿವಿ ಕಿತ್ತುಹೋಗುವಷ್ಟು ಜೋರಾಗಿ ಕೀರಲು ಆರಂಭಿಸಿದವು. ಹೀಗೆ ಕೀರುವುದಕ್ಕೇ ಇರಬೇಕು ಅವನ್ನು ಕೀನಕ್ಕಿ ಎನ್ನುವುದು.

ಮನೆಮುಂದೆಯೇ ಹೆಜ್ಜೆ ಮೂಡಿಸಿದ್ದ ಚಿರತೆಮರಿ

ಹತ್ತಾರು ಹೆಜ್ಜೆ ಹಾಕುವಷ್ಟರಲ್ಲಿ ನಮ್ಮ ತೋಟದತ್ತಲೇ ಬಂದೆವು. ಹಾದಿ ಬಳಸಿ ಬರುವುದಕ್ಕಿಂತ, ಬೇಲಿ ನುಸುಳಿದರೆ ಹತ್ತಿರವಾಗುತ್ತದೆ ಎಂದು ಬೇಲಿ ನುಸುಳಿದೆವು. ನಮ್ಮ ಮುಂದಿದ್ದ ಮಂಜಣ್ಣ ಥಟ್ಟನೆ ನಿಂತ. ಸದ್ದು ಮಾಡದಂತೆ ಸನ್ನೆ ಮಾಡಿದ. ಏನು ಕಂಡಿತೋ ಏನೋ ಎಂದು ಎಲ್ಲರೂ ಹಾಗೇ ಸ್ತಬ್ಧರಾದೆವು. ಕೆಲದಿನಗಳ ಹಿಂದಷ್ಟೇ ನೆಟ್ಟಿದ್ದ ತೆಂಗಿನಗಿಡದತ್ತ ಮಂಜಣ್ಣ ಟಾರ್ಚ್‌ಬಿಟ್ಟ. ನಮ್ಮ ಕಣ್ಣಿಗೆ ಹುಡುಕಿದರೂ ಏನೂ ಕಾಣಲಿಲ್ಲ.

ಮಂಜಣ್ಣ, 'ಫೋಟೊ ಇಡ್ಕಳಿ ಸಾ' ಎಂದ.

ನಾನು, 'ಏನೂ ಕಾಣುತ್ತಿಲ್ಲ ಮಂಜಣ್ಣ' ಎಂದೆ.

'ನಾನು ಬ್ಯಾಟ್ರಿ ಬಿಡ್ತೀನಿ. ಅಲ್ಲೇ ನೋಡಿ' ಎಂದ. ತೆಂಗಿನ ಗಿಡದ ಬುಡಕ್ಕೆ ಟಾರ್ಚ್ ಬಿಟ್ಟ. ಟಾರ್ಚ್ ಹಾಗೇ ಮೇಲೇರಿಸಿದ. ಅವನ ಟಾರ್ಚ್ ಎತ್ತ ಹೋಯಿತೋ ಅಲ್ಲೇ ಕಣ್ಣು ಹಾಯಿಸಿದೆವು. ತೆಂಗಿನ ಗಿಡಕ್ಕೆ ಸಪೋರ್ಟ್ ಆಗಿ ಇರಲೆಂದು ನಿಲ್ಲಿಸಿದ್ದ ನೀಲಗಿರಿ ಕಡ್ಡಿಯ ಮೇಲೆ ಟಾರ್ಚ್ ಹರಿಸಿದ, ಹಾಗೇ ಮೇಲಕ್ಕೆ ಹೋದ. ನಮ್ಮ ಕಣ್ಣೂ ಅದನ್ನೇ ಹಿಂಬಾಲಿಸುತ್ತಿದ್ದವು. ನಮ್ಮ ಕಣ್ಣೆನೆತ್ತರದಷ್ಟೇ ಇದ್ದ ಕಡ್ಡಿಯ ತುದಿ ಮುಟ್ಟಿದ.

ಅರೆ. ಅಲ್ಲೆರಡು ಕಣ್ಣುಗಳು ನಮ್ಮನ್ನು ಪಿಳಿಪಿಳಿ ನೋಡುತ್ತಿವೆ. ಇಷ್ಟೇ ಅಗಲದ ಮುಖವನ್ನು ಬಹುಪಾಲು ಆ ಕಣ್ಣುಗಳೇ ತುಂಬಿಕೊಂಡಿದ್ದವು. ನೀಲಿಗಿರಿ ಕಡ್ಡಿಯನ್ನು ತಬ್ಬಿಹಿಡಿದಿದ್ದ ಅದು, ನಮ್ಮ ಇರುವಿಕೆಯಿಂದ ಗಾಬರಿಗೀಡಾಗಿತ್ತು. ಅದರ ಎದೆ ಪಟ-ಪಟ ಬಡಿದುಕೊಳ್ಳುತ್ತಿರುವುದು ಕಣ್ಣಿಗೇ ಕಾಣುತ್ತಿತ್ತು. ಮುದ್ದೆಯಾದಂತಿದ್ದ ಆ ಪ್ರಾಣಿಯನ್ನು ಹಿಡಿದು ಮನೆಗೊಯ್ಯಬೇಕೆನಿಸುತ್ತಿತ್ತು. ಅಷ್ಟು ಮುದ್ದಾಗಿತ್ತು ಆ ಕಾಡುಪಾಪ.

'ಇದೆಲ್ಲಿಂದ ಬಂತು ಮಂಜಣ್ಣ, ಇಷ್ಟು ದಿನ ಕಣ್ಣಿಗೆ ಕಾಣದಿದ್ದದ್ದು, ಈಗ ತೋಟದೊಳಕ್ಕೇ ಬಂದು ಕೂತಿದೆ' ನನ್ನ ಪ್ರಶ್ನೆ.

'ಏ, ಇವೆಲ್ಲಾ ನೀಲಗಿರಿ ಮರದಲ್ಲಿ ಇರ್ತಾವೆ. ಇಲ್ಲೆಲ್ಲಾ ಸುಮಾರು ಇದಾವೆ. ಕಣ್ಣಿಗೆ ಕಾಣೋದಿಲ್ಲ ಅಷ್ಟೆ. ಇದು ಪಕ್ಕದ ನೀಲಗಿರಿ ತೋಟದಲ್ಲಿ ಇತ್ತು ಅನ್ಸತ್ತೆ. ಇವತ್ತು ಎಲ್ಲಾ ನೀಲಗಿರಿ ಕುಯ್ದವರೆ. ಅದಕ್ಕೇ ಇಲ್ಲಿ ಕಡ್ಡಿ ಹುಡುಕ್ಕೊಂಡು ಬಂದಿರ್ಬೇಕು' ಎಂದ ಮಂಜಣ್ಣ. ಅದರ ಫೋಟೊವನ್ನೂ ಹಿಡಿದುಕೊಂಡೆವು.

ಮಂಜಣ್ಣ ನಮಗೂ, ಕಾಡುಪಾಪಕ್ಕೂ ವಿದಾಯ ಹೇಳಿ ಅವನ ಮನೆಕಡೆ ತಿರುಗಿದ. ಮನೆಯ ಹತ್ತಿರವೇ ಇವೆಲ್ಲಾ ಇದಾವಲ್ಲಾ ಎಂದು ಮಾತನಾಡಿಕೊಳ್ಳುತ್ತಾ, ಮನೆ ಕಡೆ ಹೆಜ್ಜೆಹಾಕಿದೆವು. ಮನೆ ಬಾಗಿಲಲ್ಲೇ ನಾಲ್ಕಾರು ಹೆಜ್ಜೆ ಗುರುತುಗಳು ಕಂಡವು. ಹೆಜ್ಜೆ ಗುರುತಿನಲ್ಲಿ ಕಂಡ ಪ್ರಾಣಿ ಮತ್ತೆ ಬಂದರೇನು ಎಂಬ ಭಯ. ನಾವು ಬರುವುದಕ್ಕೂ ಕೆಲಹೊತ್ತು ಮುಂಚೆಯಷ್ಟೇ ಚಿರತೆಮರಿಯೊಂದು ಮನೆ ಮುಂದಿನ ನಾಯಿಗೂಡಿನ ಬಳಿ ಬಂದುಹೋಗಿತ್ತು. ನಾಯಿಯು ಗೂಡೊಳಗೆ ಸುರಕ್ಷಿತವಾಗೇ ಇತ್ತು. ನಾವು ತಡಮಾಡದೇ ಮನೆಹೊಕ್ಕೆವು.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ABCD...ಯಲ್ಲೊಂದು ಸಂಭಾಷಣೆ

ಆಕೆ : Aಕ್ಕಾ ಅದಿಯೇನ ಮನಿಯಾಗ?
Bಸಾಕ ಬಂದಿದ್ದ್ಯಾ,
Cನಾಕ್ಷತ್ತಿಯಲ್ಲ, ನೆಗಡಿ ಆಗೇತೇನು?
Dಕಾಸಿ ಮಾಡ್ಕೊಂಡು ಕುಡಿಬೇಕು

ಈಕೆ : Eಲ್ಲಾಬಾ, ಮೊನ್ನೆ ಮಗಳ ಊರಿಗೆ ಹೋಗಿದ್ನೆಲ್ಲ, ನೀರ ಬದ್ಲಿ ಆಗ್ಯಾವು
Fಮಾರಾಯಳ, ಆ ಊರ ನೀರು ಕೆಟ್ಟ ಸೌಳ, ಹೆಂಗ ಕುಡಿತಾರ ಅಂತೇನಿ
Gವನೆನಸ್ತೈತಿ ಅಂತ ನಾಕದಿನ ಹೋದ್ರ; ಸಾಕಾಗಿ ಹೋತ

ಆಕೆ : Hಗಿ ದಿವಸ ಇದ್ದ ಬರಬೇಕಿತ್ತು, ನಿನಗ್ಯಾರು ಬ್ಯಾಡ ಅಂದ್ರು

ಈಕೆ : Iತಲ್ಲ, ಬೇಸ್ವೇಳ್ಳಿ, ನೋಡ ಮ್ಯಾಗ ಯಾರ ಮಾಡವ್ರು

ಆಕೆ : Jನೆವರಿ 14ಕಕ್ಕೆ ಜಾತ್ರಿ ಐತಿ, ಮಗ್ಳನ್ನ ನಾಕ ದಿವಸ ಕಳಿಸಿಕೊಡ್ರಿ ಅಂದೇನಿ

ಆಕೆ : Kಲಸ ಮಾಡವ್ರ ಬಾಳೇನ ಹಿಂಗ, ಹೆಣ್ತಿನ ತವರ ಮನಿಗೆ ಕಳಸೂದ ಅಂದ್ರ ಅವರಿಗೆ ಬಲು ಘೋರ ನೋಡ.

ಈಕೆ : Lರೂ ಹಂಗ ಯಾಕ ಇದ್ದಾರೆ, ನಮ್ಮ ಅಳಿಯಾಂದಷ್ಟ ಧಿಮಾಕು.

ಆಕೆ : Mಈನ ಮೇಸಾಕ ಬಿಟ್ಟಿಲ್ಲನ, ಇಲ್ಲೆ ಅದಾವಲ್ಲ?

ಈಕೆ : Nಟ ಮಂದಿ ಮನ್ಯಾಗ ಇದ್ದ, ಎಮ್ಮಿನೂ ನಾನ ಮೇಸಬೇಕು
Oss ಅಂತ ಒದರತೈತಿ ಕೆಲಸ ಮನ್ಯಾಗ
Pಸ್ ನಾನರ ಒಬ್ಬಾಕೆ ಎಷ್ಟಂತ ಮಾಡ್ಲಿ
Qಬ್ಯಾರೆ ನಿಲ್ಲಬೇಕ, ಈಗ ನೀರ್ಗೆ
R(6) ಕೊಡಪಾನ ನೀರ ತಂದಿದ್ಯಾ, ಎತ್ತಾಗ ಸಾಲಬೇಕು
Sಟು ಕೊಡಪಾನ ನೀರ ತಂದ್ರು, ಒಂದು ಹನಿ ನೀರ ಇಲ್ಲದಾಂಗ ಮಾಡತಾರ
Tಗೆ ಮಂದಿ ಮನ್ಯಾಗ ಇಸಗೊಂಡ ಮಾಡೇನಿ
Uಗಾದಿ ಹಬ್ಬ ಬ್ಯಾರೆ, ನಾಳೆ ನೀರ ಸಿಗುದಿಲ್ಲ
Vಮಲಾಗ ಈಗ ನಾಕಕೊಡ ಹೆಚ್ಚಿಗೆ ತಂದ ಹಾಕ ಅಂದ್ರ
Ww ಅಂತ ಏನ ಇಂಗ್ಲಿಷ್ ಓದಕೊಂತ ಕುಂತಾಳ
Xರಸೈಜು, ನೋಟಬುಕ್ಕು, ಪೆನ್ನು, ಪೆನ್ಸಿಲ್ ಅಂತೇಳಿ ನಮ್ಮನ್ನ ತೆಲಿ ಹಿಡಿಸಿಬಿಟ್ಟಾಳ ನೋಡ ಎವ್ವಾ, ಏನಸಾಲಿ ಕಲಿತಾಳೋ
Yಯಲ್ ಅರಿವೀದು ಅದೇನೋ ಲಂಗಾ ಹೊಲಿಸಿ ಕೊಂತೇನಂತ್ಹೇಳಿ ಹಟಹಿಡಿದಾಳ
Z ಬಂದಾಗ ಅಗ್ಯೆತಿ ನೋಡ ಎವ್ವಾ ಇದನ್ನೆಲ್ಲಾ ನೋಡಿ

ಡಶ್ಗ ಚಕ್ಕು ಕೇಶ್ರಶ್ಶು ಕಥೆಯ ಭಾರಿ ಕೃಷಿ!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ರೈತನಾಗಿದ್ದ ವೆಂಕಟ ಮಾರುಕಟ್ಟೆಯಿಂದ ಕ್ಯಾರೆಟ್ ಬೀಜಗಳನ್ನು ತಂದ. ಮಣ್ಣನ್ನು ಹದಗೊಳಿಸಿ ಬೀಜಗಳನ್ನು ಬಿತ್ತಿದ. ಕೆಲ ದಿನಗಳ ನಂತರ ಬೀಜ ಮೊಳಕೆಯೊಡೆಯಿತು. ಅದಕ್ಕೆ ಪ್ರತಿ ದಿನವೂ ವೆಂಕಟ ನೀರುಣಿಸುತ್ತಿದ್ದ. ಹೀಗೆ 70–80 ದಿನ ಉರುಳಿದವು. ಕಟಾವು ಮಾಡಲು ವೆಂಕಟ ಸಜ್ಜಾದ. ನೆಲದಿಂದ ಹೊರಬಂದಿದ್ದ ಗಿಡವನ್ನು ಬಲವಾಗಿ ಎಳೆಯತೊಡಗಿದ. ಎಷ್ಟೇ ಪ್ರಯತ್ನಿಸಿದರೂ ಆ ಗಿಡ ಹೊರಬರಲೇ ಇಲ್ಲ. ಕೊನೆಯಲ್ಲಿ ತನ್ನೆಲ್ಲಾ ಶಕ್ತಿ ಹಾಕಿ ಗಿಡವನ್ನು ಎಳೆದ. ಆಶ್ಚರ್ಯವೆಂಬಂತೆ, ಬೃಹತ್ ಗಾತ್ರದ ಕ್ಯಾರೆಟ್ ನೆಲದಿಂದ ಹೊರಬಂತು. ಇದನ್ನು ಕಂಡು ವೆಂಕಟ ಅವಾಕ್ಕಾದ!



ಗಣಿತದಲ್ಲಿ ಗರ್ದಿ ಗಮ್ಮತ್ತು

ದಾರಿಯಲ್ಲಿ ಸಿಕ್ಕ ಹಣ

1.ಅಭಿನವ ದಾರಿಯಲ್ಲಿ ಹೊರಟಿದ್ದ. ಅವನಿಗೆ ಒಂದು ಹಣವಿದ್ದ ಪಾಕಿಟ್ ಸಿಕ್ಕಿತು. ಅದನ್ನು ಒಬ್ಬನೇ ಎತ್ತಿಕೊಂಡು ಹೋಗಬೇಕೆನ್ನಿಸುವಾಗ ಇನ್ನೊಬ್ಬ ನೋಡಿದ. ಇಬ್ಬರೂ ಹಂಚಿಕೊಳ್ಳಲು ಹೋದರೆ 1 ರೂಪಾಯಿ ಉಳಿಯುತ್ತಿತ್ತು. ಆಗ ಇನ್ನೊಬ್ಬ ಬಂದು ನೋಡಿದ. ಆಗ 3 ಜನ ಹಂಚಿಕೊಳ್ಳಲು ಹೊರಟಾಗ ಆಗಲೂ 1 ರೂಪಾಯಿ ಉಳಿಯುತ್ತಿತ್ತು. ಹೀಗೆ 4 ಜನ, 5 ಜನ, 6 ಜನ ಹಂಚಿಕೊಳ್ಳುವಾಗಲೂ 1 ರೂಪಾಯಿ ಉಳಿಯುತ್ತಿತ್ತು. ಕೊನೆಗೆ 7 ಜನ ಹಂಚಿಕೊಂಡಾಗ ಎಲ್ಲರಿಗೂ ಸಮ-ಸಮವಾದವು. ಹಾಗಾದರೆ ಪಾಕೆಟ್‌ನಲ್ಲಿದ್ದ ಹಣವೆಷ್ಟು?

ಕಾಂಗರೂ ಪದಗಳು

ಕೆಳಗೆ ಕೊಟ್ಟಿರುವ ಮೂಲ ಪದದಲ್ಲಿ ಒಂದು ಚಿಕ್ಕ ಮರಿಪದವಿದ್ದರೆ ಅಂಥ ಪದವನ್ನು ಕಾಂಗರೂ ಪದ ಎನ್ನೋಣ. ಇಲ್ಲಿ ಮೂಲ ಪದದಿಂದ ಕಾಂಗರೂ ಪದ ಆರಿಸಿ, ತಾಯಿ ಪದಕ್ಕೆ ಜೋಡಿಸಿರಿ.

ಕಾಂಗರೂ ಪದಗಳು				
ATTA	RIM	ROW	AN	CAT
IN	RAW	OR	ONE	AND

1.	M		NUTE
2.	VA		ION
3.	D		ING
4.	BR		D
5.	M		NING
6.	B		N
7.	H		Y
8.	P		E
9.	C		LE
10.	B		RY

ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಸಾರಿ | ಗಾರಿ | ನಾಡಿ

ಪಾಯ | ಬರ | ಕಾರ

ಅಕ್ಷರ ಪಟ್ಟಿ

ವಿ	ಅಂ	ನ	ಉ	ಗೆ	ಸ
ಡು	ಬಾ	ಮ	ಗ	ಗೆ	ಣ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ: 1.ಹಿಂಭಾರ 2. ಮುಂಗಾರುಡಿ 3.ಜನನಗೆ 4.ವಸಂತತಿ 5.ಭೋಜನನಿ 6.ಶಹರವಿ

ಅಕ್ಷರ ಆಟ: 1.ಪ್ರಚಾರ 2.ಪ್ರಸಾರ 3.ಪ್ರಭಾರ 4.ಪ್ರಖರ 5.ಪ್ರಕಾರ

ಗಣಿತದಲ್ಲಿ ಗರ್ದಿ ಗಮ್ಮತ್ತು: 1.233541 2.191093 3.122447

ಪ್ರಾಸಪದ: 1.ಚಂ,ವಾ,ನಂ 2.ಬೀ,ಚ,ಹಂ 3.ಅಂ,ಗೊ,ನೆ 4.ಚಿ,ಉ,ಗುಂ 5.ಅಂ,ಭೋ,ವ್ಯಂ 6.ಅ,ಸ,ಭೃ 7.ಜೀ,ಯೌ,ಕ 8.ಸಾ,ಆ,ನಾ 9.ಕೇ,ಬೇ,ನೇ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ: majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಸಿದ್ಧರಾಮ್
ಗಬ್ಬೂರು

ಸಾನಿಧ್ಯ ಎಸ್.
ಮತ್ತೂರು, ಶಿಕಾರಿಪುರ

ವಿನಯಕುಮಾರ ಎಂ.,
ರಾಯಚೂರು

ಚೈತನ್ಯ ಎಸ್.ಜಿ.,
ಸಿಂಗದಹಳ್ಳಿ

ಆರ್.ಕೆ.ಭುವನ್
ಹೂವಿನ ಹಡಗಲಿ

ಯಶಿಕಾ ಕೆ.ಅನಿಲ್
ಕೋಲಾರ

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1650 (1750)
ಸೋಯಾ (ರಿಫೈನ್ಡ್)	₹860 (860)
ಸೂರ್ಯಕಾಂತಿ (ರಿಫೈನ್ಡ್)	₹875 (875)
ಪಾಮೋಲಿನ್	₹805 (805)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹540
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹545

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-48500
ಚಿತ್ರದುರ್ಗ	
ಅಪಿ	44719-45129
ಬೆಟ್ಟೆ	35449-35889
ಕೆಂಪುಗೋಟು	29509-29999
ರಾಶಿ	44239-44669
ದಾವಣಗೆರೆ	
ರಾಶಿ	32166-32166
ಶಿರಸಿ	
ಬೆಟ್ಟೆ	33069-43729
ಬಿಳಿಗೋಟು	29699-36112
ಚಾಲಿ	36899-41201
ಕೆಂಪುಗೋಟು	33699-33699
ರಾಶಿ	44898-47600
ಸೊರಬ	
ಚಾಲಿ	30199-37299
ಗೊರಬಲು	26989-33009
ರಾಶಿ	32989-45899
ಸಿಪ್ಪೆಗೋಟು	14333-18313
ಕೊಬ್ಬರಿ	
ತಿಪಟೂರು	7100-8800
ತುರುವೇಕೆರೆ	8000-8400
ಕೆ.ಆರ್ ಪೇಟೆ	7950-7950

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಶ್ರೀ ಬಿ. ಸಿ. ಹನುಮಂತಪ್ಪ
(ವ್ಯವಸ್ಥಾಪಕ ಪಾಲುದಾರರು: ಜಯ ಇಂಜಿನಿಯರಿಂಗ್ ವರ್ಕ್ಸ್)
ಬೆಂಗಳೂರು–09
1929 - 2011
ನೀವು ನಮ್ಮನ್ನಗಲಿ ಹನ್ನೆರಡು ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗಿ ಉಳಿದಿದೆ.
ಸದಾ ನಿಮ್ಮನ್ನು ಸ್ಮರಿಸುವ
ದುಃಖತಪ್ತರು: ಪತ್ನಿ–ಬಿ.ಎಂ. ಗಂಗಮ್ಮ
ಮಗ– ಬಿ.ಹೆಚ್. ಮಹೇಶ್
ಹಾಗೂ ಕುಟುಂಬವರ್ಗದವರು

ಮೊದಲ ವರ್ಷದ ಪುಣ್ಯ ಸ್ಮರಣೆ

ಶ್ರೀ ಪಿ.ಎಮ್. ಮಹೇಂದ್ರನಾಥ್
ಪಾಕೇಗೌಡನ ಪಾಳ್ಯ
ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶನ ನಿಮ್ಮ ನೆನಪು ನಮಗೆ ಸದಾ ಹಸಿರು
ಇಂತಿ ದುಃಖ ತಪ್ತರು
ಧರ್ಮಪತ್ನಿ ಶ್ರೀಮತಿ ಮಂಜುಳ ಮಹೇಂದ್ರನಾಥ್,
ಪುತ್ರ ಅಲೋಕ್ ಮಹೇಂದ್ರನಾಥ್ ಹಾಗೂ
ಶ್ರೀ ಮಾಳಪ್ಪನವರ ಕುಟುಂಬ ಮತ್ತು ಶ್ರೀ ಹರಿದಾಸ್ ಕುಟುಂಬ
ಹಾಗೂ ಬಂಧು–ಮಿತ್ರರು
Ph: 99003 20111

LOOKING TO BUILD, BUY OR SELL A PROPERTY
Please refer Classifieds on Sunday

ಮೊದಲನೇ ವರ್ಷದ ಪುಣ್ಯಸ್ಮರಣೆ

ಶ್ರೀ ಹೆಚ್. ಎಮ್. ಆನಂದ ರೆಡ್ಡಿಯವರು
— 19-06-1951 - 08-10-2022 —
ನಾವು ನಿಮ್ಮನ್ನು ಯಾವಾಗಲೂ ನೆನಪಿಸಿಕೊಳ್ಳುತ್ತೇವೆ, ನಿಮ್ಮ ಆಲೋಚನೆಗಳು ಮತ್ತು ಮಾರ್ಗದರ್ಶನಗಳ ಮೂಲಕ ನಮಗೆ ಎಂದಿಗೂ ಸ್ಫೂರ್ತಿಯಾಗಿರುತ್ತೀರಿ.
ಇಂತಿ ದುಃಖತಪ್ತರು:
ಶ್ರೀಮತಿ ಲಕ್ಷ್ಮಿ ಆನಂದ ರೆಡ್ಡಿ,
ಮಕ್ಕಳು ಮತ್ತು ಬಂಧುಮಿತ್ರರು.
ಹಾಗೂ CLE (HMR)
ಕಂಪನಿಯ ಎಲ್ಲಾ ಸಿಬ್ಬಂದಿ ವರ್ಗದವರು

‘₹2,000 ನೋಟು: ಆರ್‌ಬಿಐನಲ್ಲಿ ಮಾತ್ರ ಬದಲಾವಣೆ’

ಮುಂಬೈ (ಪಿಟಿಐ): ₹2 ಸಾವಿರ ಮುಖಬೆಲೆಯ ನೋಟುಗಳನ್ನು ಭಾನುವಾರದಿಂದ ಆರ್‌ಬಿಐನ ಪ್ರಾದೇಶಿಕ ಕಚೇರಿಗಳಲ್ಲಿ ಮಾತ್ರವೇ ಬದಲಿಸಿಕೊಳ್ಳಬಹುದು. ಬ್ಯಾಂಕ್‌ಗಳಲ್ಲಿ ಠೇವಣಿ ಇಡುವ ಮತ್ತು ಬೇರೆ ಮುಖಬೆಲೆಯ ನೋಟುಗಳೊಂದಿಗೆ ಬದಲಾಯಿಸಿಕೊಳ್ಳುವ ಅವಕಾಶವು ಶನಿವಾರಕ್ಕೆ ಮುಕ್ತಾಯ ಆಗಿದೆ.

₹2 ಸಾವಿರ ಮುಖಬೆಲೆಯ ₹3.43 ಲಕ್ಷ ಕೋಟಿ ಮೌಲ್ಯದ ನೋಟುಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿದ್ದು, ಇನ್ನೂ ₹12 ಸಾವಿರ ಕೋಟಿ ಮೌಲ್ಯದ ನೋಟುಗಳು ಚಲಾವಣೆಯಲ್ಲಿ ಇವೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ತಿಳಿಸಿದ್ದಾರೆ.

ದೆಹಲಿ ಪೊಲೀಸರ ಆರೋಪಗಳನ್ನು ತಳ್ಳಿಹಾಕಿದ ‘ನ್ಯೂಸ್‌ಕ್ಲಿಕ್’

‘ಮುಕ್ತ ಪತ್ರಿಕೋದ್ಯಮ ಹತ್ತಿಕ್ಕುವ ಯತ್ನ’

ನವದೆಹಲಿ (ಪಿಟಿಐ): ‘ನ್ಯೂಸ್‌ಕ್ಲಿಕ್ ಸುದ್ದಿ ಪೋರ್ಟಲ್ ವಿರುದ್ಧ ದೆಹಲಿ ಪೊಲೀಸರು ತೆಗೆದುಕೊಂಡಿರುವ ಕ್ರಮವು ಭಾರತದಲ್ಲಿ ಮುಕ್ತ ಮತ್ತು ಸ್ವತಂತ್ರ ಪತ್ರಿಕೋದ್ಯಮವನ್ನು ನಿರ್ಬಂಧಿಸುವ ದಿಸೆಯಲ್ಲಿ ನಡೆಸುತ್ತಿರುವ ನಾಚಿಕೆಗೇಡಿನ ಯತ್ನವಲ್ಲದೇ ಬೇರೇನಲ್ಲ’ ಎಂದು ಪೋರ್ಟಲ್ ಹೇಳಿದೆ. ದೆಹಲಿ ಪೊಲೀಸರು ಎಫ್‌ಐಆರ್‌ನಲ್ಲಿ ನಮೂದಿಸಿರುವ ಆರೋಪಗಳ ಕುರಿತು ನ್ಯೂಸ್‌ಕ್ಲಿಕ್ ಹೀಗೆ ಪ್ರತಿಕ್ರಿಯಿಸಿದೆ.

ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆ ತರಲು ಹಾಗೂ ದೇಶದ ವಿರುದ್ಧ ಅವಿಶ್ವಾಸ ಮೂಡಿಸಲು ಚೀನಾದಿಂದ ಭಾರಿ ಪ್ರಮಾಣದಲ್ಲಿ ಹಣ ಸಂದಾಯವಾಗಿದೆ ಎಂದು ನ್ಯೂಸ್‌ಕ್ಲಿಕ್ ವಿರುದ್ಧ ದಾಖಲಿಸಿರುವ ಎಫ್‌ಐಆರ್‌ನಲ್ಲಿ ದೆಹಲಿ ಪೊಲೀಸರು ಹೇಳಿದ್ದಾರೆ. ಭಯೋತ್ಪಾದನೆ ನಿಗ್ರಹಕ್ಕೆ ಬಳಸುವ ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆ (ಯುಎಪಿಎ) ಅಡಿ ನ್ಯೂಸ್‌ಕ್ಲಿಕ್ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಈ ಆರೋಪಗಳನ್ನು ತಳ್ಳಿಹಾಕಿರುವ ನ್ಯೂಸ್‌ಕ್ಲಿಕ್ ‘ಎಕ್ಸ್’ನಲ್ಲಿ ಹೇಳಿಕೆ ಪ್ರಕಟಿಸಿದೆ. ‘ಚೀನಾ ಅಥವಾ ಚೀನಾದ ಸಂಸ್ಥೆಗಳ ಮೂಲಕ ಯಾವುದೇ

ನ್ಯೂಸ್ ಕ್ಲಿಕ್ ಮೇಲಿನ ದಾಳಿ ಖಂಡಿಸಿ ಮುಂಬೈನಲ್ಲಿ ಇತ್ತೀಚೆಗೆ ನಡೆದಿದ್ದ ಪ್ರತಿಭಟನೆ

ರೀತಿಯ ಬಂಡವಾಳ ಅಥವಾ ನಿರ್ದೇಶನ ಪಡೆದಿಲ್ಲ. ಹಿಂಸಾಚಾರ, ವಿಭಜನೆ ಅಥವಾ ಯಾವುದೇ ರೀತಿಯ ಕಾನೂನು ವಿರೋಧಿ ಕೃತ್ಯದಲ್ಲಿ ತೊಡಗಿಲ್ಲ. ಪೋರ್ಟಲ್‌ನಲ್ಲಿ ಪ್ರಕಟಣೆಯಾಗಿರುವ ಸುದ್ದಿಗಳು ಆನ್‌ಲೈನ್‌ನಲ್ಲಿ ಮುಕ್ತವಾಗಿ ಸಿಗುತ್ತವೆ. ಎಫ್‌ಐಆರ್ ಕುರಿತು ನ್ಯೂಸ್‌ಕ್ಲಿಕ್ ಮುಂದಿಟ್ಟಿರುವ ವಾದದಲ್ಲಿಯ ಸತ್ಯಾಸತ್ಯತೆಯನ್ನು ಅರಿತುಕೊಳ್ಳಲು ಅಷ್ಟು ಸಾಕು’ ಎಂದಿದೆ.

‘ದೇಶದ ನ್ಯಾಯಾಂಗ ವ್ಯವಸ್ಥೆ ಮೇಲೆ ನ್ಯೂಸ್‌ಕ್ಲಿಕ್‌ಗೆ ಸಂಪೂರ್ಣ ಭರವಸೆ ಇದೆ. ಜೊತೆಗೆ, ಪೋರ್ಟಲ್‌ನ ಧೋರಣೆಗೆ ನ್ಯಾಯ ಸಿಗುತ್ತದೆ ಎಂಬ ವಿಶ್ವಾಸವಿದೆ’ ಎಂದಿದೆ.

ಎಫ್‌ಐಆರ್‌ನಲ್ಲಿ ಮಾಡಲಾಗಿರುವ ಆರೋಪಗಳು ನಕಲಿ ಮತ್ತು ಸಮರ್ಥನೀಯವಲ್ಲ ಎಂದು ಮೇಲ್ನೋಟಕ್ಕೆ ಕಾಣುತ್ತದೆ. ಅದರ ಜೊತೆಗೆ, ಜಾರಿ ನಿರ್ದೇಶನಾಲಯ, ಆರ್ಥಿಕ ಅಪರಾಧಗಳ ವಿಭಾಗ, ದೆಹಲಿ ಪೊಲೀಸರು ಮತ್ತು ಆದಾಯ ತೆರಿಗೆ ಇಲಾಖೆಗಳು ತನಿಖೆ ನಡೆಸಿ, ಈ ರೀತಿಯ ಆರೋಪಗಳನ್ನು ಆಗಾಗ ಮಾಡುತ್ತಿವೆ. ಕಳೆದ ಮೂರು ವರ್ಷಗಳಿಂದ ನಡೆಯುತ್ತಿರುವ ಯಾವ ತನಿಖೆಯಲ್ಲೂ ಆರೋಪಪಟ್ಟಿ ಸಲ್ಲಿಸಲಾಗಿಲ್ಲ. ಹಿಂದಿನ ತನಿಖೆಗಳಲ್ಲಿ ನ್ಯೂಸ್‌ಕ್ಲಿಕ್ ಪ್ರಧಾನ ಸಂಪಾದಕ ಪ್ರಬೀರ್ ಪುರಕಾಯಸ್ಥ ಅವರಿಗೆ ಮಧ್ಯಂತರ ರಕ್ಷಣೆ ದೊರಕಿತ್ತು. ಈ ಬಾರಿ ರಕ್ಷಣೆ ಸಿಗಬಾರದು ಎಂಬ ಉದ್ದೇಶದಿಂದ ಯುಎಪಿಎ ಅಡಿ ಪ್ರಕರಣ ದಾಖಲಿಸಲಾಗಿದೆ ಮತ್ತು ಅಕ್ರಮ ಬಂಧನಗಳನ್ನು ಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಪ್ರಬೀರ್ ಮತ್ತು ಅಮಿತ್ ಅವರನ್ನು ಪೊಲೀಸರು ಮಂಗಳವಾರವೇ ಬಂಧಿಸಿತ್ತು. ಆದರೆ ಎಫ್‌ಐಆರ್ ಪ್ರತಿಯನ್ನು ಅವರಿಗೆ ನೀಡಿರಲಿಲ್ಲ. ಈ ಹಿನ್ನೆಲೆಯಲ್ಲಿ ಆಕ್ಷೇಪ ವ್ಯಕ್ತಪಡಿಸಿರುವ ಪೋರ್ಟಲ್, ಪಟಿಯಾಲ ಹೌಸ್‌ನ ವಿಶೇಷ ನ್ಯಾಯಾಧೀಶರು ನಿರ್ದೇಶನ ನೀಡಿದ ಬಳಿಕವೇ ಪ್ರಬೀರ್ ಅವರಿಗೆ ಎಫ್‌ಐಆರ್ ಪ್ರತಿಯನ್ನು ಗುರುವಾರ ರಾತ್ರಿ ನೀಡಲಾಗಿದೆ. ಎಫ್‌ಐಆರ್ ರದ್ದುಪಡಿಸುವಂತೆ ಮತ್ತು ಪ್ರಬೀರ್ ಮತ್ತು ಸಂಸ್ಥೆಯ ಎಚ್.ಆರ್. ವಿಭಾಗದ ಮುಖ್ಯಸ್ಥ ಅಮಿತ್ ಚಕ್ರವರ್ತಿ ಅವರನ್ನು ಅಕ್ರಮ ಬಂಧನದಿಂದ ಬಿಡುಗಡೆಗೊಳಿಸುವಂತೆ ಕೋರಿ ನಾವು ದೆಹಲಿ ಹೈಕೋರ್ಟ್‌ಗೆ ಈಗಾಗಲೇ ಅರ್ಜಿ ಸಲ್ಲಿಸಿದ್ದೇವೆ ಎಂದು ತಿಳಿಸಿದೆ.

ಯುಎಪಿಎಯ ಸೆಕ್ಷನ್ 13, 16, 17, 18 ಮತ್ತು 22ಸಿ ಅಡಿ ಮತ್ತು ಭಾರತೀಯ ದಂಡಸಂಹಿತೆಯ 153ಎ ಮತ್ತು 120ಎ ಅಡಿ ಪೊಲೀಸರು ಪ್ರಬೀರ್ ಮತ್ತು ಅಮಿತ್ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ನ್ಯೂಸ್‌ಕ್ಲಿಕ್‌ನ ಹಿರಿಯ ಪತ್ರಕರ್ತರು ಮತ್ತು ಪೋರ್ಟಲ್‌ಗೆ ನೆರವು ನೀಡಿದವರು ಸೇರಿ ಎಫ್‌ಐಆರ್‌ನಲ್ಲಿ ಹೆಸರು ಉಲ್ಲೇಖವಾಗಿರುವ ಇತರ 10 ಮಂದಿಯನ್ನು ದೆಹಲಿ ಪೊಲೀಸರು ಸೋಮವಾರ ವಿಚಾರಣೆಗೆ ಒಳಪಡಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ರಿಯಾಲ್ಟಿ: ಶೇ 21ರಷ್ಟು ಇಳಿಕೆ ಕಂಡ ಸಾಂಸ್ಥಿಕ ಹೂಡಿಕೆ

ನವದೆಹಲಿ (ಪಿಟಿಐ): ರಿಯಲ್ ಎಸ್ಟೇಟ್ ವಲಯದಲ್ಲಿ ಸಾಂಸ್ಥಿಕ ಬಂಡವಾಳ ಹೂಡಿಕೆಯು 2023ರ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಶೇ 21ರಷ್ಟು ಇಳಿಕೆ ಕಂಡಿದ್ದು, ₹6,581 ಕೋಟಿಗೆ ತಲುಪಿದೆ ಎಂದು ಆಸ್ತಿ ಸಲಹಾ ಸಂಸ್ಥೆ ಕೋಲಿಯರ್ಸ್ ಶನಿವಾರ ತಿಳಿಸಿದೆ.

2022ರ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ₹8,315 ಕೋಟಿ ಮೌಲ್ಯದ ಸಾಂಸ್ಥಿಕ ಬಂಡವಾಳ ಹೂಡಿಕೆ ಆಗಿತ್ತು.

ರಿಯಲ್ ಎಸ್ಟೇಟ್‌ನ ಕಚೇರಿ ಆಸ್ತಿಗಳಲ್ಲಿ ಹೂಡಿಕೆಯು ಶೇ 89ರಷ್ಟು ಕುಸಿತ ಕಂಡಿದೆ. ಮೌಲ್ಯದ ಲೆಕ್ಕದಲ್ಲಿ ₹5,760 ಕೋಟಿಯಿಂದ ₹655 ಕೋಟಿಗೆ ಇಳಿಕೆ ಆಗಿದೆ ಎಂದು ಸಂಸ್ಥೆಯು ಮಾಹಿತಿ ನೀಡಿದೆ.

ಆದರೆ, ವಸತಿಗಳ ಮೇಲಿನ ಸಾಂಸ್ಥಿಕ ಹೂಡಿಕೆಯು ಶೇ 47ರಷ್ಟು ಏರಿಕೆ ಕಂಡಿದ್ದು ₹2,274 ಕೋಟಿಗೆ ತಲುಪಿದೆ. ಹಿಂದಿನ ಅವಧಿಯಲ್ಲಿ ₹1,552 ಕೋಟಿಯಷ್ಟು ಹೂಡಿಕೆ ಆಗಿತ್ತು ಎಂದು ತಿಳಿಸಿದೆ.

ಹಿಂದಿನ ವರ್ಷದ ಜನವರಿ–ಸೆಪ್ಟೆಂಬರ್ ಅವಧಿಗೆ ಹೋಲಿಸಿದರೆ ಈ ವರ್ಷದ ಜನವರಿ–ಸೆಪ್ಟೆಂಬರ್ ಅವಧಿಯಲ್ಲಿ ರಿಯಲ್ ಎಸ್ಟೇಟ್ ವಲಯದಲ್ಲಿ ಸಾಂಸ್ಥಿಕ ಹೂಡಿಕೆಯು ಶೇ 27ರಷ್ಟು ಹೆಚ್ಚಾಗಿದೆ ಎಂದು ಕೋಲಿಯರ್ಸ್ ಹೇಳಿದೆ. ಒಟ್ಟು ಸಾಂಸ್ಥಿಕ ಹೂಡಿಕೆಯಲ್ಲಿ ವಿದೇಶಿ ಹೂಡಿಕೆಯ ಪಾಲು ಶೇ 77ರಷ್ಟು ಇದೆ.

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹143.50
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹127

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹306-486
ದ್ವಿತಳಿ (ಬಿ.ವಿ)	₹335-600

ಹಣಕಾಸು, ವಿದ್ಯುತ್, ಐ.ಟಿ. ವಲಯದ ಷೇರುಗಳ ಮಾರಾಟ ಹೆಚ್ಚಳ

ನಿಲ್ಲದ ಎಫ್‌ಪಿಐ ಹೊರಹರಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ದೇಶದ ಷೇರುಪೇಟೆಗಳಲ್ಲಿ ಲಾಭ ಮಾಡಿಕೊಳ್ಳುವ ನಡೆಯನ್ನು ಅಕ್ಟೋಬರ್‌ನಲ್ಲಿಯೂ ಮುಂದುವರಿಸಿದ್ದಾರೆ.

ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ದೇಶದ ಷೇರುಪೇಟೆಗಳಲ್ಲಿ ಹಣಕಾಸು, ವಿದ್ಯುತ್, ಐ.ಟಿ., ತೈಲ ಮತ್ತು ಅನಿಲ ವಲಯದ ಷೇರುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟ ಮಾಡುತ್ತಿದ್ದಾರೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಅವರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಅಮೆರಿಕದ 10 ವರ್ಷಗಳ ಬಾಂಡ್ ಗಳಿಕೆಯು ಶೇ 4.7ರ ಮಟ್ಟದಲ್ಲಿ ಇರುವುದರಿಂದ ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆಗಳಿಂದ ವಿದೇಶಿ ಬಂಡವಾಳ ಹೊರಹೋಗುವಂತೆ ಆಗುತ್ತಿದೆ.

ಮುಖ್ಯಾಂಶಗಳು

- 4 ದಿನಗಳಲ್ಲಿ ₹9,412 ಕೋಟಿ ಮೌಲ್ಯದ ಷೇರು ಮಾರಾಟ
- ಅಮೆರಿಕದ ಡಾಲರ್ ಮೌಲ್ಯ ಹೆಚ್ಚಾಗುತ್ತಿರುವ ಪರಿಣಾಮ

ಅಕ್ಟೋಬರ್ 6ರವರೆಗೆ ನಡೆದಿರುವ ವಹಿವಾಟಿನಲ್ಲಿ ₹9,412 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

ಹಣಕಾಸು ವಲಯದ ಕಂಪನಿಗಳ ಎರಡನೇ ತ್ರೈಮಾಸಿಕದ ಫಲಿತಾಂಶವು ಉತ್ತಮವಾಗಿರುವ ನಿರೀಕ್ಷೆ ಇದೆ. ಹೀಗಾದಲ್ಲಿ ವಿದೇಶಿ ಹೂಡಿಕೆದಾರರು ಈ ವಲಯದಲ್ಲಿ ಮಾರಾಟ ಮಾಡುವ ಪ್ರಮಾಣ ಕಡಿಮೆ ಆಗಬಹುದು ಎಂದೂ ಅವರು ಹೇಳಿದ್ದಾರೆ.

ಬಂಡವಾಳ ಸರಕುಗಳು, ವಾಹನ ಮತ್ತು ವಾಹನ ಬಿಡಿಭಾಗಗಳಿಗೆ ಸಂಬಂಧಿಸಿದ ಷೇರುಗಳಲ್ಲಿ ವಿದೇಶಿ ಹೂಡಿಕೆದಾರರು ಹಣ ತೊಡಗಿಸುತ್ತಿದ್ದಾರೆ. ಡಾಲರ್ ಮೌಲ್ಯ ಗರಿಷ್ಠ ಮಟ್ಟದಲ್ಲಿ ಇರುವುದು ಮತ್ತು ಅಮೆರಿಕದ ಬಾಂಡ್ ಗಳಿಕೆಯು ಹೆಚ್ಚಾಗುತ್ತಿರುವುದರಿಂದ ಸದ್ಯದ ಮಟ್ಟಿಗೆ ವಿದೇಶಿ ಹೂಡಿಕೆದಾರರು ಷೇರುಗಳನ್ನು ಖರೀದಿಸುವುದರ ಕಡೆಗೆ ಗಮನ ಹರಿಸುವುದು ಅನುಮಾನ ಎಂದು ವಿಜಯಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

‘ನಾನು ಮತ್ತೆ ಸಿ.ಎಂ ಆಗೋದು ಬೇಡವೇ?’

ಭೋಪಾಲ್ (ಪಿಟಿಐ): ‘ನಾನು ಮತ್ತೆ ಮುಖ್ಯಮಂತ್ರಿಯಾಗಬೇಕೇ ಅಥವಾ ಬೇಡವೇ’ ಇದು ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು, ರಾಜ್ಯದ ಮತದಾರರ ಮುಂದಿಟ್ಟಿರುವ ಪ್ರಶ್ನೆ.

ಪ್ರಧಾನಿ ನರೇಂದ್ರ ಮೋದಿ ಅವರು ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿಗಳ ಪಟ್ಟಿಯಿಂದ ಚೌಹಾಣ್ ಅವರ ಹೆಸರನ್ನು ಕೈಬಿಟ್ಟಿದ್ದಾರೆ ಎಂಬ ಕಾಂಗ್ರೆಸ್‌ನ ಗಂಭೀರ ಆರೋಪದ ಬೆನ್ನಲ್ಲೇ, ಶನಿವಾರ ದಿಂಡೋರಿಯಲ್ಲಿ ನಡೆದ ಬಿಜೆಪಿ ರ‍್ಯಾಲಿಯಲ್ಲಿ ಅವರು, ಸರ್ಕಾರದ ಕಾರ್ಯವೈಖರಿ ಬಗ್ಗೆ ಜನರ ಮುಂದೆ ಈ ಪ್ರಶ್ನೆಯನ್ನು ಇಟ್ಟು ಅಭಿಪ್ರಾಯ ಪಡೆದರು.

ಇತ್ತೀಚೆಗೆ ಮಧ್ಯಪ್ರದೇಶಕ್ಕೆ ಭೇಟಿ ನೀಡಿದ್ದ ಮೋದಿ, ಭಾಷಣದಲ್ಲಿ ಚೌಹಾಣ್ ಹೆಸರು ಪ್ರಸ್ತಾಪಿಸಿರಲಿಲ್ಲ. ಇದನ್ನೇ ಕಾಂಗ್ರೆಸ್ ಗುರಾಣಿ ಮಾಡಿಕೊಂಡಿದೆ.

ರಾಜ್ಯ ಬಿಜೆಪಿಯ ಬಹುತೇಕರು ಮುಖ್ಯಮಂತ್ರಿ ಹುದ್ದೆಗೆ ಸ್ಪರ್ಧಿಯೊಡ್ಡುವ ಸಾಮರ್ಥ್ಯ ಹೊಂದಿದ್ದಾರೆ. ಹಾಗಾಗಿ, ಚೌಹಾಣ್ ಅವರನ್ನು ಬಿಜೆಪಿಯ ಉನ್ನತ ನಾಯಕತ್ವವು ಮೂಲೆಗೆ ಸರಿಸಲು ಯತ್ನಿಸುತ್ತಿದೆ ಎಂದು ಹೇಳಲಾಗಿದೆ.

ಇತ್ತೀಚೆಗೆ ಕಾಂಗ್ರೆಸ್ ರ‍್ಯಾಲಿಯಲ್ಲಿ ಮಾತನಾಡಿದ್ದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ, ‘ಹಾಲಿ ಮುಖ್ಯಮಂತ್ರಿಯ ಹೆಸರು ಪ್ರಸ್ತಾಪಿಸಲು ಮೋದಿಗೆ ಸಂಕೋಚವಾಗುತ್ತಿದೆ. ನನಗೋಸ್ಕರ ಬಿಜೆಪಿಗೆ ಮತ ನೀಡುವಂತೆ ಜನರಲ್ಲಿ ಕೇಳಿದ್ದಾರೆ. ಹಾಗಾಗಿ, ಚೌಹಾಣ್ ಮತ್ತೆ ಮುಖ್ಯಮಂತ್ರಿ ಆಗುವುದಿಲ್ಲ’ ಎಂದಿದ್ದರು.

ಈ ಟೀಕೆಗೆ ರ‍್ಯಾಲಿಯಲ್ಲಿ ಪ್ರತಿಕ್ರಿಯಿಸಿದ ಚೌಹಾಣ್, ‘ನಮ್ಮದು ಉತ್ತಮ ಸರ್ಕಾರವಲ್ಲವೇ ಅಥವಾ ಕೆಟ್ಟ ಆಡಳಿತವೇ. ನಾವು ಮತ್ತೆ ಅಧಿಕಾರಕ್ಕೆ ಬರೋದು ಇಷ್ಟವಿಲ್ಲವೇ, ಬಿಜೆಪಿ ಪುನಃ ಕೇಂದ್ರ, ರಾಜ್ಯದಲ್ಲಿ ಅಧಿಕಾರ ಹಿಡಿಯುವುದು ಬೇಡವೇ, ಮೋದಿ ಮತ್ತೆ ಪ್ರಧಾನಿಯಾಗುವುದು ಬೇಡವೇ’ ಎಂದು ಕಾರ್ಯಕರ್ತರ ಮುಂದೆ ಸರಣಿ ಪ್ರಶ್ನೆಗಳನ್ನು ಮುಂದಿಟ್ಟರು.

ಸಂಘರ್ಷ ತಗ್ಗಲಿ: ಸುನಕ್, ಟ್ರೂಡೊ ಪ್ರತಿಪಾದನೆ

ಲಂಡನ್ (ಪಿಟಿಐ): ಸಿಖ್ ಪ್ರತ್ಯೇಕತಾವಾದಿ ನಾಯಕ ಹರ್‌ದೀಪ್ ಸಿಂಗ್ ನಿಜ್ಜರ್ ಹತ್ಯೆ ನಂತರ ಭಾರತ ಮತ್ತು ಕೆನಡಾ ನಡುವೆ ಉದ್ಭವಿಸಿರುವ ರಾಜತಾಂತ್ರಿಕ ಸಂಘರ್ಷವನ್ನು ಶಮನ ಮಾಡುವ ಅಗತ್ಯ ಇದೆ ಎಂದು ಬ್ರಿಟನ್ ಪ್ರಧಾನಿ ರಿಷಿ ಸುನಕ್ ಹಾಗೂ ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೊ ಹೇಳಿದ್ದಾರೆ.

ಸುನಕ್ ಅವರು ಟ್ರೂಡೊ ಜತೆ ಶುಕ್ರವಾರ ದೂರವಾಣಿ ಮೂಲಕ ನಡೆಸಿದ ಮಾತುಕತೆ ವೇಳೆ ಭಾರತ–ಕೆನಡಾ ನಡುವಿನ ರಾಜತಾಂತ್ರಿಕ ಬಿಕ್ಕಟ್ಟು ಕುರಿತು ಹೆಚ್ಚು ಚರ್ಚೆ ನಡೆಯಿತು ಎಂದು ಬ್ರಿಟನ್ ಪ್ರಧಾನಿ ಕಚೇರಿ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ತಿಳಿಸಲಾಗಿದೆ.

‘ಎರಡೂ ದೇಶಗಳು ಸ್ಥಾಪಿತ ನಿಯಮಗಳನ್ನು ಗೌರವಿಸಬೇಕು ಎಂಬ ಬಗ್ಗೆ ಉಭಯ ನಾಯಕರು ಸಹಮತ ವ್ಯಕ್ತಪಡಿಸಿದರು’ ಎಂದೂ ಪ್ರಕಟಣೆ ತಿಳಿಸಿದೆ.

ನಿಜ್ಜರ್ ಹತ್ಯೆಗೆ ಸಂಬಂಧಿಸಿ ಭಾರತ ವಿರುದ್ಧ ಕೆನಡಾ ಆರೋಪಗಳನ್ನು ಮಾಡಿದೆ. ಆದರೆ, ಇಂಥ ವಿಷಯಗಳಲ್ಲಿ ಎಲ್ಲ ದೇಶಗಳು ಪರಸ್ಪರರ ಸಾರ್ವಭೌಮತೆ ಹಾಗೂ ಕಾನೂನುಗಳನ್ನು ಗೌರವಿಸಬೇಕು ಎಂಬ ಬ್ರಿಟನ್‌ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ ಎಂಬುದಾಗಿ ಸುನಕ್ ಸ್ಪಷ್ಟಪಡಿಸಿದರು ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಕೆಸಿಆರ್‌ಗೆ ಅನಾರೋಗ್ಯ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ವರ್ಷಾಂತ್ಯಕ್ಕೆ ತೆಲಂಗಾಣ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, ರಾಜ್ಯದಲ್ಲಿ ಬಿರುಸಿನ ರಾಜಕೀಯ ಚಟುವಟಿಕೆಗಳೂ ನಡೆಯುತ್ತಿವೆ. ಆದರೆ, ಕಳೆದ 20 ದಿನಗಳಿಂದ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಬಹಿರಂಗವಾಗಿ ಕಾಣಿಸಿಕೊಂಡಿಲ್ಲ. ಅವರು ತಮ್ಮ ಗೃಹಕಚೇರಿ ‘ಪ್ರಗತಿ ಭವನ’ಕ್ಕೆ ಸೀಮಿತವಾಗಿದ್ದಾರೆ. ಮುಖ್ಯಮಂತ್ರಿ ರಾವ್ ಅವರು ಬಹಿರಂಗವಾಗಿ ಕಾಣಿಸಿಕೊಳ್ಳದಿರುವುದಕ್ಕೆ ಅನಾರೋಗ್ಯವೇ ಕಾರಣ ಎಂದು ಮೂಲಗಳು ಹೇಳಿವೆ.

ಮುಂಬೈ ಧಾರಣೆ

ಶೇಂಗಾ

07-10-2023

ಜಾವಾ 70/80(ಹೊಸ)	12300-12400
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	10600-10700
ದಪ್ಪ ಗುಜರಾತ್(ಹೊಸ)	11400-11500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1660 (1660)
ಒಂದು ವಾರದ ಡೆಲಿವರಿ	1655 (1655)
ಸೋಯಾ ಕಚ್ಚಾ	820 (820)
ಪಾಮ್ ವಾರದ ಡೆಲಿವರಿ	803 (803)
ಸೂರ್ಯಕಾಂತಿ ಎಣ್ಣೆ ಕಚ್ಚಾ	800 (800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
57,200 (56,450)
ಬೆಳ್ಳಿ ಕೆ.ಜಿ 69,300 (67,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮಧ್ಯಪ್ರದೇಶದಲ್ಲಿ ಅಧಿಕಾರಕ್ಕೆ ಬಂದರೆ ಜಾತಿಗಣತಿ: ಕಾಂಗ್ರೆಸ್

ನವದೆಹಲಿ (ಪಿಟಿಐ): ಮಧ್ಯಪ್ರದೇಶದಲ್ಲಿ ಅಧಿಕಾರದ ಗದ್ದುಗೆ ಏರಿದರೆ ಅಲ್ಲಿ ಜಾತಿಗಣತಿ ನಡೆಸುವುದಾಗಿ ಕಾಂಗ್ರೆಸ್ ಘೋಷಿಸಿದೆ.

ಜಾತಿಗಣತಿ ವಿಷಯವನ್ನೇ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ತನ್ನ ಕಾರ್ಯಸೂಚಿಯಾಗಿ ಬಳಸಲು ಶನಿವಾರ ನವದೆಹಲಿಯಲ್ಲಿ ನಡೆದ ಪಕ್ಷದ ಕೇಂದ್ರ ಚುನಾವಣಾ ಸಮಿತಿಯ ಸಭೆಯಲ್ಲಿ ನಿರ್ಧರಿಸಲಾಗಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಕೆ.ಸಿ. ವೇಣುಗೋಪಾಲ್, ಮಧ್ಯಪ್ರದೇಶದಲ್ಲಿನ ಪಕ್ಷದ ಚುನಾವಣಾ ಉಸ್ತುವಾರಿ ರಣದೀಪ್ ಸುರ್ಜೇವಾಲಾ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಕಮಲ್ ನಾಥ್ ಪಾಲ್ಗೊಂಡಿದ್ದ ಸಭೆಯಲ್ಲಿ, 140ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಸಲಿರುವ ಅಭ್ಯರ್ಥಿಗಳ ಬಗ್ಗೆಯೂ ಚರ್ಚಿಸಲಾಯಿತು.

‘ಟಿಕೆಟ್ ಆಕಾಂಕ್ಷಿಗಳ ಬಗ್ಗೆ ಚರ್ಚಿಸಲಾಗಿದೆ. ವಾರದೊಳಗೆ ಪಟ್ಟಿ ಬಿಡುಗಡೆ ಮಾಡಲಾಗುವುದು’ ಎಂದು ಸಭೆಯ ಬಳಿಕ ಕಮಲ್ ನಾಥ್ ಸುದ್ದಿಗಾರರಿಗೆ ತಿಳಿಸಿದರು.

ಸುರ್ಜೇವಾಲಾ ಮಾತನಾಡಿ, ‘ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾದವರೇ ಕಾಂಗ್ರೆಸ್‌ನ ಮುಖ್ಯಮಂತ್ರಿ ಅಭ್ಯರ್ಥಿಯಾಗುವ ಸಂಪ್ರದಾಯ ನಡೆದುಕೊಂಡು ಬಂದಿದೆ. ಸದ್ಯ ಕಮಲ್‌ನಾಥ್ ಅಧ್ಯಕ್ಷರಾಗಿದ್ದಾರೆ. ಅವರೇ ಸಿ.ಎಂ ಅಭ್ಯರ್ಥಿಯಾಗಲಿದ್ದಾರೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

230 ಸದಸ್ಯ ಬಲದ ವಿಧಾನಸಭೆಗೆ ನವೆಂಬರ್ ಅಥವಾ ಡಿಸೆಂಬರ್‌ನಲ್ಲಿ ಚುನಾವಣೆ ನಡೆಯುವ ನಿರೀಕ್ಷೆಯಿದೆ.

ಅಫ್ಗಾನ್‌ನಲ್ಲಿ ಭೂಕಂಪ: 320 ಸಾವು

ನವದೆಹಲಿ (ರಾಯಿಟರ್ಸ್, ಎಪಿ): ಪಶ್ಚಿಮ ಅಫ್ಗಾನಿಸ್ತಾನದಲ್ಲಿ ಶನಿವಾರ ಹಲವು ಭಾರಿ ಭೂಮಿ ಕಂಪಿಸಿದ್ದು, ಕನಿಷ್ಠ 320 ಮಂದಿ ಮೃತಪಟ್ಟಿದ್ದಾರೆ ಎಂದು ವಿಶ್ವಸಂಸ್ಥೆ ಮಾಹಿತಿ ನೀಡಿದೆ.

ಭೂಕಂಪದಲ್ಲಿ 78 ಮಂದಿ ಗಾಯಗೊಂಡಿದ್ದಾರೆ. ಕಟ್ಟಡಗಳ ಅವಶೇಷಗಳಡಿ ಹಲವರು ಸಿಲುಕಿರುವುದರಿಂದ ಸಾವಿನ ಸಂಖ್ಯೆ ಏರಿಕೆಯಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೊದಲಿಗೆ ರಿಕ್ಟರ್ ಮಾಪಕದಲ್ಲಿ 6.3ರಷ್ಟು ತೀವ್ರತೆಯ ಭೂಕಂಪ ಸಂಭವಿಸಿತ್ತು. ಆನಂತರ 5.5, 4.7 ಮತ್ತು 5.9ರಷ್ಟು ತೀವ್ರತೆಯಲ್ಲಿ ಭೂಮಿ ಕಂಪಿಸಿದೆ. ವಾಯವ್ಯ ನಗರ ಹೆರಾತ್‌ನಲ್ಲಿ ಭೂಕಂಪನ ಕೇಂದ್ರಬಿಂದು ಪತ್ತೆಯಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Wanted

ಕಂಪನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ಊಟ ವಸತಿ 18,500 - 67,000/- SSLC, PUC,Degree ಸಂಪರ್ಕಿಸಿ 9945791526, 8861041526

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Building

South

SALE AT HASSAN KR Puram prime commercial property 4000 sqft with built up 4500 sqft genuinely interested only contact 9740331973 brokers excuse

Sites

Davangere

DHUDA ALLOTTED 20x30 Site J.H PATEL NAGAR, Davangere Sale 16L. North Facing Contact Owner:- 9606866368

ಕ್ಲಾಸಿಫೈಡ್ಸ್
ADMISSION CORNER

At Hindustan Business School, we believe students learn best when they experience authentic real world learning. That's why we've forged strong industry collaborations to provide you with rich hands-on experiences that set you apart. HBS offers MBA aspirants the chance to intern, gain invaluable insights and build a network that will help them advance in their future careers. Through our 'Earn while you Learn' program, students benefit from paid internships, providing them with a taste of corporate life even before graduation. This one-of-a-kind initiative is a pioneering collaboration between Industry and Academia, ensuring you're not just prepared for the global industrial landscape, but are also well ahead of the game. Enroll at Hindustan Business School today.

HBS HINDUSTAN BUSINESS SCHOOL
HINDUSTAN BUSINESS SCHOOL
P. B. No. 3776, Ashwathanagar, Marathahalli, Bengaluru 560037
Ph: +91-80-25238650, 25232217
Email: contactus@hindustanacademy.edu.in
www.hindustanacademy.edu.in
8971404357
9740037853

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವ್ಯಾಪಾರ

Business to Business

Finance

LOAN AGAINST Property/ Business/ Projects. Contact :+91 8754809650

Others

ಮಹಿಳೆಯರಿಗೆ ರೇಷ್ಮೆ ಸೀರೆ, ಸಿಲ್ಕ್ ಸೀರೆ, ಕಾಟನ್ ಸೀರೆ, ಚೂಡಿದಾರಗಳು, ಕಂಠಿನ ಮುಖಾಂತರ ಮಾರಾಟ ಮಾಡಲಾಗುತ್ತದೆ ಸಂಪರ್ಕಿಸಿ: 8892501007/ 9606701007

ಪ್ರವಾಸ

Travel

16.11.2023 14ದಿನ ಮಧ್ಯಪ್ರದೇಶ,ಗುಜರಾತ್, ರಾಜಸ್ಥಾನ. ಡಿಸೆಂಬರ್ ಮತ್ತು ಜನವರಿಯಲ್ಲಿ 9 ದಿನ ಅಂಡಮಾನ್ ಪ್ರವಾಸ ಹಡಗು ಮತ್ತು ವಿಮಾನದಲ್ಲಿ.ಶ್ರೀಗಂಗಾ ಟೂರಿಸ್ಟ್. 9480253807

25.10.2023, 26.11.2023, ದೆಹಲಿ, ಹರಿದ್ವಾರ್, ಅಯೋಧ್ಯಾ, ಕಾಶಿ,ಗಯಾ, ಪ್ರಯಾಗ್‌ರಾಜ್25.11.2023 ರಾಜಸ್ಥಾನ್ ಪ್ರವಾಸ 3.12.2023 ಗುಜರಾತ್, ಮಧ್ಯಪ್ರದೇಶ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

12 ದಿನಗಳ ನೇಪಾಳ, ಮುಕ್ತಿನಾಥಯಾತ್ರೆ. 10 ದಿನಗಳ ಗುಜರಾತ್. 12 ದಿನಗಳ ಮಧ್ಯಪ್ರದೇಶ. 8 ದಿನಗಳ ಕಾಶಿ,ನೈಮಿಶಾರಣ್ಯ. ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್ 9980270467, 9740228186, 080-41467722

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವೈವಾಹಿಕ

Brides Wanted

Brahmin

ವಧು ಬೇಕಾಗಿದೆ: ದಕ್ಷಿಣ ಕನ್ನಡ ಜಿಲ್ಲೆಯ ಅಂಗೀರಸ ಗೋತ್ರದ 30 ವರ್ಷದ ಬ್ರಾಹ್ಮಣ ವರನಿಗೆ ಶುದ್ಧ ಸಸ್ಯಾಹಾರಿ ವಧು. 8861548163

Kannada

ALLIANCE FOR 2001 born 5'8 educated Boy of Rich kannada family multiple Businesses in Bangalore & Hosur . Gowda's & Kuruba Suitable girls (080-69144008)

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
ನಿಮ್ಮ ಹೆಸರು ಬದಲಾವಣೆ ಆಗಿದೆಯೇ?
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9886213331 | 9901641752
9845114560 | 9900428036
9731810277 | 080- 45557163/164

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಥ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಆರ್ಚರಿಯಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಚಿನ್ನ ಗೆದ್ದ ಅಭಿಷೇಕ್ ವರ್ಮಾ ಮತ್ತು ಓಜಸ್ ದೇವತಾಳೆ– ಪಿಟಿಐ ಚಿತ್ರ (ಎಡ) ಚಿನ್ನ ಗೆದ್ದ ಜ್ಯೋತಿ ಸುರೇಖಾ ವೆನ್ನಂ –ಎಎಫ್‌ಪಿ ಚಿತ್ರ

ಆರ್ಚರಿ: ಕಾಂಪೌಂಡ್ ಸ್ಪರ್ಧೆಗಳ ಅತ್ಯುತ್ತಮ ಸಾಧನೆ ● ಒಂದೇ ದಿನ ನಾಲ್ಕು ಪದಕ

ಓಜಸ್, ಜ್ಯೋತಿಗೆ ಹ್ಯಾಟ್ರಿಕ್ ಚಿನ್ನ

ಹಾಂಗ್‌ಝೌ (ಪಿಟಿಐ): ಭಾರತದ ಆರ್ಚರಿ ಸ್ಪರ್ಧಿಗಳಾದ ಓಜಸ್ ದೇವತಾಳೆ ಮತ್ತು ಜ್ಯೋತಿ ಸುರೇಖಾ ವೆನ್ನಂ ಅವರು 'ಹ್ಯಾಟ್ರಿಕ್' ಚಿನ್ನದ ಪದಕ ಗೆದ್ದು ಏಷ್ಯನ್ ಕ್ರೀಡಾಕೂಟವನ್ನು ಸ್ಮರಣೀಯವಾಗಿಸಿಕೊಂಡರು.

ಕಾಂಪೌಂಡ್ ಆರ್ಚರಿಯಲ್ಲಿ ದಕ್ಷಿಣ ಕೊರಿಯಾದ ಪ್ರಾಬಲ್ಯವನ್ನು ಕೊನೆಗೊಳಿಸಲು ಭಾರತದ ಬಿಲ್ಲುಗಾರರು ಯಶಸ್ವಿಯಾದರು. ಕಾಂಪೌಂಡ್ ಮತ್ತು ರಿಕರ್ವ್ ವಿಭಾಗದಲ್ಲಿ ಭಾರತ ಒಟ್ಟು ಒಂಬತ್ತು ಪದಕಗಳನ್ನು ಗೆದ್ದುಕೊಂಡಿತು. 2018ರ ಜಕಾರ್ತಾ ಕೂಟದ ಆರ್ಚರಿಯಲ್ಲಿ ಎರಡು ಬೆಳ್ಳಿ ಪದಕ ಮಾತ್ರ ಜಯಿಸಿತ್ತು.

ಕಾಂಪೌಂಡ್ ವಿಭಾಗದಲ್ಲಿ ಪಣಕ್ಕಿಟ್ಟಿದ್ದ ಎಲ್ಲ ಐದೂ ಚಿನ್ನದ ಪದಕಗಳನ್ನು ಭಾರತದ ಬಿಲ್ಲುಗಾರರು ಬಾಚಿಕೊಂಡರು.

ಶನಿವಾರ ನಡೆದ ಮಹಿಳೆಯರ ಕಾಂಪೌಂಡ್ ವಿಭಾಗದ ಫೈನಲ್‌ನಲ್ಲಿ ಜ್ಯೋತಿ, 149–145 ರಿಂದ ಕೊರಿಯಾದ ಸೊ ಚೆವೊನ್ ಅವರನ್ನು ಮಣಿಸಿ ಬಂಗಾರದ ಪದಕಗಳ ಹ್ಯಾಟ್ರಿಕ್ ಪೂರೈಸಿದರು. ಇದಕ್ಕೂ ಮೊದಲು ಅವರು ಮಿಶ್ರ ತಂಡ ವಿಭಾಗ ಮತ್ತು ಮಹಿಳೆಯರ ತಂಡ ವಿಭಾಗದ ಚಿನ್ನ ಗೆದ್ದಿದ್ದರು.

ಮೊದಲ ಸುತ್ತಿನ ಕೊನೆಯಲ್ಲಿ ಒಂದು ಪಾಯಿಂಟ್ಸ್ ಕಳೆದುಕೊಂಡ ಜ್ಯೋತಿ 29–30 ರಿಂದ ಹಿನ್ನಡೆ ಅನುಭವಿಸಿದ್ದರು. ಆ ಬಳಿಕ ನಿಖರ ಪ್ರದರ್ಶನ ನೀಡಿ ನಾಲ್ಕು ಪಾಯಿಂಟ್ಸ್‌ಗಳ ಅಂತರದಿಂದ ಪಂದ್ಯ ತಮ್ಮದಾಗಿಸಿಕೊಂಡರು.

'ನನ್ನ ಭಾವನೆಗಳನ್ನು ವ್ಯಕ್ತಪಡಿಸಲು ಪದಗಳೇ ಸಿಗುತ್ತಿಲ್ಲ. ಈ ಸಂತಸದ ಅಲೆಯಿಂದ ಹೊರಬರಲು ಅಲ್ಪ ಸಮಯ ಬೇಕು' ಎಂದು ಏಷ್ಯನ್ ಗೇಮ್ಸ್ ಇತಿಹಾಸದಲ್ಲಿ ಆರ್ಚರಿಯಲ್ಲಿ ಭಾರತಕ್ಕೆ ಮೊದಲ ವೈಯಕ್ತಿಕ ಚಿನ್ನ ಗೆದ್ದುಕೊಟ್ಟ ಜ್ಯೋತಿ ಪ್ರತಿಕ್ರಿಯಿಸಿದರು.

ಇದೇ ವಿಭಾಗದ ಕಂಚಿನ ಪದಕ ಅದಿತಿ ಸ್ವಾಮಿ ಕೊರಳಿಗೇರಿಸಿಕೊಂಡರು. 17 ವರ್ಷದ ಅವರು ಮೂರನೇ ಸ್ಥಾನಕ್ಕಾಗಿ ನಡೆದ ಹಣಾಹಣಿಯಲ್ಲಿ 146–140 ರಿಂದ ಇಂಡೊನೇಷ್ಯಾದ ರತೀಹ್ ಝಿಲಿಝುತಿ ಫದ್ಲಿ ಅವರನ್ನು ಮಣಿಸಿದರು. ಎರಡು ತಿಂಗಳ ಹಿಂದೆ ಬರ್ಲಿನ್‌ನಲ್ಲಿ ನಡೆದಿದ್ದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಅದಿತಿ ಚಿನ್ನ ಗೆದ್ದಿದ್ದರು.

ಪುರುಷರ ಕಾಂಪೌಂಡ್ ವೈಯಕ್ತಿಕ ವಿಭಾಗದಲ್ಲಿ ನಡೆದ 'ಆಲ್ ಇಂಡಿಯನ್ ಫೈನಲ್'ನಲ್ಲಿ ಓಜಸ್ ಅವರ ಕೈಮೇಲಾಯಿತು. ನಿಖರ ಗುರಿ ಸಾಧಿಸಿದ ಅವರು 149–147 ರಿಂದ ಅಭಿಷೇಕ್ ವರ್ಮಾ ವಿರುದ್ಧ ಗೆದ್ದರು. ಬರ್ಲಿನ್‌ನಲ್ಲಿ ನಡೆದಿದ್ದ ವಿಶ್ವ ಚಾಂಪಿಯನ್‌ಷಿಪ್‌ಅನ್ನು ಗೆದ್ದುಕೊಂಡಿದ್ದ 21 ವರ್ಷದ ಓಜಸ್ ಕೇವಲ ಒಂದು ಪಾಯಿಂಟ್ಸ್ ಮಾತ್ರ ಕಳೆದುಕೊಂಡರು. ಓಜಸ್ ಅವರು ಮಿಶ್ರ ಡಬಲ್ಸ್ ಮತ್ತು ಪುರುಷರ ತಂಡ ವಿಭಾಗದಲ್ಲೂ ಚಿನ್ನ ಜಯಿಸಿದ್ದರು.

'ಇದು ನನ್ನ ಮೊದಲ ಏಷ್ಯನ್ ಗೇಮ್ಸ್ ಆಗಿದ್ದು, ಕಾಂಪೌಂಡ್ ವಿಭಾಗದ ಎಲ್ಲ ಮೂರೂ ಸ್ಪರ್ಧೆಗಳಲ್ಲಿ ಚಿನ್ನ ಗೆದ್ದಿದ್ದೇನೆ. ಇದಕ್ಕಿಂತ ಹೆಚ್ಚಿನದ್ದು ಇನ್ನೇನು ಬೇಕು? ಕನಸಿನ ಲೋಕದಲ್ಲಿರುವಂತೆ ಭಾಸವಾಗುತ್ತಿದೆ' ಎಂದು ದೇವತಾಳೆ ಹೇಳಿದರು.

ಪದಕ ಪಟ್ಟಿ (ಅಗ್ರ 10 ದೇಶ)

ರ್‍ಯಾಂಕ್	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	200	111	71	382
2	ಜಪಾನ್	51	66	69	186
3	ದಕ್ಷಿಣ ಕೊರಿಯಾ	42	59	89	190
4	**ಭಾರತ**	28	38	41	107
5	ಉಜ್ಬೇಕಿಸ್ತಾನ	21	18	31	70
6	ಚೀನಾ ತೈಪೆ	18	20	28	66
7	ಇರಾನ್	13	21	19	53
8	ಥಾಯ್ಲೆಂಡ್	12	14	32	58
9	ಬಹರೇನ್	12	3	5	20
10	ಉತ್ತರ ಕೊರಿಯಾ	11	18	10	39

ಭಾರತಕ್ಕೆ ದೊರೆತ ಪದಕಗಳು

ಕ್ರೀಡೆ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಅಥ್ಲೆಟಿಕ್ಸ್	6	14	9	29
ಶೂಟಿಂಗ್	7	9	6	22
ಆರ್ಚರಿ	5	2	2	9
ಕುಸ್ತಿ	0	1	5	6
ಸ್ಕ್ವಾಷ್	2	1	2	5
ರೋಯಿಂಗ್	0	2	3	5
ಬಾಕ್ಸಿಂಗ್	0	1	4	5
ಸೇಲಿಂಗ್	0	1	2	3
ಬ್ಯಾಡ್ಮಿಂಟನ್	1	1	1	3
ಕ್ರಿಕೆಟ್	2	0	0	2
ಕಬಡ್ಡಿ	2	0	0	2
ಟೆನಿಸ್	1	1	0	2
ಈಕ್ವೆಸ್ಟ್ರಿಯನ್	1	0	1	2
ಹಾಕಿ	1	0	1	2
ಚೆಸ್	0	2	0	2
ಸ್ಕೇಟಿಂಗ್	0	0	2	2
ಗಾಲ್ಫ್	0	1	0	1
ಬ್ರಿಜ್	0	1	0	1
ವುಶು	0	1	0	1
ಟೇಬಲ್ ಟೆನಿಸ್	0	0	1	1
ಸೆಪಕ್ ಟಕ್ರಾ	0	0	1	1
ಕೆನೊಯಿಂಗ್	0	0	1	1
ಒಟ್ಟು	28	38	41	107

ಹಾಕಿ: ಮಹಿಳಾ ತಂಡಕ್ಕೆ ಕಂಚು

ಹಾಂಗ್‌ಝೌ (ಪಿಟಿಐ): ಸೆಮಿಫೈನಲ್‌ನ ಆಘಾತಕಾರಿ ಸೋಲಿನಿಂದ ಚೇತರಿಸಿಕೊಂಡ ಭಾರತ ವನಿತೆಯರ ಹಾಕಿ ತಂಡ ಶನಿವಾರ 2–1 ಗೋಲುಗಳಿಂದ ಜಪಾನ್ ತಂಡವನ್ನು ಸೋಲಿಸಿ ಏಷ್ಯನ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗೆದ್ದುಕೊಂಡಿತು.

ವಿಶ್ವ ಕ್ರಮಾಂಕದಲ್ಲಿ ಏಳನೇ ಸ್ಥಾನದಲ್ಲಿರುವ ಭಾರತ, ಇಲ್ಲಿ ಚಿನ್ನ ಗೆಲ್ಲುವ ಫೆವರೀಟ್ ಆಗಿತ್ತು. ಆದರೆ ಚೀನಾ ಎದುರು ಗುರುವಾರ 0–4 ಗೋಲುಗಳ ಸೋಲು ಆ ಲೆಕ್ಕಾಚಾರ ತಲೆಕೆಳಗೆ ಮಾಡಿತ್ತು.

ಈ ಗೆಲುವಿನ ಮೂಲಕ 2018ರ ಜಕಾರ್ತಾ ಕ್ರೀಡೆಗಳಲ್ಲಿ ಜಪಾನ್ ಕೈಲಿ ಅನುಭವಿಸಿದ 0–1 ಸೋಲಿಗೆ ಭಾರತ ಸೇಡು ತೀರಿಸಿಕೊಂಡಿತು. ಜಪಾನ್ ಆ ಬಾರಿ ಚಿನ್ನ ಗೆದ್ದುಕೊಂಡಿತ್ತು.

ಸಾತ್ವಿಕ್‌ಸಾಯಿರಾಜ್ ಮತ್ತು ಚಿರಾಗ್ ಶೆಟ್ಟಿ (ಬಲ) ಅವರು ಕೋಚ್ ಪುಲ್ಲೇಲ ಗೋಪಿಚಂದ್ (ಮಧ್ಯದಲ್ಲಿ) ಜತೆ ಸಂತಸ ಹಂಚಿಕೊಂಡರು –ಪಿಟಿಐ ಚಿತ್ರ

ಬ್ಯಾಡ್ಮಿಂಟನ್: ಸಾತ್ವಿಕ್– ಚಿರಾಗ್ ಜೋಡಿಗೆ ಐತಿಹಾಸಿಕ ಬಂಗಾರ

ಹಾಂಗ್‌ಝೌ (ಪಿಟಿಐ): ಭಾರತದ ಸ್ಟಾರ್ ಜೋಡಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಏಷ್ಯನ್ ಕ್ರೀಡಾಕೂಟದ ಬ್ಯಾಡ್ಮಿಂಟನ್‌ನ ಪುರುಷರ ಡಬಲ್ಸ್‌ನಲ್ಲಿ ಐತಿಹಾಸಿಕ ಸಾಧನೆ ಮೆರೆದರು. ಬ್ಯಾಡ್ಮಿಂಟನ್‌ನಲ್ಲಿ ದೇಶಕ್ಕೆ ಮೊದಲ ಚಿನ್ನದ ಪದಕವನ್ನು ಅವರು ತಂದುಕೊಟ್ಟರು.

ಶನಿವಾರ ನಡೆದ ಫೈನಲ್ ಪಂದ್ಯದಲ್ಲಿ ವಿಶ್ವದ ಮೂರನೇ ಕ್ರಮಾಂಕದ ಭಾರತದ ಜೋಡಿಯು 21-18 21-16 ರಿಂದ ದಕ್ಷಿಣ ಕೊರಿಯಾದ ಚೊಯ್ ಸೊಲ್ ಗ್ಯು- ಕಿಮ್ ವೊನ್ ಹೊ ಅವರನ್ನು ಮಣಿಸಿತು. ಈ ಕೂಟದಲ್ಲಿ ಭಾರತಕ್ಕೆ ಬ್ಯಾಡ್ಮಿಂಟನ್‌ನಲ್ಲಿ ದೊರತ ಮೂರನೇ ಪದಕ ಇದಾಗಿದೆ. ತಂಡ ವಿಭಾಗದಲ್ಲಿ ಭಾರತದ ಪುರುಷರ ಬಳಗ ಬೆಳ್ಳಿ ಗೆದ್ದರೆ, ಪುರುಷರ ಸಿಂಗಲ್ಸ್‌ನಲ್ಲಿ ಎಚ್‌.ಎಸ್‌. ಪ್ರಣಯ್ ಕಂಚು ಜಯಿಸಿದ್ದರು.

1982ರ ಕೂಟದಲ್ಲಿ ಪುರುಷರ ಡಬಲ್ಸ್‌ನ ಲೆರಾಯ್ ಡಿಸಾ ಮತ್ತು ಪ್ರದೀಪ್ ಗಂಧೆ ಜೋಡಿಯು ಭಾರತಕ್ಕೆ ಬ್ಯಾಡ್ಮಿಂಟನ್‌ನಲ್ಲಿ ಮೊದಲ ಬಾರಿ ಕಂಚು ಗೆದ್ದುಕೊಟ್ಟಿತ್ತು. ಆ ಆವೃತ್ತಿಯಲ್ಲಿ 5 ಕಂಚು, 2018 ಆವೃತ್ತಿಯಲ್ಲಿ ಒಂದು ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಭಾರತ ಬ್ಯಾಡ್ಮಿಂಟನ್‌ನಲ್ಲಿ ಗೆದ್ದಿತ್ತು. 58 ವರ್ಷಗಳಿಂದ ಎದುರಿಸುತ್ತಿದ್ದ ಚಿನ್ನದ ಕೊರತೆಯನ್ನು ಕೊನೆಗೂ ಸಾತ್ವಿಕ್- ಚಿರಾಗ್ ಜೋಡಿ ನೀಗಿಸಿದೆ.

ಇಲ್ಲಿ ಚಾಂಪಿಯನ್ ಆದ ಭಾರತದ ಜೋಡಿಯು ಮಂಗಳವಾರ ಬಿಡುಗಡೆಯಾಗಲಿರುವ ಬಿಡಬ್ಲ್ಯುಎಫ್ ರ‍್ಯಾಂಕಿಂಗ್ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆಯಲಿದೆ.

ಫೈನಲ್ ಪಂದ್ಯದ ಮೊದಲ ಗೇಮ್‌ನಲ್ಲಿ ಭಾರತದ ಜೋಡಿಗೆ ಕೊರಿಯಾ ಆಟಗಾರರಿಂದ ಪ್ರಬಲ ಪೈಪೋಟಿ ಎದುರಾಯಿತು. ಆರಂಭದಲ್ಲಿ ಚುರುಕಿನ ಆಟವಾಡಿದ ಕೊರಿಯಾದ ಜೋಡಿ ತುಸು ಮುನ್ನಡೆ ಪಡೆಯಿತು. 10–13ರಿಂದ ಹಿನ್ನಡೆಯಲ್ಲಿದ್ದಾಗ ಭಾರತದ ಆಟಗಾರರು ಪುಟಿದೆದ್ದು, ನಿಖರವಾದ ಆಟದ ಮೂಲಕ ಹಿಡಿತ ಸಾಧಿಸಿದರು.

ಎರಡನೇ ಗೇಮ್‌ನ ಆರಂಭದಿಂದಲೇ ಮುನ್ನಡೆ ಪಡೆದ ಸಾತ್ವಿಕ್- ಚಿರಾಗ್ ಜೋಡಿ, ಬಿರುಸಿನ ಸ್ಮ್ಯಾಷ್, ಆಕರ್ಷಕ ರಿಟರ್ನ್ ಮತ್ತು ಡ್ರಾಪ್‌ಶಾಟ್‌ಗಳ ಮೂಲಕ ಎದುರಾಳಿ ಆಟಗಾರರನ್ನು ನಿಬ್ಬೆರಗಾಗಿಸಿದರು. ಗೆಲುವು ಸಾಧಿಸುತ್ತಿದ್ದಂತೆ ಮೈದಾನದಲ್ಲಿ ಮಲಗಿ ಸಂಭ್ರಮಿಸಿದರು. ರ‍್ಯಾಕೆಟ್ ಅನ್ನು ಪ್ರೇಕ್ಷಕರತ್ತ ಎಸೆದ ಅವರು, ಅಂಗಣದಲ್ಲಿ ಕುಣಿದಾಡಿದರು.

ಬೆಳ್ಳಿ ಗೆದ್ದ ಪುರುಷರ ಚೆಸ್ ತಂಡದ ಅರ್ಜುನ್ ಇರಿಗೇಶಿ, ಪ್ರಜ್ಞಾನಂದ, ಡಿ. ಗುಕೇಶ್, ವಿದಿತ್ ಗುಜರಾತಿ, ಹರಿಕೃಷ್ಣ–ಪಿಟಿಐ ಚಿತ್ರ

ತಂಡ ವಿಭಾಗದಲ್ಲಿ ಚೀನಾ, ಇರಾನ್‌ಗೆ ಚಿನ್ನದ ಪದಕ

ಚೆಸ್: ಭಾರತಕ್ಕೆ ಎರಡು ಬೆಳ್ಳಿ

ಹಾಂಗ್‌ಝೌ (ಪಿಟಿಐ): ಭಾರತ ಪುರುಷರ ಮತ್ತು ಮಹಿಳಾ ತಂಡಗಳು, ಏಷ್ಯನ್ ಕ್ರೀಡಾಕೂಟದ ಚೆಸ್‌ನಲ್ಲಿ ನಿರೀಕ್ಷೆಯಂತೆ ಶನಿವಾರ ಬೆಳ್ಳಿಯ ಪದಕಗಳನ್ನು ಗೆದ್ದುಕೊಂಡವು.

ಕಳೆದ ಕೆಲವು ಸುತ್ತುಗಳಿಂದ ಭಾರತ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಎರಡನೇ ಸ್ಥಾನದಲ್ಲೇ ಇತ್ತು. ಮಹಿಳೆಯರ ವಿಭಾಗದ ಕೊನೆಯ ಸುತ್ತಿನಲ್ಲಿ ನಿರೀಕ್ಷೆಯಂತೆ ಭಾರತ 4–0 ಯಿಂದ ದಕ್ಷಿಣ ಕೊರಿಯಾ ಮೇಲೆ ಜಯಗಳಿಸಿತು. ಡಿ.ಹಾರಿಕಾ, ವೈಶಾಲಿ ಆರ್., ವಂತಿಕಾ ಅಗರವಾಲ್ ಮತ್ತು ಸವಿತಾಶ್ರೀ ಭಾಸ್ಕರ್ ತಮ್ಮ ತಮ್ಮ ಪಂದ್ಯಗಳನ್ನು ಗೆದ್ದುಕೊಂಡರು.

ಇನ್ನೊಂದೆಡೆ ಅಗ್ರಸ್ಥಾನದಲ್ಲಿದ್ದ, ಅಗ್ರ ಶ್ರೇಯಾಂಕದ ಚೀನಾ ಸ್ವರ್ಣ ಗೆದ್ದುಕೊಂಡಿತು. ಅದು ಅಂತಿಮ ಸುತ್ತಿನಲ್ಲಿ ದುರ್ಬಲ ಯುಎಇ ವಿರುದ್ಧ 4–0 ಜಯ ದಾಖಲಿಸಿತು. ಅದು ಗರಿಷ್ಠ 18ರಲ್ಲಿ 17 ಮ್ಯಾಚ್ ಪಾಯಿಂಟ್ಸ್ ಸಂಗ್ರಹಿಸಿತು. ಭಾರತ 15 ಮ್ಯಾಚ್ ಪಾಯಿಂಟ್ಸ್ ಸಂಗ್ರಹಿಸಿತು. ಕಜಕಸ್ತಾನ ಕಂಚಿನ ಪದಕ ಪಡೆಯಿತು.

ಬೆಳ್ಳಿ ಪದಕ ಗೆದ್ದ ಮಹಿಳೆಯರ ಚೆಸ್ ತಂಡದ ಕೋನೇರು ಹಂಪಿ, ಡಿ. ಹಾರಿಕಾ, ವೈಶಾಲಿ, ವಂತಿಕಾ ಅಗರ್‌ವಾಲ್ ಮತ್ತು ಸವಿತಾಶ್ರೀ ಭಾಸ್ಕರ್ –ಪಿಟಿಐ ಚಿತ್ರ

ಅಗ್ರ ಶ್ರೇಯಾಂಕದ ಪುರುಷರ ತಂಡ ಪುರುಷರ ತಂಡ 3.5–0.5 ರಿಂದ ಫಿಲಿಪೀನ್ಸ್ ವಿರುದ್ಧ ಗೆಲುವಿನೊಡನೆ ಅಭಿಯಾನವನ್ನು ಬೆಳ್ಳಿ ಪದಕದೊಡನೆ ಮುಗಿಸಿತು. ಮೂರನೇ ಶ್ರೇಯಾಂಕದ ಇರಾನ್ 16 ಮ್ಯಾಚ್ ಪಾಯಿಂಟ್ಸ್ ಸಂಗ್ರಹಿಸಿ ಮೊದಲ ಸ್ಥಾ ಪಡದರೆ, ಭಾರತ 15 ಮ್ಯಾಚ್ ಪಾಯಿಂಟ್ಸ್ ಪಡೆಯಿತು. ಉಜ್ಬೇಕಿಸ್ತಾನ ಕಂಚಿನ ಪದಕ ಪಡೆದರೆ, ಚೀನಾ ನಾಲ್ಕನೇ ಸ್ಥಾನ ಗಳಿಸಿತು. ಅರ್ಜುನ್ ಇರಿಗೇಶಿ, ವಿದಿತ್ ಗುಜರಾತಿ ಮತ್ತು ಹರಿಕೃಷ್ಣ ಅವರು ಫಿಲಿಪೀನ್ಸ್ ಎದುರಾಳಿಗಳ ವಿರುದ್ಧ ತಮ್ಮ ಪಂದ್ಯಗಳನ್ನು ಗೆದ್ದುಕೊಂಡರೆ, ಪ್ರಜ್ಞಾನಂದ ತಮ್ಮ ಪಂದ್ಯವನ್ನು 'ಡ್ರಾ' ಮಾಡಿಕೊಂಡರು.

ಕುಸ್ತಿ: ದೀಪಕ್ ಪೂನಿಯಾಗೆ ಬೆಳ್ಳಿ

ದೀಪಕ್

ಹಾಂಗ್‌ಝೌ (ಪಿಟಿಐ): ಭಾರತದ ದೀಪಕ್ ಪೂನಿಯಾ ಅವರು ಏಷ್ಯನ್ ಕ್ರೀಡಾಕೂಟದ 86 ಕೆ.ಜಿ. ಫ್ರೀಸ್ಟೈಲ್ ಕುಸ್ತಿ ಸ್ಪರ್ಧೆಯಲ್ಲಿ ಬೆಳ್ಳಿಯ ಪದಕ ಗೆದ್ದುಕೊಂಡರು. ಅವರು ಶನಿವಾರ ನಡೆದ ಫೈನಲ್‌ನಲ್ಲಿ ಎಂಟು ಬಾರಿಯ ವಿಶ್ವ ಚಾಂಪಿಯನ್‌ಷಿಪ್ ಪದಕ ವಿಜೇತ ಹಸನ್ ಯಾಝ್ದಾನಿ ಅವರಿಗೆ ಸಾಟಿಯಾಗಲಿಲ್ಲ.

ವಿಶೇಷ ಎಂದರೆ ದೀಪಕ್ ಅವರಿಗೆ ಬಾಲ್ಯದಲ್ಲಿ ಹಸನ್ ಅವರು ಅಚ್ಚುಮೆಚ್ಚಿನ ಕುಸ್ತಿಪಟುವಾಗಿದ್ದರು. ಹಸನ್ ಎರಡು ಬಾರಿ ಒಲಿಂಪಿಕ್ ಚಾಂಪಿಯನ್ ಕೂಡ.

ನೂರ್ ಸುಲ್ತಾನ್‌ನಲ್ಲಿ ನಡೆದ 2019ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ದೀಪಕ್ ಫೈನಲ್ ತಲುಪಿದ್ದರು. ಆದರೆ ಇರಾನ್‌ನ ಈ ಪೈಲ್ವಾನ್ ಜೊತೆ ದೀಪಕ್ ಅವರಿಗೆ ಪಾದದ ನೋವಿನ ಕಾರಣ ಸೆಣಸಾಡಲು ಆಗಲಿಲ್ಲ. ಹೀಗಾಗಿ ರಜತ-ಪದಕಕ್ಕೆ ಸೀಮಿತಗೊಂಡಿದ್ದರು.

'ಕೇತ್ಲಿ ಪೈಲ್ವಾನ್' ಎಂದು ಖ್ಯಾತರಾಗಿರುವ 24 ವರ್ಷದ ದೀಪಕ್ ಅವರಿಗೆ ಪಾಯಿಂಟ್ ತಂದುಕೊಡುವ ಒಂದೂ ಪಟ್ಟು ಹಾಕಲು ಆಗಲಿಲ್ಲ. ಮೊದಲ ಅವಧಿಯಲ್ಲೇ ಯಾಝ್ದಾನಿ ಅವರು 8–0 ಅಂತರದ ಅಧಿಕಾರಯುತ ಮುನ್ನಡೆ ಪಡೆದಿದ್ದರು. ಎರಡನೇ ಸುತ್ತಿನಲ್ಲಿ ಅವರು ಬೇಗನೇ ಗೆಲುವು ಖಚಿತ ಪಡಿಸಿಕೊಂಡು ಚಿನ್ನ ಉಳಿಸಿಕೊಂಡರು.

ಯಶ್ ತುನಿರ್ (74 ಕೆ.ಜಿ), ವಿಕಿ (97 ಕೆ.ಜಿ) ಮತ್ತು ಸುಮಿತ್ ಮಲಿಕ್ (125 ಕೆ.ಜಿ) ಅವರು ಪದಕ ಸುತ್ತು ತಲುಪುವ ಮೊದಲೇ ಹೊರಬಿದ್ದರು.

ಒಟ್ಟು 6 ಪದಕ: ಭಾರತ ಹಾಂಗ್‌ಝೌ ಕೂಟದ ಕುಸ್ತಿಯಲ್ಲಿ ಒಟ್ಟು ಆರು ಪದಕಗಳನ್ನು ಗೆದ್ದುಕೊಂಡಂತೆ ಆಯಿತು. ಇದರಲ್ಲಿ ಒಂದೂ ಚಿನ್ನ ಇಲ್ಲ. ನಿರಾಶೆಯ ವಿಷಯವೆಂದರೆ ಭಜರಂಗ್ ಪೂನಿಯಾ ಅನುಭವಿಸಿದ ಹೀನಾಯ ಸೋಲು.

ಕಬಡ್ಡಿ: ಭಾರತಕ್ಕೆ ಚಿನ್ನ ಡಬಲ್

ಪುರುಷರ ವಿಭಾಗದ ಫೈನಲ್‌ನಲ್ಲಿ ವಿವಾದ, ಗೊಂದಲ: ಇರಾನ್‌ಗೆ ಬೆಳ್ಳಿ ಪದಕ

ಹಾಂಗ್‌ಝೌ (ಪಿಟಿಐ): ಭಾರತ ಪುರುಷರ ಕಬಡ್ಡಿ ತಂಡದವರು ಏಷ್ಯನ್ ಗೇಮ್ಸ್ ಚಿನ್ನವನ್ನು ಮರಳಿ ಪಡೆದುಕೊಂಡರೆ, ಮಹಿಳಾ ತಂಡದವರೂ ಚಾಂಪಿಯನ್ ಆಗಿ 'ಸ್ವರ್ಣ ಡಬಲ್' ಸಾಧನೆಗೆ ಕಾರಣರಾದರು.

ವಿವಾದ ಮತ್ತು ಗೊಂದಲದಿಂದ ಸುಮಾರು ಒಂದು ಗಂಟೆಯಷ್ಟು ಸ್ಥಗಿತಗೊಂಡಿದ್ದ ಪುರುಷರ ವಿಭಾಗದ ಫೈನಲ್‌ನಲ್ಲಿ ಭಾರತ 33–29 ರಿಂದ ಇರಾನ್ ತಂಡವನ್ನು ಮಣಿಸಿತು. ಜಿದ್ದಾಜಿದ್ದಿನ ಸೆಣಸಾಟ ನಡೆದ ಮಹಿಳೆಯರ ವಿಭಾಗದ ಫೈನಲ್‌ನಲ್ಲಿ 26–25 ರಿಂದ ಚೀನಾ ತೈಪೆ ತಂಡವನ್ನು ಪರಾಭವಗೊಳಿಸಿತು. ಮಹಿಳಾ ತಂಡ ಗೆದ್ದ ಚಿನ್ನ, ಈ ಕ್ರೀಡಾಕೂಟದಲ್ಲಿ ಭಾರತದ 100ನೇ ಪದಕ ಎನಿಸಿಕೊಂಡಿತು.

ಪುರುಷರ ವಿಭಾಗದ ಫೈನಲ್ ಪಂದ್ಯದಲ್ಲಿ ವಿವಾದ ತಲೆದೋರಿತು. ಒಂದು ನಿಮಿಷದ ಆಟ ಬಾಕಿಯಿದ್ದಾಗ ಎರಡೂ ತಂಡಗಳು 28–28 ರಲ್ಲಿ ಸಮಬಲ ಸಾಧಿಸಿದ್ದವು. ಈ ವೇಳೆ ಭಾರತ ತಂಡದ ನಾಯಕ ಪವನ್ ಸೆಹ್ರಾವತ್ 'ಡು ಆರ್ ಡೈ' ರೇಡ್‌ಗೆ ಹೋದರು.

ಪವನ್ ಎದುರಾಳಿ ಆಟಗಾರರನ್ನು ಟಚ್ ಮಾಡದೆ, ಅಂಕಣದ ಲಾಬಿ ಆವರಣಕ್ಕೆ ಹೋದರು. ಈ ವೇಳೆ ಇರಾನ್‌ನ ಅಮಿರ್‌ಹೊಸೇನ್ ಬಸ್ತಮಿ ಮತ್ತು ಇತರ ಮೂವರು ಡಿಫೆಂಡರ್‌ಗಳು, ಪವನ್ ಅವರನ್ನು ಅಂಕಣದಿಂದ ಹೊರಹಾಕಲು ಪ್ರಯತ್ನಿಸಿದ್ದು ಗೊಂದಲಕ್ಕೆ ಕಾರಣವಾಯಿತು.

ಪವನ್ ಅವರು ಔಟ್ ಆಗಿದ್ದಾರೆಯೇ ಮತ್ತು ಅವರನ್ನು ಹೊರಹಾಕಲು ಮುಂದಾದ ಇರಾನ್‌ನ ಡಿಫೆಂಡರ್‌ಗಳು ಔಟ್ ಆಗಿದ್ದಾರೆಯೇ ಎಂಬ ಬಗ್ಗೆ ಗೊಂದಲ ಉಂಟಾಯಿತು.

ಫೈನಲ್ ಪಂದ್ಯ ಗೆದ್ದ ಪುರುಷರ ತಂಡದ ಆಟಗಾರರ ಸಂಭ್ರಮ –ಎಎಫ್‌ಪಿ ಚಿತ್ರ

ಅದೇ ರೀತಿ, ಪಾಯಿಂಟ್ ನೀಡಲು ಹಳೆಯ ಅಥವಾ ಹೊಸ ನಿಯಮಗಳಲ್ಲಿ ಯಾವುದನ್ನು ಅನುಸರಿಸಬೇಕು ಎಂಬ ಬಗ್ಗೆ ತೀರ್ಪುಗಾರರಿಗೆ ಸ್ಪಷ್ಟತೆ ಇರಲಿಲ್ಲ.

ಹೊಸ ನಿಯಮದ ಪ್ರಕಾರ ಪವನ್ ಅವರು ಔಟ್ ಆಗಬೇಕಿತ್ತು. ಹಳೆಯ ನಿಯಮದ ಪ್ರಕಾರ ಪವನ್ ಮತ್ತು ಇರಾನ್‌ನ ನಾಲ್ವರು ಡಿಫೆಂಡರ್‌ಗಳೂ ಔಟ್ ಆಗಬೇಕು. ಹಾಗಾದಲ್ಲಿ ಭಾರತಕ್ಕೆ ನಾಲ್ಕು, ಇರಾನ್‌ಗೆ ಒಂದು ಪಾಯಿಂಟ್ ಸಿಗಬೇಕು. ರೆಫರಿಗಳು ಇರಾನ್‌ಗೆ ಪಾಯಿಂಟ್ ನೀಡಿದಾಗ ಭಾರತದ ಆಟಗಾರರು ಅಂಕಣದಲ್ಲಿ ಕುಳಿತು ಪ್ರತಿಭಟಿಸಿದರೆ, ಭಾರತಕ್ಕೆ ಪಾಯಿಂಟ್ ನೀಡಲು ಮುಂದಾದಾಗ ಇರಾನ್ ಆಟಗಾರರು ಪ್ರತಿಭಟಿಸಿದರು.

ವಾದ-ವಿವಾದ ಸುಮಾರು ಒಂದು ಗಂಟೆ ಮುಂದುವರಿಯಿತು. ಅಂತಿಮವಾಗಿ ತೀರ್ಪುಗಾರರು ಭಾರತಕ್ಕೆ 4, ಇರಾನ್‌ಗೆ 1 ಪಾಯಿಂಟ್ಸ್ ನೀಡಿದರು. ಇದರಿಂದ ಭಾರತ 32–29ರಿಂದ ಮುನ್ನಡೆ ಸಾಧಿಸಿತು. ಮತ್ತೆ ಆಟ ಶುರುವಾದಾಗ ಕೊನೆಯ ಕೆಲವು ಸೆಕೆಂಡುಗಳಲ್ಲಿ ಭಾರತ ಮತ್ತೊಂದು ಪಾಯಿಂಟ್ಸ್ ಗಳಿಸಿ 33–29 ರಿಂದ ಜಯಿಸಿತು.

ಏಷ್ಯನ್ ಗೇಮ್ಸ್‌ನಲ್ಲಿ ಸತತ ಏಳು ಚಿನ್ನ ಜಯಿಸಿದ್ದ ಭಾರತ ತಂಡ, ಜಕಾರ್ತಾದಲ್ಲಿ 2018ರಲ್ಲಿ ನಡೆದಿದ್ದ ಕೂಟದ ಸೆಮಿಫೈನಲ್‌ನಲ್ಲಿ ಇರಾನ್ ಎದುರು ಆಘಾತ ಅನುಭವಿಸಿತ್ತು. ಆ ಸೋಲಿಗೆ ಈ ಬಾರಿ ಮುಯ್ಯಿ ತೀರಿಸಿಕೊಂಡಿದೆ.

ಆರಂಭದಲ್ಲಿ ಆಕ್ರಮಣಕಾರಿ ಆಟವಾಡಿದ ಇರಾನ್ 10–6 ರಲ್ಲಿ ಮುನ್ನಡೆ ಸಾಧಿಸಿತು. ಮರುಹೋರಾಟ ನಡೆಸಿದ ಭಾರತ, ವಿರಾಮದ ವೇಳೆಗೆ 17–13 ರಿಂದ ಮೇಲುಗೈ ಪಡೆಯಿತು. ಎರಡನೇ ಅವಧಿಯ ಆರಂಭದ ಕೆಲವು ನಿಮಿಷ ಹಿಡಿತ ಸಾಧಿಸಿದ ಭಾರತ 24–19 ರಿಂದ ಮುನ್ನಡೆ ಗಳಿಸಿತು. ಈ ವೇಳೆ ಪುಟಿದೆದ್ದು ನಿಂತ ಇರಾನ್, ಎದುರಾಳಿಗಳನ್ನು 'ಆಲೌಟ್' ಮಾಡಿ 25–25 ರಿಂದ ಸಮಬಲ ಮಾಡಿತು. ಇದರಿಂದ ಪಂದ್ಯ ರೋಚಕ ಅಂತ್ಯ ಕಂಡಿತು.

ಚೀನಾ ತೈಪೆ ಸವಾಲು ಮೀರಿದ ಮಹಿಳೆಯರು

ಮಹಿಳಾ ವಿಭಾಗದ ಫೈನಲ್ ರೋಚಕತೆಯಿಂದ ಕೂಡಿತ್ತು. ಲೀಗ್ ಹಂತದಲ್ಲಿ ಉಭಯ ತಂಡಗಳ ನಡುವಣ ಹಣಾಹಣಿ 34–34 ರಲ್ಲಿ ಸಮಬಲದಲ್ಲಿ ಕೊನೆಗೊಂಡಿತ್ತು. ಇದರಿಂದ ಎಚ್ಚರಿಕೆಯಿಂದ ಆಟ ಆರಂಭಿಸಿದ ಭಾರತ, ವಿರಾಮದ ವೇಳೆಗೆ 14–9 ರಿಂದ ಮುನ್ನಡೆ ಸಾಧಿಸಿತ್ತು. ಎರಡನೇ ಅವಧಿಯಲ್ಲಿ ಚೀನಾ ತೈಪೆ ಆಟಗಾರ್ತಿಯರು ದಿಟ್ಟವಾಗಿ ಮರುಹೋರಾಟ ನಡೆಸಿದರೂ, ಒತ್ತಡ ಮೆಟ್ಟಿನಿಂತ ಭಾರತ ತಂಡ ಗೆಲುವು ಒಲಿಸಿಕೊಂಡಿತು.

ಮಹಿಳಾ ತಂಡ ಈ ಹಿಂದೆ 2010 ಮತ್ತು 2014ರ ಕೂಟದಲ್ಲಿ ಚಿನ್ನ ಜಯಿಸಿತ್ತು. 2018ರ ಕೂಟದ ಫೈನಲ್‌ನಲ್ಲಿ ಇರಾನ್ ಎದುರು ಸೋತು ಬೆಳ್ಳಿ ತನ್ನದಾಗಿಸಿಕೊಂಡಿತ್ತು.

ದಾಖಲೆ ಪದಕದೊಂದಿಗೆ ಅಭಿಯಾನಕ್ಕೆ ತೆರೆ

ಹಾಂಗ್‌ಝೌ (ಪಿಟಿಐ): ಭಾರತದ ಕ್ರೀಡಾಪಟುಗಳು ಪದಕಗಳ ಐತಿಹಾಸಿಕ ಶತಕ ಸಾಧನೆಯ ಮೂಲಕ 19ನೇ ಏಷ್ಯನ್ ಗೇಮ್ಸ್‌ನಲ್ಲಿ ತಮ್ಮ ಅಭಿಯಾನಕ್ಕೆ ತೆರೆ ಎಳೆದಿದ್ದಾರೆ.

ಕ್ರೀಡಾಕೂಟದ ಕೊನೆಯ ದಿನವಾದ ಭಾನುವಾರ ಕರಾಟೆ ಮತ್ತು ಆರ್ಟಿಸ್ಟಿಕ್ ಈಜು ನಡೆಯಲಿವೆಯಾದರೂ, ಭಾರತವು ಈ ವಿಭಾಗಗಳಲ್ಲಿ ಸ್ಪರ್ಧಿಗಳನ್ನು ಕಣಕ್ಕಿಳಿಸಿಲ್ಲ. ಆದ್ದರಿಂದ ಶನಿವಾರದ ಅಂತ್ಯಕ್ಕೆ ಒಟ್ಟು 107 ಪದಕಗಳೊಂದಿಗೆ ತನ್ನ ಅಭಿಯಾನ ಕೊನೆಗೊಳಿಸಿದೆ.

2018ರ ಜಕಾರ್ತಾ ಕೂಟಕ್ಕೆ ಹೋಲಿಸಿದರೆ, ಈ ಬಾರಿ ಹೆಚ್ಚುವರಿಯಾಗಿ 37 ಪದಕಗಳನ್ನು ಜಯಿಸಿದೆ. ಈ ಸಾಧನೆಯು 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಹೆಚ್ಚು ಪದಕಗಳನ್ನು ಗೆಲ್ಲುವ ಭರವಸೆ ಮೂಡಿಸಿದೆ. ಶುಕ್ರವಾರದ ಸ್ಪರ್ಧೆಗಳ ಕೊನೆಯಲ್ಲಿ 95 ಪದಕ ಜಯಿಸಿದ್ದ ಭಾರತ, ನೂರರ ಗಡಿ ದಾಟುವುದನ್ನು ಖಚಿತಪಡಿಸಿಕೊಂಡಿತ್ತು. ಶನಿವಾರ ಮತ್ತೆ 12 ಪದಕಗಳನ್ನು ಜಯಿಸಿತು.

ಶೂಟಿಂಗ್ (22) ಮತ್ತು ಅಥ್ಲೆಟಿಕ್ಸ್‌ನಲ್ಲಿ (29) ಒಟ್ಟು 51 ಪದಕಗಳನ್ನು ಗೆದ್ದದ್ದು, ಪದಕ ಗಳಿಕೆ ನೂರರ ಗಡಿ ದಾಟಲು ಕಾರಣವಾಯಿತು. ಪದಕ ನಿರೀಕ್ಷಿಸದೇ ಇದ್ದ ಕೆಲವು ಸ್ಪರ್ಧೆಗಳಲ್ಲಿ ಭಾರತದ ಕ್ರೀಡಾಪಟುಗಳು 'ಪೋಡಿಯಂ ಫಿನಿಷ್' ಮಾಡಿದ್ದು ಕೂಡಾ ಯಶಸ್ಸಿಗೆ ಹಾದಿಯೊದಗಿಸಿತು.

ಸುತೀರ್ಥಾ ಮುಖರ್ಜಿ ಮತ್ತು ಐಹಿಕಾ ಮುಖರ್ಜಿ ಅವರು ಚೀನಾದ ಬಲಿಷ್ಠ ಸ್ಪರ್ಧಿಗಳ ಸವಾಲನ್ನು ಬದಿಗೊತ್ತಿ ಟೇಬಲ್ ಟೆನಿಸ್‌ನಲ್ಲಿ ಕಂಚು ಜಯಿಸಿದ್ದು, ಮಹಿಳೆಯರ 5,000 ಮೀ. ಓಟದಲ್ಲಿ ಕೊನೆಯ 30 ಮೀ. ಇದ್ದಾಗ ವೇಗ ಹೆಚ್ಚಿಸಿ ಚಿನ್ನ ಗೆದ್ದ ಪಾರುಲ್ ಚೌಧರಿ ಅವರ ಸಾಧನೆಯು ಬಹುದಿನಗಳವರೆಗೆ ನೆನಪಿನಲ್ಲಿ ಉಳಿಯುವಂತದ್ದು.

ಜಾವೆಲಿನ್ ಥ್ರೋನಲ್ಲಿ 'ಸ್ಟಾರ್ ಅಥ್ಲೀಟ್' ನೀರಜ್ ಚೋಪ್ರಾಗೆ ಪೈಪೋಟಿ ಒಡ್ಡಿ ಬೆಳ್ಳಿ ಗೆದ್ದ ಕಿಶೋರ್ ಕುಮಾರ್ ಜೇನಾ ಅವರ ಸಾಧನೆಯೂ ಹಾಂಗ್‌ಝೌ ಕೂಟದ 'ಹೈಲೈಟ್'ಗಳಲ್ಲೊಂದು.

ಶತಕ ಸಾಧನೆಗೆ ಕನ್ನಡಿಗರ ಕಾಣಿಕೆ

ಭಾರತದ ಕ್ರೀಡಾಪಟುಗಳು ಪದಕಗಳ ಶತಕ ಸಾಧನೆಯಲ್ಲಿ ಕರ್ನಾಟಕದ ಕ್ರೀಡಾಳುಗಳ ಕಾಣಿಕೆಯೂ ಸೇರಿದೆ. ಕ್ರೀಡಾಪಟುಗಳು ಮತ್ತು ಕೋಚ್‌ಗಳಾಗಿ ಕರ್ನಾಟಕದವರು ಮಾಡಿದ ಕಾರ್ಯಕ್ಕೆ ತಕ್ಕ ಪ್ರತಿಫಲ ದೊರೆತಿದೆ.

ಅದಿತಿ ಅಶೋಕ್ (ಗಾಲ್ಫ್ –ಬೆಳ್ಳಿ)
ರೋಹನ್ ಬೋಪಣ್ಣ (ಟೆನಿಸ್ –ಚಿನ್ನ)
ಟಿ.ಎಸ್. ದಿವ್ಯಾ (ಶೂಟಿಂಗ್ –ಎರಡು ಬೆಳ್ಳಿ)
ರಾಜೇಶ್ವರಿ ಗಾಯಕವಾಡ (ಕ್ರಿಕೆಟ್–ಚಿನ್ನ)
ಮಿಥುನ್ ಮಂಜುನಾಥ್ (ಬ್ಯಾಡ್ಮಿಂಟನ್ –ತಂಡ ವಿಭಾಗ ಬೆಳ್ಳಿ)
ತೇಜಸ್ವಿನಿ ಬಾಯಿ (ಕಬಡ್ಡಿ– ಕೋಚ್)
ಕುಟ್ಟಪ್ಪ (ಬಾಕ್ಸಿಂಗ್ –ಕೋಚ್)

ರೋಹನ್ ಬೋಪಣ್ಣ

ಅದಿತಿ ಅಶೋಕ್

ಕೊರೊನಾ ಸಂಕಷ್ಟದಿಂದ ಎದ್ದು ಬದುಕಿನ ಅಂಗಣಕ್ಕೆ ಹೊಸ ಆಯಾಮ ನೀಡಿದ ಕಬಡ್ಡಿ ಕೋಚ್

ತೇಜಸ್ವಿನಿಗೆ 'ಟ್ರಿಪಲ್' ಚಿನ್ನದ ಸಂಭ್ರಮ

● ವಿಕ್ರಂ ಕಾಂತಿಕೆರೆ

ಮಂಗಳೂರು: ಏಷ್ಯನ್ ಗೇಮ್ಸ್‌ನ ಮಹಿಳಾ ಕಬಡ್ಡಿಯಲ್ಲಿ ಕರ್ನಾಟಕದ ಆಟಗಾರ್ತಿ ತೇಜಸ್ವಿನಿ ಬಾಯಿ ಅವರಿಗೆ ಸದಾ ಚಿನ್ನದ ಸಂಭ್ರಮ. ನಾಯಕಿಯಾಗಿ ಎರಡು ಬಾರಿ ಬಂಗಾರದ ಸಾಧನೆ ಮಾಡಿರುವ ಅವರು ಈಗ ತಂಡದ ಕೋಚ್ ಆಗಿ ಯಶಸ್ಸು ಸಾಧಿಸಿದ್ದಾರೆ.

ಪತಿಯ ಜೊತೆ ತೇಜಸ್ವಿನಿ ಅವರಿಗೂ ಕೋವಿಡ್ ಬಾಧಿಸಿತ್ತು. ನಂತರ ಅವರು ಕೋವಿಡ್‌ನಿಂದ ಪತಿಯನ್ನು ಕಳೆದುಕೊಂಡು ದಿಕ್ಕು ತೋಚದ ಪರಿಸ್ಥಿತಿಗೆ ಒಳಗಾಗಿದ್ದರು. ಆದರೂ ಛಲ ಬಿಡದೆ ಅಂಗಣಕ್ಕೆ ಇಳಿದು ಕೋಚಿಂಗ್ ಮೂಲಕ ಬದುಕಿಗೂ ಕ್ರೀಡಾಜೀವನಕ್ಕೂ ಮತ್ತೊಂದು ಆಯಾಮ ನೀಡಲು ಯತ್ನಿಸಿದ್ದರು. ಅದು ಏಷ್ಯನ್ ಗೇಮ್ಸ್‌ನಲ್ಲಿ ಭಾರತ ಗೆದ್ದ 100ನೇ ಪದಕ ಮೂಲಕ ಪ್ರತಿಫಲಿಸಿತು.

2010-11ರ ಏಷ್ಯನ್ ಗೇಮ್ಸ್‌ನಲ್ಲಿ ಭಾರತ ಮಹಿಳೆಯರ ತಂಡ ಕಬಡ್ಡಿಯಲ್ಲಿ ಮೊತ್ತಮೊದಲ ಚಿನ್ನ ಗೆದ್ದುಕೊಂಡಿತ್ತು. 2014ರಲ್ಲೂ ಮಹಿಳೆಯರ ವಿಭಾಗದ ಚಿನ್ನ ಭಾರತದ ಪಾಲಾಗಿತ್ತು. ಈ ಎರಡೂ ಸಂದರ್ಭಗಳಲ್ಲಿ ತೇಜಸ್ವಿನಿಯವರು ತಂಡದ ನಾಯಕಿಯಾಗಿದ್ದರು. ಮೂರು ಬಾರಿ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದಿದ್ದ ಅವರು 2007 ಮತ್ತು 2008ರಲ್ಲಿ ನಾಯಕಿಯಾಗಿ ತಂಡಕ್ಕೆ ಚಿನ್ನ ಗೆದ್ದುಕೊಟ್ಟಿದ್ದರು.

ತೇಜಸ್ವಿನಿ ಬಾಯಿ

ಸ್ಯಾಫ್ ಗೇಮ್ಸ್, ಒಳಾಂಗಣ ಏಷ್ಯನ್ ಗೇಮ್ಸ್ ಮತ್ತು ದಕ್ಷಿಣ ಏಷ್ಯಾ ಗೇಮ್ಸ್‌ನಲ್ಲೂ ನಾಯಕಿಯಾಗಿ ಭಾರತಕ್ಕೆ ಚಿನ್ನ ಗಳಿಸಿಕೊಟ್ಟಿದ್ದಾರೆ. ರಾಷ್ಟ್ರೀಯ ಚಾಂಪಿಯನ್‌ಷಿಪ್, ರಾಷ್ಟ್ರೀಯ ಕ್ರೀಡಾಕೂಟ, ರೈಲ್ವೆ ಕಬಡ್ಡಿ ಮುಂತಾದವುಗಳಲ್ಲಿ 20ಕ್ಕೂ ಹೆಚ್ಚು ಬಾರಿ ವಿವಿಧ ರಾಜ್ಯಗಳು ಟ್ರೋಫಿ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ತೇಜಸ್ವಿನಿ ನಾಲ್ಕು ಬಾರಿ ಕರ್ನಾಟಕಕ್ಕೆ ಚಾಂಪಿಯನ್ ಪಟ್ಟ ಗಳಿಸಿಕೊಟ್ಟಿದ್ದಾರೆ. 2004ರಿಂದ ನೈರುತ್ಯ ರೈಲ್ವೆ ಉದ್ಯೋಗಿಯಾಗಿದ್ದಾರೆ.

ಪದಕ ಗೆದ್ದ ನಂತರ 'ಪ್ರಜಾವಾಣಿ' ಜೊತೆ ಮಾತನಾಡಿದ ತೇಜಸ್ವಿನಿ ಬಾಯಿ 'ಕೋವಿಡ್ ವೇಳೆ ಸಂಭವಿಸಿದ ದುರಂತದ ನಂತರ ಯಾವುದರಲ್ಲೂ ಆಸಕ್ತಿ ಇರಲಿಲ್ಲ. ಮಗಳನ್ನು ಚೆನ್ನಾಗಿ ನೋಡಿಕೊಂಡರೆ ಸಾಕು ಎಂಬುದಷ್ಟೇ ಗುರಿಯಾಗಿತ್ತು. ಆದರೆ ಕಬಡ್ಡಿ ಕ್ಷೇತ್ರಕ್ಕೆ ಬರಬೇಕು ಎಂದು ಹಿತೈಷಿಗಳು ಒತ್ತಾಯಿಸಿದರು. ಅದರ ಫಲವೇ ಈಗಿನ ಸಾಧನೆ' ಎಂದರು.

'ಕಬಡ್ಡಿಯಲ್ಲಿ ಗಳಿಸಿದ ಹೆಸರು ಬರೀ ಭೂಷಣವಾಗಿ ಉಳಿಯಬಾರದು ಎಂದು ಅನಿಸಿ ಕೋಚಿಂಗ್ ಮೂಲಕ ನನ್ನಲ್ಲಿರುವ ಕೌಶಲವನ್ನು ಹೊಸಬರಿಗೆ ಕಲಿಸಬೇಕು ಎಂದುಕೊಂಡೆ. ಎರಡೇ ತಿಂಗಳಲ್ಲಿ ಈ ತಂಡವನ್ನು ಕಟ್ಟಿದೆ. ಮೂವರು ಅನುಭವಿಗಳನ್ನು ಬಿಟ್ಟರೆ ಉಳಿದವರೆಲ್ಲರಿಗೂ ಇಷ್ಟು ದೊಡ್ಡ ಮಟ್ಟದ ಟೂರ್ನಿ ಹೊಸದು. ಅರಂಭದಲ್ಲಿ ಸ್ವಲ್ಪ ಆತಂಕಗೊಂಡಿದ್ದರೂ ನಂತರ ಚೇತರಿಸಿಕೊಂಡು ಆಡಿದರು' ಎಂದು ನುಡಿದರು.

ಭಾರತ ಮಹಿಳಾ ತಂಡದ ಫಲಿತಾಂಶಗಳು

ಹಂತ	ಎದುರಾಳಿ	ಫಲಿತಾಂಶ
ಗುಂಪು	ಚೀನಾ ತೈಪೆ	34-34ರಲ್ಲಿ ಡ್ರಾ
ಗುಂಪು	ಕೊರಿಯಾ	56-23ರಲ್ಲಿ ಜಯ
ಗುಂಪು	ಥಾಯ್ಲೆಂಡ್	54-22ರಲ್ಲಿ ಜಯ
ಸೆಮಿಫೈನಲ್	ನೇಪಾಳ	61-17ರಲ್ಲಿ ಜಯ
ಫೈನಲ್	ಚೀನಾ ತೈಪೆ	26-25ರಲ್ಲಿ ಜಯ

163 ಭಾರತ ಮಹಿಳಾ ತಂಡ ಔಟ್ ಮೂಲಕ ಗಳಿಸಿದ ಪಾಯಿಂಟ್ಸ್

36 ಟೂರ್ನಿಯಲ್ಲಿ ಮಹಿಳಾ ತಂಡ ಗಳಿಸಿದ ಬೋನಸ್ ಪಾಯಿಂಟ್ಸ್

39 ಭಾರತ ಮಹಿಳೆಯರು ಆಲ್ ಔಟ್ ಮೂಲಕ ಗಳಿಸಿದ ಪಾಯಿಂಟ್ಸ್

ಚೆನ್ನೈನಲ್ಲಿ ಭಾರತ –ಆಸ್ಟ್ರೇಲಿಯಾ ಮುಖಾಮುಖಿ ● ಇಶಾನ್ ಕಿಶನ್‌ಗೆ ಇನಿಂಗ್ಸ್ ಆರಂಭದ ಹೊಣೆ?

ರೋಹಿತ್ ಪಡೆಗೆ ಶುಭಾರಂಭದ ಕನಸು

ಮುಖ್ಯಾಂಶಗಳು

- ಆರಂಭಿಕ ಆಟಗಾರ ಶುಭಮನ್ ಗಿಲ್‌ಗೆ ಡೆಂಗಿ ಜ್ವರ
- ಆಸ್ಟ್ರೇಲಿಯಾಕ್ಕೆ ಮಾರ್ಕಸ್ ಸ್ಟೊಯಿನಿಸ್ ಅಲಭ್ಯ?
- ಈ ವಿಶ್ವಕಪ್ ಟೂರ್ನಿಯಲ್ಲಿ ಉಭಯ ತಂಡಗಳಿಗೂ ಮೊದಲ ಪಂದ್ಯ

ಪ್ರಜಾವಾಣಿ ವಾರ್ತೆ

ಚೆನ್ನೈ: ಚೀನಾದಲ್ಲಿ ನಡೆಯುತ್ತಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತದ ಕ್ರೀಡಾಪಟುಗಳ 'ಪದಕ ಶತಕ' ಕಣ್ತುಂಬಿಕೊಂಡಿರುವ ಕ್ರೀಡಾಪ್ರೇಮಿಗಳ ಚಿತ್ತ ಈಗ ಎಂ.ಎ. ಚಿದಂಬರಂ ಕ್ರೀಡಾಂಗಣದತ್ತ ಹೊರಳಿದೆ.

ಭಾನುವಾರ ಇಲ್ಲಿ ನಡೆಯಲಿರುವ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳು ಮುಖಾಮುಖಿಯಾಗಲಿವೆ. 12 ವರ್ಷಗಳ ನಂತರ ಆತಿಥ್ಯ ವಹಿಸುತ್ತಿರುವ ಭಾರತವು ಟೂರ್ನಿಯಲ್ಲಿ ಶುಭಾರಂಭ ಮತ್ತು ಪ್ರಶಸ್ತಿ ಗೆಲುವಿನ ಸುಖಾಂತ್ಯ ಕಾಣುವುದೇ ಎಂಬ ಕುತೂಹಲ ಗರಿಗೆದರಿದೆ. 2011ರಲ್ಲಿ ಭಾರತ ಪ್ರಶಸ್ತಿ ಜಯಿಸಿತ್ತು. ಅದರ ನಂತರ ನಡೆದ ಎರಡು ವಿಶ್ವಕಪ್‌ಗಳಲ್ಲಿ ಎಡವಿತ್ತು.

ಆದರೆ ಕಳೆದ ಕೆಲವು ದಿನಗಳಲ್ಲಿ ಭಾರತ ತಂಡವು ಉತ್ತಮವಾಗಿ ಆಡಿರುವುದರಿಂದ ಕ್ರಿಕೆಟ್‌ಪ್ರೇಮಿಗಳಲ್ಲಿ ವಿಶ್ವಾಸ ಗರಿಗೆದರಿದೆ. ವಿಶ್ವಕಪ್ ಟೂರ್ನಿಗೆ ಬರುವ ಮುನ್ನ ಭಾರತ ತಂಡವು ಆಸ್ಟ್ರೇಲಿಯಾ ಎದುರಿನ ಸರಣಿಯಲ್ಲಿ ಭರ್ಜರಿ ಜಯ ಸಾಧಿಸಿತ್ತು. ಆ ಸರಣಿಯ ಮೊದಲೆರಡು ಪಂದ್ಯಗಳಲ್ಲಿ ಹಂಗಾಮಿ ನಾಯಕ ಕೆ.ಎಲ್. ರಾಹುಲ್ ಬಳಗವು 2–0 ಮುನ್ನಡೆ ಸಾಧಿಸಿತ್ತು. ವಿಶ್ರಾಂತಿ ಮುಗಿಸಿ ಬಂದ ರೋಹಿತ್ ಮೂರನೇ ಪಂದ್ಯದಲ್ಲಿ ತಂಡವನ್ನು ಮುನ್ನಡೆಸಿದ್ದರು. ಆದರೆ ಆ ಪಂದ್ಯದಲ್ಲಿ ಭಾರತ ತಂಡವು ಸೋತಿತ್ತು.

ಅದಕ್ಕೂ ಮುಂಚೆ ಏಷ್ಯಾ ಕಪ್ ಕೂಡ ಜಯಿಸಿತ್ತು. ಅದರಿಂದಾಗಿ ಭರ್ತಿ ಆತ್ಮವಿಶ್ವಾಸದಲ್ಲಿದೆ. ಆದರೆ ಶುಭಮನ್ ಗಿಲ್ ಅವರು ಡೆಂಗಿ ಜ್ವರದಿಂದ ಬಳಲುತ್ತಿರುವುದರಿಂದ ಅವರ ಬದಲಿಗೆ ಇಶಾನ್ ಕಿಶನ್ ಇನಿಂಗ್ಸ್ ಆರಂಭಿಸಬಹುದು. ಏಕದಿನ ಕ್ರಿಕೆಟ್‌ನಲ್ಲಿ ವೇಗದ ದ್ವಿಶತಕ ಬಾರಿಸಿದ ದಾಖಲೆ ಇಶಾನ್ ಅವರದ್ದು.

ಕನ್ನಡಿಗ ಕೆ.ಎಲ್. ರಾಹುಲ್ ವಿಕೆಟ್‌ಕೀಪಿಂಗ್ ಮತ್ತು ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ಹೊಣೆ ನಿಭಾಯಿಸಬೇಕಿದೆ. ಅನುಭವಿ ವಿರಾಟ್ ಕೊಹ್ಲಿ ಅವರು ತಮ್ಮ ಲಯವನ್ನು ಕಾಪಾಡಿಕೊಂಡರೆ ಸೆಮಿಫೈನಲ್ ಹಾದಿ ಸುಲಭ. ಚೆನ್ನೈನವರೇ ಆದ ಆಫ್‌ಸ್ಪಿನ್ ಆಲ್‌ರೌಂಡರ್ ಆರ್. ಅಶ್ವಿನ್ ಅವರಿಗೆ ಕಣಕ್ಕಿಳಿಯುವ ಅವಕಾಶ ಸಿಗಬಹುದು. ಆದರೆ ಐದನೇ ಕ್ರಮಾಂಕದ ಬ್ಯಾಟರ್ ಸ್ಥಾನಕ್ಕೆ ಶ್ರೇಯಸ್ ಅಥವಾ ಸೂರ್ಯಕುಮಾರ್ ಯಾದವ್ ಅವರಲ್ಲಿ ಯಾರಿಗೆ ಅದೃಷ್ಟ ಒಲಿಯಲಿದೆಎಂಬುದನ್ನುನೋಡಬೇಕಿದೆ. ಬೌಲಿಂಗ್‌ನಲ್ಲಿ ಮೊಹಮ್ಮದ್ ಶಮಿ, ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಸಿರಾಜ್ ಅವರ ಆಟ ಪ್ರಮುಖವಾಗಲಿದೆ.

ಸ್ಟೊಯಿನಿಸ್ ಫಿಟ್‌ನೆಸ್ ಚಿಂತೆ

ಪ್ಯಾಟ್ ಕಮಿನ್ಸ್ ನಾಯಕತ್ವದ ಆಸ್ಟ್ರೇಲಿಯಾ ತಂಡವು ತನ್ನ ಸಂಪೂರ್ಣ ಸಾಮರ್ಥ್ಯ ಪಣಕ್ಕೊಡ್ಡಲು ಸಿದ್ಧವಾಗಿದೆ. ಆದರೆ ಆಲ್‌ರೌಂಡರ್ ಮಾರ್ಕಸ್ ಸ್ಟೊಯಿನಿಸ್ ಅವರು ಫಿಟ್ ಇಲ್ಲದಿರುವುದು ತಂಡಕ್ಕೆ ಚಿಂತೆಯ ವಿಷಯವಾಗಿದೆ. ಇದರಿಂದಾಗಿ 'ಪವರ್ ಹಿಟ್ಟಿಂಗ್' ಹೊಣೆಯು ಆರಂಭಿಕ ಬ್ಯಾಟರ್ ಡೇವಿಡ್ ವಾರ್ನರ್, ಆಲ್‌ರೌಂಡರ್‌ಗಳಾದ ಮಿಚೆಲ್ ಮಾರ್ಷ್, ಕ್ಯಾಮರಾನ್ ಗ್ರೀನ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಮೇಲೆ ಬೀಳಲಿದೆ. ಇವರಿಗೆ ಐಪಿಎಲ್‌ನಲ್ಲಿ ಆಡಿರುವ ಅನುಭವ ಇರುವುದರಿಂದ ಭಾರತದ ವಾತಾವರಣದಲ್ಲಿ ಬೀಸಾಟವಾಡುವ ತಂತ್ರ ಕರಗತವಾಗಿದೆ. ಐದು ಬಾರಿ ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ ಮತ್ತೊಮ್ಮೆ ಕಪ್ ಎತ್ತಿ ಹಿಡಿಯುವ ಕನಸಿನೊಂದಿಗೆ ಕಣಕ್ಕಿಳಿಯಲಿದೆ.

ಅಭ್ಯಾಸದ ಸಂದರ್ಭದಲ್ಲಿ ಜಸ್‌ಪ್ರೀತ್ ಬೂಮ್ರಾ ಮತ್ತು ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ಪಿಚ್ ಹೇಗಿದೆ?

ಚೆಪಾಕ್ ಕ್ರೀಡಾಂಗಣದಲ್ಲಿ ಚೆಂಡು ನಿಧಾನವಾಗಿ ಪುಟಿದೇಳುವುದು ಮೊದಲಿನಿಂದಲೂ ಕಂಡುಬಂದಿದೆ. ಆದ್ದರಿಂದ ಸ್ಪಿನ್ನರ್‌ಗಳ ಆಟ ಪ್ರಮುಖವಾಗುವ ಸಾಧ್ಯತೆ ಇದೆ. ಕಳೆದ ಮೂರು ದಿನಗಳಿಂದ ಇಲ್ಲಿ ಮಳೆ ಸುರಿಯುತ್ತಿರುವುದರಿಂದ ಪಿಚ್ ಯಾವ ರೀತಿ ವರ್ತಿಸಲಿದೆ ಎಂಬುದನ್ನು ಊಹಿಸುವುದು ತುಸು ಕಷ್ಟ. ಅಲ್ಲದೆ ಮುಸ್ಸಂಜೆಯ ಇಬ್ಬನಿ ಕೂಡ ಆಟದ ಮೇಲೆ ಪರಿಣಾಮ ಬೀರಬಹುದು.

ಭಾರತ ತಂಡದ ನಾಯಕ ರೋಹಿತ್ ಶರ್ಮಾ ಫೀಲ್ಡಿಂಗ್ ಅಭ್ಯಾಸ –ಎಎಫ್‌ಪಿ ಚಿತ್ರ

ತವರಿನಲ್ಲಿ ಅಶ್ವಿನ್ ಆಡುವರೇ?

ಆಫ್‌ಸ್ಪಿನ್ ಆಲ್‌ರೌಂಡರ್ ರವಿಚಂದ್ರನ್ ಅಶ್ವಿನ್ ಅವರು ತಮ್ಮ ತವರಿನಂಗಳದಲ್ಲಿ ಕಣಕ್ಕಿಳಿಯುವ ಸಾಧ್ಯತೆ ಇದೆ. ಚಾಣಾಕ್ಷ ಸ್ಪಿನ್ನರ್ ಆಗಿರುವ ಅಶ್ವಿನ್ ಅವರಿಗೆ ತಂಡದಲ್ಲಿ ಕೊನೆಯ ಕ್ಷಣದಲ್ಲಿ ಸ್ಥಾನ ಲಭಿಸಿದೆ. ಎಡಗೈ ಆಲ್‌ರೌಂಡರ್ ಅಕ್ಷರ್ ಪಟೇಲ್ ಗಾಯಗೊಂಡ ಕಾರಣ ಅಶ್ವಿನ್ ತಂಡದಲ್ಲಿದ್ದಾರೆ. ತಮ್ಮ ಹಳೆಯ ಗೆಳೆಯ ರವೀಂದ್ರ ಜಡೇಜ ಮತ್ತು ಚೈನಾಮನ್ ಬೌಲರ್ ಕುಲದೀಪ್ ಯಾದವ್ ಅವರೊಂದಿಗೆ ತವರಿನ ಪಿಚ್‌ನಲ್ಲಿ ಪರಿಣಾಮಕಾರಿ ಬೌಲಿಂಗ್ ಮಾಡುವ ತವಕದಲ್ಲಿದ್ದಾರೆ. ಆಸ್ಟ್ರೇಲಿಯಾ ಬ್ಯಾಟಿಂಗ್‌ಗೆ ಕಡಿವಾಣ ಹಾಕುವ ಸಾಮರ್ಥ್ಯ ಅವರಿಗೆ ಇದೆ.

ಪಂದ್ಯ ಆರಂಭ: ಮಧ್ಯಾಹ್ನ 2
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ಇಶಾನ್ ಕಿಶನ್ (ವಿಕೆಟ್‌ಕೀಪರ್), ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್ (ವಿಕೆಟ್‌ಕೀಪರ್), ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ರವೀಂದ್ರ ಜಡೇಜ, ಆರ್. ಅಶ್ವಿನ್, ಕುಲದೀಪ್ ಯಾದವ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ಮೊಹಮ್ಮದ್ ಶಮಿ, ಶಾರ್ದೂಲ್ ಠಾಕೂರ್.

ಆಸ್ಟ್ರೇಲಿಯಾ: ಪ್ಯಾಟ್ ಕಮಿನ್ಸ್ (ನಾಯಕ), ಡೇವಿಡ್ ವಾರ್ನರ್, ಸ್ಟೀವ್ ಸ್ಮಿತ್, ಅಲೆಕ್ಸ್ ಕ್ಯಾರಿ, ಜೋಶ್ ಇಂಗ್ಲಿಸ್, ಸೀನ್ ಅಬಾಟ್, ಆ್ಯಷ್ಟನ್ ಅಗರ್, ಕ್ಯಾಮರಾನ್ ಗ್ರೀನ್, ಜೋಶ್ ಹ್ಯಾಜಲ್‌ವುಡ್, ಟ್ರಾವಿಸ್ ಹೆಡ್, ಮಿಚೆಲ್ ಮಾರ್ಷ್, ಗ್ಲೆನ್ ಮ್ಯಾಕ್‌ವೆಲ್, ಮಾರ್ಕಸ್ ಸ್ಟೊಯಿನಿಸ್, ಆ್ಯಡಂ ಜಂಪಾ, ಮಿಚೆಲ್ ಸ್ಟಾರ್ಕ್.



ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ –ಪಿಟಿಐ ಚಿತ್ರ



ಭಾರತ ಹಾಂಗ್ಝೋ ಏಷಿಯನ್ ಗೇಮ್ಸ್ ನಲ್ಲಿ 100 ಕ್ಕೂ ಹೆಚ್ಚು ಪದಕಗಳನ್ನು ಗೆದ್ದಿದೆ!

ಅರ್ಧ ಶತಕ ಗಳಿಸಿದ ಬಾಂಗ್ಲಾದೇಶದ ಮೆಹಿದಿ ಹಸನ್ ಮಿರಾಜ್ (ಬಲಗಡೆ) ಮತ್ತು ನಜ್ಮುಲ್ ಹಸನ್ ಶಾಂಟೊ –ಎಎಫ್‌ಪಿ ಚಿತ್ರ

ಬಾಂಗ್ಲಾ ಗೆಲುವಿನಲ್ಲಿ ಮಿಂಚಿದ ಮೆಹಿದಿ

ಧರ್ಮಶಾಲಾ (ಎಎಫ್‌ಪಿ): ಬ್ಯಾಟ್ ಮತ್ತು ಚೆಂಡು ಎರಡರಲ್ಲೂ ಮಿಂಚಿದ ಮೆಹಿದಿ ಹಸನ್ ಮಿರಾಜ್ ಅವರು ಬಾಂಗ್ಲಾದೇಶ ತಂಡ, ಶನಿವಾರ ಅಫ್ಗಾನಿಸ್ತಾನ ವಿರುದ್ಧ ಆರು ವಿಕೆಟ್ ಗೆಲುವು ಪಡೆಯುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಇದರೊಂದಿಗೆ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಬಾಂಗ್ಲಾದೇಶ ಉತ್ತಮ ಆರಂಭ ಪಡೆಯಿತು.

ಆಫ್ ಸ್ಪಿನ್ ದಾಳಿಯಲ್ಲಿ 25 ರನ್ನಿಗೆ 3 ವಿಕೆಟ್ ಪಡೆದ ಮಿರಾಜ್, ಅಫ್ಗಾನಿಸ್ತಾನ ತಂಡವನ್ನು ಕೇವಲ 156 ರನ್ನಿಗೆ ಕಟ್ಟಿಹಾಕಲು ನೆರವಾದರು. ನಂತರ ಉಪಯುಕ್ತ 57 ರನ್ (73 ಎಸೆತ, 5x4) ಗಳಿಸಿ 'ಪಂದ್ಯದ ಆಟಗಾರ' ಗೌರವಕ್ಕೆ ಪಾತ್ರರಾದರು. ಯುವ ಆಟಗಾರ ನಜ್ಮುಲ್ ಹುಸೇನ್ ಶಾಂಟೊ ಅಜೇಯ 59 ರನ್ (83 ಎಸೆತ) ಗಳಿಸಿದರು. ಬಾಂಗ್ಲಾ ತಂಡ 15.2 ಓವರುಗಳಿರುವಂತೆ ಗುರಿ ತಲುಪಿತು.

ನಾಯಕ ಶಕೀಬ್ ಅಲ್ ಹಸನ್ ಕೂಡ ಅಫ್ಗಾನಿಸ್ತಾನ ತಂಡದ ಬೇಗುದಿ ಹೆಚ್ಚಿಸಿದರು. ಎಡಗೈ ಸ್ಪಿನ್ ದಾಳಿಯಲ್ಲಿ ಮೂರು ವಿಕೆಟ್ ಪಡೆದರು; ಜೊತೆಗೆ ಅವರು ಮಾಡಿದ ಬೌಲಿಂಗ್ ಬದಲಾವಣೆಗಳೂ ಫಲ ನೀಡಿದವು.

ಹಠಾತ್ ಕುಸಿತ: ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಅಫ್ಗಾನ್ ತಂಡದ ಆರಂಭ ಉತ್ತಮವಾಗಿತ್ತು. ಒಂದು ಹಂತದಲ್ಲಿ 2 ವಿಕೆಟ್‌ಗೆ 112 ರನ್ ಗಳಿಸಿದ್ದ ತಂಡ ಹಠಾತ್ ಕುಸಿಯಿತು. ಕೊನೆಯ ಎಂಟು ವಿಕೆಟ್‌ಗಳು 44 ರನ್‌ಗಳಿಗೆ ಬಿದ್ದವು. ಆರಂಭ ಆಟಗಾರ ರಹಮಾನುಲ್ಲಾ ಗುರ್ಬಾಝ್ 62 ಎಸೆತಗಳಲ್ಲಿ 4 ಬೌಂಡರಿಗಳಿದ್ದ 47 ರನ್ ಗಳಿಸಿ ಪ್ರತಿರೋಧ ಪ್ರದರ್ಶಿಸಿದರು.

ಬಾಂಗ್ಲಾ ತಂಡದ ಆರಂಭವೂ ಉತ್ತಮವಾಗಿರಲಿಲ್ಲ. ತಂಜಿದ್ ಹಸನ್ (5) ಬೇಗನೇ ರನೌಟ್ ಆದರೆ, ಮೊತ್ತ 27 ಆಗುವುದರೊಳಗೆ ಲಿಟ್ಟನ್ ದಾಸ್ ಕೂಡ ಮರಳಿದ್ದರು. ಆದರೆ ಮಿರಾಜ್ ಮತ್ತು ಶಾಂಟೊ ಮೂರನೇ ವಿಕೆಟ್‌ಗೆ ಸೇರಿಸಿದ ಅಮೂಲ್ಯ 98 ರನ್‌ಗಳು ತಂಡದ ಗೆಲುವನ್ನು ಸುಲಭಗೊಳಿಸಿದವು. ಮಿರಾಜ್ ಅವರಿಗೆ 12 ಮತ್ತು 23 ರನ್ ಗಳಿಸಿದ್ದಾಗ ಜೀವದಾನಗಳು ದೊರೆತವು.

ಸಂಕ್ಷಿಪ್ತ ಸ್ಕೋರು: ಅಫ್ಗಾನಿಸ್ತಾನ: 37.2 ಓವರುಗಳಲ್ಲಿ 156 (ರಹಮಾನುಲ್ಲಾ ಗುರ್ಬಾಝ್ 47, ಇಬ್ರಾಹಿಂ ಜರ್ದಾನ್ 22, ರಹಮತ್ ಶಾ 18, ಹಶ್ಮತ್‌ಉಲ್ಲಾ ಶಾಹಿದಿ 18, ಅಜ್ಮತ್‌ಉಲ್ಲಾ ಒಮರ್ಝೈ 22; ತಸ್ಕಿನ್ ಅಹ್ಮದ್ 32ಕ್ಕೆ1, ಶರೀಫುಲ್ ಇಸ್ಲಾಂ 34ಕ್ಕೆ2, ಮುಸ್ತಫಿಜುರ್ ರಹಮಾನ್ 28ಕ್ಕೆ1, ಶಕೀಬ್ ಅಲ್ ಹಸನ್ 30ಕ್ಕೆ3, ಮೆಹಿದಿ ಹಸನ್ ಮಿರಾಜ್ 25ಕ್ಕೆ3); ಬಾಂಗ್ಲಾದೇಶ: 34.4 ಓವರುಗಳಲ್ಲಿ 4 ವಿಕೆಟ್‌ಗೆ 158 (ಮೆಹಿದಿ ಹಸನ್ ಮಿರಾಜ್ 57, ನಜ್ಮುಲ್ ಹುಸೇನ್ ಶಾಂಟೊ ಔಟಾಗದೇ 59, ಶಕೀಬ್ ಅಲ್ ಹಸನ್ 14, ಮುಷ್ಫಿಕುರ್ ರಹೀಮ್ ಔಟಾಗದೇ 2; ಫಝಲ್‌ಹಕ್ ಫಾರೂಕಿ 19ಕ್ಕೆ1, ನವೀನ್ ಉಲ್ ಹಕ್ 31ಕ್ಕೆ1, ಅಜ್ಮತ್‌ಉಲ್ಲಾ ಒಮರ್‌ಝೈ 9ಕ್ಕೆ1).

ದಕ್ಷಿಣ ಆಫ್ರಿಕಾದ ದಾಖಲೆಗಳ ಸಾಲು

ಕ್ವಿಂಟನ್, ಡಸೆ, ಏಡನ್ ಮರ್ಕರಂ ಶತಕ ಸಂಭ್ರಮ; ಶ್ರೀಲಂಕಾ ದಿಟ್ಟ ಹೋರಾಟ

